ಬುಧವಾರ, ನವೆಂಬರ್ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 314 | ಪುಟ 18 • www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸ್ಮಾರ್ಟ್‌ಫೋನ್‌ಗಳಲ್ಲಿ ಸಿಮ್ ಕಾರ್ಡ್‌ನ ಬಳಕೆಯಿಲ್ಲದೆ ಎಸ್‌ಎಂಎಸ್‌ಗಳನ್ನು ಕಳಿಸಬಹುದಂತೆ!



ಆಳ-ಅಗಲ
ಪ್ರಾಥಮಿಕ ಶಾಲೆಗೆ ಪ್ರವೇಶ ರಾಜ್ಯಕ್ಕೆ 2ನೇ ಸ್ಥಾನ
'ಕರಿಯ' ಹೇಳಿಕೆ; ಸಚಿವ ಜಮೀರ್ ಕ್ಷಮೆ 4B
ಮಣಿಪುರ: ಇಬ್ಬರು ವೃದ್ಧರ ಶವ ಪತ್ತೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,675	23,883	₹79,610 (ಬೆಂಗಳೂರು)	₹94,500 (ಬೆಂಗಳೂರು)	84.39

ಹವಾಮಾನ ಬದಲಾವಣೆ: ಜಿ20 ಕ್ರಮ ಸಾಲದು

ಬಾಕು (ಪಿಟಿಐ): ಅಮೆರಿಕ, ಆಸ್ಟ್ರೇಲಿಯಾ, ಕೆನಡಾ, ಸೌದಿ ಅರೇಬಿಯಾ ಮತ್ತು ಟರ್ಕಿ ಸೇರಿದಂತೆ 'ಜಿ20' ಗುಂಪಿನ ಬಹುತೇಕ ಸದಸ್ಯ ದೇಶಗಳು ಹವಾಮಾನ ಕ್ರಿಯಾ ಯೋಜನೆಗಳನ್ನು ಗಣನೀಯವಾಗಿ ಹೆಚ್ಚಿಸುವ ಅಗತ್ಯವಿದೆ ಎಂಬುದನ್ನು ವಿಶ್ವಸಂಸ್ಥೆಯ 'ಸಿಒಪಿ29' ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾದ ಸೂಚ್ಯಂಕವು ಹೇಳಿದೆ. 10

ಪ್ರಧಾನಿ ಮೋದಿ ಸಂವಿಧಾನ ಓದಿಲ್ಲ: ರಾಹುಲ್ 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಎಂಟು ಅಧಿಕಾರಿಗಳ, 37 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರ ದಾಳಿ

ಅಕ್ರಮ ಆಸ್ತಿ ₹ 22.5 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳ ಎಂಟು ಅಧಿಕಾರಿಗಳಿಗೆ ಸೇರಿದ 37 ಸ್ಥಳಗಳ ಮೇಲೆ ಮಂಗಳವಾರ ಏಕಕಾಲಕ್ಕೆ ದಾಳಿಮಾಡಿ ಶೋಧ ನಡೆಸಿದ ಲೋಕಾಯುಕ್ತ ಪೊಲೀಸರು, ₹22.50 ಕೋಟಿ ಮೌಲ್ಯದ ಅಕ್ರಮ ಆಸ್ತಿಗಳನ್ನು ಪತ್ತೆಮಾಡಿದ್ದಾರೆ.

ಬೆಳಗಾವಿ, ಹಾವೇರಿ, ದಾವಣಗೆರೆ, ಬೀದರ್, ಮೈಸೂರು, ರಾಮನಗರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆದಿದೆ. ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಒಬ್ಬ ನಿವೃತ್ತರೂ ಸೇರಿದಂತೆ ಒಂಬತ್ತು ಮಂದಿ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ.

ಆರೋಪಿಗಳ ಬಳಿ ₹17.84 ಕೋಟಿ ಮೌಲ್ಯದ ಸ್ಥಿರಾಸ್ತಿಗಳು, ₹66.70 ಲಕ್ಷ ನಗದು, ₹1.66 ಕೋಟಿ ಮೌಲ್ಯದ ಚಿನ್ನಾಭರಣ, ₹1.44 ಕೋಟಿ ಮೌಲ್ಯದ ವಾಹನಗಳು, ₹88.26 ಲಕ್ಷ ಮೌಲ್ಯದ ಇತರ ಸ್ವತ್ತುಗಳನ್ನು ಪತ್ತೆಮಾಡಲಾಗಿದೆ ಎಂದು ಲೋಕಾಯುಕ್ತದ ಪೊಲೀಸ್ ವಿಭಾಗ ತಿಳಿಸಿದೆ.

ಕೆಎಸ್‌ಆರ್‌ಟಿಸಿಯ ರಾಮನಗರ ಘಟಕದಲ್ಲಿ ವಿಭಾಗೀಯ ಮೆಕ್ಯಾನಿಕಲ್ ಎಂಜಿನಿಯರ್ ಆಗಿ ಇತ್ತೀಚೆಗೆ ನಿವೃತ್ತ-ರಾಗಿರುವ ಪ್ರಕಾಶ್ ವಿ. ಬಳಿ ಅತ್ಯಧಿಕ ₹4.26 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಮಾಡಲಾಗಿದೆ. ಅವರು, ಆರು ಮನೆಗಳು, ಎಂಟು ನಿವೇಶನ, 6 ಎಕರೆ ಜಮೀನು ಹೊಂದಿರುವುದು ಪತ್ತೆಯಾಗಿದೆ.

ಬೀದರ್ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪ ನಿರ್ದೇಶಕ ರವೀಂದ್ರ ಕುಮಾರ್ ಬಳಿ ₹4.22 ಕೋಟಿ ಅಕ್ರಮ ಆಸ್ತಿ ಇರುವುದು ತನಿಖೆಯಲ್ಲಿ ಬಯಲಾಗಿದೆ. ಅವರು ಐದು ಮನೆ, ಏಳು ನಿವೇಶನ, 10 ಎಕರೆ ಕೃಷಿ ಜಮೀನಿನ ಒಡೆತನ ಹೊಂದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಹಾವೇರಿ ಬಸವೇಶ್ವರನಗರದಲ್ಲಿರುವ ಸಹಾಯಕ ಎಂಜಿನಿಯರ್ (ಎಇ) ಕಾಶಿನಾಥ್ ಭಜಂತ್ರಿ ಅವರ ಮನೆಯಲ್ಲಿ ಪರಿಶೀಲನೆ ನಡೆಸಿದರು

ಕೆಐಎಡಿಬಿಯ ಸಹಾಯಕ ಕಾರ್ಯದರ್ಶಿಯಾಗಿರುವ ಗೋವಿಂದಪ್ಪ ಹನುಮಂತಪ್ಪ ಭಜಂತ್ರಿ ಅವರ ಮನೆಯಲ್ಲಿ ವಶಪಡಿಸಿಕೊಂಡ ನಗದು

5ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 5

₹9 ಲಕ್ಷವಿದ್ದ ಚೀಲ ಎಸೆದ ಎಇ

ಗ್ರಾಮೀಣ ಕುಡಿಯುವ ನೀರು ಮತ್ತು ಒಳ ಚರಂಡಿ ಇಲಾಖೆಯ ಹಾವೇರಿ ಜಿಲ್ಲೆ ಹಿರೇಕೆರೂರು ಉಪ ವಿಭಾಗದ ಸಹಾಯಕ ಎಂಜಿನಿಯರ್ ಕಾಶಿನಾಥ್ ಬುದ್ಧಪ್ಪ ಭಜಂತ್ರಿ ಲೋಕಾಯುಕ್ತ ಪೊಲೀಸರ ದಾಳಿಗೆ ಹೆದರಿ ₹9 ಲಕ್ಷ ನಗದನ್ನು ಶೌಚಾಲಯದ ಕಿಟಕಿಯಿಂದ ಎಸೆದಿದ್ದರು.

ಹಾವೇರಿಯ ಬಸವೇಶ್ವರ ನಗರದಲ್ಲಿರುವ ಮನೆಯಲ್ಲಿ ತನಿಖಾ ತಂಡ ಶೋಧ ಆರಂಭಿಸುತ್ತಿದ್ದಂತೆಯೇ ಆರೋಪಿ ಹಣವನ್ನು ಚೀಲದಲ್ಲಿ ತುಂಬಿ ಹೊರಕ್ಕೆ ಎಸೆದಿದ್ದರು. ಅದನ್ನು ಗಮನಿಸಿದ ತನಿಖಾಧಿಕಾರಿಗ-ಳು ನಗದು ಪತ್ತೆಹಚ್ಚಿ, ವಶಕ್ಕೆ ಪಡೆದರು. ಇವರ ಮನೆಯಲ್ಲಿ ಒಟ್ಟು ₹20 ಲಕ್ಷ ನಗದನ್ನು ವಶಕ್ಕೆ ಪಡೆಯಲಾಗಿದೆ.

ಕಾಶಿನಾಥ್ ಬಳಿ ಆರು ನಿವೇಶನ, ಎರಡು ಮನೆ, 5 ಎಕರೆ ಕೃಷಿ ಜಮೀನು ಕೂಡ ಪತ್ತೆಯಾಗಿವೆ.

'₹187 ಕೋಟಿ ವಸೂಲಿ ಮಾಡಿ'

ಕೋವಿಡ್: ಪ್ರಕರಣ ದಾಖಲಿಸಿ ಎಂದ ನ್ಯಾ. ಡಿಕುನ್ಹ ವರದಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ ನಡೆದ ಖರೀದಿಯಲ್ಲಿ ನಿಯಮಗಳ ಉಲ್ಲಂಘನೆಯಿಂದ ಅಪಾರ ನಷ್ಟ ವಾಗಿದ್ದು, ಅದರಲ್ಲಿ ₹187.8 ಕೋಟಿಯವನ್ನು ವಸೂಲಿ ಮಾಡಬೇಕು. ಈ ಖರೀದಿ ಒಪ್ಪಂದ ಮಾಡಿಕೊಂಡ ಅಧಿಕಾರಿಗಳ ವಿರುದ್ಧ ಅಪರಾಧ ಪ್ರಕರಣ ದಾಖಲಿಸಬೇಕು ಎಂದು ನ್ಯಾಯಮೂರ್ತಿ ಮೈಕಲ್ ಡಿಕುನ್ಹ ಆಯೋಗವು ಶಿಫಾರಸು ಮಾಡಿದೆ.

ಕೋವಿಡ್ ನಿರ್ವಹಣೆಗಾಗಿ ನಡೆಸಿದ ಖರೀದಿಯಲ್ಲಿನ ಅಕ್ರಮ ಪತ್ತೆಗೆ ರಾಜ್ಯ ಸರ್ಕಾರವು ರಚಿಸಿದ್ದ ಆಯೋಗವು ಸಲ್ಲಿಸಿರುವ ವರದಿಯ ಕೆಲಭಾಗಗಳು ಮತ್ತು ಅದರ ಮೇಲೆ ಕ್ರಮ ತೆಗೆದುಕೊಳ್ಳಲು ಸಿದ್ಧಪಡಿಸಿರುವ ಟಿಪ್ಪಣಿ ಮಾಧ್ಯಮಗಳಿಗೆ ಸೋರಿಕೆಯಾಗಿದ್ದು, ಅವುಗಳಲ್ಲಿ ಈ ಮಾಹಿತಿ ಇದೆ.

ಔಷಧಗಳು ಮತ್ತು ವೈದ್ಯಕೀಯ ಪರಿಕರಗಳ ಖರೀದಿಯಲ್ಲಿ ಹಲವು ಅಕ್ರಮಗಳು ನಡೆದಿವೆ. ಟೆಂಡರ್ ಕರೆಯದೇ ಖರೀದಿ ಒಪ್ಪಂದ, ಅವಧಿ ಮುಗಿದ ಔಷಧಗಳ ಪೂರೈಕೆ, ಮಾರುಕಟ್ಟೆ ದರಕ್ಕಿಂತ ಹಲವು ಪಟ್ಟು ಹೆಚ್ಚು ದರ ನೀಡಿ ಪರಿಕರಗಳ ಖರೀದಿ, ಅನುಮತಿ ನೀಡಲಾಗಿದ್ದಕ್ಕಿಂತ ಹೆಚ್ಚು ಸಿಬ್ಬಂದಿ ನೇಮಕ ಮೊದಲಾದ ರೂಪದಲ್ಲಿ ₹187.8 ಕೋಟಿ ನಷ್ಟ ಉಂಟು ಮಾಡಲಾಗಿದೆ ಎಂದು ವರದಿಯ ವಿವಿಧ ಭಾಗಗಳಲ್ಲಿ ಉಲ್ಲೇಖಿಸಲಾಗಿದೆ.

5ನೇ ಪುಟ ನೋಡಿ

ಅಕ್ರಮದ ಸ್ವರೂಪ

- **₹84.71 ಕೋಟಿ** ಅನಗತ್ಯ ವೆಚ್ಚ ಮತ್ತು ಪೂರ್ಣವಾಗದ ನಿರ್ಮಾಣ ಕಾಮಗಾರಿಗಳಿಗೆ ಮಾಡಲಾದ ಪಾವತಿ. ವಿಸ್ತೃತ ತನಿಖೆಗೆ ಶಿಫಾರಸು
- **₹14.21 ಕೋಟಿ** ವಿದೇಶಗಳಿಂದ ಪಿಪಿಇ ಕಿಟ್ ತರಿಸಿಕೊಳ್ಳುವಲ್ಲಿ ಚೀನಾದ ಕಂಪನಿಗಳಿಗೆ ಎರಡು ಬಾರಿ ಸಾಗಣೆ ವೆಚ್ಚ ನೀಡಿದ್ದರಿಂದ ಆದ ನಷ್ಟ
- **₹9.99 ಕೋಟಿ** ವೈದ್ಯಕೀಯ ಪರಿಕರಗಳು ಮತ್ತು ಔಷಧಗಳ ಪೂರೈಕೆ ವಿಳಂಬದ 71 ಪ್ರಕರಣಗಳಲ್ಲಿ ವಸೂಲಿ ಮಾಡಬೇಕಿದ್ದ ದಂಡ. ಈ ದಂಡ ವಸೂಲಿ ಮಾಡಿಲ್ಲ
- **₹8.03 ಕೋಟಿ** ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಲಭ್ಯವಿದ್ದರೂ, ಹೆಚ್ಚಿನ ದರ ನೀಡಿ ಸರಕುಗಳನ್ನು ಖರೀದಿಸಿದ 21 ಪ್ರಕರಣಗಳಲ್ಲಿ ಆಗಿರುವ ನಷ್ಟದ ಮೊತ್ತ
- **₹5.73 ಕೋಟಿ** ಅವಧಿ ಮುಗಿದ ಔಷಧ ಮತ್ತು ಇತರ ಸರಕುಗಳನ್ನು ಪೂರೈಸಿದ 79 ಪ್ರಕರಣಗಳಲ್ಲಿ ವಸೂಲಿ ಮಾಡಬೇಕಿದ್ದ ದಂಡ. ಈ ದಂಡ ವಸೂಲಿ ಮಾಡಿಲ್ಲ
- **₹4.14 ಕೋಟಿ** ಆಂಬುಲೆನ್ಸ್ ಸೇವೆಯಲ್ಲಿ ಮಾಡಲಾಗಿರುವ ಹೆಚ್ಚುವರಿ ಮತ್ತು ದಾಖಲೆಗಳು ಇಲ್ಲದ ಪಾವತಿ
- **₹5.61 ಕೋಟಿ** ಸಹಾಯವಾಣಿ ನಡೆಸಲು ಒಪ್ಪಂದ ಮಾಡಿಕೊಳ್ಳಲಾಗಿದ್ದ ಬಿಪಿಒಗಳಿಗೆ ನೀಡಲಾದ ಹೆಚ್ಚುವರಿ ಮೊತ್ತ
- **₹4.29 ಕೋಟಿ** ಐಸಿಎಂಆರ್‌ನಿಂದ ಮಾನ್ಯತೆ ಪಡೆಯದ 8 ಲ್ಯಾಬ್‌ಗಳಿಗೆ ಅಕ್ರಮವಾಗಿ ಪಾವತಿ ಮಾಡಲಾದ ಮೊತ್ತ
- **₹2.64 ಕೋಟಿ** ಕೊರೊನಾ ಸೋಂಕು ಪರೀಕ್ಷೆ ನಡೆಸುವ ಸಾಮರ್ಥ್ಯ ಇಲ್ಲದೇ ಇದ್ದ 6 ಲ್ಯಾಬ್‌ಗಳಿಗೆ ಅಕ್ರಮವಾಗಿ ಪಾವತಿ ಮಾಡಲಾದ ಮೊತ್ತ
- **₹8.85 ಲಕ್ಷ** ಬಿಎಂಟಿಸಿ ಮೂಲಕ ಪ್ರಚಾರ ನಡೆಸಲಾಗಿದೆ ಎಂದು ಚುಕ್ಕಿ ಥಿಯೇಟರ್ಸ್ ಎಂಬ ಸಂಸ್ಥೆಗೆ ಪಾವತಿ ಮಾಡಲಾದ ಮೊತ್ತ

ಮೂರು ಕ್ಷೇತ್ರ: ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ ಹಕ್ಕು ಚಲಾವಣೆಗೆ ಅವಕಾಶ

ಪ್ರತಿಷ್ಠೆಯ ಕಣ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ

ಬೆಂಗಳೂರು: ಚನ್ನಪಟ್ಟಣ, ಶಿಗ್ಗಾವಿ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಮತದಾನ ಬುಧವಾರ (ನ.13) ನಡೆಯಲಿದ್ದು, ಈ ಮೂರೂ ಕ್ಷೇತ್ರಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆಯಿದೆ.

ಅಭ್ಯರ್ಥಿಗಳು ಮತದಾನದ ಮುನ್ನಾ ದಿನವಾದ ಮಂಗಳವಾರ ಕೂಡಾ ಮತದಾರರ ಓಲೈಕೆಗೆ ಇನ್ನಿಲ್ಲದ ಕಸರತ್ತು ನಡೆಸಿದರು.

ತಮ್ಮ ಪುತ್ರರ ರಾಜಕೀಯ ಭವಿಷ್ಯಕ್ಕೆ ಮುನ್ನುಡಿ ಬರೆಯಲಿರುವ ಈ ಚುನಾವಣೆಯನ್ನು ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಮತ್ತು ಎಚ್‌.ಡಿ. ಕುಮಾರಸ್ವಾಮಿ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಜೊತೆಗೆ ಕ್ಷೇತ್ರವನ್ನು ಉಳಿಸಿಕೊಳ್ಳುವ ಸವಾಲೂ ಅವರ ಮುಂದಿದೆ. ಮೊಮ್ಮಗನನ್ನು ವಿಧಾನಸಭೆಯ ಮೆಟ್ಟಿಲೇರಿಸಲು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರು ಮತ ಯಾಚಿಸಿದ್ದಾರೆ.

ಬಿಜೆಪಿ ತ್ಯಜಿಸಿ ಬಂದ ಸಿ.ಪಿ. ಯೋಗೇಶ್ವರ್‌ಗೆ ಚನ್ನಪಟ್ಟಣದಲ್ಲಿ ಮಣೆ ಹಾಕಿರುವ ರಾಜ್ಯ ಕಾಂಗ್ರೆಸ್ ನಾಯಕರು, ಈ ಕ್ಷೇತ್ರವನ್ನು ಜೆಡಿಎಸ್‌ನಿಂದ ಕಸಿದು-ಕೊಳ್ಳಲೇಬೇಕೆಂಬ ಪಣ ತೊಟ್ಟಿದ್ದಾರೆ. ರಾಜಕೀಯ ಜಿದ್ದಾಜಿದ್ದಿಗೆ ಹೆಸರುವಾಸಿಯಾಗಿರುವ ಈ ಕ್ಷೇತ್ರ ಎಚ್‌.ಡಿ. ಕುಮಾರಸ್ವಾಮಿ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಪ್ರತಿಷ್ಠೆಯ ಕಣವಾಗಿಯೂ ಬದಲಾಗಿದೆ. ಚನ್ನಪಟ್ಟಣದಂತೆ ಸಂಡೂರು ಕೂಡ ರಾಜ್ಯದ ಗಮನ ಸೆಳೆದಿದೆ. ಕಾಂಗ್ರೆಸ್‌ನ ಭದ್ರಕೋಟೆ ಎನಿಸಿರುವ ಈ ಮೀಸಲು ಕ್ಷೇತ್ರದಲ್ಲಿ ಮೊದಲ ಬಾರಿಗೆ ಕಮಲ ಅರಳಿಸಲು ಬಿಜೆಪಿ ಶಕ್ತಿಮೀರಿ ಪ್ರಯತ್ನಿಸುತ್ತಿದೆ.

ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು–ಶಾಸಕರು ಭರ್ಜರಿ ಪ್ರಚಾರ ನಡೆಸಿದ್ದಾರೆ. ಮೈತ್ರಿಕೂಟದ ಅಭ್ಯರ್ಥಿಗಳ ಪರ ಮಾಜಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಬೆವರು ಸುರಿಸಿದ್ದಾರೆ.

ಪಟ್ಟಿ 5

ಚಿಲ್ಲರೆ ಹಣದುಬ್ಬರ: 14 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ಅಕ್ಟೋಬರ್ ತಿಂಗಳಿನಲ್ಲಿ 14 ತಿಂಗಳ ಗರಿಷ್ಠ ಮಟ್ಟವಾದ ಶೇ 6.21ರಷ್ಟು ದಾಖಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವ ಗುರಿ ಹೊಂದಿದೆ. ಆದರೆ, ಆಹಾರ ಪದಾರ್ಥಗಳ ದರ ಹೆಚ್ಚಳದಿಂದಾಗಿ ಹಣದುಬ್ಬರವು ಆರ್‌ಬಿಐನ ಈ ತಾಳಿಕೆಯ ಮಟ್ಟವನ್ನು ಮೀರಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ಹೇಳಿದೆ.

ಚಿಲ್ಲರೆ ಹಣದುಬ್ಬರದ ಪ್ರಮಾಣ	6.21%
ಗ್ರಾಮೀಣ ಪ್ರದೇಶದ ಹಣದುಬ್ಬರ	6.68%
ನಗರ ಪ್ರದೇಶದ ಹಣದುಬ್ಬರ	5.62%

ಗ್ರಾಮೀಣರಿಗೆ ಬೆಲೆ ಏರಿಕೆಯ ಬಿಸಿ ಹೆಚ್ಚು ತಟ್ಟಿದೆ. ಗ್ರಾಮೀಣ ಪ್ರದೇಶದಲ್ಲಿ ಚಿಲ್ಲರೆ ಹಣದುಬ್ಬರವು ಶೇ 6.68ರಷ್ಟು ಹಾಗೂ ನಗರ ಪ್ರದೇಶದಲ್ಲಿ ಶೇ 5.62ರಷ್ಟು ದಾಖಲಾಗಿದೆ.

ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 5.49ರಷ್ಟು ದಾಖಲಾಗಿತ್ತು. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಶೇ 4.87ರಷ್ಟು ದಾಖಲಾಗಿತ್ತು.

ರೆಪೊ ದರ ಇಳಿಸುವಲ್ಲಿ ಚಿಲ್ಲರೆ ಹಣದುಬ್ಬರದ ಪಾತ್ರ ನಿರ್ಣಾಯಕವಾಗಿದೆ ಎಂದು ಹಣಕಾಸು ತಜ್ಞರು ಹೇಳಿದ್ದಾರೆ.

ತರಕಾರಿ, ಹಣ್ಣು ದರ ಏರಿಕೆ

'ಸೆಪ್ಟೆಂಬರ್‌ನಲ್ಲಿ ಶೇ 9.24ರಷ್ಟಿದ್ದ ಆಹಾರ ಹಣದುಬ್ಬರವು, ಅಕ್ಟೋಬರ್‌ನಲ್ಲಿ ಶೇ 10.87ರಷ್ಟು ಏರಿಕೆಯಾಗಿದೆ.

ಬೇಳೆಕಾಳುಗಳು, ಮೊಟ್ಟೆ, ಸಕ್ಕರೆ ಮತ್ತು ಸಂಬಾರ ಪದಾರ್ಥಗಳ ದರವು ಗಣನೀಯವಾಗಿ ಇಳಿಕೆಯಾಗಿದೆ. ಆದರೆ ತರಕಾರಿಗಳು, ಹಣ್ಣು, ಎಣ್ಣೆ ಮತ್ತು ಕೊಬ್ಬಿನ ಪದಾರ್ಥಗಳ ದರದಲ್ಲಿ ಹೆಚ್ಚಳವಾಗಿದೆ.

ಶಿಕ್ಷಣದ ಸಮಗ್ರ ಮಾಹಿತಿ ಹೊಂದಿರುವ ವ್ಯವಸ್ಥೆ: ಮಕ್ಕಳಿಗೂ ವಿಶಿಷ್ಟ ಗುರುತಿನ ಸಂಖ್ಯೆ

ವಿದ್ಯಾರ್ಥಿಗಳಿಗೆ ಆಧಾರ್ ರೀತಿಯ 'ಅಪಾರ್'

• ಎಂ.ರಾಮಕೃಷ್ಣಪ್ಪ

ಚಿಂತಾಮಣಿ (ಚಿಕ್ಕಬಳ್ಳಾಪುರ): ರಾಜ್ಯದ ಎಲ್ಲ ಪ್ರಾಥಮಿಕ, ಪ್ರೌಢ ಮತ್ತು ಹೈಯರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ 'ಆಧಾರ್' ಸಂಖ್ಯೆಯ ಮಾದರಿಯಲ್ಲಿ 12 ಅಂಕಿಯ 'ಅಪಾರ್' ವಿಶಿಷ್ಟ ಗುರುತಿನ ಚೀಟಿ ವಿತರಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ.



ಕೇಂದ್ರ ಶಾಲಾ ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ) ಯೋಜನೆ ಅಡಿ ವಿದ್ಯಾ-ರ್ಥಿಗಳಿಗೆ ದೇಶದಾದ್ಯಂತ ಏಕರೂಪದ ಗುರುತಿನ ಚೀಟಿ ನೀಡಲು 'ಒಂದು ದೇಶ, ಏಕರೂಪದ ವಿದ್ಯಾರ್ಥಿ ಗುರುತಿನ ಚೀಟಿ' ಶಿಫಾರಸು ಮಾಡಲಾಗಿತ್ತು. ಅದರಂತೆ ಎಲ್ಲಾ ವಿದ್ಯಾರ್ಥಿಗಳಿಗೂ 'ಅಪಾರ್' ವಿಶಿಷ್ಟ ಗುರುತಿನ ಚೀಟಿ ನೀಡಲಾಗುತ್ತಿದೆ.

> **ವಿದ್ಯಾರ್ಥಿಯ ಶೈಕ್ಷಣಿಕ ವಿವರ ಮತ್ತು ಸಾಧನೆಗಳನ್ನು ಟ್ರ್ಯಾಕ್ ಮಾಡಲು ಮತ್ತು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ವರ್ಗಾವಣೆ ಪ್ರಕ್ರಿಯೆಯನ್ನೂ ಸುಲಭಗೊಳಿಸುತ್ತದೆ**
> **ಶ್ರೀಧರ್ ಹಿರೇಮಠ,** ಶಿಕ್ಷಕ, ಚಿಂತಾಮಣಿ

ಈಗಾಗಲೇ ರಾಜ್ಯ ಪಠ್ಯಕ್ರಮದ ಶಾಲೆಗಳ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಎಸ್‌ಟಿಎಸ್ (ಸ್ಟೂಡೆಂಟ್ ಟ್ರ್ಯಾಕಿಂಗ್ ಸಿಸ್ಟಮ್) ಗುರುತಿನ ಚೀಟಿ ಮತ್ತು ಕೇಂದ್ರ ಸರ್ಕಾರದ ಪಿಇಎನ್ ನಂಬರ್ (ಪರ್ಮನೆಂಟ್ ಎಜ್ಯುಕೇಷನ್ ನಂಬರ್) ಚಾಲ್ತಿಯಲ್ಲಿ ಇದೆ.

ಅಪಾರ್ ಗುರುತಿನ ಚೀಟಿಗೆ ವಿದ್ಯಾರ್ಥಿಗಳ ಹೆಸರು ನೋಂದಣಿಗೂ ಮುಂಚೆ ಪೋಷಕರ ಒಪ್ಪಿಗೆ ಕಡ್ಡಾಯ. ಪೋಷಕರ ಆಧಾರ್, ಚುನಾವಣಾ ಆಯೋಗ ನೀಡಿದ ವೋಟರ್ಸ್ ಐ.ಡಿ, ಚಾಲನಾ ಪರವಾನಗಿ ನಂಬರ್(ಡ್ರೈವಿಂಗ್ ಲೈಸನ್ಸ್) ಲಿಂಕ್ ಮಾಡಿ ವಿದ್ಯಾರ್ಥಿಗಳ ಐ.ಡಿ ಸೃಷ್ಟಿಸಲಾ-ಗುತ್ತದೆ.

ವಿದ್ಯಾರ್ಥಿಗಳ ಹೆಸರು ನೋಂದಾಯಿಸಲು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ಮುಖ್ಯ ಶಿಕ್ಷಕರು ಪೋಷಕರ ಸಭೆ ಕರೆದು ಅವರ ಒಪ್ಪಿಗೆ ಪಡೆಯುವಂತೆ ಸೂಚಿಸಿದೆ. ಈಗಾಗಲೇ ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೋಷಕರ ಒಪ್ಪಿಗೆ ಪಡೆಯುವ ಪ್ರಕ್ರಿಯೆ ಆರಂಭಗೊಂಡಿದೆ.

5A ಪುಟ ನೋಡಿ

ಏನಿದು ಅಪಾರ್?

'ಅಪಾರ್' ಎಂದರೆ ಸ್ವಯಂಚಾಲಿತ ಶಾಶ್ವತ ಶೈಕ್ಷಣಿಕ ಖಾತೆ ನೋಂದಣಿ (APAAR–Automatic Permanent Academic Account Registry) ಸಂಕ್ಷಿಪ್ತ ರೂಪ.

ಆಧಾರ್ ಕಾರ್ಡ್ ಪರಿಕಲ್ಪನೆಯೇ ಇದಕ್ಕೆ ಪ್ರೇರಣೆ. ಆಧಾರ್ ಮಾದರಿಯಲ್ಲಿಯೇ ವಿದ್ಯಾರ್ಥಿಗಳಿಗೂ 12 ಅಂಕಿಗಳ ವಿಶಿಷ್ಟ ಗುರುತಿನ ಗುರುತಿನ ಚೀಟಿ ನೀಡಲಾಗುವುದು. ಇದು ವಿದ್ಯಾರ್ಥಿ ಜೀವಮಾನದ ಗುರುತಿನ ಸಂಖ್ಯೆಯಾಗಿರುತ್ತದೆ.

5A ಪುಟ ನೋಡಿ

18ರಿಂದ ಜಿ20 ಶೃಂಗಸಭೆ: ಮೋದಿ ಭಾಗಿ

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ನ.16ರಿಂದ 21ರ ವರೆಗೆ ಮೂರು ದೇಶಗಳ ಪ್ರವಾಸ ಕೈಗೊಂಡಿದ್ದು, ಬ್ರೆಜಿಲ್ ರಾಜಧಾನಿ ರಿಯೊ ಡಿ ಜನ್ವೆರೊದಲ್ಲಿ ನಡೆಯಲಿರುವ ಜಿ20 ಶೃಂಗಸಭೆಯಲ್ಲೂ ಪಾಲ್ಗೊಳ್ಳುವರು.

ಶೃಂಗಸಭೆಯು ನ.18ರಿಂದ 21ರ ವರೆಗೆ ನಡೆಯಲಿದೆ ಎಂದು ವಿದೇಶಾಂಗ ಸಚಿವಾಲಯ ಮಂಗಳವಾರ ತಿಳಿಸಿದೆ. ಪ್ರವಾಸದ ವೇಳೆ, ನೈಜೀರಿಯಾ ಹಾಗೂ ಗಯಾನಕ್ಕೂ ಅವರು ಭೇಟಿ ನೀಡುವರು ಎಂದು ತಿಳಿಸಿದೆ.

ಜಯನಗರ ಪಾದಚಾರಿ ಮಾರ್ಗದ ಚಿಕ್ಕ ಜಾಗದಲ್ಲಿ ಅವಕಾಶ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ರಸ್ತೆ ಮೇಲೆ ವ್ಯಾಪಾರಕ್ಕೆ ಅವಕಾಶ ಇಲ್ಲ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ರಸ್ತೆ ಮೇಲೆ ವ್ಯಾಪಾರ ನಡೆಸಲು ಯಾರಿಗೂ ಅವಕಾಶ ನೀಡುವುದಿಲ್ಲ. ಬೀದಿಬದಿ ವ್ಯಾಪಾರಿಗಳ ಸಮೀಕ್ಷೆ ನಡೆಯುತ್ತಿದ್ದು, ಅದು ಮುಗಿಯುವವರೆಗೆ, ಪಾದಚಾರಿ ಮಾರ್ಗದ ಚಿಕ್ಕ ಜಾಗದಲ್ಲಿ ವ್ಯಾಪಾರಕ್ಕೆ ಅವಕಾಶ ಮಾಡಿ-ಕೊಡಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ದಕ್ಷಿಣ ವಲಯದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ 'ಮುಖ್ಯ ಆಯುಕ್ತರ ನಡೆ, ವಲಯದ ಕಡೆ' ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಾದಚಾರಿ ಮಾರ್ಗದಲ್ಲಿ ಕಾಯಂ ನಿರ್ಮಾಣ ಮಾಡಿ ಅಥವಾ ಪೂರ್ಣ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡಲು ಅವಕಾಶ ನೀಡುವುದಿಲ್ಲ. 5 ಅಡಿ x 5 ಅಡಿ ಜಾಗದಲ್ಲಿ ವ್ಯಾಪಾರ ಮಾಡಿಕೊಳ್ಳ-ಬಹುದು' ಎಂದರು.

ಜಯನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡಿದರೂ ಮತ್ತೆ ಒತ್ತುವರಿಯಾಗುತ್ತಿದೆ. ಇದಕ್ಕೆ ಶಾಶ್ವತ ಕ್ರಮ ಕೈಗೊಳ್ಳಲು ಸಮೀಕ್ಷೆ ನಡೆಸಲಾಗು-ತ್ತದೆ. ಅದರ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

50 ದೂರು: 40ಕ್ಕೂ ಹೆಚ್ಚು ಸಾರ್ವಜನಿಕರಿಂದ 50ಕ್ಕೂ ಹೆಚ್ಚು ಕುಂದು-ಕೊರತೆಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆಲಿಸಿದರು.

ಜಯನಗರದ ಮಾಧವನ್ ಉದ್ಯಾನ ವೃತ್ತದ ಬಳಿ ಚರಂಡಿ ಹೂಳೆತ್ತಿಲ್ಲ ಎಂಬ ದೂರಿಗೆ ಪ್ರತಿಕ್ರಿಯಿಸಿದ ತುಷಾರ್ ಗಿರಿನಾಥ್, 'ಪ್ರಮುಖ ರಸ್ತೆಗಳ ಚರಂಡಿ ಸ್ವಚ್ಛತೆಗೆ ಪ್ರತ್ಯೇಕ ಅನುದಾನ ಮೀಸ-ಲಿಡಲಾಗಿದ್ದು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಎಲ್ಲಾ ಪ್ರಮುಖ ರಸ್ತೆಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಖಾಲಿ ಜಾಗದ ಮಾಲೀಕರಿಗೆ ಕೂಡಲೇ ನೋಟಿಸ್ ಜಾರಿ ಮಾಡಿ ಸ್ವಚ್ಛಗೊಳಿಸಲು ಸೂಚಿಸಬೇಕು. ಅವರು ಮಾಡದಿದ್ದರೆ ಪಾಲಿಕೆಯೇ ಸ್ವಚ್ಛಗೊಳಿಸಿ, ವೆಚ್ಚ ವಸೂಲಿ ಮಾಡಬೇಕು' ಎಂದು ಪುನರುಚ್ಚರಿಸಿದರು.

ಬಸವನಗುಡಿ, ಚಿಕ್ಕಪೇಟೆಯಲ್ಲಿ ಅಪಾಯಕಾರಿ ಮರಗಳ ತೆರವು, ಕಲ್ಯಾಣ ಮಂಟಪಗಳಲ್ಲಿ ಪ್ಲಾಸ್ಟಿಕ್ ಬಳಕೆ, ಸುಂಕೇ-ನಹಳ್ಳಿಯಲ್ಲಿ ಬೀದಿದೀಪ ಅಳವಡಿಕೆ, ವಿಜಯನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು, ಕಾರ್ಡ್ ರಸ್ತೆ ಜಂಕ್ಷನ್‌ನಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ, ಬನಶಂಕರಿ ದೇವಸ್ಥಾನ ರಸ್ತೆಯ ಎರಡೂ ಬದಿಗಳಲ್ಲಿರುವ ನಾಮಫಲಕಗಳಲ್ಲಿ ತಪ್ಪಾದ ಕನ್ನಡ ಪದ ಬಳಕೆ, ಅತ್ತಿಗುಪ್ಪೆಯಲ್ಲಿ ಸ್ಮಶಾನ ಸ್ವಚ್ಛತೆಗೆ ಸಂಬಂಧಿಸಿದ ದೂರುಗಳಿಗೆ ಪರಿಹಾರ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

ದಕ್ಷಿಣ ವಲಯ ಆಯುಕ್ತೆ ವಿನೋತ್ ಪ್ರಿಯಾ, ಜಂಟಿ ಆಯುಕ್ತ ಶಿವಕುಮಾರ್, ಉಪ ಆಯುಕ್ತ ಡಿ.ಕೆ ಬಾಬು, ಮುಖ್ಯ ಎಂಜಿನಿಯರ್ ರಾಜೇಶ್ ಉಪಸ್ಥಿತರಿದ್ದರು.

ಅಕ್ರಮ ಕಟ್ಟಡ: ಅಧಿಕಾರಿಗಳಿಗೆ ತರಾಟೆ

ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣವಾಗಿರುವ ಕಟ್ಟಡಗಳ ತೆರವಿಗೆ ಕ್ರಮ ಕೈಗೊಳ್ಳಲು ನಿರ್ಲಕ್ಷ್ಯ ವಹಿಸಿರುವ ದಕ್ಷಿಣ ವಲಯ ಆಯುಕ್ತ, ಮುಖ್ಯ ಎಂಜಿನಿಯರ್ ಸೇರಿದಂತೆ ಎಲ್ಲ ಸಂಬಂಧಿಸಿದ ಅಧಿಕಾರಿಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತರಾಟೆಗೆ ತೆಗೆದುಕೊಂಡರು.

'ಅಕ್ರಮ ಕಟ್ಟಡ ನಿರ್ಮಾಣ ನಡೆಯುತ್ತಿದೆ. ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದು ಅಧಿಕಾರಿಗಳ ಸಭೆಗೆ ಮುನ್ನ ಕೆಲವರು ದೂರಿದರು. ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿದ ಮುಖ್ಯ ಆಯುಕ್ತರು, 'ಅಕ್ರಮ ಕಟ್ಟಡಗಳ ತೆರವಿಗೆ ಆದೇಶವಾಗಿದ್ದರೂ ಏಕೆ ಕ್ರಮ ಕೈಗೊಂಡಿಲ್ಲ, ವಲಯ ಆಯುಕ್ತರಿಗೆ ಎಲ್ಲ ಅಧಿಕಾರ ನೀಡಲಾಗಿದೆಯಲ್ಲ-ವೇ' ಎಂದು ಪ್ರಶ್ನಿಸಿದರು. ಉತ್ತರ ನೀಡದ ಅಧಿಕಾರಿಗಳಿಗೆ, 'ಇಂದಿನಿಂದಲೇ ಕ್ರಮವಾಗಬೇಕು' ಎಂದು ಸೂಚಿಸಿದರು.

'ಎರಡು ವರ್ಷದ ಹಿಂದಿನ ದೂರುಗಳಿಗೇ ಪರಿಹಾರ ಸಿಕ್ಕಿಲ್ಲ'

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು 2022ರ ಜುಲೈ ಹಾಗೂ ಆಗಸ್ಟ್‌ನಲ್ಲಿ ನಡೆಸಿದ್ದ 'ಮುಖ್ಯ ಆಯುಕ್ತರ ನಡೆ, ವಲಯದ ಕಡೆ' ಕಾರ್ಯಕ್ರಮದಲ್ಲಿ ನೀಡಲಾಗಿದ್ದ ದೂರಿಗೇ ಇನ್ನೂ ಪರಿಹಾರ ಸಿಕ್ಕಿಲ್ಲ. ಈಗ ಮತ್ತೆ ಅದೇ ಕಾರ್ಯಕ್ರಮದಲ್ಲೇ ಅದೇ ದೂರನ್ನು ನೀಡಬೇಕಾಗಿದೆ ಎಂಬ ಆರೋಪಿಸಲಾಗಿದೆ.

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ 2022ರ ಆಗಸ್ಟ್ 12ರಂದು 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ 'ಲಿಂಗಧೀರನಹಳ್ಳಿಯಲ್ಲಿರುವ ತ್ಯಾಜ್ಯ ಘಟಕದಿಂದ ಸ್ಥಳೀಯ ನಿವಾಸಿಗಳಿಗೆ ಸಮಸ್ಯೆ ಆಗುತ್ತಿದೆ. ಅದನ್ನು ನಿಲ್ಲಿಸಬೇಕು' ಎಂದು ನಾಗರಿಕರು ಆಗ್ರಹಿಸಿದ್ದರು. 'ತ್ಯಾಜ್ಯ ಸಂಸ್ಕರಣಾ ಘಟಕಗಳಿಂದ ವಾಸನೆ ಬರುವುದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ತುಷಾರ್ ಗಿರಿನಾಥ್ ಭರವಸೆ ನೀಡಿದ್ದರು. ಆದರೆ ಸಮಸ್ಯೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ ಎಂದು ಶಶಿಕುಮಾರ್ ಹೇಳಿದರು.

ರಸ್ತೆ ಚರಂಡಿ, ರಾಜಕಾಲುವೆಯಲ್ಲಿ ಹೂಳೆತ್ತಬೇಕು ಎಂದು ಜಯಣ್ಣ ಬಡಾವಣೆಯ ಟಿ.ಇ. ಶ್ರೀನಿವಾಸ್ ದೂರಿದ್ದರು. ಖಾಲಿ ನಿವೇಶನದಲ್ಲಿ ಕಸ, ಗಿಡಮರಗಳು ಬೆಳೆದು ಸಮಸ್ಯೆ ಉಂಟಾಗಿದೆ ಎಂದು ಹಲವರು ಹೇಳಿದ್ದರು. 'ನಿವೇಶನಗಳಲ್ಲಿ ಸ್ವಚ್ಛತೆ ಕಾಪಾಡದವರಿಗೆ ದಂಡ ವಿಧಿಸಿ, ಕ್ರಮ ಕೈಗೊಳ್ಳಬೇಕು. ಚರಂಡಿಗಳಲ್ಲಿ ಹೂಳೆತ್ತಬೇಕು' ಎಂದು ತುಷಾರ್ ಗಿರಿನಾಥ್ ಎರಡು ವರ್ಷದ ಹಿಂದೆ ಆದೇಶಿಸಿದ್ದರೂ ಅದು ಪಾಲನೆಯಾಗಿಲ್ಲ ದೂರುದಾರ ನಿವಾಸಿಗಳು ಹೇಳಿದರು.

'2022ರ ಜುಲೈ 12ರಂದು ಪಾದಚಾರಿ ಮಾರ್ಗದ ಒತ್ತುವರಿ ತೆರವಿನ ಬಗ್ಗೆಯೂ ಹೇಳಿದ್ದನ್ನೇ ಮುಖ್ಯ ಆಯುಕ್ತರು ಇಂದೂ ಹೇಳುತ್ತಿದ್ದಾರೆ' ಎಂದು ಜಯನಗರದ ನಾಗರಾಜ್ ದೂರಿದರು. 2022ರಲ್ಲಿ ನಡೆದ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ಎಷ್ಟು ದೂರುಗಳು ಸಲ್ಲಿಕೆಯಾದವು, ಯಾವ ಪರಿಹಾರ ನೀಡಲಾಗಿದೆ ಎಂಬ ಮಾಹಿತಿಯನ್ನೂ ಮುಖ್ಯ ಆಯುಕ್ತ ಕಚೇರಿ ಅಧಿಕಾರಿಗಳು ಹೊಂದಿಲ್ಲ.

ತುಳಸಿ ಹಬ್ಬ... ತುಳಸಿ ಹಬ್ಬದ (ವಿವಾಹ) ಮುನ್ನಾ ದಿನವಾದ ಮಂಗಳವಾರ ನಗರದ ಗಾಂಧಿ ಬಜಾರ್ ಮುಖ್ಯ ರಸ್ತೆಯಲ್ಲಿ ಮಹಿಳೆಯರು ತುಳಸಿ ಕಟ್ಟೆ ಹಾಗೂ ಗಿಡಗಳನ್ನು ಖರೀದಿಸಿ ಸಂಭ್ರಮದಿಂದ ಕೊಂಡೊಯ್ದರು
ಪ್ರಜಾವಾಣಿ ಚಿತ್ರ:ರಂಜು ಪಿ

ಸಿದ್ದೀಕ್‌ಗೆ ಬಂಧನದಿಂದ ರಕ್ಷಣೆ ವಿಸ್ತರಣೆ

ನವದೆಹಲಿ (ಪಿಟಿಐ): ಮಲಯಾಳ ಚಿತ್ರ ನಟ ಸಿದ್ದೀಕ್ ಅವರಿಗೆ ಅತ್ಯಾಚಾರ ಪ್ರಕರಣವೊಂದರಲ್ಲಿ ಬಂಧನದಿಂದ ನೀಡಿರುವ ಮಧ್ಯಂತರ ರಕ್ಷಣೆಯನ್ನು ಸುಪ್ರೀಂ ಕೋರ್ಟ್ ವಿಸ್ತರಿಸಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮ ಅವರು ಇದ್ದ ವಿಭಾಗೀಯ ಪೀಠವು, ತನಿಖೆಗೆ ಸಹಕಾರ ನೀಡುವಂತೆ ಸಿದ್ದೀಕ್ ಅವರಿಗೆ ಸೂಚನೆ ನೀಡಿದೆ.

ಸಿದ್ದೀಕ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ, 'ನಟನ ಬಳಿ 2016ರಲ್ಲಿ ಇದ್ದ ಫೋನ್ ಹಾಗೂ ಲ್ಯಾಪ್‌ಟಾಪ್ ಬಗ್ಗೆ ತನಿಖಾಧಿಕಾರಿ-ಗಳು ಮತ್ತೆ ಮತ್ತೆ ಕೇಳುತ್ತಿದ್ದಾರೆ. ಆದರೆ ಅವೆರಡೂ ಈಗ ಇಲ್ಲ' ಎಂದು ತಿಳಿಸಿದರು.

ಸಿದ್ದೀಕ್

ಸಿದ್ದೀಕ್ ಅವರು ದೂರುದಾರ ಮಹಿಳೆಯನ್ನು ಒಂದು ಬಾರಿ ಮಾತ್ರ ಭೇಟಿ ಮಾಡಿದ್ದಾರೆ ಎಂದು ಕೂಡ ರೋಹಟಗಿ ತಿಳಿಸಿದರು.

ಕಂಪ್ಲಿ: ಹಲ್ಲಿ ಬಿದ್ದ ಆಹಾರ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥ

ಕಂಪ್ಲಿ(ಬಳ್ಳಾರಿ): ತಾಲ್ಲೂಕಿನ ಮೆಟ್ರಿ ಗ್ರಾಮದಲ್ಲಿ ಮಂಗಳವಾರ ಹಲ್ಲಿ ಬಿದ್ದಿದ್ದ ಬಿಸಿಯೂಟ ತಿಂದು ಹೊನ್ನಳ್ಳಿ ಸಿದ್ದ-ಪ್ಪನವರ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ 110ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡರು. ಅವರನ್ನು ತಕ್ಷಣವೇ ಕಂಪ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಯಿತು.

50 ವಿದ್ಯಾರ್ಥಿಗಳಿಗೆ ಚಿಕಿತ್ಸೆ ಮುಂದು ವರಿದಿದೆ. ಮೂವರು ವಿದ್ಯಾ-ರ್ಥಿಗಳನ್ನು ಬಳ್ಳಾರಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

31ನೇ ವರ್ಷದ ಸವಿನೆನಪು

ಬಿ.ಎನ್. ವೆಂಕಟರಮಣಗೌಡ

ನನ್ನ ಏಳಿಗೆಗೆ ನಾನೇ ಶಿಲ್ಪಿ ಎಂಬ ತನ್ನತನವನ್ನು ಜೀವನದಲ್ಲಿ ರೂಢಿಸಿಕೊಂಡು, ಪರೋಪಕಾರಿಯಾಗಿ ಜನಮನ್ನಣೆಯನ್ನು ಪಡೆದು ನಮ್ಮ ಜೀವನದ ದಾರಿದೀಪವಾಗಿದ್ದ ನೀವು ನಮ್ಮನ್ನಗಲಿ 31 ವಸಂತ ಉರುಳಿದರೂ ತಮ್ಮ ಆದರ್ಶಗಳು ನಮಗಿಂದೂ ಮಾರ್ಗದರ್ಶಕವಾಗಿದೆ.

ಸದಾ ನಿಮ್ಮ ನೆನಪಿನಲ್ಲಿ

ಬಿ.ಎನ್. ಬಚ್ಚೇಗೌಡರು, ಮಾಜಿ ಸಂಸದರು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ
ಶರತ್ ಬಚ್ಚೇಗೌಡರು, ಶಾಸಕರು, ಹೊಸಕೋಟೆ ವಿಧಾನಸಭಾ ಕ್ಷೇತ್ರ
ದಿ|| ವೆಂಕಟರಮಣಗೌಡರ ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಬೆಂಡಿಗಾನಹಳ್ಳಿ ಕುಟುಂಬ ವರ್ಗ

ನೈಋುತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: 25/2024, ದಿನಾಂಕ: 08.11.2024

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ. **ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.**

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರ ಕೊನೆಯ ದಿನಾಂಕ
1	33241390ಎ	160 ಕೆಎನ್ ಸಾಮರ್ಥ್ಯವುಳ್ಳ ಏರ್ ಸ್ಪ್ರಿಂಗ್ ಅಸೆಂಬ್ಲಿಯ ಸೆಟ್	72 ಸೆಟ್	21.11.2024
2	38241327ಎ	ನ್ಯಾರೋ ಮತ್ತು ವೈಡ್ ಜಾ ಗಾಗಿ ಕಾರ್‌ಟ್ರಿಡ್ಜ್ ಆರ್‌ಬಿಯ ಸೈಡ್ ಫ್ರೇಮ್ ಕೀ	38634 ನಂ.	02.12.2024
3	38241398ಬಿ	ಸ್ಲ್ಯಾಕ್ ಅಡ್ಜಸ್ಟರ್ ಕಂಪ್ಲೀಟ್ ಟೈಪ್ ಐಆರ್ಎಸ್ಎ 600	1471 ನಂ.	02.12.2024
4	47245003ಎ	ಹೆವಿ ಡ್ಯೂಟಿ ರಿವರ್ಸಬಲ್ ಟೈಪ್ ಎಸ್ಕಲೇಟರ್	28 ನಂ.	02.12.2024

PUB/566/AAF/PRB/SWR/2024-25 — ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

South Western Railway - SWR | SWRRLY | SWRRLY

ನೈಋುತ್ಯ ರೈಲ್ವೆ

ಟೆಂಡರು ಸೂಚನೆ ಪ್ರಕಟಣೆ ಸಂ.: ಸಿಎಒ/ಸಿಎನ್/ಬಿಎನ್‌ಸಿ/30/2024, ದಿನಾಂಕ: 07.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಲೋಂಡಾ–ಮೀರಜ್ ವಿಭಾಗ:** ದೇಸೂರು ಮತ್ತು ಬೆಳಗಾವಿ ನಿಲ್ದಾಣಗಳ ನಡುವೆ ಬಾಕ್ಸ್ ಪುಶಿಂಗ್ ಮಾದರಿಯ ಪ್ರಕಾರ ಕಿಮೀ. 606/800–607/000 ರಲ್ಲಿ ಎಲ್‌ಸಿ ಸಂ. 380 ಕ್ಕೆ ಬದಲಾಗಿ 1x5.5x5.5ಮೀ. ಅಳತೆಯ ಸೆಗ್ಮೆಂಟಲ್ ಆರ್‌ಸಿಸಿ ಟ್ವಿನ್ ಬಾಕ್ಸ್‌ಗಳನ್ನು ಉಪಯೋಗಿಸಿ ಆರ್‌ಯುಬಿ ಯ ನಿರ್ಮಾಣ ಕಾರ್ಯ (ಸಂಯುಕ್ತ ಕಾಮಗಾರಿ). (**ಟೆಂಡರು ಉಲ್ಲೇಖ ಸಂ. LDMRJ-RUB-LC380**)	ರೂ. 22,13,25,334/-
2	1) **ಪೇಣುಕೊಂಡ – ಧರ್ಮಾವರಂ ದ್ವಿಪಥೀಕರಣ:** ಮಕ್ಕಾಜಿಪಲ್ಲಿ (ಎಂಕೆಜೆ) ಯಿಂದ ನಾಗಸಮುದ್ರಂ (ಎನ್‌ಜಿಎಂ) ನಿಲ್ದಾಣಗಳ ನಡುವೆ ಎಲ್‌ಸಿ ಸಂ. 102 ಕ್ಕೆ ಬದಲಾಗಿ +5x18.71 ಪಿಎಸ್‌ಸಿ ಗಿರ್ಡರ್ ಗಳಿಂದ (1x36 ಕಾಂಪೋಸಿಟ್ ಗಿರ್ಡರ್) ಚೈ. 162115ರಲ್ಲಿ ರೋಡ್ ಓವರ್ ಬ್ರಿಡ್ಜ್‌ನ ನಿರ್ಮಾಣ ಮತ್ತು ಚೈ. 162178 ರಲ್ಲಿ ಇದಕ್ಕೆ ಸಂಬಂಧಿಸಿದ ಇತರ ಕಾಮಗಾರಿಗಳು. 2) **ಯಲಹಂಕ–ಪೇಣುಕೊಂಡ:** ಯಲಹಂಕ – ಪೇಣುಕೊಂಡ ವಿಭಾಗದ ಚಾಕರಲಪಲ್ಲಿ ಯಾರ್ಡ್‌ನಲ್ಲಿ ಎಲ್‌ಸಿ ಸಂ. 71ಕ್ಕೆ ಬದಲಾಗಿ ಆರ್‌ಓಬಿ ಗಾಗಿ ಆರ್‌ಈ ವಾಲ್ ತಂತ್ರಜ್ಞಾನವನ್ನು ಬಳಸಿ ಅಪ್ರೋಚ್ ರೋಡ್‌ಗಳ ನಿರ್ಮಾಣ ಹಾಗೂ 5.5 ಮೀ x 2.75ಮೀ ಅಳತೆಯುಳ್ಳ ನಿಯಮಿತ ಎತ್ತರದ ಸಬ್‌ವೇ (ಎಲ್‌ಹೆಚ್‌ಎಸ್) ನ ನಿಮಾಣ (ಸಂಯುಕ್ತ ಕಾಮಗಾರಿ) (**ಟೆಂಡರು ಉಲ್ಲೇಖ ಸಂ. PKD-DMM-06-ROB**)	ರೂ. 28,58,38,301/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.11.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/562/AAF/PRB/SWR/2024-25 — ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ/ಬೆಂಗಳೂರು ದಂಡು

South Western Railway - SWR | SWRRLY | SWRRLY

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು.
ದೂ.ಸಂ: 080–25037203/25037131

ದಿನಾಂಕ: 11.11.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ತುಮಕೂರಿನ ಎಲ್‌ಪಿಎಸ್‌ಸಿ (ಬಿ) ಕ್ಯಾಂಪಸ್ ನಲ್ಲಿರುವ ಐಟಿಪಿಎಫ್‌ನ ಹೊಸ ಕ್ಯಾಂಟೀನ್‌ಗೆ ಹೊಸ ಡೈನಿಂಗ್ ಏರಿಯಾ ನಿರ್ಮಾಣ (ಸಿವಿಲ್ & ಪಿಎಚ್ ಕಾಮಗಾರಿ)
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ಎಲ್‌ಪಿಎಸ್‌ಸಿಬಿ/02/2010/ಸಿ/ಎಂಐ/016/2024–25 ದಿನಾಂಕ: 11.11.2024
ಅಂದಾಜು ಮೊತ್ತ	₹ 21.17 ಲಕ್ಷಗಳು
ಪೂರ್ಣಗೊಳಿಸುವ ಅವಧಿ	3 ತಿಂಗಳು
ಮಾರಾಟದ ಅವಧಿ	11.11.2024 ರಿಂದ 18.11.2024 ರವರೆಗೆ
ಇಎಂಡಿ	₹ 42,340/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು, ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

SANSERA ideas@work

SANSERA ENGINEERING LIMITED

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105, **Phone:** 080 27839081/82/83; **Fax:** 080 27839309;
Email: rajesh.modi@sansera.in; **Website:** www.sansera.in

CONSOLIDATED UNAUDITED FINANCIAL RESULTS FOR THE QUARTER AND HALF YEAR ENDED 30TH SEPTEMBER, 2024

(Rs. in Million except EPS)

Sl. No.	Particulars	Quarter ended 30-09-2024 (Unaudited)	Quarter ended 30-09-2023 (Unaudited)	Half year ended 30-09-2024 (Unaudited)	Half year ended 30-09-2023 (Unaudited)
1	Total Income from Operations	7,633.67	6,928.83	15,073.00	13,529.49
2	Net Profit/(Loss) for the period (before Tax, Exceptional and/or Extraordinary items)	714.79	636.94	1,401.84	1,246.77
3	Net Profit/(Loss) for the period before Tax (after Exceptional and/or Extraordinary items)	714.79	636.94	1,401.84	1,246.77
4	Net Profit/(Loss) for the period after Tax (after Exceptional and/or Extraordinary items)	516.08	475.41	1,017.51	927.11
5	Total Comprehensive Income For the period [comprising Profit/(Loss) for the priod (after tax) and Other Comprehensive Income (after tax)]	509.98	473.41	1,005.72	928.55
6	Equity Share Capital	108.00	106.65	108.00	106.65
7	Reserves (excluding Revaluation Reserve) as shown in the Audited balance Sheet of the previous year	-	-	-	-
8	Earnings per share (of Rs. 2/- each) 1. Basic:	9.38	8.81	18.62	17.24
	2. Diluted:	9.38	8.70	18.47	17.00

Notes:

a. The above is an extract of the detailed format of quarterly and half year ended financial results filed with the stock exchanges under Regulation 33 of the SEBI (Listing Obligations & Disclosure Requirements) Regulations, 2015. The full format of the unaudited quarterly and unaudited half year ended financial results are available on the websites of the stock exchange(s) i.e., www.bseindia.com / www.nseindia.com and the Company i.e., www.sansera.in.

b. The above consolidated unaudited financial results of the group were reviewed by the Audit Committee and approved by the Board of Directors at their respective meeting held on 11 November 2024. The financial results for the quarter and half year ended ended 30 September 2024 have been reviewed by the statutory auditors and have issued an unmodified report.

c. Standalone Unaudited financial information of the Company pursuant to Regulation 47(1)(b) of SEBI (LODR) Regulations, 2015

(Rs. in Million)

Particulars	Quarter ended 30-09-2024 (Unaudited)	Quarter ended 30-09-2023 (Unaudited)	Half year ended 30-09-2024 (Unaudited)	Half year ended 30-09-2023 (Unaudited)
Turnover	6,984.04	6,304.78	13,798.92	12,186.32
Profit before Tax	692.77	611.05	1,372.19	1,203.01
Profit after Tax	509.37	456.63	1,012.18	896.22

For and on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: 11 November 2024
Place: Bengaluru

Adfactors 438

ನೈಋುತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: B/TRD.2024-25/22
ದಿನಾಂಕ: 06.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೈಯಪ್ಪನಹಳ್ಳಿ (ಬಿವೈಪಿಎಲ್) – ಧರ್ಮಾವರಂ ಜಂ. (ಡಿಎಂಎಂ) ವಿಭಾಗ: ದೊಡ್ಡಬಳ್ಳಾಪುರ (ಡಿಬಿಯು) ನಿಲ್ದಾಣದಲ್ಲಿ ರೋಡ್ 5 ನ್ನು ಸರಿಯಾದ ರೀತಿಯಲ್ಲಿ ಸ್ಲೂಯಿಂಗ್ ಮಾಡಿ ಪ್ರಸ್ತಾವಿತ ರೋಡ್ 6 ನ್ನು 580 ಮೀ. ಗೆ ವಿಸ್ತರಣೆ ಮಾಡುವ ಕಾಮಗಾರಿಗೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು ಹಾಗೂ ಗುಡ್ಸ್ ಸರ್ಕ್ಯುಲೇಟಿಂಗ್ ಪ್ರದೇಶದಲ್ಲಿ ಬದಲಾವಣಾ ಕಾರ್ಯಗಳು.	ರೂ. 1,03,73,653.03/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.11.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್/ಬೆಂಗಳೂರು

PUB/558/AAMO/PRB/SWR/2024-25

South Western Railway - SWR | SWRRLY | SWRRLY

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ

ಇ–500, ಟವರ್ ಇ, ಐದನೇ ಮಹಡಿ, ವರ್ಲ್ಡ್ ಟ್ರೇಡ್ ಸೆಂಟರ್, ನೌರೋಜಿನಗರ, ನವದೆಹಲಿ–110029

ಎನ್‌ಪಿಎಸ್ ಟ್ರಸ್ಟ್‌ನ ಟ್ರಸ್ಟಿಗಳ ಮಂಡಳಿಯಲ್ಲಿನ ಒಂದು ಟ್ರಸ್ಟಿ ಹುದ್ದೆಗೆ ನೇಮಕಾತಿ

ಎನ್‌ಪಿಎಸ್ ಟ್ರಸ್ಟ್‌ನ ಟ್ರಸ್ಟಿಗಳ ಮಂಡಳಿಯಲ್ಲಿನ ಒಂದು ಟ್ರಸ್ಟಿ ಹುದ್ದೆ ಭರ್ತಿ ಮಾಡಿಕೊಳ್ಳಲು ನೇಮಕಾತಿ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ, ಎರಡು ವರ್ಷಗಳಿಗೆ ಮೀರದ ವಿಸ್ತರಣಾ ನಿಯಮದೊಂದಿಗೆ ನೇಮಕಾತಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟ್ರಸ್ಟಿಯೊಬ್ಬರು ಕಾರ್ಯನಿರ್ವಹಿಸಲಾರದಂತಹ ಗರಿಷ್ಠ ವಯೋಮಿತಿಯು ಅವರತ್ತು ವರ್ಷ ಆಗಿರುತ್ತದೆ. ಕಾಲಾಕಾಲಕ್ಕೆ ಪ್ರಾಧಿಕಾರವು ನಿಗದಿಪಡಿಸುವ ದರದಲ್ಲಿ, ಟ್ರಸ್ಟಿಗಳು ಸಿಟ್ಟಿಂಗ್ ಫೀಸ್ ಮತ್ತು ಪ್ರಯಾಣ, ವಸತಿ ಮತ್ತು ಆಹಾರ ಇತ್ಯಾದಿ ಇನ್ನಿತರ ವೆಚ್ಚಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ವಿವರವಾದ ನೇಮಕಾತಿ ಪ್ರಕಟಣೆ, ಪಿಎಫ್‌ಆರ್‌ಡಿ (ಎನ್‌ಪಿಎ ಟ್ರಸ್ಟ್) ನಿಯಮಗಳು, 2015 ಮತ್ತು ಟ್ರಸ್ಟಿಗಳ ನೇಮಕಾತಿಯ ಮಾರ್ಗಸೂಚಿಗಳ ವಿವರಗಳು ಪಿಎಫ್‌ಆರ್‌ಡಿಎ'ರವರ www.pfrda.org.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ **12ನೇ ಡಿಸೆಂಬರ್ 2024.**

ಸಹಿ/– ಚೀಫ್ ಜನರಲ್ ಮ್ಯಾನೇಜರ್
ನಿಯಮಗಳ ಇಲಾಖೆ – ನಿಧಿ ನಿರ್ವಹಣೆ
(ಎನ್‌ಪಿಎಸ್ ಟ್ರಸ್ಟ್)

CBC 15102/12/0002/2425

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ಎನ್.ಆರ್. ಚೌಕ, ಬೆಂಗಳೂರು – 560002

ನಂ.: ಬಿಬಿಎಂಪಿ/ಮು.ಆಯುಕ್ತರು/ಪಿಎಸ್‌ಆರ್(ಜಿ)/2264/2024–25 — ದಿನಾಂಕ: 06.11.2024

ಸಾರ್ವಜನಿಕ ಪ್ರಕಟಣೆ

ಫಾರಂ–III (ನಿಯಮ–3ರ ಉಪನಿಯಮ(3)ನ್ನು ನೋಡಿ)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ರಡಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, **45.00 ಮೀ. ಅಗಲಕ್ಕೆ ಮಾಸ್ಟರ್ ಪ್ಲಾನ್–2015ರ ಅನುಮೋದನೆಯ** ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು **ವರ್ತೂರು ಕೋಡಿಯಿಂದ ವರ್ತೂರು ಸೇತುವೆ ಎಸ್‌ಹೆಚ್–35ರ ವರೆಗೆ ಗುಂಜೂರು ಹಂತ–1 ಮೂಲಕ ಸರ್ಜಾಪುರ ರಸ್ತೆಯವರೆಗೆ ವರ್ತೂರು ರಸ್ತೆಯ ಅಗಲೀಕರಣಕ್ಕಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮಿಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** — ತಾಲ್ಲೂಕಿನ ಹೆಸರು: **ಬೆಂಗಳೂರು ಪೂರ್ವ** — ಗ್ರಾಮದ ಹೆಸರು: **ಅಮಾನಿಬೆಳ್ಳಂದೂರು ಖಾನೆ**

Sl. No.	Sy. No. / Khata No.	Type of land: Vacant / Built up	Nature of Land: Agriculture Converted undeveloped Approved layout / developed land Building site	Dimension of the land / plot and extent in Sq.m (Dimension Extent)	Boundaries: North	South	East	West	Building Details: Extent in Sq.m	Type of Construction and No. of floors	Floor Area Ratio	Present activity on land / Building (Specify Specific activity such as shop, office, factory, apartment, individual house etc.,)	Market (guide lines) value of the land per Sq.m	Name and address of the owner of the plot / land for which DRC is to be issued.
1	Sy No: 338/5A, Khatha Sl No: 03	Vacant Land	Converted A Khata Land	820.95 Sqm	Sy No. 338/7	Oni	Remaining Portion of Sy No. 338/5A	Sy No. 319	None	None	None	Vacant	48,600/- per Sqm	Smt. Kumudha Kumar Babu W/o. B.P. Kumar Babu, #132, Vishnu Paadham, 4th Main Defence Colony, Indiranagar, Bangalore North, Bangalore-560038

ಗಮನಿಸಿ: ಈ ಆಸ್ತಿಯ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯವನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024 (ಇ), ಬೆಂಗಳೂರು, ದಿನಾಂಕ:09.09.2024 ಮತ್ತು ಆದೇಶ ಸಂಖ್ಯೆ ಆಯುಕ್ತರು/ಪಿಎಸ್.ಆರ್.ಜಿ/1802/2024–25, ದಿನಾಂಕ: 21.09.2024ರ ಪ್ರಕಾರ ಶುಲ್ಕ ಪಾವತಿಯ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಪರಿಗಣಿಸಲಾಗುತ್ತದೆ.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ / ಉಪ–ವಿಭಾಗ / ಶಾಖಾ ಕಛೇರಿಗಳ ಹೆಸರು ಮತ್ತು ವಿಳಾಸ	ಡೆಪ್ಯೂಟಿ ಕಮಿಷನರ್ ಭೂಸ್ವಾಧೀನ & ಟಿಡಿಆರ್, 2ನೇ ಮಹಡಿ, ಕೊಠಡಿ ಸಂ. 208, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560002

ಸಹಿ/–,
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-206/1932/2024–25 — ದಿನಾಂಕ: 11.11.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು ಕೈಗಾರಿಕೆ(ಹೈಟೆಕ್) ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ರುಬೀನಾ ಅಜೀಜ್	ಬೆಂಗಳೂರು ಪೂರ್ವ	ಕೆ.ಆರ್.ಪುರ	ವೈಟ್‌ಫೀಲ್ಡ್	49/1ರ ಪೈಕಿ	1-37	ಕೈಗಾರಿಕೆ (ಹೈಟೆಕ್)	ವಸತಿ

ಷರಾ: ಈ ಜಮೀನಿನಲ್ಲಿ ಬಡಾವಣೆ/ಅಪಾರ್ಟ್‌ಮೆಂಟ್ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು/ಅಪಾರ್ಟ್‌ಮೆಂಟ್‌ಗಳು ದೊರಕುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರಿಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ(ಹೈಟೆಕ್)ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

‘ಹವಾಮಾನ ಚತುರ ಡಿಜಿಟಲ್ ಕೃಷಿ’ ಎಂಬ ಘೋಷ ವಾಕ್ಯದಡಿ ಕಾರ್ಯಕ್ರಮ • ಕೃಷಿ ತಂತ್ರಜ್ಞಾನಗಳ ಪ್ರದರ್ಶನ

ನಾಳೆಯಿಂದ ನಾಲ್ಕು ದಿನ ಕೃಷಿ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 14ರಿಂದ 17ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ‘ಹವಾಮಾನ ಚತುರ ಡಿಜಿಟಲ್ ಕೃಷಿ’ ಎಂಬ ಘೋಷವಾಕ್ಯದಡಿ ಕೃಷಿ ಮೇಳ ಹಮ್ಮಿಕೊಳ್ಳಲಾಗಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ ತಿಳಿಸಿದರು.

ಮಂಗಳವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೇಳದಲ್ಲಿ ಹವಾಮಾನಕ್ಕೆ ಹೊಂದಿಕೊಂಡು ಹೋಗುವ ಕೃಷಿಗೆ ಅನುಕೂಲವಾಗುವ ತಾಂತ್ರಿಕತೆ ಪರಿಚಯಿಸಲಾಗುತ್ತಿದೆ. ಇದಕ್ಕಾಗಿಯೇ ವಿಶ್ವವಿದ್ಯಾಲಯದಿಂದ ಅಭಿವೃದ್ಧಿ ಪಡಿಸಿರುವ ಸೆನ್ಸರ್ ಆಧಾರಿತ ತಂತ್ರಜ್ಞಾನಗಳು ಪ್ರದರ್ಶನ ಮಾಡಲಾಗುವುದು’ ಎಂದು ಮಾಹಿತಿ ನೀಡಿದರು.

‘ಕೃಷಿ ಮೇಳದಲ್ಲಿ 700ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಸಿರಿಧಾನ್ಯ ಆಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಮಳಿಗೆಗಳು ಇರಲಿವೆ. ಮೇಳಕ್ಕೆ ಆಗಮಿಸುವ ರೈತರಿಗೆ ಹಾಗೂ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಮಾಡಲಾಗುವುದು. ಇದರ ಜೊತೆಗೆ ಉಪಾಹಾರ ಮಳಿಗೆಗಳು ಇರಲಿವೆ’ ಎಂದು ಹೇಳಿದರು.

‘ಮೇಳಕ್ಕೆ ಬರುವವರಿಗೆ ಪ್ರವೇಶ ಉಚಿತವಿದೆ. ಜಿಕೆವಿಕೆ ಗೇಟ್‌ನಿಂದ ಮೇಳ ನಡೆಯುವ ಸ್ಥಳಕ್ಕೆ ಕರೆದೊಯ್ಯಲು ವಿಶ್ವ ವಿದ್ಯಾಲಯದ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾರು, ಬೈಕ್ ಹಾಗೂ ಇತರೆ ವಾಹನಗಳಲ್ಲಿ ಬರುವವರಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದರು.

‘ಮೇಳದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, ನಾಲ್ಕು ಹೊಸ ತಳಿಗಳಾದ ಮುಸುಕಿನಜೋಳ ಸಂಕರಣ (ಎಂಎಎಚ್ 15-85), ಅಲಸಂದೆ (ಕೆಬಿಸಿ-12), ಸೂರ್ಯಕಾಂತಿ ಸಂಕರಣ (ಕೆಬಿಎಸ್‌ಎಚ್-90), ಬಾಜ್ರ ನೇಪಿಯರ್ ಸಂಕರಣ (ಪಿಬಿಎನ್-342) ಎಂಬ ತಳಿಗಳು ಬಿಡುಗಡೆಯಾಗಲಿದ್ದು, ಈ ತಳಿಗಳ ಪ್ರಾತ್ಯಕ್ಷಿಕೆಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಬೆಳೆಯಲಾಗಿದೆ’ ಎಂದು ಹೇಳಿದರು.

‘ನ. 14ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಳಕ್ಕೆ ಚಾಲನೆ ನೀಡಲಿದ್ದು, ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅತಿಥಿಗಳಾಗಿ ಭಾಗವಹಿಸಲಿದ್ದು, ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ’ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಸೂರ್ಯಕಾಂತಿ ಸಂಕರಣ ತಳಿಯ ತಾಕು (ಎಡಚಿತ್ರ) ರಸಗೊಬ್ಬರ ಸಿಂಪಡಿಸುವ ಬೂಮ್ ಸ್ಪ್ರೇಯರ್ (ಬಲಚಿತ್ರ) ಪ್ರಜಾವಾಣಿ ಚಿತ್ರಗಳು: ಬಿ.ಕೆ. ಜನಾರ್ದನ್

ಮುಖ್ಯಾಂಶಗಳು

- 14ರಿಂದ 17ರವರೆಗೆ ಕೃಷಿ ಮೇಳ
- 700ಕ್ಕೂ ಹೆಚ್ಚು ಮಳಿಗೆ ತೆರೆಯಲು ಅವಕಾಶ
- ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟ

ಡಿಜಿಟಲ್ ಕೃಷಿ ತಾಂತ್ರಿಕತೆಗಳ ಪ್ರದರ್ಶನ

- ಮಲ್ಟಿಸ್ಪೆಕ್ಟ್ರಲ್ ಡ್ರೋನ್
- ಕೃಷಿ ಡ್ರೋನ್
- ರೊಬೋಟ್ ಕೃಷಿ ಯಂತ್ರ
- ಹಣ್ಣುಗಳ ವರ್ಗೀಕರಣಗೊಳಿಸುವ ಯಂತ್ರ
- ಸ್ವಯಂಚಾಲಿತ ರಸಗೊಬ್ಬರ ಹರಡುವ ಯಂತ್ರ
- ಆಳ ನಿಯಂತ್ರಕ ರೋಟವೇಟರ್
- ಸ್ವಯಂಚಾಲಿತ ಬೂಮ್ ಸ್ಪ್ರೇಯರ್ ಪ್ರದರ್ಶನ

‘ಮೇಳದಲ್ಲಿ ಹವಾಮಾನ ಆಧಾರಿತ ಕೃಷಿ ಕುರಿತು ಸಂವಾದ’

‘ಮೇಳದಲ್ಲಿ ಹವಾಮಾನ ಆಧಾರಿತ ಕೃಷಿ ಕುರಿತು ರೈತರೊಂದಿಗೆ ವಿಜ್ಞಾನಿಗಳು ಸಂವಾದ ಮಾಡಲಿದ್ದಾರೆ’ ಎಂದು ಎಸ್‌.ವಿ. ಸುರೇಶ ತಿಳಿಸಿದರು.



ಎಸ್‌.ವಿ. ಸುರೇಶ

ಡ್ರೋನ್ ಆಧಾರಿತ ತೆಂಗಿನಕಾಯಿ ಕೀಳುವ ತಂತ್ರಜ್ಞಾನ ಪ್ರದರ್ಶನ ಇರಲಿದೆ. ಮಣ್ಣುರಹಿತ ಕೃಷಿ, ಖುಷ್ಕಿ ಬೇಸಾಯಕ್ಕೆ ಸಹಾಯಕವಾಗುವ ಬೆಳೆಗಳ ಪ್ರಾತ್ಯಕ್ಷಿಕೆಗಳು ಪ್ರದರ್ಶನ, ಬಿತ್ತನೆ ಬೀಜಗಳ ಮಾರಾಟ ಮಾಡಲಾಗುತ್ತದೆ. ರೈತರು ಆದಾಯಗಳಿಸಲು ಸಮಗ್ರ ಕೃಷಿ ಪದ್ಧತಿ ಮಾಡುವಂತೆ ಜಾಗೃತಿ ಮೂಡಿಸಲಾಗುತ್ತದೆ’ ಎಂದರು.

ವಿಮಾನ ನಿಲ್ದಾಣ ಸಂಪರ್ಕಿಸುವ ಮೇಲ್ಸೇತುವೆ ಬಳಿ ಮಂಗಳವಾರ ಮುಂಜಾನೆ ಮಂಜು ಮುಸುಕಿದ ವಾತಾವರಣವಿತ್ತು

ನಗರದಲ್ಲಿ ಮುಂಜಾನೆ ಮಂಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮುಂಜಾನೆ ಅವಧಿಯಲ್ಲಿ ವಾತಾವರಣವನ್ನು ಮಂಜು ಆವರಿಸಿಕೊಳ್ಳುತ್ತಿದ್ದು, ಚಳಿ ಕಾಣಿಸಿಕೊಳ್ಳುತ್ತಿದೆ.

ಬಂಗಾಳ ಕೊಲ್ಲಿಯಲ್ಲಿನ ವಾಯುಭಾರ ಕುಸಿತವು ನಗರದ ಮೇಲೂ ಪರಿಣಾಮ ಬೀರಿದ್ದು, ಮಂಗಳವಾರ ಬಹುತೇಕ ಅವಧಿ ಮೋಡ ಕವಿದ ವಾತಾವರಣವಿತ್ತು. ಮುಂಜಾನೆ ಬಹುತೇಕ ಸ್ಥಳಗಳಲ್ಲಿ ಮಂಜು ಕಾಣಿಸಿಕೊಂಡಿತ್ತು. ಇದರಿಂದ ವಾಹನ ಸವಾರರು ಪರದಾಡುವಂತಾಗಿತ್ತು.

ಕೆಲ ದಿನಗಳಿಂದ ಮೋಡ ಕವಿದ ವಾತಾವರಣ ಸಹಿತ ಆಗಾಗ ಸುರಿಯುತ್ತಿರುವ ಜಿಟಿಜಿಟಿ ಮಳೆಯಿಂದಾಗಿ ತಾಪಮಾನ ಕುಸಿಯುತ್ತಿದೆ. ಸಂಜೆ ಅವಧಿಯಲ್ಲಿ ಮೋಡ ಕವಿದ ವಾತಾವರಣ ಇದ್ದರೆ, ಮುಂಜಾನೆ ಅವಧಿಯಲ್ಲಿ ಮಂಜು ಮುಸುಕುತ್ತಿದೆ. ಇದರಿಂದಾಗಿ ಬೆಳಿಗ್ಗೆ ಹಾಗೂ ಸಂಜೆಯ ಕೆಲವು ಸಮಯ ಚಳಿಯ ಅನುಭವ ಆಗುತ್ತಿದೆ.

ಹವಾಮಾನ ಇಲಾಖೆಯ ಪ್ರಕಾರ ಕಳೆದೊಂದು ವಾರದಿಂದ ಸರಾಸರಿ ಗರಿಷ್ಠ ಉಷ್ಣಾಂಶ 26 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್ ವರದಿಯಾಗುತ್ತಿದೆ.

ನಗರದಲ್ಲಿ ಬುಧವಾರ ಹಾಗೂ ಗುರುವಾರ ಮೋಡ ಕವಿದ ವಾತಾವರಣ ಇರಲಿದ್ದು, ಜಿಟಿಜಿಟಿ ಮಳೆಯಾಗುವ ಸಾಧ್ಯತೆಯಿದೆ. ಶುಕ್ರವಾರ ಹಾಗೂ ಶನಿವಾರ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬಿಡಿಎ ಆಸ್ತಿ ಒತ್ತುವರಿ ತೆರವು

ಬೆಂಗಳೂರು: ಬಿಟಿಎಂ ಬಡಾವಣೆಯಲ್ಲಿ ಒತ್ತುವರಿಯಾಗಿದ್ದ ₹42 ಕೋಟಿ ಮೌಲ್ಯದ ಆಸ್ತಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವಶಕ್ಕೆ ತೆಗೆದುಕೊಂಡಿದೆ. ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಬಿಳೇಕಹಳ್ಳಿ ಗ್ರಾಮದ ಸರ್ವೆ ನಂ. 172/2ಎ ಮತ್ತು 172/3ರಲ್ಲಿನ 23,200 ಚದರ ಅಡಿಯ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ಅನ್ನು ಮಂಗಳವಾರ ತೆರವುಗೊಳಿಸಲಾಯಿತು ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ₹ 25 ಲಕ್ಷ: ಆದಾಯ ಮಿತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯ ವೈದ್ಯಕೀಯ ವಿದ್ಯಾರ್ಥಿಗಳಿಗೆ ₹ 25 ಲಕ್ಷ ಕಾಲೇಜು ಶುಲ್ಕ ನೀಡುವ ಯೋಜನೆಗೆ ಆದಾಯ ಮಿತಿ ವಿಧಿಸಬೇಕು’ ಎಂದು ದಲಿತ ಸಂಘರ್ಷ ಸಮಿತಿ (ಸಮತಾವಾದ) ರಾಜ್ಯ ಘಟಕದ ಅಧ್ಯಕ್ಷ ಎಚ್. ಮಾರಪ್ಪ ಆಗ್ರಹಿಸಿದ್ದಾರೆ.

‘ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 95 ಮತ್ತು ಅದಕ್ಕಿಂತ ಹೆಚ್ಚಿನ ಅಂಕ ಪಡೆದು ನೀಟ್ ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಸಿಗದೆ, ಆಡಳಿತ ಮಂಡಳಿಯ ಕೋಟಾದಡಿ ಎಂಬಿಬಿಎಸ್ ಪ್ರವೇಶ ಪಡೆಯುವ ಪರಿಶಿಷ್ಟ ಸಮುದಾಯ ವಿದ್ಯಾರ್ಥಿಗಳಿಗೆ ₹ 25 ಲಕ್ಷ ಕಾಲೇಜು ಶುಲ್ಕ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ. ಶೇ 95 ಅಂಕ ಪಡೆಯಬೇಕೆಂಬ ಷರತ್ತು ಸಡಿಲಿಸಿ, ಕನಿಷ್ಠ ಶೇ 80 ಅಂಕ ಪಡೆದವರಿಗೂ ಈ ಸೌಲಭ್ಯವನ್ನು ನೀಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಪಿಯುಸಿಯಲ್ಲಿ ಶೇ 95 ಅಂಕ ಪಡೆದ ಪರಿಶಿಷ್ಟ ಜಾತಿಯ ಹೆಚ್ಚಿನ ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದ ಪ್ರತಿಷ್ಠಿತ ಕಾಲೇಜುಗಳಲ್ಲಿ ಕಲಿತಿರುತ್ತಾರೆ. ಟ್ಯೂಷನ್ ಶುಲ್ಕ ನೀಡಿ ಓದಿರುವ ಈ ವಿದ್ಯಾರ್ಥಿಗಳು ಹೆಚ್ಚು ಆದಾಯದ, ಉನ್ನತ ಸ್ಥಾನಮಾನ ಹೊಂದಿರುವವರ ಮಕ್ಕಳಾಗಿರುತ್ತಾರೆ. ಕನ್ನಡ ಮಾಧ್ಯಮದಲ್ಲಿ ಕಲಿತ, ಅದರಲ್ಲೂ ಗ್ರಾಮೀಣ ಭಾಗದ, ಹಾಸ್ಟೆಲ್ ವಿದ್ಯಾರ್ಥಿಗಳು ಶೇ 95 ಅಂಕ ಪಡೆಯುವುದು ಕಷ್ಟ. ಹೀಗಾಗಿ, ಸರ್ಕಾರ ಘೋಷಿಸಿದ ಯೋಜನೆ ಹೆಚ್ಚು ಆದಾಯ ಇರುವ ಶ್ರೀಮಂತ ಮಕ್ಕಳ ಪಾಲಾಗಲಿದೆ. ಬಡ ಮಕ್ಕಳು ಈ ಯೋಜನೆಯಿಂದ ವಂಚಿತರಾಗಲಿದ್ದಾರೆ.

ಹೀಗಾಗಿ, ಈ ಸೌಲಭ್ಯ ಪಡೆಯಲು ವಾರ್ಷಿಕ ₹ 5 ಲಕ್ಷದ ಆದಾಯ ಮಿತಿ ಹಾಕಬೇಕು ಎಂದು ಸಮಾಜ ಕಲ್ಯಾಣ ಸಚಿವರಿಗೆ ಅವರು ಮನವಿ ಮಾಡಿದ್ದಾರೆ.

‘ಹರಿದಾಸ ಸಾಹಿತ್ಯ ಸಮ್ಮೇಳನ’ 17ರಿಂದ

ಬೆಂಗಳೂರು: ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ ಟ್ರಸ್ಟ್ ವತಿಯಿಂದ ನವೆಂಬರ್ 17ರಿಂದ 18ರವರೆಗೆ ಪೂರ್ಣಪ್ರಜ್ಞ ವಿದ್ಯಾಪೀಠ ಹತ್ತಿರದ ಐಟಿಐ ಬಡಾವಣೆಯಲ್ಲಿರುವ ಶ್ರೀಕೃಷ್ಣ ಸಮೂಹ ವಿದ್ಯಾ ಸಂಸ್ಥೆಯಲ್ಲಿ ಆರನೇ ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಕಾರ್ಯದರ್ಶಿ ಎಚ್‌.ಬಿ. ಲಕ್ಷ್ಮೀನಾರಾಯಣ, ‘ಎರಡು ದಿನದ ಈ ಸಮ್ಮೇಳನದಲ್ಲಿ ವಿವಿಧ ಅಧಿವೇಶನಗಳು ನಡೆಯಲಿವೆ. ಬಾಳಗಾರು ಮಠದ ಅಕ್ಷೋಭರಾಮಪ್ರಿಯತೀರ್ಥ ಸ್ವಾಮೀಜಿ ಅವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ ಟ್ರಸ್ಟ್‌ನ ಉಪಾಧ್ಯಕ್ಷ ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಸಮ್ಮೇಳನಾಧ್ಯಕ್ಷತೆಯನ್ನು ವಹಿಸಲಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ, ಅಮೆರಿಕದ ಯೋಗ ಸಂಸ್ಕೃತಂ ವಿಶ್ವವಿದ್ಯಾಲಯದ ಕುಲಪತಿ ಬಿ. ವೆಂಕಟಕೃಷ್ಣ ಶಾಸ್ತ್ರಿ ಭಾಗವಹಿಸಲಿದ್ದಾರೆ’ ಎಂದರು.

ಪತ್ರಕರ್ತ ಎಸ್‌.ಕೆ. ಶೇಷಚಂದ್ರಿಕಾ ಮತ್ತು ಹರಿದಾಸ ಸಾಹಿತ್ಯಕ್ಕೆ ಸೇವೆ ಸಲ್ಲಿಸಿರುವ ಬಿ. ಸತ್ಯನಾರಾಯಣಚಾರ್ಯ, ಜಯಲಕ್ಷ್ಮಿ ಮಂಗಳಮೂರ್ತಿ, ಹ.ರಾ. ನಾಗರಾಜಾಚಾರ್ಯ ಸೇರಿದಂತೆ ಹಲವರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಜಯನಗರ: ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ ಸಾರಕ್ಕಿಯ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುವುದರಿಂದ ಬುಧವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಕೇಂದ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಶಾಕಾಂಬರಿನಗರ, ಪೈಪ್‌ಲೈನ್ ರೋಡ್, ರಾಘವೇಂದ್ರಸ್ವಾಮಿ ಮಠ, ಜೆ.ಪಿ.ನಗರ ಮೊದಲನೇ ಹಂತ, 14ನೇ ಅಡ್ಡ ರಸ್ತೆ, ಸಲಾಪುರಿಯಾ ಅಪಾರ್ಟ್‌ಮೆಂಟ್, ನಾಗರ್ಜುನ ಅಪಾರ್ಟ್‌ಮೆಂಟ್, ಪುಟ್ಟೇನಹಳ್ಳಿ, ಜಯನಗರ 4, 5, 7, 8ನೇ ಬ್ಲಾಕ್, ಐಟಿಐ ಲೇಔಟ್, ಎಸ್‌.ಬಿ.ಐ ಕಾಲೊನಿ, ಆರ್‌.ವಿ.ಡೆಂಟಲ್ ಕಾಲೇಜು ಸುತ್ತಮುತ್ತಲ ಪ್ರದೇಶಗಳು, 24ನೇ ಮೇನ್, ಎಲ್‌ಐಸಿ ಕಚೇರಿ ಹಿಂಬಾಗ, ಎಲ್‌ಐಸಿ ಕಾಲೊನಿ, ಜೆ.ಪಿ.ನಗರ 5ನೇ ಹಂತ, ಸಾಯಿ ನರ್ಸರಿ ರಸ್ತೆ, ಜೆ.ಪಿ.ನಗರ 1,2,3,4,5,6ನೇ ಹಂತ, 15ನೇ ಕ್ರಾಸ್, 16 ಮತ್ತು 12 ನೇ ಅಡ್ಡ ರಸ್ತೆ, ಸಿಂಧೂರ ಕನ್ವೆಷನ್ ಹಾಲ್ ಸುತ್ತಮುತ್ತಲಿನ ಪ್ರದೇಶಗಳು, ಆಸ್ಟರ್ ಆಸ್ಪತ್ರೆ ಮತ್ತು ಸುತ್ತಮುತ್ತಲ ಪ್ರದೇಶಗಳು.

ನಗರದಲ್ಲಿ ಇಂದು

‘ಲಂಕೇಶ್ ಬಹುತ್ವಗಳ ಶೋಧ-ಅಧ್ಯಯನ ಶಿಬಿರ’: ಗೋಷ್ಠಿಗಳು: ‘ಅಲ್ಲಿಂದ ಇಲ್ಲಿಗೆ ಲಂಕೇಶರ ಅನುವಾದ ಸಾಹಿತ್ಯ’: ರಾಜೇಂದ್ರ ಪ್ರಸಾದ್, ‘ಲಂಕೇಶರಿಂದ ಪ್ರೇರಣೆ’: ಕೆ.ಬಿ. ಮಹದೇವಪ್ಪ, ಅಕ್ಷತಾ ಹುಂಚದಕಟ್ಟೆ, ವಿ.ಎಂ. ಮಂಜುನಾಥ್, ಈ. ಬಸವರಾಜ್, ಸುರೇಶ್ ನಾಗಲಮಡಿಕೆ, ಬಸವರಾಜ್ ಬಿ.ಸಿ., ಮಂಜುಳಾ ಹುಲಿಕುಂಟೆ, ಸಮಾರೋಪ ಸಮಾರಂಭ: ಟಿ.ಎನ್. ಸೀತಾರಾಂ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಇಂದಿರಾ ಲಂಕೇಶ್, ಬಾನು ಮುಷ್ತಾಕ್, ಉಪಸ್ಥಿತಿ: ವಿಜಯ್ ಹನಕೆರೆ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 9.30ರಿಂದ

ಪಿ. ಲಂಕೇಶ್

‘ಸೇಫ್‌ಕ್ಲೋಕ್’ ಡಿಜಿಟಲ್ ಲಗೇಜ್ ಲಾಕರ್ ಉದ್ಘಾಟನೆ: ಆಯೋಜನೆ: ನಮ್ಮ ಮೆಟ್ರೊ, ಸ್ಥಳ: ಮೆಜೆಸ್ಟಿಕ್ ಮೆಟ್ರೊ ನಿಲ್ದಾಣ, ಬೆಳಿಗ್ಗೆ 11

ಕೆ.ಎ. ಶೇಖ್ ಅವರ 124ನೇ ಜಯಂತಿ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಗುಲಾಂ ಮಹಮ್ಮದ್ ಖಲೀಫಾ ಮೆಹಬೂಬ್, ಉದ್ಘಾಟನೆ: ಎನ್.ಎ. ಹ್ಯಾರಿಸ್, ಅಧ್ಯಕ್ಷತೆ: ಕೆ. ಅಬ್ದುಲ್ ಜಬ್ಬಾರ್, ಆಯೋಜನೆ: ದಿಶಾ ಚಾರಿಟಬಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಕನ್ನಡ ರಾಜ್ಯೋತ್ಸವ, ನಾಟಕೋತ್ಸವ: ‘ವರಭ್ರಷ್ಟ’ ನಾಟಕ ಪ್ರದರ್ಶನ: ರಚನೆ: ಎನ್.ಎನ್. ರಾವ್, ನಿರ್ದೇಶನ: ವೆಂಕಟರಮಣಯ್ಯ ಡಿ., ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಬ್ಲೂ ಬೆಲ್ ಪಬ್ಲಿಕ್ ಸ್ಕೂಲ್, ಬ್ಯಾಡರಹಳ್ಳಿ ಮಾಗಡಿ ಮುಖ್ಯರಸ್ತೆ, ಸಂಜೆ 4

‘ವಿ. ಕೃಷ್ಣರಾವ್’ ಜನ್ಮದಿನ ಅಂಗವಾಗಿ ಸಂಗೀತ ಕಛೇರಿ: ಗಾಯನ: ವಿದ್ಯಾಭೂಷಣ, ಆಯೋಜನೆ: ಕೃಷ್ಣರಾವ್ ಅಭಿಮಾನಿ ಬಳಗ, ಸ್ಥಳ: ಡಾ.ಎಚ್.ಎನ್. ಕಲಾಭವನ, ವಿ.ವಿ.ಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ತಂತ್ರಜ್ಞಾನ



‘ಎಸ್‌ಎಂಎಸ್’ಗೆ ಬೇಡ ಸಿಮ್

ದುರ್ಗಮ ಪ್ರದೇಶಗಳಲ್ಲಿ ಸೆಲ್ಯುಲಾರ್ ನೆಟ್‌ವರ್ಕ್‌ನ ಟವರ್‌ಗಳಿರುವುದಿಲ್ಲ, ಅಳವಡಿಸುವುದೂ ಕಷ್ಟ ಮತ್ತು ದುಬಾರಿ. ಇಂಥ ಸಂದರ್ಭಗಳಲ್ಲಿ ಸಂವಹನಕ್ಕೆ ನೆರವಾಗುವುದು ಉಪಗ್ರಹಗಳು.

ಅವಿನಾಶ್ ಬಿ.

ನಾವು ಬಳಸುತ್ತಿರುವ ಸ್ಮಾರ್ಟ್ ಫೋನ್‌ಗಳಲ್ಲಿ ಸಿಮ್ ಕಾರ್ಡ್ ಸಂಪರ್ಕ (ಸೆಲ್ಯುಲಾರ್ ನೆಟ್‌ವರ್ಕ್) ಇಲ್ಲದಿದ್ದರೂ ಕಿರು ಸಂದೇಶಗಳನ್ನು (ಎಸ್‌ಎಂಎಸ್) ಕಳುಹಿಸುವಂತಾದರೆ ಹೇಗಿರುತ್ತದೆ? ಸಾಧ್ಯವಿಲ್ಲ ಎಂದಿರಾ? ಟೆಲಿಕಾಂ ಸೇವಾ ಕ್ಷೇತ್ರದಲ್ಲಿ ಖಾಸಗಿಯವರಿಗೆ ಪೈಪೋಟಿ ನೀಡಿ, ಗತವೈಭವಕ್ಕೆ ಮರಳಲು ಟೊಂಕ ಕಟ್ಟಿ ನಿಂತಿರುವ ಸರ್ಕಾರಿ ಸ್ವಾಮ್ಯದ ಟೆಲಿಕಾಂ ಸಂಸ್ಥೆ ‘ಬಿಎಸ್‌ಎನ್‌ಎಲ್’ ಈ ಬಗ್ಗೆ ಹೊಸ ಆಶಾವಾದವನ್ನು ಮೂಡಿಸಿದೆ. ‘ಡೈರೆಕ್ಟ್ ಟು ಡಿವೈಸ್’ (ನೇರವಾಗಿ ನಿಮ್ಮ ಸಾಧನಕ್ಕೆ) ಎಂಬ ಉಪಗ್ರಹ ಆಧಾರಿತ ತಂತ್ರಜ್ಞಾನದ ಸಾಧ್ಯತೆಯ ಬಗ್ಗೆ ಬಿಎಸ್‌ಎನ್‌ಎಲ್ ಇತ್ತೀಚೆಗೆ ಮಾಡಿರುವ ಘೋಷಣೆಯು ದೇಶದಾದ್ಯಂತ ಕುತೂಹಲಕ್ಕೆ ಕಾರಣವಾಗಿದೆ.

ಏನಿದು ಡಿ2ಡಿ?

‘ಡೈರೆಕ್ಟ್ ಟು ಡಿವೈಸ್’ (ಡಿ2ಡಿ) ಬಗ್ಗೆ ಸರಳವಾಗಿ ಹೇಳುವುದಿದ್ದರೆ, ಇಂಟರ್ನೆಟ್ ಅಥವಾ ಸೆಲ್ಯುಲಾರ್ ಸಂಪರ್ಕವಿಲ್ಲದೆಯೇ ಉಪಗ್ರಹದ ನೆರವಿನಿಂದ ಎರಡು ಸಾಧನಗಳ ಮಧ್ಯೆ ನೇರ ಸಂವಹನವನ್ನು (ಸಂದೇಶ, ಕರೆ, ಇಂಟರ್‌ನೆಟ್ ಇತ್ಯಾದಿ) ಸಾಧಿಸುವುದು. ಇದುವರೆಗೆ ಈ ವ್ಯವಸ್ಥೆಯನ್ನು ರಕ್ಷಣಾಪಡೆಗಳು ಮತ್ತು ಕೆಲವು ಪರವಾನಗಿ ಪಡೆದಿರುವ ಸಂಸ್ಥೆಗಳು ಮಾತ್ರ ಬಳಸುತ್ತಿದ್ದವು. ಇದಕ್ಕೆ ಪ್ರತ್ಯೇಕ ಸೆಟಲೈಟ್ ಫೋನ್ ಬೇಕಾಗುತ್ತಿತ್ತು. ಬೆಟ್ಟ-ಗುಡ್ಡಗಳ ನಡುವೆ, ದಟ್ಟ ಕಾನನದಲ್ಲಿ, ಸಮುದ್ರದ ಮಧ್ಯೆ, ಹಿಮಾಚ್ಛಾದಿತ ಪರ್ವತ ಪ್ರದೇಶಗಳೇ ಮುಂತಾದ, ಸೆಲ್ಯುಲಾರ್ ನೆಟ್‌ವರ್ಕ್ ತಲುಪದ ಅತ್ಯಂತ ದುರ್ಗಮ ಪ್ರದೇಶಗಳಲ್ಲಿ ತುರ್ತು ಸಂದರ್ಭಗಳಲ್ಲಿ, ವಿಶೇಷವಾಗಿ ಪ್ರಾಕೃತಿಕ ವಿಕೋಪಗಳಂತಹ ಸಂದರ್ಭದಲ್ಲಿ ಸಂವಹನಕ್ಕೆ ಈ ತಂತ್ರಜ್ಞಾನವನ್ನು ಬಳಸಲಾಗುತ್ತಿತ್ತು. ಇನ್ನೀಗ ಈ ಸೇವೆಯು ಸಾರ್ವಜನಿಕರಿಗೂ ದೊರೆಯಲಿದೆ ಎಂಬ ಮಾಹಿತಿ ದೊರೆತದ್ದು, ಕಳೆದ ತಿಂಗಳು ಭಾರತ್ ಸಂಚಾರ್ ನಿಗಮ ನಿಯಮಿತ (ಬಿಎಸ್‌ಎನ್‌ಎಲ್) ಹೆಚ್ಚು ಸದ್ದು ಮಾಡದೇ ನಡೆಸಿದ ಕಾರ್ಯಕ್ರಮವೊಂದರಲ್ಲಿ.

ದೇಶದಲ್ಲಿ ಮೊದಲ ಬಾರಿ 3ಜಿ ಸೇವೆ ಆರಂಭಿಸಿದ ಬಳಿಕ ನಾನಾ ಕಾರಣಗಳಿಂದಾಗಿ ಸೊರಗಿದ್ದ ಬಿಎಸ್‌ಎನ್‌ಎಲ್, ಇತ್ತೀಚೆಗಷ್ಟೇ 4ಜಿ ಸೇವೆಯನ್ನು ನೀಡಲು ಆರಂಭಿಸಿದ್ದು, ಕೆಲವೇ ತಿಂಗಳಲ್ಲಿ 5ಜಿ ಸೇವೆಯನ್ನೂ ಆರಂಭಿಸಿ, ಏರ್‌ಟೆಲ್, ಜಿಯೋ, ವೊಡಾಫೋನ್-ಐಡಿಯಾ (ವಿ) ಖಾಸಗಿ ಟೆಲಿಕಾಂ ಕಂಪನಿಗಳಿಗೆ ಪೈಪೋಟಿ ನೀಡಲು ಸಜ್ಜಾಗುತ್ತಿದೆ. ಇದರ ಫಲವಾಗಿಯೇ, 5ಜಿ ಸಿದ್ಧವಾಗಿರುವ ಸಿಮ್ ಕಾರ್ಡ್‌ಗಳನ್ನು ವಿತರಿಸಲು ಈಗಾಗಲೇ ಆರಂಭಿಸಿದ್ದು, 4ಜಿ ಸೇವೆಯೂ ಅಲ್ಲಲ್ಲಿ ದೊರೆಯಲಾರಂಭಿಸಿದೆ. ಇದರ ಮಧ್ಯೆ ಡಿ2ಡಿ ಸೇವೆಯ ಘೋಷಣೆ. ಇಲಾನ್ ಮಸ್ಕ್ ಎಂಬ ಅಮೆರಿಕದ ಬಿಲಿಯಾಧಿಪತಿ, ತಂತ್ರಜ್ಞಾನ ದಿಗ್ಗಜ ಈಗಾಗಲೇ ತನ್ನ ಸ್ಟಾರ್ ಲಿಂಕ್ ಹೆಸರಿನ ಉಪಗ್ರಹ ಆಧಾರಿತ ಸೇವೆಯನ್ನು ಭಾರತದಲ್ಲಿಯೂ ಒದಗಿಸುವುದಕ್ಕೆ ಅನುಮತಿಯನ್ನು ಕೋರಿದ್ದಾರೆ. ಅವರಿಗಿನ್ನೂ ಅನುಮತಿ ಸಿಕ್ಕಿಲ್ಲ. ಅಷ್ಟರಲ್ಲೇ ಬಿಎಸ್‌ಎನ್‌ಎಲ್ ಒಂದು ಹೆಜ್ಜೆ ಮುಂದೆ ಹೋಗಿದೆ.

ದುರ್ಗಮ ಪ್ರದೇಶಗಳಲ್ಲಿ ಸೆಲ್ಯುಲಾರ್ ನೆಟ್‌ವರ್ಕ್‌ನ ಟವರ್‌ಗಳಿರುವುದಿಲ್ಲ, ಅಳವಡಿಸುವುದೂ ಕಷ್ಟ ಮತ್ತು ದುಬಾರಿ. ಇಂಥ ಸಂದರ್ಭಗಳಲ್ಲಿ ಸಂವಹನಕ್ಕೆ ನೆರವಾಗುವುದು ಉಪಗ್ರಹಗಳು. ಸಂದೇಶವನ್ನು ಒಂದು ಸಾಧನದಿಂದ ಬಾಹ್ಯಾಕಾಶದಲ್ಲಿ ತಿರುಗಾಡುತ್ತಿರುವ ಉಪಗ್ರಹದ ಮೂಲಕವಾಗಿ ಮತ್ತೊಂದು ಸಾಧನಕ್ಕೆ ಕಳುಹಿಸುವುದೇ ಡೈರೆಕ್ಟ್ ಟು ಡಿವೈಸ್ ವ್ಯವಸ್ಥೆ. ಇದಕ್ಕೆ ಬಿಎಸ್‌ಎನ್‌ಎಲ್ ಜೊತೆಗೆ ಅಮೆರಿಕದ ಸ್ಯಾಟ್‌ಕಾಂ (ಉಪಗ್ರಹ ಆಧಾರಿತ ಸಂವಹನ) ಸಂಸ್ಥೆಯಾಗಿರುವ ‘ವಯಾಸ್ಯಾಟ್’ ಸಹಯೋಗ ನೀಡುತ್ತಿದೆ.

ವಿಶೇಷತೆ ಏನು?

ಇದುವರೆಗೆ ಪ್ರತ್ಯೇಕ ಸಾಧನ ಬೇಕಾಗಿದ್ದ ಈ ವ್ಯವಸ್ಥೆಯು ಮುಂದಿನ ದಿನಗಳಲ್ಲಿ ನಮ್ಮಲ್ಲಿರುವ ಸ್ಮಾರ್ಟ್‌ಫೋನ್‌ಗಳಲ್ಲೇ ಕೆಲಸ ಮಾಡಬಲ್ಲದು ಎಂಬುದೇ ಈಗ ಕುತೂಹಲಕ್ಕೆ ಕಾರಣವಾಗಿರುವುದು. ಸ್ಯಾಟಲೈಟ್ ಹಾಗೂ ಸೆಲ್ಯುಲಾರ್ ನೆಟ್‌ವರ್ಕ್‌ಗಳು ಪರಸ್ಪರ ಮಾತನಾಡಿಕೊಳ್ಳುತ್ತವೆ. ಉಪಗ್ರಹಗಳೇ ಸೆಲ್ ಟವರ್‌ನಂತೆ ಕೆಲಸ ಮಾಡುತ್ತದೆ. ಸಾಮಾನ್ಯ ಸಂದೇಶ ರವಾನೆ, ಕರೆ ಮತ್ತು ಇಂಟರ್ನೆಟ್ ಬ್ರೌಸಿಂಗ್ ಕೂಡ ಇದರಿಂದ ಸಾಧ್ಯವಾಗಲಿದೆ. ವಿಮಾನಗಳಲ್ಲಿ, ಹಡಗಿನಲ್ಲಿ ಮತ್ತು ದುರ್ಗಮ ಪ್ರದೇಶಗಳಲ್ಲಿ ಇದೇ ತಂತ್ರಜ್ಞಾನವು ಬಳಕೆಯಾಗುತ್ತದೆ.

ಆ್ಯಪಲ್‌ನ ಐಫೋನ್ ಹಾಗೂ ಗೂಗಲ್‌ನ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಉಪಗ್ರಹ ಆಧಾರಿತ ಸಂದೇಶ ಸೇವೆಯು ಈಗಾಗಲೇ ಅಮೆರಿಕ ಮತ್ತು ಕೆನಡಾದಲ್ಲಿ ಜಾರಿಯಲ್ಲಿದೆ. ಭಾರತದಲ್ಲಿ ಈ ಸೇವೆಗಳಿನ್ನೂ ಸಾರ್ವಜನಿಕರಿಗೆ ಲಭ್ಯವಿಲ್ಲ. ಕಳೆದ ತಿಂಗಳು ಬಿಎಸ್‌ಎನ್‌ಎಲ್ ಇದರ ಪ್ರಯೋಗದಲ್ಲಿ ಯಶಸ್ವಿಯಾಗಿದ್ದು, ಭಾರತದಲ್ಲಿ ಹೊಸ ಸಾಧ್ಯತೆಗೆ ನಾಂದಿ ಹಾಡಿದೆ.

ಈ ಸೇವೆಗೆ ಮೊಬೈಲ್ ಸಾಧನಗಳು ಕೂಡ ಸೂಕ್ತವಾದ ಹಾರ್ಡ್‌ವೇರ್/ಸಾಫ್ಟ್‌ವೇರ್ ಹೊಂದಿರಬೇಕಾಗುತ್ತದೆ. ಸದ್ಯಕ್ಕೆ ಐಒಎಸ್ 18ರಲ್ಲಿ ಕಾರ್ಯಾಚರಿಸುವ ಐಫೋನ್ 14ರ ನಂತರದ ಸಾಧನಗಳು, ಗೂಗಲ್‌ನ ಪಿಕ್ಸೆಲ್ ಹಾಗೂ ಮೋಟೊರೋಲದ ಅತ್ಯಾಧುನಿಕ ಫೋನ್‌ನಲ್ಲಿ ಈ ತಂತ್ರಾಂಶಗಳಿವೆ. ಮುಂಬರುವ ಹೊಸ ಆ್ಯಂಡ್ರಾಯ್ಡ್ 15 ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಈ ಸೇವೆಗೆ ಅವಕಾಶ ನೀಡುವ ಬಗ್ಗೆ ಗೂಗಲ್ ಈಗಾಗಲೇ ಸುಳಿವು ನೀಡಿದೆ.

ಕ್ರಾಂತಿಕಾರಿ ಸೇವೆ

ಸಂಪರ್ಕ ಸುಲಭವಿಲ್ಲದ ದಟ್ಟ ಅರಣ್ಯ, ಕಡಿದಾದ ಬೆಟ್ಟ ಗುಡ್ಡ, ದುರ್ಗಮ ಪ್ರದೇಶದಲ್ಲಿರುವ ಹಳ್ಳಿಗಳು, ಸಮುದ್ರ ಮುಂತಾದೆಡೆ ಮೊದಲು ಈ ಸೇವೆ ಆರಂಭವಾಗಲಿದ್ದು, ನಿಧಾನವಾಗಿ ಇದೊಂದು ಸಂವಹನ ವ್ಯವಸ್ಥೆಯ ಪರ್ಯಾಯ ರೂಪವಾಗಿ ಬದಲಾಗುವ ನಿರೀಕ್ಷೆಯಿದೆ. ಇದಕ್ಕಾಗಿಯೇ ಲ್ಯಾಂಡಿಂಗ್ ಸ್ಟೇಷನ್‌ಗಳೆಂಬ ಅತ್ಯಾಧುನಿಕ ಸಂವಹನ ವರ್ಗಾವಣಾ ಕೇಂದ್ರಗಳನ್ನು ವಿವಿಧೆಡೆ ಸ್ಥಾಪಿಸಬೇಕಾಗುತ್ತದೆ.

ಅಮೆರಿಕದಂತಹ ದೇಶಗಳಲ್ಲಿ ವಯಾಸ್ಯಾಟ್ ಮೂಲಕ ಈಗಾಗಲೇ ಉಪಗ್ರಹ ಆಧಾರಿತ ಬ್ರಾಡ್‌ಬ್ಯಾಂಡ್ ಸೇವೆಗಳನ್ನೂ ನೀಡಲಾಗುತ್ತಿದೆ. ಸ್ಯಾಟಲೈಟ್ ಮೆಸೇಜಿಂಗ್ ವ್ಯವಸ್ಥೆ ಜಾರಿಯಲ್ಲಿದೆ. ಇಲಾನ್ ಮಸ್ಕ್ ಈಗಾಗಲೇ ಸ್ಟಾರ್ ಲಿಂಕ್ ಮೂಲಕ ಸಾಕಷ್ಟು ಉಪಗ್ರಹಗಳ ಮೂಲಕ ವಿದೇಶಗಳಲ್ಲಿ ಈ ಸೇವೆ ಒದಗಿಸುತ್ತಿದ್ದಾರೆ. ಏರ್‌ಟೆಲ್, ಜಿಯೋ ಮತ್ತು ವೊಡಾಫೋನ್ ಐಡಿಯಾ ಮುಂತಾದ ದೇಶೀ ಸಂವಹನ ಸಂಸ್ಥೆಗಳಿಂದ ಸ್ಟಾರ್‌ಲಿಂಕ್‌ಗೆ ಪ್ರತಿರೋಧ ವ್ಯಕ್ತವಾಗಿದ್ದು, ಅವು ಕೂಡ ಉಪಗ್ರಹ ಆಧಾರಿತ ಸಂವಹನ ಸೇವೆಯನ್ನು ಆರಂಭಿಸುವ ಸಿದ್ಧತೆಯಲ್ಲಿವೆ.

ಬಹುತೇಕ ಮುಂದಿನ ವರ್ಷದೊಳಗೆ ‘ಸ್ಯಾಟಲೈಟ್ ಮೋಡ್’ಗೆ ಬದಲಿಸಿಕೊಂಡು ಸಂವಹನ ನಡೆಸುವ ಕುರಿತು ಸ್ಪಷ್ಟ ಚಿತ್ರಣವಂತೂ ದೊರೆಯಲಿದೆ. ಮುಂದಕ್ಕೆ ಮೊಬೈಲ್ ಸಾಧನಗಳು, ಸ್ಮಾರ್ಟ್ ವಾಚುಗಳು, ಕಾರುಗಳು ಮತ್ತು ಅತ್ಯಾಧುನಿಕ ಸ್ಮಾರ್ಟ್ ಸಾಧನಗಳು ಕೂಡ ಉಪಗ್ರಹದ ಮೂಲಕ ಬೆಸೆದುಕೊಂಡಲ್ಲಿ, ಇದು ಸಂವಹನ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಯನ್ನು ಸೃಷ್ಟಿಸಲಿದೆ. ❖

ವಿಮಾನದ ಶಕ್ತಿಗೆ ಹಕ್ಕಿಪುಕ್ಕದ ಸ್ಫೂರ್ತಿ



ಮೇಘ ಎ. ಎಸ್.

ಮಾನವನು ವಿಮಾನಗಳನ್ನು ನಿರ್ಮಿಸಿ ಹಾರಲು ಕಲಿತದ್ದು ಪಕ್ಷಿಗಳನ್ನು ನೋಡಿ ತಾನೇ? ಅವನಿಗೆ ಹಾರಬೇಕೆಂಬ ಆಸೆಯು ಪಕ್ಷಿಗಳು ಹಾರುವುದನ್ನು ನೋಡುವಾಗಲೇ ಹುಟ್ಟಿರಬಹುದು. ಈಗ ಮಾನವನಿರ್ಮಿತ ವಿಮಾನಗಳ ಕಾರ್ಯಕ್ಷಮತೆ ಬಹು ಸುಧಾರಿಸಿದೆ. ವಿಮಾನಗಳ ವೇಗ, ಕ್ರಮಿಸುವ ದೂರ – ಎಲ್ಲವೂ ವಿಸ್ತರಿಸಿದೆ. ಆದರೆ, ಸುಧಾರಣೆಗೆ ಯಾವಾಗಲೂ ಅವಕಾಶ ಇದ್ದೇ ಇರುತ್ತದೆ. ಇದೀಗ ಪಕ್ಷಿಗಳ ರೆಕ್ಕೆ ಹಾಗೂ ಪುಕ್ಕಗಳನ್ನು ಮಾದರಿಯಾಗಿಟ್ಟುಕೊಂಡು ವಿಮಾನಗಳ ರಚನೆಯನ್ನು ಸುಧಾರಿಸುವ ಪ್ರಯತ್ನ ನಡೆದಿದೆ. ಈ ಮೂಲಕ ಕಾರ್ಯಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸುವ ಗಂಭೀರ ಪ್ರಯತ್ನಗಳು ನಡೆದಿವೆ. ವಿಮಾನಗಳ ರಕ್ಕೆಗಳಲ್ಲಿ ‘ಫ್ಲ್ಯಾಪ್’ ಎಂಬ ರಚನೆಗಳು ಇರುತ್ತವೆ. ಇವು ವಿಮಾನಗಳ ಹಾರಾಟದ ದಿಕ್ಕನ್ನು ಬದಲಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಅದರಲ್ಲೂ ವಿಮಾನ ಮೇಲ್ಮುಖ ಅಥವಾ ಕೆಳಮುಖವಾಗಿ ಚಲಿಸಬೇಕಾದರೆ ಈ ಫ್ಲ್ಯಾಪ್‌ಗಳ ಪಾತ್ರ ಹಿರಿದು. ವಿಮಾನ ಹಾಗೂ ದೋಣಿಗಳ ಬಾಲದಲ್ಲಿ ‘ರಡ್ಡರ್’ ಎಂಬ ಒಂದು ಭಾಗವಿರುತ್ತದೆ. ಈ ಭಾಗವು ದೋಣಿ ಅಥವಾ ವಿಮಾನವು ಬಲ ಅಥವಾ ಎಡಕ್ಕೆ ತಿರುಗುವಂತೆ ಮಾಡುತ್ತದೆ. ರೆಕ್ಕೆಯಲ್ಲಿರುವ ಫ್ಲ್ಯಾಪ್‌ಗಳು ಅತಿ ಬಲಿಷ್ಠವೂ, ಚುರುಕಾಗಿ ಚಲಿಸುವಂತೆಯೂ, ಅದರಲ್ಲೂ ಮುಖ್ಯವಾಗಿ ಅತಿ ಹಗುರವೂ ಆಗಿರಬೇಕು. ಈ ಮೂರು ಅಂಶಗಳಲ್ಲಿ ಒಂದಕ್ಕೆ ಹಿನ್ನಡೆಯಾದರೂ ವಿಮಾನದ ಕಾರ್ಯಕ್ಷಮತೆ ಕುಗ್ಗುತ್ತದೆ. ಪ್ರಯಾಣಿಕರ ವಿಮಾನಗಳಿಗೆ ಅಧಿಕ ವೇಗದ ಅಗತ್ಯ ಇರುವುದಿಲ್ಲ. ಹಾಗಾಗಿ, ವಿಮಾನದ ದೇಹದ ತೂಕ ಹೆಚ್ಚು. ಆದರೆ, ಯುದ್ಧವಿಮಾನಗಳಿಗೆ ಹಾಗಲ್ಲ. ಅವು ಅತಿ ಬೇಗನೇ ಹಾಗೂ ಅತಿ ದೂರ ಕ್ರಮಿಸಬೇಕು. ಹಾಗಾಗಿ ಕಡಿಮೆ ತೂಕ; ಆದರೆ ಹೆಚ್ಚು ಬಲಿಷ್ಠ ರಚನೆಯನ್ನು ಹೊಂದಿರಬೇಕು.ಈ ಅಂಶವನ್ನು ಗಮನದಲ್ಲಿರಿಸಿಕೊಂಡು ವಿಜ್ಞಾನಿಗಳು ಈಗ ಹೊಸ ವೈಮಾನಿಕ ತತ್ವವನ್ನು ವಿಮಾನಗಳಿಗೆ ಅನ್ವಯಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅದೇನೆಂದರೆ ವಿಮಾನಗಳ ರೆಕ್ಕೆಯಲ್ಲಿನ ಫ್ಲ್ಯಾಪ್‌ಗಳ ರಚನೆಯನ್ನು ಆದಷ್ಟು ಹಗುರ ಹಾಗೂ ಬಲಿಷ್ಠಗೊಳಿಸುವುದು. ಅಮೆರಿಕದ ನ್ಯೂಜರ್ಸಿಯ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಏಮಿ ವಿಸ್ಸಾ ಅವರ ತಂಡವು ಈ ಸಂಶೋಧನೆಯನ್ನು ನಡೆಸಿದೆ.

ಏಮಿ ಅವರ ತಂಡದ ವಿಜ್ಞಾನಿಗಳ ಪ್ರಕಾರ ಪಕ್ಷಿಗಳ ರೆಕ್ಕೆಗಳಲ್ಲಿ ಮೂಳೆ ಹಾಗೂ ಮಾಂಸಖಂಡಗಳನ್ನು ಬಿಟ್ಟರೆ ಚರ್ಮ ಹಾಗೂ ಪುಕ್ಕದ ತೂಕ ದೇಹದ ತೂಕಕ್ಕೆ ಹೋಲಿಸಿದರೆ ಅತಿ ಕಡಿಮೆ. ಆದರೆ, ಪಕ್ಷಿಗಳ ಹಾರಾಟದ ವೇಗ ಹಾಗೂ ದಿಕ್ಕನ್ನು ಶೇ 70ರಷ್ಟು ಇವೇ ನಿಯಂತ್ರಿಸುತ್ತವೆ. ಜೊತೆಗೆ, ಗಾಳಿಯ ಪ್ರತಿರೋಧ, ಉಷ್ಣಾಂಶದಿಂದ ರಕ್ಷಣೆಯನ್ನೂ ಪುಕ್ಕಗಳು ನೀಡುತ್ತವೆ. ವಿಮಾನದ ಚಲನೆಯಲ್ಲಿ ‘ಲಿಫ್ಟ್’ (ಏರುವಿಕೆ) ಮತ್ತು ‘ಡ್ರ್ಯಾಗ್’ (ಪ್ರತಿರೋಧ) ಎಂಬ ಎರಡು ಪ್ರಮುಖ ಭೌತವಿಜ್ಞಾನದ ಅಂಶಗಳು ಕಾರ್ಯನಿರ್ವಹಿಸುತ್ತವೆ. ಅಂದರೆ, ಏರುವಿಕೆಯ ವೇಗ ಹೆಚ್ಚಿದ್ದಷ್ಟೂ ವಿಮಾನದ ಕಾರ್ಯಕ್ಷಮತೆ ಹೆಚ್ಚುತ್ತದೆ. ಪ್ರತಿರೋಧದ ಕಡಿಮೆಯಿದ್ದಷ್ಟೂ ವೇಗ ಹೆಚ್ಚುವುದರ ಜೊತೆಗೆ ಇಂಧನದ ಕಾರ್ಯಕ್ಷಮತೆ ಹೆಚ್ಚುತ್ತದೆ; ಅಂದರೆ, ಹೆಚ್ಚು ಮೈಲೇಜ್ ಸಿಗುತ್ತದೆ. ಇದರಿಂದ ವಿಮಾನ ಕ್ರಮಿಸುವ ದೂರ ಹೆಚ್ಚಾಗುತ್ತದೆ. ಈಗಿನ ಫ್ಲ್ಯಾಪ್ ತಂತ್ರಜ್ಞಾನದಲ್ಲಿ ಸದ್ಯಕ್ಕೆ ಅಲ್ಯೂಮಿನಿಯಂ ಅಲಾಯ್ ಅಥವಾ ಟೈಟಾನಿಯಂ ಅಲಾಯ್(ಮಿಶ್ರಲೋಹ)ಗಳ ಬಳಕೆ ಇದೆ. ಇವು ಈಗ ಹಗುರವಾಗಿ ಇರುವುದು ನಿಜವೇ ಆದರೂ, ಮತ್ತಷ್ಟು ಹಗುರಗೊಳ್ಳುವ ಅಗತ್ಯವಿದೆ. ಫ್ಲ್ಯಾಪ್‌ಗಳನ್ನು ಕಾರ್ಬನ್ ಫೈಬರ್ ಮಾದರಿಯ ವಸ್ತುಗಳಿಂದ ನಿರ್ಮಿಸಬಹುದಾಗಿದೆ. ಅಥವಾ ಬೇರೆಯದೇ ರೀತಿಯ ಮಿಶ್ರಲೋಹ ಸಾಧ್ಯತೆಗಳನ್ನೂ ಗುರುತಿಸಬಹುದಾಗಿದೆ. ಹಕ್ಕಿಗಳ ಪುಕ್ಕಗಳು ಒಂದರ ಪಕ್ಕ ಒಂದರಂತೆ ಒಂದು ನಿಗದಿತ ಅಂತರದಲ್ಲಿ ಜೋಡಿತಗೊಂಡಿರುವುದರ ಜೊತೆಗೆ, ಒಂದರ ಮೇಲೊಂದರಂತೆಯೂ ರೂಪುಗೊಂಡಿರುತ್ತವೆ. ಹಾಗಾಗಿ, ಹಕ್ಕಿಗಳ ದೇಹ ರಕ್ಷಣೆ ಅತ್ಯುತ್ತಮವಾಗಿ ನಡೆಯುತ್ತದೆ. ಅಲ್ಲದೇ, ಪುಕ್ಕಗಳಲ್ಲಿ ಮಧ್ಯದಲ್ಲಿರುವ ಪ್ರಬಲವಾದ ದಂಡದಿಂದ ಸೂಕ್ಷ್ಮವಾದ ಕೂದಲುಗಳು ಹೊರಹೊಮ್ಮಿ ಪುಕ್ಕವನ್ನು ರಚಿಸಿರುತ್ತವೆ. ಈ ಪುಕ್ಕಗಳನ್ನು ಆಧರಿಸಿಯೇ ಈಗಿನ ಫ್ಲ್ಯಾಪ್‌ಗಳನ್ನು ನಿರ್ಮಿಸಲಾಗಿದೆಯಾದರೂ, ಈ ಫ್ಲ್ಯಾಪ್‌ಗಳಲ್ಲಿ ಪುಕ್ಕಗಳಲ್ಲಿ ಇರುವಂತೆ ಕೂದಲುಗಳಿಲ್ಲ. ಈ ಬಗೆಯ ರಚನೆಯನ್ನು ವಿಮಾನಗಳ ಫ್ಲ್ಯಾಪ್‌ಗಳಲ್ಲೂ ಅಳವಡಿಸಿಕೊಂಡರೆ, ಫ್ಲ್ಯಾಪ್ ಮತ್ತಷ್ಟು ಹಗುರವೂ, ಮತ್ತಷ್ಟು ದಕ್ಷವೂ ಆಗಬಹುದು ಎಂದು ಏಮಿ ತಮ್ಮ ಸಂಶೋಧನೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಏಮಿ ಅವರ ತಂಡವು ತಮ್ಮ ಪ್ರಯೋಗಾಲಯದಲ್ಲಿ ಪುಕ್ಕಗಳ ರಚನೆಯ ಮಾದರಿಯ ಫ್ಲ್ಯಾಪ್‌ಗಳನ್ನು ನಿರ್ಮಿಸಿ ಅವನ್ನು ವಿಮಾನದ ಮಾದರಿ ರೆಕ್ಕೆಗಳಿಗೆ ಜೋಡಿಸಿ ಪರೀಕ್ಷಿಸಿದ್ದಾರೆ. ಈ ಬಗೆಯ ರೆಕ್ಕೆಗಳು ಗಾಳಿಯ ಹೊಡೆತನ್ನು ಉತ್ತಮವಾಗಿ ತಡೆದುಕೊಂಡು ಹೆಚ್ಚಿನ ವೇಗವನ್ನು ಸಹ ನೀಡಿವೆ. ಒಟ್ಟಾರೆಯಾಗಿ ಶೇ 10ರಷ್ಟು ಇಂಧನವನ್ನೂ ಉಳಿಸಬಹುದಾದ್ದು ಈ ಆವಿಷ್ಕಾರದ ಹೆಗ್ಗಳಿಕೆಯಾಗಿದೆ ಎಂದು ಈ ಸಂಶೋಧನೆಯು ನಿರೂಪಿಸಿದೆ.

ಎಲ್ಲೆಲ್ಲಿ ಬಳಕೆ?

ಸಾಮಾನ್ಯವಾಗಿ ಈ ಬಗೆಯ ಪುಕ್ಕದ ರಚನೆಯುಳ್ಳ ರೆಕ್ಕೆಗಳನ್ನು ಅಳವಡಿಸಬೇಕಾದರೆ ಕಡಿಮೆ ತೂಕದ ವಸ್ತುಗಳ ಅಗತ್ಯವಿದೆ. ಹಾಗಾಗಿ, ಈ ಬಗೆಯ ವಿಮಾನಗಳ ನಿರ್ಮಾಣ ಕೊಂಚ ದುಬಾರಿ ಆಗಬಹುದಾಗಿದೆ. ಆದ್ದರಿಂದ ಆರಂಭಿಕವಾಗಿ ಯುದ್ಧವಿಮಾನಗಳಲ್ಲಿ ಈ ತಂತ್ರಜ್ಞಾನ ಬಳಕೆಯಾಗಬಹುದು ಎಂದು ವಿಶ್ಲೇಷಿಸಲಾಗಿದೆ. ಬಳಿಕ ಪ್ರಯಾಣಿಕರ ವಿಮಾನಗಳಿಗೂ ಈ ತಂತ್ರಜ್ಞಾನದ ವಿಸ್ತರಣೆ ಆಗಬಹುದು. ಅಷ್ಟೇ ಅಲ್ಲದೇ, ಬಾಹ್ಯಾಕಾಶ ಯಾನ ನೌಕೆಗಳಲ್ಲೂ ರೆಕ್ಕೆಗಳ ಭಾಗಗಳಿರುತ್ತವೆ. ಈ ರೆಕ್ಕೆಗಳಲ್ಲೂ ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ ಕಾರ್ಯಕ್ಷಮತೆ ಸುಧಾರಿಸಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಲೋಹಗಳು ಮತ್ತು ಅಲೋಹಗಳು

ಪ್ರಶ್ನೋತ್ತರ

16) ಯಾವುದನ್ನು ಅದುರು ಎನ್ನುವರು?

ಉತ್ತರ:– ಕೆಲವು ಸ್ಥಳಗಳಲ್ಲಿನ ಖನಿಜಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನಿರ್ದಿಷ್ಟ ಲೋಹವನ್ನು ಹೊಂದಿರುತ್ತವೆ ಮತ್ತು ಇವುಗಳಿಂದ ಅದನ್ನು ಲಾಭದಾಯಕವಾಗಿ ಹೊರತೆಗೆಯಬಹುದು. ಈ ಖನಿಜಗಳನ್ನು ಅದುರುಗಳು ಎನ್ನುವರು.

17) ಯಾವೆಲ್ಲಾ ಲೋಹಗಳು ಮುಕ್ತ ರೂಪದಲ್ಲಿ ದೊರೆಯುತ್ತವೆ?

ಉತ್ತರ:– ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ತಾಮ್ರಗಳು ಮುಕ್ತ ಸ್ಥಿತಿಯಲ್ಲಿ ದೊರೆಯುತ್ತವೆ.

18) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:– ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

19) ಯಾವುದನ್ನು ಮಡ್ಡಿ ಎನ್ನುವರು?

ಉತ್ತರ:– ಸಾಮಾನ್ಯವಾಗಿ ಭೂಮಿಯಿಂದ ಗಣಿಗಾರಿಕೆ ಮಾಡಿದ ಅದುರುಗಳು ಮಣ್ಣು, ಮರಳು ಇತ್ಯಾದಿಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಕಲುಷಿತಗೊಂಡಿರುತ್ತವೆ. ಇದನ್ನು ಮಡ್ಡಿ ಎನ್ನುವರು.

20) ಕ್ರಿಯಾಶೀಲ ಸರಣಿಯಲ್ಲಿ ಕೆಳಗಿರುವ ಲೋಹಗಳನ್ನು ಹೇಗೆ ಅಪಕರ್ಷಿಸಬಹುದು?

ಉತ್ತರ:– ಕ್ರಿಯಾಶೀಲ ಸರಣಿಯಲ್ಲಿ ಕೆಳಗಿರುವ ಲೋಹಗಳು ಅತಿ ಕಡಿಮೆ ಕ್ರಿಯಾಶೀಲತೆ ಹೊಂದಿರುವುದರಿಂದ ಲೋಹದ ಆಕ್ಸೈಡ್‌ಗಳನ್ನು ಕಾಸುವುದರಿಂದ ಮಾತ್ರ ಲೋಹಗಳನ್ನು ಅಪಕರ್ಷಿಸಬಹುದು.

21) ಕ್ರಿಯಾಶೀಲತೆಯ ಸರಣಿಯಲ್ಲಿ ಮಧ್ಯದ ಲೋಹಗಳನ್ನು ಉದ್ಧರಿಸುವುದರ ಕುರಿತು ಬರೆಯಿರಿ

ಉತ್ತರ:– ಕ್ರಿಯಾಶೀಲತೆಯ ಸರಣಿಯಲ್ಲಿ ಮಧ್ಯದ ಲೋಹಗಳಾದ ಕಬ್ಬಿಣ, ಸತು, ಸೀಸ, ತಾಮ್ರಗಳು ಮಧ್ಯಮ ಕ್ರಿಯಾಪಟುತ್ವ ಹೊಂದಿವೆ. ನಿಸರ್ಗದಲ್ಲಿ ಸಾಮಾನ್ಯವಾಗಿ ಇವು ಸಲ್ಫೈಡ್ ಅಥವಾ ಕಾರ್ಬೋನೇಟ್‌ಗಳ ರೂಪದಲ್ಲಿರುತ್ತವೆ. ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳಿಂದ ಲೋಹಗಳನ್ನು ಉದ್ಧರಿಸುವುದಕ್ಕಿಂತ ಆಕ್ಸೈಡ್‌ಗಳಿಂದ ಉದ್ಧರಿಸುವುದು ಸುಲಭ ಆದ್ದರಿಂದ ಅಪಕರ್ಷಿಸುವ ಮೊದಲು ಲೋಹದ ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳನ್ನು ಲೋಹೀಯ ಆಕ್ಸೈಡ್‌ಗಳನ್ನಾಗಿ ಪರಿವರ್ತಿಸಬೇಕು.

ಸಲ್ಫೈಡ್ ಅದುರನ್ನು ಆಕ್ಸೈಡನ್ನಾಗಿ ಪರಿವರ್ತಿಸಲು ಅಧಿಕ ಪ್ರಮಾಣದ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸಬೇಕು. ಈ ವಿಧಾನವನ್ನು ಹುರಿಯುವಿಕೆ ಎನ್ನುವರು.

ಕಾರ್ಬೋನೇಟ್ ಅದುರನ್ನು ಆಕ್ಸೈಡ್ ಆಗಿ ಪರಿವರ್ತಿಸಬೇಕಾದರೆ ಕಡಿಮೆ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸಬೇಕು. ಈ ವಿಧಾನವನ್ನು ಕಾಯಿಸುವಿಕೆ ಎನ್ನುವರು.

ಕಾರ್ಬನ್‌ನಂಥ ಸೂಕ್ತ ಅಪಕರ್ಷಣಕಾರಿಯನ್ನು ಬಳಸಿ ಲೋಹದ ಆಕ್ಸೈಡ್‌ಗಳನ್ನು ಆಯಾ ಲೋಹಗಳನ್ನಾಗಿ ಅಪಕರ್ಷಿಸಲಾಗುವುದು. ಉದಾಹರಣೆಗೆ ಸತುವಿನ ಆಕ್ಸೈಡ್‌ಅನ್ನು ಕಾರ್ಬನ್‌ನೊಂದಿಗೆ ಕಾಯಿಸಿದಾಗ ಅದು ಅಪಕರ್ಷಿಸಲ್ಪಟ್ಟು ಸತುವಾಗುತ್ತದೆ. ಲೋಹೀಯ ಆಕ್ಸೈಡ್‌ಗಳಿಂದ ಲೋಹಗಳನ್ನು ಅಪಕರ್ಷಿಸಲು ಕಾರ್ಬನ್ (ಕೋಕ್) ಬಳಸುವುದರ ಜೊತೆಗೆ ಕೆಲವೊಮ್ಮೆ ಇದನ್ನು ಸ್ಥಾನಪಲ್ಲಟ ಕ್ರಿಯೆಗೂ ಬಳಸುವರು. ಹೆಚ್ಚು ಕ್ರಿಯಾಪಟುತ್ವ ಹೊಂದಿದ ಲೋಹಗಳಾದ ಸೋಡಿಯಂ, ಕ್ಯಾಲ್ಸಿಯಂ, ಅಲ್ಯುಮಿನಿಯಂ ಇತ್ಯಾದಿಗಳನ್ನು ಅಪಕರ್ಷಣಕಾರಿಯಾಗಿ ಬಳಸುವರು ಏಕೆಂದರೆ ಇವು ಕಡಿಮೆ ಕ್ರಿಯಾಪಟುತ್ವ ಹೊಂದಿದ ಲೋಹಗಳನ್ನು ಅವುಗಳ ಸಂಯುಕ್ತಗಳಿಂದ ಪಲ್ಲಟಗೊಳಿಸುತ್ತವೆ. ಉದಾಹರಣೆಗೆ ಮ್ಯಾಂಗನೀಸ್ ಡೈಆಕ್ಸೈಡ್‌ಅನ್ನು ಅಲ್ಯುಮಿನಿಯಂ ಪುಡಿಯೊಂದಿಗೆ ಕಾಸಿದಾಗ ಈ ಕೆಳಗಿನ ರಾಸಾಯನಿಕ ಕ್ರಿಯೆ ನಡೆಯುತ್ತದೆ.

$MnO_2(s)+4Al(s) \rightarrow 3Mn(l)+2Al_2O_3(s)+$ಉಷ್ಣ

22) ಕ್ರಿಯಾಶೀಲತೆ ಸರಣಿಯ ಮೇಲ್ಭಾಗದಲ್ಲಿರುವ ಲೋಹಗಳನ್ನು ಉದ್ಧರಿಸುವುದರ ಕುರಿತು ಬರೆಯಿರಿ

ಉತ್ತರ:– ಕ್ರಿಯಾಶೀಲತೆ ಸರಣಿಯಲ್ಲಿ ಮೇಲ್ಭಾಗದಲ್ಲಿರುವ ಲೋಹಗಳು ಅತ್ಯಂತ ಕ್ರಿಯಾಶೀಲವಾಗಿವೆ. ಕಾರ್ಬನ್‌ನೊಂದಿಗೆ ಕಾಯಿಸುವುದರ ಮೂಲಕ ಇವುಗಳನ್ನು ಪಡೆಯಲು ಸಾಧ್ಯವಿಲ್ಲ. ಉದಾಹರಣೆಗೆ ಸೋಡಿಯಂ, ಮೆಗ್ನೀಸಿಯಂ, ಕ್ಯಾಲ್ಸಿಯಂ, ಅಲ್ಯುಮಿನಿಯಂ ಇತ್ಯಾದಿ ಲೋಹಗಳ ಆಕ್ಸೈಡ್‌ಗಳನ್ನು ಅಪಕರ್ಷಿಸಲು ಕಾರ್ಬನ್‌ನಿಂದ ಸಾಧ್ಯವಿಲ್ಲ ಕಾರಣ ಈ ಲೋಹಗಳು ಕಾರ್ಬನ್‌ಗಿಂತ ಆಕ್ಸಿಜನ್ ಕಡೆಗೆ ಹೆಚ್ಚು ಆಕರ್ಷಣೆ ಹೊಂದಿರುತ್ತವೆ. ಈ ಲೋಹಗಳನ್ನು ವಿದ್ಯುದ್ವಿಭಜನೆ ಕ್ರಿಯೆಯಿಂದ ಪಡೆಯುವರು

23) ಅಶುದ್ಧ ಲೋಹಗಳನ್ನು ಸಂಸ್ಕರಿಸಲು ವ್ಯಾಪಕವಾಗಿ ಬಳಸುವ ವಿಧಾನ ಯಾವುದು?

ಉತ್ತರ:– ಅಶುದ್ಧ ಲೋಹಗಳನ್ನು ಸಂಸ್ಕರಿಸಲು ವ್ಯಾಪಕವಾಗಿ ಬಳಸುವ ವಿಧಾನವೆಂದರೆ ವಿದ್ಯುದ್ವಿಭಜನೀಯ ಶುದ್ಧೀಕರಣ.

24) ವಿದ್ಯುದ್ವಿಭಜನೀಯ ಶುದ್ಧೀಕರಣದ ಕುರಿತು ಬರೆಯಿರಿ

ಉತ್ತರ:– ತಾಮ್ರ, ಸತು, ತವರ, ನಿಕ್ಕಲ್, ಬೆಳ್ಳಿ, ಚಿನ್ನ ಇತ್ಯಾದಿಗಳಂಥ ಅನೇಕ ಲೋಹಗಳನ್ನು ವಿದ್ಯುದ್ವಿಭಜನೀಯ ವಿಧಾನದಿಂದ ಶುದ್ಧೀಕರಿಸುವರು. ಈ ವಿಧಾನದಲ್ಲಿ ಅಶುದ್ಧ ಲೋಹವನ್ನು ಧನಾಗ್ರಕ್ಕೆ, ಶುದ್ಧಲೋಹದ ತೆಳು ತಗಡನ್ನು ಋಣಾಗ್ರಕ್ಕೆ ಜೋಡಿಸುವರು. ಲೋಹೀಯ ಲವಣದ ದ್ರಾವಣವನ್ನು ವಿದ್ಯುದ್ವಿಭಜನೀಯವಾಗಿ ಬಳಸುವರು.

ವಿದ್ಯುದ್ವಿಭಾಜ್ಯದ ಮೂಲಕ ವಿದ್ಯುತ್ ಅನ್ನು ಹಾಯಿಸಿದಾಗ ಧನಾಗ್ರದ ಅಶುದ್ಧ ಲೋಹವು ವಿದ್ಯುದ್ವಿಭಜನೀಯ ದ್ರಾವಣದಲ್ಲಿ ಕರಗುವುದು. ಅಷ್ಟೇ ಪ್ರಮಾಣದ ಶುದ್ಧ ಲೋಹವು ವಿದ್ಯುದ್ವಿಭಜನೀಯ ದ್ರಾವಣದಿಂದ ಋಣಾಗ್ರದ ಮೇಲೆ ಸಂಗ್ರಹಗೊಳ್ಳುವುದು. ಕರಗುವ ಕಶ್ಮಲಗಳು ದ್ರಾವಣಕ್ಕೆ ಸೇರಿಕೊಂಡರೆ, ಕರಗದೇ ಇರುವ ಕಶ್ಮಲಗಳು ಧನಾಗ್ರದ ಕೆಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ.

ನೆನಪಿಡಿ

ಕ್ರಿಯಾಶೀಲ ಸರಣಿಯ ಮೇಲ್ಭಾಗದಲ್ಲಿರುವ ಲೋಹಗಳು (K, Na, Ca, Mg ಮತ್ತು Al) ಹೆಚ್ಚು ಕ್ರಿಯಾಪಟುತ್ವ ಹೊಂದಿರುವುದರಿಂದ ನಿಸರ್ಗದಲ್ಲಿ ಮುಕ್ತ ಧಾತುಗಳಾಗಿ ದೊರೆಯುವುದಿಲ್ಲ. ಕ್ರಿಯಾಶೀಲ ಸರಣಿಯ ಮಧ್ಯಭಾಗದಲ್ಲಿರುವ ಲೋಹಗಳು (Zn, Fe, Pb ಇತ್ಯಾದಿ) ಮಧ್ಯಮ ಕ್ರಿಯಾಪಟುತ್ವ ಹೊಂದಿವೆ. ಅವು ಭೂ ತೊಗಟೆಯಲ್ಲಿ ಆಕ್ಸೈಡ್‌ಗಳು, ಸಲ್ಫೈಡ್‌ಗಳು ಅಥವಾ ಕಾರ್ಬೋನೇಟ್‌ಗಳ ರೂಪದಲ್ಲಿ ದೊರೆಯುತ್ತವೆ.

II PUC BIOLOGY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

EVOLUTION

10. Which are the various steps involved in the origin of life?

Ans:- (……..Contd)

(viii) Free oxygen combined with a number of elements present on the surface of earth and converted the same into oxides, e.g., metal oxides.

(11) Origin of Eucaryotes - Eucaryotes evolved about 1600 million years back. Eucaryotes possess a true nucleus and membrane-lined organelles. Early eucaryotes were single celled or protistans. They soon gave rise to fungi, algae, and different groups of invertebrates followed by evolution of chordates. First land plants evolved around 459 million years ago and first mammals about 220 million years back.

11. What is the role of Water on Origin of Life?

Ans:- Life originated in water. Water is the most suitable for it because of the following reasons:

1) Water is a highly stable compound. It does not decompose easily. Therefore, it provides an ideal medium for biochemical reactions.
2) Water is liquid at ordinary temperature while compounds of even higher molecular weight are gases (e.g., CO_2).
3) It remains liquid over a wide range of temperature, 4°- 90° C.
4) Addition of solutes in water depresses its freezing point and enhances its boiling point. The phenomenon was useful during early days of formation of living materials. It is even now useful for organisms residing in very cold areas.
5) On evaporation it forms clouds which condense and give rise to rain. Falling rain drops brought down the organic chemicals formed in the atmosphere during early days of origin of life. This process is even now important in dissolving pollutants and gaseous oxides of sulphur and nitrogen.
6) Water is a perfect solvent. All electrolytes and polar non-electrolytes dissolve in it.
7) It has a high dielectric constant that causes splitting of electrolytes into ions.
8) Water itself forms ions, H^+ and OH^-.
9) Water has a high latent heat. This prevents any sudden or major change in its temperature.
10) Water expands during freezing, making ice or snow lighter than liquid water. It forms a floating sheet of ice over water bodies in extreme cold areas keeping the underwater in liquid state. Aquatic life is protected as in case of Antarctic area.
11) Many chemicals which are non-reactive in the dry state become reactive in presence of water.
12) Proteins and nucleic acids attain their 3-dimensional structure only in the presence of water.
13) Lipids form bilayers in contact with water. It is basic to production of cell membranes.
14) During photosynthesis, water undergoes photolysis to release oxygen. The major source of atmosphere oxygen is the oxygen formed during photosynthesis.
15) It helps in breaking complex substances through hydrolytic splitting. The phenomenon is called dehydration synthesis.

12. How can we compute the age of a living tree?

Ans:- (i) Carbon dating

(ii) Counting the number of annual rings at the base of the trunk with the help of increment bore if the tree shows secondary growth.

13. Mention some of the differences between Darwinism and Neo-Darwinism.

Ans:-

Darwinism	*Neo-Darwinism*
It is the theory proposed by Darwin.	It is modification of Darwin's theory.
Darwinism does not give reason for the appearance of variations.	It explains the origin of various types of variations.
It believes that all useful variations are inheritable.	It believes that only genetic variations are inheritable.
Individuals are believed to be units for evolution	Unit of evolution is a population.
Natural selection operates through survival of the fittest.	Natural selection operates through differential reproduction.
It does not give importance to isolation.	Isolation is pre-requisite for formation of new species.
Darwinism cannot explain persistence of vestigial organs, origin of new characters or persistence of unchanged forms.	It can explain the persistence of unchanged forms, continuation of vestigial organs and origin of new characters.

14. Did aquatic life forms get fossilised? If yes, where do we come across such fossils?

Ans:- Yes. The fossils which were formed at the bottom of water bodies became part of the sedimentary rocks.

(Contd….)

ಮೊದಲ ಹಂತದಲ್ಲಿ 833 ಶಾಲೆಗಳಿಗೆ ಪೂರೈಕೆ: ಸಚಿವ ಬೋಸರಾಜು

ವಸತಿ ಶಾಲೆಗಳಿಗೆ ಟೆಲಿಸ್ಕೋಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಮೊದಲ ಹಂತದಲ್ಲಿ 833 ವಸತಿ ಶಾಲೆಗಳಿಗೆ ಟೆಲಿಸ್ಕೋಪ್ ನೀಡುವ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಸಮಾಜ ಕಲ್ಯಾಣ ಇಲಾಖೆಯು ಬಾಬು ಜಗಜೀವನರಾಮ್ ಸಂಶೋಧನಾ ಸಂಸ್ಥೆಯಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಸಾಂಕೇತಿಕವಾಗಿ ಎರಡು ವಸತಿ ಶಾಲೆಗೆ ಟೆಲಿಸ್ಕೋಪ್ ನೀಡಿದರು.

ಇದೇ ವೇಳೆ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದ ಇಸ್ರೊ ಅಧ್ಯಕ್ಷ ಸೋಮನಾಥ್, ಬಾಹ್ಯಾಕಾಶಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡಿದರು.

‘ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದೆ. ಎಂಜಿನಿಯರಿಂಗ್ ಸೇರಿದ ಬಳಿಕ ನನಗೆ ಇಸ್ರೊ ಬಗ್ಗೆ ಗೊತ್ತಾಯಿತು. ಆಸಕ್ತಿ ಹೆಚ್ಚಾದಂತೆ ಬಾಹ್ಯಾಕಾಶಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಬೋಧನೆ ಮಾಡುವಂತೆ ಉಪನ್ಯಾಸಕರನ್ನು ಕೇಳಿಕೊಂಡೆ. ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಯೂ ಇಸ್ರೊದಲ್ಲಿ ಕೆಲಸ ಮಾಡಬಹುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ತಾಲ್ಲೂಕಿನ ವರಕೋಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಟೆಲಿಸ್ಕೋಪ್ ನೀಡಲಾಯಿತು. ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ಸಚಿವರಾದ ಎಚ್.ಸಿ. ಮಹದೇವಪ್ಪ, ಎನ್.ಎಸ್. ಬೋಸರಾಜು ಹಾಗೂ ವಿದ್ಯಾರ್ಥಿಗಳು ಇದ್ದರು -ಪ್ರಜಾವಾಣಿ ಚಿತ್ರ

> **ಸರ್ಕಾರಿ ಶಾಲೆಯಲ್ಲಿ ಓದಿದರೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯನ್ನು(ಇಸ್ರೊ) ಸೇರಬಹುದು**
> **ಎಸ್. ಸೋಮನಾಥ್,** ಇಸ್ರೊ ಅಧ್ಯಕ್ಷ

‘ಮಕ್ಕಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದ ಬಗ್ಗೆ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಟೆಲಿಸ್ಕೋಪ್ ನೀಡುವ ಯೋಜನೆ ಬಹಳ ವಿಶೇಷವಾಗಿದ್ದು, ಇದು ಭವಿಷ್ಯದಲ್ಲಿ ವೈಜ್ಞಾನಿಕ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಲಿದೆ’ ಎಂದು ಹೇಳಿದರು.

ಸಚಿವ ಬೋಸರಾಜು ಮಾತನಾಡಿ, ವೈಜ್ಞಾನಿಕ ಮನೋಭಾವ ಹಾಗೂ ವೈಚಾರಿಕತೆ ಹೆಚ್ಚಿಸಲು ರಾಜ್ಯ ಸರ್ಕಾರ ಆದ್ಯತೆ ನೀಡುತ್ತಿದೆ. ಮೊದಲ ಹಂತದಲ್ಲಿ 833 ವಸತಿ ಶಾಲೆಗಳಿಗೆ ಟೆಲಿಸ್ಕೋಪ್ ನೀಡಲಾಗುತ್ತಿದೆ. ಮಕ್ಕಳು ಬಾಹ್ಯಾಕಾಶ ಕ್ಷೇತ್ರದ ಬಗ್ಗೆ ಆಸಕ್ತಿ ಹೆಚ್ಚಿಸಿಕೊಳ್ಳಬೇಕು ಮತ್ತು ಆ ಕ್ಷೇತ್ರದಲ್ಲಿ ಸಂಶೋಧನೆಗೆ ಪ್ರೋತ್ಸಾಹ ನೀಡುವ ಉದ್ದೇಶ ಹೊಂದಿದ್ದೇವೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಪಾಲ್ಗೊಂಡಿದ್ದರು.

ಸಹಕಾರ ಸಂಘಗಳಿಗೆ ಅಸಹಕಾರ

ಕೇಂದ್ರದ ವಿರುದ್ಧ ಮಹಾಮಂಡಲದ ಅಧ್ಯಕ್ಷ ಜಿಟಿಡಿ ಕಿಡಿ

ಪ್ರಜಾವಾಣಿ ವಾರ್ತೆ

ಜಿ.ಟಿ. ದೇವೇಗೌಡ

ಬೆಂಗಳೂರು: ‘ಕೇಂದ್ರ ಸರ್ಕಾರವು ಸಹಕಾರ ಸಂಘಗಳಿಗೆ ನಬಾರ್ಡ್ ಮೂಲಕ ನೀಡುತ್ತಿದ್ದ ಅನುದಾನ, ಕಡಿಮೆ ಬಡ್ಡಿದರದಲ್ಲಿ ನೀಡಲಾಗುತ್ತಿದ್ದ ಸಾಲವನ್ನು ಗಣನೀಯ ಪ್ರಮಾಣದಲ್ಲಿ ಇಳಿಸಲಾಗಿದೆ. ಹೀಗಾಗಿ ರೈತರಿಗೆ ನೀಡಲಾಗಿರುವ ಬೆಳೆ ಮತ್ತು ಕೃಷಿ ಸಾಲದ ಮೊತ್ತ ಕುಸಿದಿದೆ. ಇದೇ ಸ್ಥಿತಿ ಮುಂದುವರೆದರೆ, ಸಹಕಾರ ಕ್ಷೇತ್ರಕ್ಕೆ ಕೇಂದ್ರ ಅಸಹಕಾರ ನೀಡುತ್ತಿದೆ ಎನ್ನಬೇಕಾಗುತ್ತದೆ’ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಅಧ್ಯಕ್ಷ ಜಿ.ಟಿ. ದೇವೇಗೌಡ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಬಾರ್ಡ್ ಈ ಮೊದಲು ಸಹಕಾರ ಸಂಘಗಳಿಗೆ ಶೇ 1ರ ಬಡ್ಡಿ ದರದಲ್ಲಿ ಸಾಲ ನೀಡುತ್ತಿತ್ತು. ಆದರೆ ಈಗ ಬಡ್ಡಿದರವನ್ನು ಶೇ 4.5ಕ್ಕೆ ಏರಿಕೆ ಮಾಡಿದೆ. ಅದರಲ್ಲೂ ಈ ದರದಲ್ಲಿ ನೀಡುತ್ತಿರುವ ಸಾಲದ ಪ್ರಮಾಣ ಅತ್ಯಂತ ಕಡಿಮೆ. ಇನ್ನೂ ಹೆಚ್ಚು ಸಾಲ ಕೇಳಿದರೆ, ಶೇ 8.5ರ ಬಡ್ಡಿ ದರದಲ್ಲಿ ನೀಡುತ್ತೇವೆ ಎನ್ನುತ್ತದೆ. ಹೀಗಾಗಿಯೇ ಹೆಚ್ಚಿನ ರೈತರಿಗೆ ಸಾಲ ನೀಡಲಾಗುತ್ತಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನಬಾರ್ಡ್ ಆರಂಭವಾದ ಸಂದರ್ಭದಲ್ಲಿ ಸಹಕಾರ ಸಂಘಗಳು ರೈತರಿಗೆ ಶೇ10 ರಷ್ಟು ಸಾಲ ನೀಡಿದರೆ, ನಬಾರ್ಡ್ ಶೇ 90ರಷ್ಟು ನೀಡುತ್ತಿತ್ತು. ಈಚಿನ ವರ್ಷಗಳಲ್ಲಿ ಇದನ್ನು ಇಳಿಕೆ ಮಾಡುತ್ತಾ ಬರಲಾಗಿದೆ. ಈಗ ನಬಾರ್ಡ್‌ನ ಪಾಲು ಶೇ 20ರಷ್ಟಕ್ಕೆ ಕುಸಿದಿದೆ. ಸಹಕಾರ ಸಂಘಗಳು ರೈತರಿಗೆ ಕಡಿಮೆ ಬಡ್ಡಿದರದಲ್ಲೇ ಸಾಲ ನೀಡಬೇಕಿರುವುದರಿಂದ ಅವು ನಷ್ಟಕ್ಕೆ ಸಿಲುಕುತ್ತಿವೆ’ ಎಂದು ಉತ್ತರಿಸಿದರು.

‘ಈ ಪರಿಸ್ಥಿತಿ ಬದಲಾಗಬೇಕು ಅಂದರೆ ಕೇಂದ್ರ ಸರ್ಕಾರವು ಹೆಚ್ಚಿನ ಅನುದಾನವನ್ನು ನೀಡಬೇಕು. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರನ್ನು ಕೋರುತ್ತೇನೆ. ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪಕ್ಷಾತೀತವಾಗಿ ಎಲ್ಲ ರಾಜಕೀಯ ನಾಯಕರೂ ಶ್ರಮಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ’ ಎಂದರು.

‘ಹೆಸರಿಲ್ಲ, ಪ್ರಚಾರಕ್ಕೆ ಹೋಗಬಹುದೇ’

‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಯ ಪರವಾಗಿ ಸಿದ್ಧಪಡಿಸಲಾದ ತಾರಾ ಪ್ರಚಾರಕರ ಪಟ್ಟಿಯಲ್ಲಿ ನನ್ನ ಹೆಸರು ಇರಲಿಲ್ಲ. ಹೀಗಾಗಿ ನಾನು ಪ್ರಚಾರಕ್ಕೆ ಹೋಗಿಲ್ಲ’ ಎಂದು ಜಿ.ಟಿ.ದೇವೇಗೌಡ ಹೇಳಿದರು.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘40 ಜನರ ಹೆಸರನ್ನು ಪಟ್ಟಿಯಲ್ಲಿ ಸೇರಿಸಲಾಗಿತ್ತು. ಪಕ್ಷದ ಕೋರ್ ಕಮಿಟಿ ಅಧ್ಯಕ್ಷನಾದ ನನ್ನ ಹೆಸರೇ ಅದರಲ್ಲಿ ಇರಲಿಲ್ಲ. ಹೆಸರು ಇಲ್ಲದ ಮೇಲೆ ಪ್ರಚಾರಕ್ಕೆ ಹೋಗಬಹುದೇ? ಹೆಸರು ಇದ್ದಿದ್ದರೆ ಖಂಡಿತಾ ಪ್ರಚಾರಕ್ಕೆ ಹೋಗುತ್ತಿದ್ದೆ’ ಎಂದರು.

ಸಹಕಾರ ಸಪ್ತಾಹ ನಾಳೆಯಿಂದ

‘ಅಖಿಲ ಭಾರತ ಸಹಕಾರ ಸಪ್ತಾಹವನ್ನು ರಾಜ್ಯದಲ್ಲಿ ಇದೇ 14ರಿಂದ 20 ರವರೆಗೆ ಆಯೋಜಿಸಲಾಗಿದೆ. ರಾಜ್ಯದ ಆಯ್ದ ಏಳು ಜಿಲ್ಲೆಗಳಲ್ಲಿ ವಿವಿಧ ಕಾರ್ಯಕ್ರಮ ಮತ್ತು ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಜಿ.ಟಿ.ದೇವೇಗೌಡ ಮಾಹಿತಿ ನೀಡಿದರು.

‘ಸಹಕಾರ ಕ್ಷೇತ್ರಕ್ಕೆ ಜವಾಹರ ಲಾಲ್ ನೆಹರೂ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ, ಅವರ ಜನ್ಮದಿನದಂದೇ ಸಹಕಾರ ಸಪ್ತಾಹಕ್ಕೆ ಚಾಲನೆ ನೀಡುವುದನ್ನು ರೂಢಿಸಿಕೊಳ್ಳಲಾಗಿದೆ’ ಎಂದರು.

‘ಬೆಂಗಳೂರು, ಚಿತ್ರದುರ್ಗ, ಮಂಗಳೂರು, ಬಾಗಲಕೋಟೆ, ಬೀದರ್, ಚಿಕ್ಕಮಗಳೂರು ಮತ್ತು ಬೆಳಗಾವಿಯಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ, ನ.17ರಂದು ಬಾಗಲಕೋಟೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಸಹಕಾರ ರತ್ನ’ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದರು.

ಸಬರದ ಸೇರಿ ಮೂವರಿಗೆ ಪುಸ್ತಕ ಬಹುಮಾನ

ಪ್ರಜಾವಾಣಿ ವಾರ್ತೆ

ಟಿ.ವಿ. ವೆಂಕಟೇಶಮೂರ್ತಿ

ರಾಮೇಶ್ವರಿ ವರ್ಮ

ಬಸವರಾಜ ಸಬರದ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಮೂರು ವರ್ಷಗಳ ವಾರ್ಷಿಕ ಪುಸ್ತಕ ಬಹುಮಾನಗಳನ್ನು ಪ್ರಕಟಿಸಿದ್ದು, 2021ನೇ ಸಾಲಿಗೆ ಸಾಹಿತಿ ಬಸವರಾಜ ಸಬರದ ಅವರ ‘ರಂಗ ಮಾಧ್ಯಮ’ ಕೃತಿ ಆಯ್ಕೆಯಾಗಿದೆ.

2022ನೇ ಸಾಲಿಗೆ ಬೆಂಗಳೂರಿನ ಟಿ.ವಿ. ವೆಂಕಟೇಶಮೂರ್ತಿ ಅವರ ‘ಕನ್ನಡ ನಾಟಕಗಳು ರಾತ್ರಿ ರೂಪಕಗಳು’ ಹಾಗೂ 2023ನೇ ಸಾಲಿಗೆ ಮೈಸೂರಿನ ರಾಮೇಶ್ವರಿ ವರ್ಮ ಅವರ ‘ಬಿಟ್ಟನೆಂದರು ಬಿಡದು ಈ ಮಾಯೆ’ ಕೃತಿ ಭಾಜನವಾಗಿದೆ.

ಈ ಬಹುಮಾನಗಳು ತಲಾ ₹25 ಸಾವಿರ ನಗದು ಬಹುಮಾನ ಒಳಗೊಂಡಿವೆ. ಅತ್ಯುತ್ತಮ ರಂಗ ಕೃತಿಗಳಿಗೆ ಈ ಪ್ರಶಸ್ತಿ ನೀಡುತ್ತಿದ್ದು, ಜಿ.ವಿ. ಆನಂದಮೂರ್ತಿ, ಬಿ. ಸುರೇಶ್ ಮತ್ತು ಹೇಮಾ ಪಟ್ಟಣಶೆಟ್ಟಿ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ ಎಂದು ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಜಿ–ಸಿಇಟಿ: ಅಣಕು ಪರೀಕ್ಷಾ ಫಲಿತಾಂಶ

ಬೆಂಗಳೂರು: ಎಂ.ಬಿ.ಎ, ಎಂ.ಸಿ.ಎ, ಎಂ.ಇ, ಎಂ.ಟೆಕ್ ಮತ್ತು ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಮೊದಲ ಸುತ್ತಿನ ಸೀಟು ಹಂಚಿಕೆಯ ಅಣಕು ಪರೀಕ್ಷಾ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ನ. 14ರ ಬೆಳಿಗ್ಗೆ 11ರವರೆಗೆ ಅಗತ್ಯವಿದ್ದವರು ಆಪ್ಷನ್ ಬದಲಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಅದರ ನಂತರ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

‘ಇ–ಸ್ವತ್ತು ಪ್ರಕ್ರಿಯೆ: ಕಾರ್ಯಪಡೆ ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮೀಣ ಪ್ರದೇಶಗಳಲ್ಲಿ ಇ-ಸ್ವತ್ತು ಮಂಜೂರಾತಿ ಪ್ರಕ್ರಿಯೆಯನ್ನು ಸರಳೀಕರಣ ಮತ್ತು ಸಬಲೀಕರಣಗೊಳಿಸಲು ಕಾರ್ಯಪಡೆ ರಚಿಸಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಇ-ಖಾತೆ ಕುರಿತಂತೆ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಲಿರುವ ಸಭೆಗೆ ಪೂರ್ವಭಾವಿಯಾಗಿ ತಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಪ್ರಿಯಾಂಕ್, ‘ಕಂದಾಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯ ಜೊತೆ ಸಮನ್ವಯ ಸಾಧಿಸುವ ಉದ್ದೇಶದಿಂದ ಈ ಕಾರ್ಯಪಡೆ ರಚಿಸಲಾಗುವುದು’ ಎಂದರು.

‘ಗ್ರಾಮತಾಣ ವ್ಯಾಪ್ತಿಯ ಹೊರಭಾಗದ ಬಹಳಷ್ಟು ಪ್ರದೇಶಗಳಲ್ಲಿ ಶಾಲೆಗಳು, ಉದ್ದಿಮೆಗಳು ಹಾಗೂ ವಸತಿ ಸಮುಚ್ಚಯಗಳು ನಿರ್ಮಾಣಗೊಂಡಿದ್ದು, ಈ ಪೈಕಿ ಬಹುಪಾಲು ಆಸ್ತಿಗಳು ಗ್ರಾಮ ಪಂಚಾಯಿತಿ ತೆರಿಗೆ ವ್ಯಾಪ್ತಿಗೆ ಒಳಪಟ್ಟಿಲ್ಲ. ಇದರಿಂದಾಗಿ ಗ್ರಾಮ ಪಂಚಾಯತಿಗಳ ಸಂಪನ್ಮೂಲ ಕ್ರೋಡೀಕರಣಕ್ಕೆ ಹಿನ್ನಡೆ ಆಗಿದೆ’ ಎಂದು ಸಚಿವರು ಹೇಳಿದರು.

‘ಗ್ರಾಮ ಪಂಚಾಯಿತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ನಾಗರಿಕರಿಗೆ ಇ-ಸ್ವತ್ತು ದಾಖಲೆ ಪಡೆಯುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವ ಅನಿವಾರ್ಯ ಇದೆ. ಹೀಗಾಗಿ, ಎಲ್ಲ ಸಮಸ್ಯೆಗಳನ್ನು ಬಗೆಹರಿಸಿ ಪರಿಹಾರಗಳನ್ನು ಕಂಡುಕೊಳ್ಳಲು ಕಾರ್ಯಪಡೆ ರಚಿಸಲಾಗುವುದು. ಗ್ರಾಮಗಳಿಗೆ ಹೊಂದಿಕೊಂಡಂತೆ ಕಂದಾಯ ಭೂಮಿಯಲ್ಲಿ ಬಡಾವಣೆಗಳು ನಿರ್ಮಾಣಗೊಂಡಿದ್ದು, ಅಂತಹ ಬಡಾವಣೆಗಳಲ್ಲಿನ ನಿವಾಸಿಗಳು ಇ-ಸ್ವತ್ತು ದಾಖಲೆಯನ್ನು ಸುಗಮವಾಗಿ ಪಡೆದುಕೊಳ್ಳಲು ಪರಿಹಾರಗಳನ್ನು ಕಾರ್ಯಪಡೆ ಸೂಚಿಸಲಿದೆ’ ಎಂದು ಅವರು ಹೇಳಿದರು.

ಇಂದು–ನಾಳೆ ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಗಾಳ ಕೊಲ್ಲಿಯ ನೈರುತ್ಯ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿರುವ ಪರಿಣಾಮ ರಾಜ್ಯದ ಕೆಲವೆಡೆ ಬುಧವಾರ ಹಾಗೂ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಗೆ ಬುಧವಾರ, ಈ ಜಿಲ್ಲೆಗಳ ಜತೆಗೆ ಶಿವಮೊಗ್ಗ ಹಾಗೂ ಚಾಮರಾಜನಗರ ಜಿಲ್ಲೆಗೆ ಗುರುವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಈ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳು ಮತ್ತು ಕರಾವಳಿಯ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಒಂದು ಅಥವಾ ಎರಡು ಸ್ಥಳಗಳಲ್ಲಿ ತುಂತುರು ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯ ಹಲವು ಸ್ಥಳಗಳು ಹಾಗೂ ದಕ್ಷಿಣ ಒಳನಾಡಿನ ಕೆಲವು ಸ್ಥಳಗಳಲ್ಲಿ ಇದೇ 16ರವರೆಗೆ ಮಳೆ ಮುಂದುವರಿಯುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರ್ನಾಟಕ ಸೇರಿ ವಿವಿಧೆಡೆಯಿಂದ ಭಕ್ತಸಾಗರ

ಪಂಢರಪುರದಲ್ಲಿ ಕಾರ್ತಿಕ ಏಕಾದಶಿ ವೈಭವ

ಪ್ರಜಾವಾಣಿ ವಾರ್ತೆ

ಪಂಢರಪುರ(ಮಹಾರಾಷ್ಟ್ರ): ಕಾರ್ತಿಕ ಏಕಾದಶಿ ಪ್ರಯುಕ್ತ ಪಂಢರಪುರಕ್ಕೆ ಮಂಗಳವಾರ ವಿಠಲನ ದರ್ಶನಕ್ಕೆ ಭಕ್ತ ಸಾಗರವೇ ಹರಿದು ಬಂತು.

ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ತೆಲಂಗಾಣ ರಾಜ್ಯಗಳಿಂದ ಪಾದಯಾತ್ರೆ, ದಿಂಡಿ ಯಾತ್ರೆ ಮೂಲಕ ಪಂಢರಪುರಕ್ಕೆ ಬಂದ ಲಕ್ಷಾಂತರ ಭಕ್ತರು ಇಲ್ಲಿನ ಚಂದ್ರಭಾಗ ನದಿಯಲ್ಲಿ ಮಿಂದು, ಸರತಿಸಾಲಿನಲ್ಲಿ ನಿಂತು ವಿಠಲನ ದರ್ಶನ ಪಡೆದರು.

ವಾರ್ಕರಿ ಸಪ್ತಾಹ ಜರುಗಿತು. ಸಂತ ಜ್ಞಾನೇಶ್ವರ, ಏಕನಾಥ, ತುಕಾರಾಮ, ಪುಂಡಲೀಕ ನಾಮದೇವ, ದಾಮಾಜಿ, ಮೀರಾಬಾಯಿ, ಮುಕ್ತಾಬಾಯಿ, ಕಬೀರದಾಸ, ರಾಮದಾಸ, ತುಳಸಿದಾಸ, ಸೂರದಾಸರ ಅಭಂಗಗಳನ್ನು ವಾರ್ಕರಿ ರಾಗದಿಂದ ಹಾಡುತ್ತಾ ಕುಣಿಯುತ್ತ ಭಜನೆ, ನಾಮ ಸಂಕೀರ್ತನೆಗಳಲ್ಲಿ ಭಕ್ತರು ಮೈಮರೆತರು.

ತುಳಸಿ ಮಾಲೆ ಧರಿಸಿದ ಸಂತರು, ತಲೆಯ ಮೇಲೆ ತುಳಸಿಕಟ್ಟೆ ಹೊತ್ತು, ಹೆಜ್ಜೆ ಹಾಕುತ್ತಾ ಕೈ ಕೈ ಹಿಡಿದು ಕುಣಿದರು. ಗೋಪಾಲನಿಗೆ ಜೈಕಾರ ಹಾಕಿದರು. ಸಂಜೆ ವಿಠ್ಠಲ ರುಕ್ಮಿಣಿ ಪಲ್ಲಕ್ಕಿ ಉತ್ಸವ ಪ್ರಮುಖ ಬೀದಿಗಳಲ್ಲಿ ಜರುಗಿತು.

ಪಂಢರಪುರದಲ್ಲಿ ಮಂಗಳವಾರ ನಸುಕಿನಲ್ಲಿ ವಿಠ್ಠಲ ರುಕ್ಮಿಣಿಗೆ ಮಹಾರಾಷ್ಟ್ರ ಸರ್ಕಾರದ ಪ್ರಥಮ ಪೂಜೆಯನ್ನು ಕೊಲ್ಹಾಪುರ ವಿಭಾಗೀಯ ಆಯುಕ್ತ ಡಾ. ಚಂದ್ರಕಾಂತ ಪುಲಕುಂಡವಾರ ದಂಪತಿ ನೆರವೇರಿಸಿದರು

‘ಕರ್ನಾಟಕ ರಾಜ್ಯ ರೈತ ಸಂಘಗಳ ಏಕೀಕರಣ’ ಸಭೆಯಲ್ಲಿ ನಿರ್ಣಯ

ರೈತರಿಂದ ಒಗ್ಗಟ್ಟಿನ ಹೋರಾಟ

ಪ್ರಜಾವಾಣಿ ವಾರ್ತೆ

‘ಕರ್ನಾಟಕ ರೈತ ಸಂಘಗಳ ಏಕೀಕರಣ’ ಶೀರ್ಷಿಕೆಯಡಿ ನಡೆದ ಸಭೆಯಲ್ಲಿ ನಂದಿನಿ ಜಯರಾಂ, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಪಚ್ಚೆ ನಂಜುಂಡಸ್ವಾಮಿ ಮತ್ತು ವಿವಿಧ ರೈತ ನಾಯಕರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದ ಎಲ್ಲ ರೈತ ಸಂಘಟನೆಗಳನ್ನು ಒಗ್ಗೂಡಿಸುವ ನಿರ್ಣಯವನ್ನು ‘ಕರ್ನಾಟಕ ರಾಜ್ಯ ರೈತ ಸಂಘಗಳ ಏಕೀಕರಣ’ ಶೀರ್ಷಿಕೆಯಡಿ ನಗರದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಕೈಗೊಳ್ಳಲಾಗಿದೆ.

ರೈತರ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ವಿಧಾನಮಂಡಲದ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಒಗ್ಗೂಡಿಯೇ ಹೋರಾಟ ನಡೆಸುವ ತೀರ್ಮಾನಕ್ಕೂ ಬರಲಾಗಿದೆ.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತು ರೈತ ಚಳವಳಿಯ ರೂವಾರಿ ಪ್ರೊ.ಎಂ.ಡಿ. ನಂಜುಂಡ ಸ್ವಾಮಿ ಅವರ ಪುತ್ರ ಪಚ್ಚೆ ನಂಜುಂಡಸ್ವಾಮಿ ನೇತೃತ್ವದಲ್ಲಿ ಗಾಂಧಿ-ಭವನದಲ್ಲಿ ಸಭೆ ನಡೆಯಿತು. ಶಿವಮೊಗ್ಗ, ರಾಯಚೂರು, ವಿಜಯಪುರ, ಬೆಳಗಾವಿ, ಮಂಡ್ಯ, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳ ವಿವಿಧ ರೈತ ಸಂಘಟನೆಗಳ ರಾಜ್ಯ ಘಟಕಗಳ ಅಧ್ಯಕ್ಷರು, ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಒಗ್ಗೂಡಿ ಹೋರಾಟ ನಡೆಸುವ ನಿರ್ಣಯ ಕೈಗೊಂಡರು.

ರೈತ ಮುಖಂಡರ ಪರವಾಗಿ ಮಾತನಾಡಿದ ಚುನ್ನಪ್ಪ ಪೂಜಾರಿ, ‘ಎಲ್ಲ ಭಾಗದ ರೈತರ ಸಮಸ್ಯೆಗಳು ಒಂದೇ ಆಗಿವೆ. ರೈತ ಸಂಘಟನೆಗಳು ಒಗ್ಗೂಡಿ ಹೋರಾಟ ನಡೆಸಿದರೆ, ಒಂದಷ್ಟು ಪರಿಹಾರ ಸಿಗುತ್ತದೆ. ಈ ಬಾರಿಯ ಬೆಳಗಾವಿ ಅಧಿವೇಶನದ ವೇಳೆ ರೈತರ ಶಕ್ತಿ ಪ್ರದರ್ಶಿಸಬೇಕಿದೆ’ ಎಂದು ಅಭಿಪ್ರಾಯಪಟ್ಟರು.

ಪಚ್ಚೆ ನಂಜುಂಡಸ್ವಾಮಿ ಮಾತನಾಡಿ, ‘ರೈತ ಸಂಘಗಳನ್ನು ಒಗ್ಗೂಡಿಸುವ ಮುನ್ನುಡಿಯ ಸಭೆ ಇದು. ಇಲ್ಲಿಂದ ಹಂತ ಹಂತವಾಗಿ ಸಭೆಗಳನ್ನು ನಡೆಸುತ್ತಾ ಸಂಘಗಳ ಏಕೀಕರಣಕ್ಕೆ ಪ್ರಯತ್ನಿಸಲಾಗುವುದು. ಇಲ್ಲಿ ಹತ್ತು ಸಂಘಟನೆಗಳನ್ನು ಒಂದೇ ವೇದಿಕೆಗೆ ತರಲಾಗಿದೆ. ಮುಂದೆ ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲೂ ಈ ಕೆಲಸ ನಡೆಯಲಿದೆ’ ಎಂದರು.

‘ಬೆಳಗಾವಿಯ ಅಧಿವೇಶನದ ವೇಳೆಯಲ್ಲಿ, ರಾಜ್ಯವ್ಯಾಪಿ ಸುಮಾರು 1 ಲಕ್ಷ ರೈತರನ್ನು ಸೇರಿಸಲಾಗುವುದು. ಕೇಂದ್ರ ಸರ್ಕಾರದ ಮೂರು ರೈತ ವಿರೋಧಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ಹಿಂಪಡೆಯುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಮೇಲೆ ಒತ್ತಡ ಹೇರಲಾಗುವುದು’ ಎಂದರು.

ವಿವಿಧ ರೈತ ಸಂಘಟನೆ ಗಳ ಮುಖಂಡರಾದ ಮಂಜೇಶ್ ಗೌಡ, ಜಿ.ಜಿ. ಹಳ್ಳಿ ನಾರಾಯಣಸ್ವಾಮಿ, ಅರಳಾಪುರ ಮಂಜೇಗೌಡ, ನಾರಾಯಣರೆಡ್ಡಿ, ಲಕ್ಷ್ಮಿನಾರಾಯಣ ಗೌಡ, ಶರಣಪ್ಪ ದೊಡ್ಡಮನಿ, ಶಿವಮೊಗ್ಗದ ದಿನೇಶ ಶಿರವಾಳ, ರಾಜೂ ಪವಾರ್, ಮಹೇಶ್ ಸುಬೇದಾರ್, ರೈತ ಹೋರಾಟಗಾರ್ತಿ ನಂದಿನಿ ಜಯರಾಂ ಸೇರಿದಂತೆ ವಿವಿಧ ಜಿಲ್ಲೆಗಳ ರೈತ ಮುಖಂಡರು ಇದ್ದರು.

ಡಿ.23ರಂದು ರೈತ ಮುಖಂಡರ ಸಭೆ

‘ಎಲ್ಲ ರೈತ ಸಂಘಟನೆಗಳನ್ನು ಒಗ್ಗೂಡಿಸುವ ಪ್ರಕ್ರಿಯೆ ನಡೆದಿದೆ. ಆ ಪ್ರಯತ್ನದ ಮೊದಲ ಸಭೆ ಇದು. ಬೆಳಗಾವಿ ಅಧಿವೇಶನದಲ್ಲಿ ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ನಿಟ್ಟಿನಲ್ಲಿಯೂ ಕೆಲಸ ನಡೆಯುತ್ತಿದೆ. ಇದೇ ವಿಷಯವಾಗಿ ಡಿ.23ರಂದು ಬೆಂಗಳೂರಿನಲ್ಲೇ ಇನ್ನೊಂದು ಸಭೆ ನಡೆಸಲಾಗುತ್ತಿದೆ’ ಎಂದು ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

‘ರೈತ ಸಂಘಗಳ ಎಲ್ಲ ಮುಖಂಡರನ್ನೂ ಸಭೆಗೆ ಆಹ್ವಾನಿಸಲಾಗುವುದು. ರೈತರ ಸಮಸ್ಯೆಗಳು ಹಲವಾರು ಇವೆ. ಇವುಗಳ ಬಗ್ಗೆ ಒಂದಾಗಿ ಹೋರಾಟ ಮಾಡಿದರೆ, ರೈತರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಎಲ್ಲ ಸಂಘಟನೆಗಳು ಒಗ್ಗೂಡಬೇಕು’ ಎಂದು ಮನವಿ ಮಾಡಿದರು.

‘ಕರಿಯ’ ಹೇಳಿಕೆ; ಸಚಿವ ಜಮೀರ್ ಕ್ಷಮೆ

‘ಅನಗತ್ಯವಾಗಿ ವಿವಾದ ಮಾಡಲಾಗಿದೆ; ಹಿಂದೆಯೂ ಪ್ರೀತಿಯಿಂದ ಹೇಳಿದ್ದೆ’

ಪ್ರಜಾವಾಣಿ ವಾರ್ತೆ



ಜಮೀರ್ ಅಹಮ್ಮದ್

ಮೈಸೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ‘ಕರಿಯ’ ಎಂದು ಜರಿದಿದ್ದ ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ತಮ್ಮ ಹೇಳಿಕೆಗೆ ಕ್ಷಮೆ ಯಾಚಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ’ ಎಂದರು.

‘ನಾವಿಬ್ಬರೂ ಬಹಳ ಆತ್ಮೀಯ-ರಾಗಿದ್ದು, ದಿನದ 24 ಗಂಟೆಯಲ್ಲಿ 14 ಗಂಟೆ ಜೊತೆಯಾಗಿಯೇ ಇರುತ್ತಿದ್ದೆವು. ಅವರನ್ನು ಕರಿಯಣ್ಣ ಎಂದು ಕರೆದದ್ದು ಇದೇ ಮೊದಲೇನಲ್ಲ. ಪ್ರೀತಿಯಿಂದ ಹಲವು ಸಲ ಕರೆದಿದ್ದೇನೆ. ಅವರೂ ನನ್ನನ್ನು ಕುಳ್ಳ ಎಂದು ಕರೆದಿದ್ದಾರೆ. ಆದರೆ ಚುನಾವಣೆ ಕಾರಣಕ್ಕೆ ಇದನ್ನು ವಿವಾದ ಮಾಡಲಾಗುತ್ತಿದೆ' ಎಂದರು.

'ಎಚ್.ಡಿ.ದೇವೇಗೌಡರನ್ನು ಹಣದಿಂದ ಕೊಂಡುಕೊಳ್ಳುತ್ತೇನೆ' ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ‘ದೇವೇಗೌಡರ ಕುಟುಂಬವನ್ನು ಯಾರಾದರೂ ಕೊಂಡುಕೊಳ್ಳಲು ಸಾಧ್ಯವೇ? ನನಗೆ ದೇವೇಗೌಡರ ಮೇಲೆ ಅಪಾರ ಗೌರವವಿದೆ. ಈ ಹಿಂದೆ ಚುನಾವಣೆಯಲ್ಲಿ ಕುಮಾರಸ್ವಾಮಿ, ನನಗೆ ಮುಸ್ಲಿಮರ ಮತಗಳು ಬೇಡ ಎಂದಿದ್ದರು. ಈಗ ದುಡ್ಡು ಕೊಟ್ಟು ಮತ ಖರೀದಿಗೆ ಮುಂದಾಗಿದ್ದಾರೆ. ಅದನ್ನು ಉಲ್ಲೇಖಿಸಿ ನಾನು ಹಾಗೆ ಹೇಳಿದ್ದೆ' ಎಂದು ಸ್ಪಷ್ಟನೆ ನೀಡಿದರು.

'ಬೇರೆ ರಾಜ್ಯಗಳ ಚುನಾವಣೆಗಾಗಿ ಕರ್ನಾಟಕದಲ್ಲಿ ಕಾಂಗ್ರೆಸ್ ಹಣ ಸಂಗ್ರಹಿಸುತ್ತಿದೆ’ ಎಂಬ ಆರ್. ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಅವರಿಗೆ ಚುನಾವಣೆಯಲ್ಲಿ ಖರ್ಚು ಮಾಡಿ ಅಭ್ಯಾಸವಾಗಿದೆ. ಅದಕ್ಕಾಗಿ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ. ಅದಕ್ಕೆ ಏನಾದರೂ ದಾಖಲೆ ಇದೆಯೇ’ ಎಂದು ಪ್ರಶ್ನಿಸಿದರು.

‘ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಕಚೇರಿಯು ಸ್ಪಷ್ಟನೆ ನೀಡಿದೆ’ ಎಂದರು.

ಜಮೀರ್ ವಜಾಕ್ಕೆ ಒಕ್ಕಲಿಗರ ಸಂಘ, ಸಭಾ ಒತ್ತಾಯ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ನಿಂದಿಸಿರುವ ವಸತಿ ಸಚಿವ ಜಮೀರ್ ಅಹ್ಮದ್ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ರಾಜ್ಯ ಒಕ್ಕಲಿಗರ ಸಂಘ, ಒಕ್ಕಲಿಗರ ಮಹಾಸಭಾ ಖಂಡಿಸಿವೆ.

‘ಕುಮಾರಸ್ವಾಮಿ ಅವರ ಬಣ್ಣದ ಬಗ್ಗೆ ಜಮೀರ್ ಅವರು ಆಡಿರುವ ಮಾತು ಅದು ಇಡೀ ಒಕ್ಕಲಿಗ ಜನಾಂಗಕ್ಕೆ, ರಾಜ್ಯದ ಜನರಿಗೆ ಮಾಡಿರುವ ಅವಹೇಳನ. ಇಂತಹ ಮಾತುಗಳು ಶೋಭೆ ತರುವುದಿಲ್ಲ. ಸಭ್ಯತೆಯ ಎಲ್ಲೆ ಮೀರಿ ಮಾತನಾಡುವ ವ್ಯಕ್ತಿ ಸಚಿವ ಸ್ಥಾನದಲ್ಲಿ ಮುಂದುವರಿಯಬಾರದು’ ಎಂದು ಸಂಘ ಹಾಗೂ ಸಭಾದ ಪದಾಧಿಕಾರಿಗಳು’ ಹೇಳಿದ್ದಾರೆ.

‘ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುಟುಂಬದ ಬಗ್ಗೆಯೂ ಲಘುವಾಗಿ ಮಾತನಾಡಿದ್ದಾರೆ. ರಾಜಕೀಯವಾಗಿ ಯಾರಿಗೂ ನೋವಾಗದಂತೆ ಟೀಕೆ-ಟಿಪ್ಪಣಿ ಮಾಡಲು ಅಭ್ಯಂತರವಿಲ್ಲ. ಆದರೆ, ವ್ಯಕ್ತಿಗತ, ಸಮಾಜದ ಹಿತಕ್ಕೆ ಧಕ್ಕೆಯಾಗುವಂತೆ ವರ್ಣದ ಬಗ್ಗೆ ನಿಂದನೆ ಅವರ ಘನತೆಗೆ ತಕ್ಕದಾಗಿರಲಿಲ್ಲ. ತಮ್ಮ ಹೇಳಿಕೆಯನ್ನು ಮಾಧ್ಯಮಗಳ ಮೂಲಕ ಮತ್ತೆ ಸಮರ್ಥನೆ ಮಾಡಿಕೊಂಡಿದ್ದಾರೆ. ಒಕ್ಕಲಿಗ ಸಮಾಜ ಇಂತಹ ನಡೆಯನ್ನು ಸಹಿಸುವುದಿಲ್ಲ’ ಎಂದಿದ್ದಾರೆ.

‘ವಕ್ಫ್ ಬೋರ್ಡ್ ಮೂಲಕ ಹಿಂದೂಗಳ ಭೂಮಿ ಕಬಳಿಸಲು ಯತ್ನಿಸುತ್ತಿರುವ ಸಚಿವ ಜಮೀರ್ ಇದೇ ರೀತಿ ಮಾತು ಮುಂದುವರಿಸಿದರೆ ಒಕ್ಕಲಿಗರು ಬೀದಿಗಿಳಿಯಬೇಕಾಗುತ್ತದೆ’ ಎಂದು ಮಹಾಸಭಾದ ಮುಖಂಡ ಎ.ಎಚ್. ಆನಂದ್ ಹೇಳಿದ್ದಾರೆ.

ವಕ್ಫ್ ಕಮಿಟಿ ಮತದಾರರ ಸಭೆ- ಚುನಾವಣೆ ಚರ್ಚೆ

ಮೈಸೂರು: ರಾಜ್ಯ ವಕ್ಫ್ ಕಮಿಟಿ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯ ಸಲುವಾಗಿ, ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಕಮಿಟಿ ಮತದಾರರ ಸಭೆ ನಡೆಯಿತು.

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸೇರಿದಂತೆ ಸಮುದಾಯದ ಮುಖಂಡರು ನೇತೃತ್ವ ವಹಿಸಿದ್ದರು.

ಮಾಧ್ಯಮಗಳಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಮೈಸೂರು, ಮಂಡ್ಯ, ರಾಮನಗರ, ಮಡಿಕೇರಿ, ಚಾಮರಾಜನಗರ, ಹಾಸನ, ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ವಕ್ಫ್ ಮತದಾರರು ಪಾಲ್ಗೊಂಡಿದ್ದರು.

ಸಭೆ ಬಳಿಕ ಪ್ರತಿಕ್ರಿಯಿಸಿದ ಸಚಿವರು, ‘ನವೆಂಬರ್ 19ರಂದು ನಡೆಯಲಿರುವ ಚುನಾವಣೆ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿತ್ತು. ಚುನಾವಣೆ ಬಗ್ಗೆ ಮಾತ್ರ ಪ್ರಚಾರ ಮಾಡುತ್ತಿದ್ದೇವೆ. ವಕ್ಫ್ ವಿವಾದದ ಕುರಿತು ಚರ್ಚೆ ನಡೆದಿಲ್ಲ’ ಎಂದರು.

ಒಂಟಿ ಮನೆಗೆ ಬಂದಿದ್ದ ನಕ್ಸಲ್ ತಂಡ

ಚಿಕ್ಕಮಗಳೂರು: ನಕ್ಸಲ್ ಚಳವಳಿಯ ಮುಂಡಗಾರು ಲತಾ, ಜಯಣ್ಣ ಅವರು ಕೊಪ್ಪ ತಾಲ್ಲೂಕಿನ ಕಡೇಗುಂದಿ ಗ್ರಾಮದ ಒಂಟಿಗೆ ಮನೆಗೆ ಭೇಟಿ ನೀಡಿರುವುದನ್ನು ಖಚಿತಪಡಿಸಿರುವ ನಕ್ಸಲ್ ನಿಗ್ರಹ ಪಡೆ(ಎಎನ್‌ಎಫ್) ಅಧಿಕಾರಿಗಳು, ಶೋಧ ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ.

ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕಿನ ಗಡಿಯಲ್ಲಿ ಇರುವ ಸುಬ್ಬಗೌಡ ಮನೆಗೆ ಲತಾ, ಜಯಣ್ಣ ಮತ್ತು ಇನ್ನಿಬ್ಬರು ಬಂದಿರುವ ಮಾಹಿತಿ ಮೇರೆಗೆ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿ ದಾಳಿ ನಡೆಸಿದ್ದಾರೆ. ನಾಲ್ವರೂ ಮನೆಯಿಂದ ಓಡಿ ಹೋಗಿ ಕಾಡಿನೊಳಗೆ ಪರಾರಿಯಾಗಿದ್ದಾರೆ.

ಮನೆಯಲ್ಲಿ ಮೂರು ಬಂದೂಕು, ಮದ್ದುಗುಂಡು, ಮಾಂಸ ಕೂಡ ಪತ್ತೆಯಾಗಿದೆ. ಕ್ಯಾಲೆಂಡರ್ ಒಂದಕ್ಕೆ ‘ನಕ್ಷತ್ರ’ ಮಾದರಿಯ ಗುರುತನ್ನು ಮಾಡಲಾಗಿದ್ದು, ಅದನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಕ್ಸಲರಿಗೆ ಆಶ್ರಯ ನೀಡಿದ್ದ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಲತಾ ಸೇರಿ ನಾಲ್ವರು ನಕ್ಸಲರು ಮನೆಗೆ ಬಂದಿರುವುದು ಖಚಿತವಾಗಿದೆ. ಈ ಸಂಬಂಧ ಜಯಪುರ ಠಾಣೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯಡಿ(ಯುಎಪಿಎ) ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಕ್ಸಲರ ಶೋಧಕ್ಕೆ ಎನ್‌ಎನ್‌ಎಫ್ ಸಿಬ್ಬಂದಿ ಶೋಧ ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಮತ್ತು ನಕ್ಸಲ್ ನಿಗ್ರಹ ಪಡೆಯ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಎರಡು ದಿನಗಳಿಂದ ಸ್ಥಳದಲ್ಲೇ ಮೊಕ್ಕಾಂ ಹೂಡಿ ಕಾರ್ಯಾಚರಣೆ ಮುನ್ನಡೆಸಿದರು.

ಸ್ಥಳಕ್ಕೆ ಆಂತರಿಕ ಭದ್ರತಾ ವಿಭಾಗದ(ಐಎಸ್‌ಡಿ) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಣಬ್ ಮೊಹಂತಿ ಮತ್ತು ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆರಳಚ್ಚು ತಜ್ಞರು ಸುಬ್ಬಗೌಡ ಮನೆಯಲ್ಲಿ ತಪಾಸಣೆ ನಡೆಸಿದರು.

ಸರ್ಕಾರಿ ನೌಕರರ ಸಂಘ: ನಿರ್ದೇಶಕ ಸ್ಥಾನಗಳಿಗೆ ಶೇ 60ರಷ್ಟು ಅವಿರೋಧ ಆಯ್ಕೆ

ತಾಲ್ಲೂಕು, ಜಿಲ್ಲಾ ಅಧ್ಯಕ್ಷಗಿರಿಗೆ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸರ್ಕಾರಿ ನೌಕರರ ಸಂಘದ ಚುನಾವಣೆ ಕಾವೇರಿದ್ದು, ತಾಲ್ಲೂಕು ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಶಾಖೆಯಿಂದ ಆರಂಭಗೊಂಡು ರಾಜ್ಯ ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆ ಸೆ. 17ರಿಂದ ಡಿ. 27ರವರೆಗೆ ವಿವಿಧ ಹಂತದಲ್ಲಿ ನಡೆಯುತ್ತಿದೆ. ಚುನಾವಣಾಧಿಕಾರಿಯಾಗಿ ಎ. ಹನುಮನರಸಯ್ಯ ಕಾರ್ಯ-ನಿರ್ವಹಿಸುತ್ತಿದ್ದಾರೆ.

ಮೊದಲ ಹಂತದಲ್ಲಿ ಮೂರು ಶೈಕ್ಷಣಿಕ ಜಿಲ್ಲೆ ಒಳಗೊಂಡ 33 ಜಿಲ್ಲೆಗಳು ಹಾಗೂ 191 ತಾಲ್ಲೂಕುಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ಪ್ರಕ್ರಿಯೆಗಳು ಮುಕ್ತಾಯದ ಹಂತ ತಲುಪಿವೆ. ತಾಲ್ಲೂಕು ನಿರ್ದೇಶಕರ ಆಯ್ಕೆ ಪೂರ್ಣಗೊಂಡಿದ್ದು, ಆಯ್ಕೆಯಾಗಿರುವವರು ನ. 16ರಂದು ನಡೆಯುವ ಚುನಾವಣೆಯಲ್ಲಿ ಆಯಾ ತಾಲ್ಲೂಕು ಘಟಕದ ಅಧ್ಯಕ್ಷ, ಖಜಾಂಜಿ ಹಾಗೂ ರಾಜ್ಯ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲಿದ್ದಾರೆ.

ಪ್ರತಿ ಜಿಲ್ಲಾ ಕೇಂದ್ರದಲ್ಲೂ ಜಿಲ್ಲಾ ಸಂಘದ 66 ಸ್ಥಾನಗಳಿಗೆ ನ.16ರಂದು ಚುನಾವಣೆ ನಡೆಯುತ್ತದೆ. ಈಗಾಗಲೇ ಪ್ರತಿ ಜಿಲ್ಲೆಯಲ್ಲೂ 35ರಿಂದ 55 ನಿರ್ದೇಶಕರು ಅವಿರೋಧವಾಗಿ ಆಯ್ಕೆ-ಯಾಗಿದ್ದಾರೆ. ಚುನಾಯಿತರಾದವರು ಡಿ. 4ರಂದು ನಡೆಯುವ ಚುನಾವಣೆಯಲ್ಲಿ ಆಯಾ ಜಿಲ್ಲಾ ಸಂಘದ ಅಧ್ಯಕ್ಷರು, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲಿದ್ದಾರೆ.

ತಾಲ್ಲೂಕು, ಜಿಲ್ಲಾ ಸಂಘಗಳ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಹಣಾಹಣಿ ಏರ್ಪಟ್ಟಿದ್ದು, ಆಕಾಂಕ್ಷಿಗಳು ಆಯ್ಕೆಯಾಗಿರುವ ನಿರ್ದೇಶಕರ ಮನವೊಲಿಕೆಯ ಕಸರತ್ತು ಆರಂಭಿಸಿದ್ದಾರೆ. ರಾಜಕಾರಣಿಗಳು, ಜನಪ್ರತಿನಿಧಿಗಳು, ತಮ್ಮ ತಮ್ಮ ಇಲಾಖೆಯ ಉನ್ನತಾಧಿಕಾರಿಗಳ ಮೂಲಕವೂ ನೌಕರರ ಮೇಲೆ ಪ್ರಭಾವ ಬೀರುತ್ತಿದ್ದಾರೆ.

ಬೆಂಗಳೂರಿಗೆ 102 ರಾಜ್ಯ ಪರಿಷತ್ ಸ್ಥಾನ: ಬೆಂಗಳೂರು ನಗರ ವ್ಯಾಪ್ತಿಯಿಂದಲೇ 102 ರಾಜ್ಯ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿ ಇಲಾಖೆ, ಸಚಿವಾಲಯ ಸೇರಿದಂತೆ ಈ ಆಯ್ಕೆಗಳು ನಡೆಯುತ್ತವೆ. ಸೆ.17ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿದ್ದು, ಈಗಾಗಲೇ 72 ಸ್ಥಾನಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಅವರಲ್ಲಿ 44 ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ 30 ಸ್ಥಾನಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.

ರಾಜ್ಯ ಸಂಘ: ಡಿ. 6ರಿಂದ ನಾಮಪತ್ರ

ತಾಲ್ಲೂಕು ಹಾಗೂ ಜಿಲ್ಲಾ ಸಂಘದ ಪದಾಧಿಕಾರಿಗಳ ಆಯ್ಕೆಯ ನಂತರ ರಾಜ್ಯ ಸಂಘದ ಅಧ್ಯಕ್ಷ ಹಾಗೂ ಖಜಾಂಚಿ ಚುನಾವಣೆ ಪ್ರಕ್ರಿಯೆಗಳು ನಡೆಯಲಿವೆ.

ಡಿ. 6ರಿಂದ ಈ ಎರಡೂ ಸ್ಥಾನಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ಹಾಲಿ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮತ್ತೊಮ್ಮೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ಈಗಾಗಲೇ ರಾಜ್ಯ ಪರಿಷತ್ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಅವರ ಎದುರಾಳಿ ಯಾರು ಎನ್ನುವುದು ಡಿ. 6ರ ನಂತರ ಸ್ಪಷ್ಟವಾಗಲಿದೆ. ಕೆಳ ಹಂತದಲ್ಲಿ ನಡೆದ ಚುನಾವಣೆಯಲ್ಲಿ ಯಾರ ಬಣ ಹೆಚ್ಚು ಸ್ಥಾನಗಳನ್ನು ಪಡೆಯುತ್ತದೆಯೇ ಅವರ ಗೆಲುವಿನ ಸಾಧ್ಯತೆಯೂ ಹೆಚ್ಚಾಗಿರುತ್ತದೆ.

ರಾಜ್ಯಾಧ್ಯಕ್ಷರ ಚುನಾವಣಾ ಮತದಾರರ ಸಂಖ್ಯೆ

ವಿಭಾಗಗಳು	ಮತಗಳು
ತಾಲ್ಲೂಕು ಸಂಘಗಳು	764
ಜಿಲ್ಲಾ ಸಂಘಗಳು	132
ಬೆಂಗಳೂರು ಪರಿಷತ್ ಸ್ಥಾನ	102
ಯೋಜನಾ ಶಾಖೆಗಳು	8
ಒಟ್ಟು	1,006

ಆಸ್ತಿ ಬಚ್ಚಿಡಲು ಹರಸಾಹಸ • ಅಪಾರ ಪ್ರಮಾಣದ ನಗದು, ಚಿನ್ನ, ಬೆಳ್ಳಿ ವಶಕ್ಕೆ

ಲೋಕಾ ಬಲೆಗೆ ಸರ್ಕಾರಿ ಅಧಿಕಾರಿಗಳು

ಪಾಲಿಕೆ ವಲಯ ಆಯುಕ್ತ ಅಪಾರ್ಟ್‌ಮೆಂಟ್ ಮಾಲೀಕ

ಮೈಸೂರು: ಇಲ್ಲಿನ ಮಹಾನಗರ ಪಾಲಿಕೆ ವಲಯ ಕಚೇರಿ ಆಯುಕ್ತ ನಾಗೇಶ್.ಡಿ ಅವರು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಡಾಲ್ಫಿನ್ ಕಾಲೊನಿಯಲ್ಲಿ ನಿರ್ಮಿಸುತ್ತಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಐದಂತಸ್ತಿನ ಕಟ್ಟಡವು ಲೋಕಾಯುಕ್ತ ಅಧಿಕಾರಿಗಳ ಹುಬ್ಬೇರುವಂತೆ ಮಾಡಿತು.

ಚನ್ನಪಟ್ಟಣ ನಗರಸಭೆ ಪೌರಾಯುಕ್ತರಾಗಿ, ಶ್ರೀರಂಗಪಟ್ಟಣ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ ಬಳಿಕ ಮೈಸೂರಿಗೆ ವರ್ಗಾವಣೆಗೊಂಡಿದ್ದ ಅವರಿಗೆ ಸಂಬಂಧಿಸಿದ ಜಾಗಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ಬೆಳಿಗ್ಗೆ ದಾಳಿ ಮಾಡಿದರು.

ಶ್ರೀರಂಗಪಟ್ಟಣದಲ್ಲಿರುವ ಬಾಡಿಗೆ ಮನೆ, ಬೆಂಗಳೂರಿನ ನಿವಾಸ, ಮೈಸೂರಿನ ಮೇಟಗಳ್ಳಿ ಬಸವನಗುಡಿ ವೃತ್ತದ ಬಳಿ ಇರುವ ವಲಯ 5ರ ಕಚೇರಿಯ ಮೇಲೂ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ನಿರ್ಮಾಣ ಹಂತದಲ್ಲಿರುವ ನಾಗೇಶ್‌ಡಿ ಅವರಿಗೆ ಸೇರಿದ ಅಪಾರ್ಟ್‌ಮೆಂಟ್

ಅಕ್ರಮ ಆಸ್ತಿಯ ಮಾಹಿತಿ

ಅಧಿಕಾರಿ	ಸ್ಥಿರಾಸ್ತಿ	ನಗದು	ಚಿನ್ನಾಭರಣ	ವಾಹನಗಳು	ಇತರ	ಒಟ್ಟು ಅಕ್ರಮ ಆಸ್ತಿ
ಪ್ರಕಾಶ್ ವಿ. (ನಿವೃತ್ತ ಡಿ.ಎಂ.ಡಿ, ಕೆಎಸ್‌ಆರ್‌ಟಿಸಿ, ರಾಮನಗರ)	₹3.97 ಕೋಟಿ	₹17,700	₹15 ಲಕ್ಷ	₹13 ಲಕ್ಷ	00	₹4.26 ಕೋಟಿ
ರವೀಂದ್ರ ಕುಮಾರ್ (ಉಪ ನಿರ್ದೇಶಕ, ಡಯಟ್, ಬೀದರ್)	₹3.50 ಕೋಟಿ	₹32,000	₹27.28 ಲಕ್ಷ	₹33.31 ಲಕ್ಷ	₹1.20 ಲಕ್ಷ	₹4.22 ಕೋಟಿ
ಕಾಶಿನಾಥ್ ಬುದ್ದಪ್ಪ ಭಜಂತ್ರಿ (ಎಇ, ಕೆಆರ್‌ಡಬ್ಲ್ಯುಡಿಎಸ್, ಹಾವೇರಿ)	₹2.61 ಕೋಟಿ	₹20 ಲಕ್ಷ	₹10 ಲಕ್ಷ	₹11.30 ಲಕ್ಷ	₹18.32 ಲಕ್ಷ	₹3.20 ಕೋಟಿ
ಗೋವಿಂದಪ್ಪ ಹನುಮಂತಪ್ಪ ಭಜಂತ್ರಿ (ಸಹಾಯಕ ಕಾರ್ಯದರ್ಶಿ ಕೆಐಎಡಿಬಿ, ಧಾರವಾಡ)	₹1.85 ಕೋಟಿ	₹41.11 ಲಕ್ಷ	₹27.11 ಲಕ್ಷ	₹20 ಲಕ್ಷ	₹6 ಲಕ್ಷ	₹2.79 ಕೋಟಿ
ನಾಗೇಶ್ ಡಿ (ಪಿಆರ್‌ಒ, ಮೈಸೂರು ಮಹಾನಗರ ಪಾಲಿಕೆ)	₹1.95 ಕೋಟಿ	₹98,000	₹29.25 ಲಕ್ಷ	₹13.61 ಲಕ್ಷ	₹33.89 ಲಕ್ಷ	₹2.72 ಕೋಟಿ
ವೆಂಕಟೇಶ್ ಎಸ್.ಮಜುಮ್ದಾರ್ (ಎಸಿ, ವಾಣಿಜ್ಯ ತೆರಿಗೆ ಇಲಾಖೆ)	₹1.63 ಕೋಟಿ	₹1.42 ಲಕ್ಷ	₹39.31 ಲಕ್ಷ	₹17.70 ಲಕ್ಷ	00	₹2.21 ಕೋಟಿ
ಕಮಲ್‌ರಾಜ್ ಪಿ.ಎಚ್. (ಸಹಾಯಕ ನಿರ್ದೇಶಕ, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ)	₹1.32 ಕೋಟಿ	₹1.15 ಲಕ್ಷ	₹15.79 ಲಕ್ಷ	₹32.30 ಲಕ್ಷ	₹18 ಲಕ್ಷ	₹1.99 ಕೋಟಿ
ವಿಠಲ್ ಶಿವಪ್ಪ ಢವಳೇಶ್ವರ್ (ಗ್ರಾಮ ಆಡಳಿತಾಧಿಕಾರಿ, ಬೋರಗಾವ್)	₹1 ಕೋಟಿ	₹1.55 ಲಕ್ಷ	₹3.02 ಲಕ್ಷ	₹3.45 ಲಕ್ಷ	00	₹1.08 ಕೋಟಿ

ಅಕ್ರಮ ಆಸ್ತಿ ₹22.5 ಕೋಟಿ ಪತ್ತೆ

ಒಂದನೇ ಪುಟದಿಂದ...

ರಿಯಲ್ ಎಸ್ಟೇಟ್ ವಹಿವಾಟು: ಮೈಸೂರು ಮಹಾನಗರ ಪಾಲಿಕೆ ಸಾರ್ವಜನಿಕ ಸಂಪರ್ಕಾಧಿಕಾರಿ ನಾಗೇಶ್ ಡಿ. ರಿಯಲ್ ಎಸ್ಟೇಟ್ ವಹಿವಾಟಿನಲ್ಲೂ ಸಕ್ರಿಯವಾಗಿರುವುದು ಲೋಕಾಯುಕ್ತ ಪೊಲೀಸರ ದಾಳಿ ವೇಳೆ ಪತ್ತೆಯಾಗಿದೆ. ಪಾಲಿಕೆ ವಲಯ ಆಯುಕ್ತರ ಹುದ್ದೆಯನ್ನೂ ಹೊಂದಿರುವ ಈ ಅಧಿಕಾರಿ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಡಾಲ್ಫಿನ್ ಕಾಲೊನಿಯಲ್ಲಿ ಐದು ಅಂತಸ್ತಿನ ಅಪಾರ್ಟ್‌ಮೆಂಟ್ ನಿರ್ಮಿಸುತ್ತಿರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ.

ವಾಣಿಜ್ಯ ತೆರಿಗೆ ಇಲಾಖೆಯ ಕೋರಮಂಗಲ ಕಚೇರಿಯ ಸಹಾಯಕ ಆಯುಕ್ತ ವೆಂಕಟೇಶ್ ಎಸ್. ಮುಜುಮ್ದಾರ್ ಬಳಿ ಎರಡು ಮನೆ, ಒಂದು ಎಲ್‌ಪಿಜಿ ಗ್ಯಾಸ್ ಗೋದಾಮು ಇವೆ. ₹39.31 ಲಕ್ಷ ಮೌಲ್ಯದ ಚಿನ್ನಾಭರಣಗಳು ಇವರ ಮನೆಯಲ್ಲಿ ಸಿಕ್ಕಿವೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ದಾವಣಗೆರೆ ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕ ಕಮಲ್ ರಾಜ್ ಬಳಿ ಎರಡು ಮನೆ, ಆರು ನಿವೇಶನ, 1 ಎಕರೆ ಕೃಷಿ ಜಮೀನು, ₹15.79 ಲಕ್ಷ ಮೌಲ್ಯದ ಚಿನ್ನಾಭರಣ ಪತ್ತೆಯಾಗಿದೆ.

ಎರಡು ತಿಂಗಳ ಹಿಂದೆ ₹1.10 ಕೋಟಿ ನಗದನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ಸಿಕ್ಕಿಬಿದ್ದಿದ್ದ ನಿಪ್ಪಾಣಿ ತಾಲ್ಲೂಕಿನ ಬೋರಗಾವ್ ಗ್ರಾಮದ ಗ್ರಾಮ ಆಡಳಿತಾಧಿಕಾರಿ ವಿಠಲ್ ಶಿವಪ್ಪ ಢವಳೇಶ್ವರ್ ಮೇಲೂ ದಾಳಿ ನಡೆದಿದೆ.

ಉಪನಿರ್ದೇಶಕ ನಾಪತ್ತೆ: ಬಾಗಿಲು ಕಾದ ಲೋಕಾಯುಕ್ತ ಪೊಲೀಸರು

ಹಾವೇರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ್ ಆಲದರ್ತಿ ಮನೆಗೆ ಮಂಗಳವಾರ ಬೆಳಿಗ್ಗೆ 6 ಗಂಟೆಗೆ ಬಂದ ಲೋಕಾಯುಕ್ತ ಪೊಲೀಸರು, ಆಲದರ್ತಿ ನಾಪತ್ತೆ ಆಗಿದ್ದರಿಂದ ಬೆಳಿಗ್ಗೆಯಿಂದ ರಾತ್ರಿಯವರೆಗೂ ಬೀಗ ಹಾಕಿದ್ದ ಮನೆಯ ಬಾಗಿಲು ಕಾಯುವಂತಾಯಿತು.

ಶ್ರೀನಿವಾಸ್ ಆಲದರ್ತಿ

ಶ್ರೀನಿವಾಸ್ ಆಲದರ್ತಿ ವಿರುದ್ಧ ಪ್ರಕರಣ ದಾಖಲಿಸಿ-ಕೊಂಡಿದ್ದ ಹಾವೇರಿ ಲೋಕಾಯುಕ್ತ ಪೊಲೀಸರು, ರಾಣೆ-ಬೆನ್ನೂರಿನಲ್ಲಿ ಇರುವ ಮನೆಗೆ ಬಂದಿದ್ದರು. ಶ್ರೀನಿವಾಸ್ ಮನೆಯಲ್ಲಿ ಯಾರೂ ಇಲ್ಲ. ಬೀಗ ಹಾಕಿತ್ತು. ಶ್ರೀನಿವಾಸ್ ಅವರು ಸ್ವಂತ ಊರಾದ ಯಾದಗಿರಿಗೆ ಹೋದ ಮಾಹಿತಿ ಲಭ್ಯವಾಯಿತು. ಅವರು ವಾಪಸು ಬರುವ ನಿರೀಕ್ಷೆಯಲ್ಲಿ ಸ್ಥಳೀಯ ಪೊಲೀಸರ ಜೊತೆಯಲ್ಲಿ ಲೋಕಾಯುಕ್ತ ಪೊಲೀಸರು ಮನೆ ಎದುರು ಕಾದರು. ಊಟ ಹಾಗೂ ತಿಂಡಿಯನ್ನೂ ಮನೆ ಹೊರಗಡೆಯೇ ತಿಂದರು.

‘ಶ್ರೀನಿವಾಸ್ ಅವರ ತಾಯಿ ಯಾದಗಿರಿಯಲ್ಲಿ ತೀರಿಕೊಂಡಿದ್ದು, ಅದಕ್ಕಾಗಿ ಅವರು ಯಾದಗಿರಿಗೆ ಹೋಗಿರುವುದು ಗೊತ್ತಾಗಿದೆ. ಅವರ ಬರುವಿಕೆಗಾಗಿ ಮನೆ ಎದುರು ಕಾದು ಕೂತಿದ್ದೇವೆ. ಅವರು ಬಂದ ಬಳಿಕ ಮನೆ ಬಾಗಿಲು ತೆರೆಸಿ ಪರಿಶೀಲಿಸಲಾಗುವುದು’ ಎಂದು ಲೋಕಾಯುಕ್ತ ಪೊಲೀಸರು ಹೇಳಿದರು.

ಆಲದರ್ತಿ ಅವರ ಕಾರು ಚಾಲಕ ಸಿದ್ದೋಜಿ ಸೂರ್ಯವಂಶಿ, ಕಚೇರಿ ನೌಕರರಾದ ಅನಿಲ ಸುರ್ವೆ ಹಾಗೂ ಜ್ಯೋತಿ ಶಿಗ್ಲಿ ಮನೆ ಮೇಲೂ ದಾಳಿ ಮಾಡಿದ್ದ ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸಿ, ಹಲವು ವಸ್ತುಗಳನ್ನು ವಶಪಡಿಸಿಕೊಂಡರು.

ಫಾರ್ಮ್‌ಹೌಸ್‌ನಲ್ಲಿ ₹ 49 ಲಕ್ಷ ಹಣ ಪತ್ತೆ

ಬೆಳಗಾವಿ: ನಗರ ಸೇರಿ ಜಿಲ್ಲೆಯ ಮೂರು ಕಡೆ ಮೂವರು ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿದಾಗ, ಧಾರವಾಡದ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಡಿಬಿ) ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಗೋವಿಂದಪ್ಪ ಭಜಂತ್ರಿ ಅವರಿಗೆ ಸೇರಿದ ಸವದತ್ತಿ ತಾಲ್ಲೂಕಿನ ಉಗರಗೋಳದ ಫಾರ್ಮ್‌ಹೌಸ್‌ನಲ್ಲಿ ಬಚ್ಚಿಡಲಾಗಿದ್ದ ₹40 ಲಕ್ಷಕ್ಕೂ ಹೆಚ್ಚು ಹಣ ಪತ್ತೆಯಾಗಿದೆ’ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಹಣಮಂತರಾಯ ತಿಳಿಸಿದ್ದಾರೆ.

ವೆಂಕಟೇಶ ಮಜುಮದಾರ್

ಗೋವಿಂದಪ್ಪ



ವಿಠ್ಠಲ ಶಿವಪ್ಪ ಢವಳೇಶ್ವರ

‘₹1.85 ಲಕ್ಷ ಮೌಲ್ಯದ ಸ್ಥಿರಾಸ್ತಿ, ₹ 94.22 ಲಕ್ಷ ಮೌಲ್ಯದ ಚರಾಸ್ತಿಗಳು ಏಳು ಸ್ಥಳಗಳಲ್ಲಿ ಪತ್ತೆಯಾಗಿವೆ. ಇದರೊಂದಿಗೆ ಹಲವು ಸ್ವತ್ತಿನ ದಾಖಲೆಗಳೂ ಸಿಕ್ಕಿವೆ. ಅವರಿಗೆ ಸೇರಿದ ಧಾರವಾಡದ ಸಂಬಂಧಿಯೊಬ್ಬರ ಮನೆಯಲ್ಲೂ ಚಿನ್ನ ಹಾಗೂ ಬೆಳ್ಳಿಯ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಸದ್ಯ ಬೆಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತರಾಗಿ-ರುವ ವೆಂಕಟೇಶ ಮಜುಮದಾರ್ ಅವರ ಬೆಳಗಾವಿಯ ಮನೆ ಮೇಲೂ ದಾಳಿ ಮಾಡಲಾಗಿದೆ. ಈ ಮೊದಲು ಬೆಳಗಾವಿಯಲ್ಲಿ ಕಾರ್ಯನಿರ್ವಹಿಸಿದ್ದ ವೆಂಕಟೇಶ ಐಶಾರಾಮಿ ಮನೆ ಖರೀದಿಸಿದ್ದಾರೆ.

ನಿಪ್ಪಾಣಿ ತಾಲ್ಲೂಕಿನ ಬೋರಗಾಂವ ಗ್ರಾಮ ಲೆಕ್ಕಾಧಿಕಾರಿ ವಿಠ್ಠಲ ಶಿವಪ್ಪ ಢವಳೇಶ್ವರ ಅವರ ಮನೆ, ಕಚೇರಿ, ಸಂಬಂಧಿಕರ ಮನೆ ಸೇರಿ ನಾಲ್ಕು ಕಡೆ ದಾಳಿ ನಡೆದಿದೆ. ವಿಠ್ಠಲ ಅವರು ಎರಡು ತಿಂಗಳ ಹಿಂದೆ ₹1.10 ಕೋಟಿ ಹಣವನ್ನು ದಾಖಲೆಗಳಿಲ್ಲದೆ ಸಾಗಿಸುವಾಗ ಸಿಕ್ಕಿಬಿದ್ದಿದ್ದರು.

ಡಿಟಿಐ ಅಧಿಕಾರಿ ಬಳಿ ₹4 ಕೋಟಿ ಆಸ್ತಿ

ಬೀದರ್: ಇಲ್ಲಿನ ಉಪ ತಹಶೀಲ್ದಾರ್ ಹಾಗೂ ಜಿಲ್ಲಾ ತರಬೇತಿ ಸಂಸ್ಥೆಯ (ಡಿಟಿಐ) ಉಪನಿರ್ದೇಶಕ ರವೀಂದ್ರಕುಮಾರ ರೊಟ್ಟೆ ಅವರು ಅಕ್ರಮವಾಗಿ ₹4 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಗಳಿಸಿರುವುದು ಲೋಕಾಯುಕ್ತ ಪೊಲೀಸರ ಶೋಧ ಕಾರ್ಯದಿಂದ ಗೊತ್ತಾಗಿದೆ.

ಅಕ್ರಮ ಆಸ್ತಿ ಸಂಪಾದನೆ ಮಾಡಿದ್ದಾರೆ ಎಂಬ ದೂರುಗಳ ಮೇರೆಗೆ ಲೋಕಾಯುಕ್ತ ಪೊಲೀಸರು ನಗರದಲ್ಲಿ ಮಂಗಳವಾರ ಅವರ ಕಚೇರಿ ಹಾಗೂ ಗುಂಪಾದಲ್ಲಿರುವ ಮನೆ ಮೇಲೆ ದಾಳಿ ನಡೆಸಿದರು.

‘ರವೀಂದ್ರಕುಮಾರ ರೊಟ್ಟೆ ಅವರು ಬೀದರ್‌ನಲ್ಲಿ ಒಂದು ಮನೆ, ಒಂದು ನಿವೇಶನ, ಬೆಂಗಳೂರಿನಲ್ಲಿ ನಾಲ್ಕು ಅಪಾರ್ಟ್‌ಮೆಂಟ್, ಒಂದು ನಿವೇಶನ ಹಾಗೂ ಚಿನ್ನಾಭರಣ ಹೊಂದಿದ್ದಾರೆ. ಅವುಗಳ ಒಟ್ಟು ಮೌಲ್ಯ ಅಂದಾಜು ₹4 ಕೋಟಿಗೂ ಅಧಿಕವಾಗಿದೆ. ಅವರ ಸೇವಾವಧಿಯಲ್ಲಿ ಗಳಿಸಿದ ಆದಾಯಕ್ಕಿಂತ ಇದು ಹೆಚ್ಚಿದೆ. ಇನ್ನೂ ಪರಿಶೀಲನಾ ಕಾರ್ಯ ನಡೆದಿದ್ದು, ಪೂರ್ಣಗೊಂಡ ನಂತರ ಸಂಪೂರ್ಣ ವಿವರ ಸಿಗಲಿದೆ’ ಎಂದು ಕಲಬುರಗಿ ಲೋಕಾಯುಕ್ತ ಎಸ್‌ಪಿ ಉಮೇಶ ಬಿ.ಕೆ. ತಿಳಿಸಿದ್ದಾರೆ.

ರವೀಂದ್ರ ಕುಮಾರ

ರವೀಂದ್ರ ಅದರು ಬೀದರ್ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಿರಸ್ತೇದಾರ ಹಾಗೂ ಬೆಂಗಳೂರಿನ ಬಿಬಿಎಂಪಿಯಲ್ಲಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದಾರೆ. ಡಿವೈಎಸ್‌ಪಿ ಹನುಮಂತ ನೇತೃತ್ವದಲ್ಲಿ ನಾಲ್ಕು ಖಾಸಗಿ ವಾಹನಗಳಲ್ಲಿ ಸಿಬ್ಬಂದಿ ದಾಳಿ ನಡೆಸಿ, ಶೋಧ ನಡೆಸಿದ್ದಾರೆ.

ಫೋರ್ಜರಿ ಪ್ರಕರಣ: ಟೈಟ್ಲರ್, ಅಭಿಷೇಕ್ ವರ್ಮಾ ಖುಲಾಸೆ

ನವದೆಹಲಿ (ಪಿಟಿಐ): 2009ರಲ್ಲಿ ಗೃಹ ಖಾತೆಯ ರಾಜ್ಯ ಸಚಿವರಾಗಿದ್ದ ಅಜಯ್ ಮಾಕನ್ ಅವರ ಲೆಟರ್‌ಹೆಡ್ ನಕಲಿ ಮಾಡಿದ್ದ ಆರೋಪದಡಿ ದಾಖಲಾಗಿದ್ದ ಪ್ರಕರಣದಿಂದ ಶಸ್ತ್ರಾಸ್ತ್ರ ವ್ಯಾಪಾರಿ ಅಭಿಷೇಕ್ ವರ್ಮಾ ಮತ್ತು ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ಅವರನ್ನು ದೆಹಲಿಯ ನ್ಯಾಯಾಲಯ ಖುಲಾಸೆಗೊಳಿಸಿದೆ ಎಂದು ಅವರ ಪರ ವಕೀಲರು ತಿಳಿಸಿದ್ದಾರೆ.

ಇಬ್ಬರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕಾವೇರಿ ಬವೇಜಾ ಅವರು ಆರೋಪಿಗಳನ್ನು ಖುಲಾಸೆಗೊಳಿಸಿದರು ಎಂದು ವರ್ಮಾ ಪರ ವಕೀಲ ಮಣೀಂದರ್ ಸಿಂಗ್ ತಿಳಿಸಿದರು.

2009ರಲ್ಲಿ ಬ್ಯುಸಿನೆಸ್ ವೀಸಾ ನಿಯಮಗಳನ್ನು ಸರಳಗೊಳಿಸುವಂತೆ ಕೋರಿ ವರ್ಮಾ ಅವರು ಅಜಯ್ ಮಾಕನ್ ಅವರ ಲೆಟರ್‌ಹೆಡ್ ನಕಲಿ ಮಾಡಿ ಪ್ರಧಾನಮಂತ್ರಿಗೆ ಪತ್ರ ಬರೆದಿದ್ದರು ಎಂದು ಆರೋಪಿಸಲಾಗಿದೆ. ಈ ಕುರಿತು ಮಾಕನ್ ನೀಡಿದ್ದ ದೂರಿನ ಅನ್ವಯ, ಸಿಬಿಐ ಪ್ರಕರಣ ದಾಖಲಿಸಿತ್ತು.

‘ಟೈಟ್ಲರ್ ಅವರ ಸಂಪೂರ್ಣ ಸಹಕಾರದಿಂದಲೇ ವರ್ಮಾ ನಕಲಿ ಪತ್ರ ತಯಾರಿಸಿದ್ದರು’ ಎಂದು ಸಿಬಿಐ ತನ್ನ ಚಾರ್ಜ್‌ಶೀಟ್‌ನಲ್ಲಿ ತಿಳಿಸಿತ್ತು.

ವಿಧಾನಸಭೆ ಕ್ಷೇತ್ರಗಳ ಮಾಹಿತಿ

ಕ್ಷೇತ್ರ- ಸಂಡೂರು	
ಒಟ್ಟು ಅಭ್ಯರ್ಥಿಗಳು	6
ಇ. ಅನ್ನಪೂರ್ಣ	ಕಾಂಗ್ರೆಸ್
ಬಂಗಾರು ಹನುಮಂತ	ಬಿಜೆಪಿ
ಒಟ್ಟು ಮತದಾರರು	2,36,402
ಪುರುಷ ಮತದಾರರು	1,17,935
ಮಹಿಳೆ ಮತದಾರರು	1,18,438
ಲಿಂಗತ್ವ ಅಲ್ಪಸಂಖ್ಯಾತರು	29
ಕ್ಷೇತ್ರ- ಶಿಗ್ಗಾವಿ	
ಒಟ್ಟು ಅಭ್ಯರ್ಥಿಗಳು	8
ಯಾಸೀರ್ ಅಹ್ಮದ್ ಖಾನ್ ಪಠಾಣ	ಕಾಂಗ್ರೆಸ್
ಭರತ್ ಬೊಮ್ಮಾಯಿ	ಬಿಜೆಪಿ
ಒಟ್ಟು ಮತದಾರರು	2,37,525
ಪುರುಷ ಮತದಾರರು	1,21,443
ಮಹಿಳೆ ಮತದಾರರು	1,16,076
ಲಿಂಗತ್ವ ಅಲ್ಪಸಂಖ್ಯಾತರು	6
ಕ್ಷೇತ್ರ- ಚನ್ನಪಟ್ಟಣ	
ಒಟ್ಟು ಅಭ್ಯರ್ಥಿಗಳು	31
ಸಿ.ಪಿ. ಯೋಗೇಶ್ವರ್	ಕಾಂಗ್ರೆಸ್
ನಿಖಿಲ್ ಕುಮಾರಸ್ವಾಮಿ	ಜೆಡಿಎಸ್
ಒಟ್ಟು ಮತದಾರರು	2,32,949
ಪುರುಷ ಮತದಾರರು	1,12,324
ಮಹಿಳೆ ಮತದಾರರು	1,20,617
ಲಿಂಗತ್ವ ಅಲ್ಪಸಂಖ್ಯಾತರು	8

ಮುಡಾ ಕಚೇರಿಯಲ್ಲಿ ದೇಸಾಯಿ ಆಯೋಗದಿಂದ ವಿಚಾರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನಗಳ ಹಂಚಿಕೆ ಕುರಿತ ತನಿಖೆಗಾಗಿ ರಾಜ್ಯ ಸರ್ಕಾರವು ನೇಮಿಸಿರುವ ನಿವೃತ್ತ ನ್ಯಾಯಮೂರ್ತಿ ಪಿ.ಎಸ್. ದೇಸಾಯಿ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗವು ಇಲ್ಲಿನ ಮುಡಾ ಕಚೇರಿಯಲ್ಲಿ ಮಂಗಳವಾರ ವಿಚಾರಣೆ ನಡೆಸಿತು.

‘ಬೆಳಿಗ್ಗೆ 11.30ರ ಸುಮಾರಿಗೆ ಸಹಾಯಕರೊಂದಿಗೆ ಬಂದ ನ್ಯಾ. ಪಿ.ಎನ್. ದೇಸಾಯಿ, ಮೊದಲಿಗೆ ಮುಡಾದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಬಳಿಕ 50:50 ಅನುಪಾತದಲ್ಲಿ ಹಂಚಿಕೆಯಾದ ಎಲ್ಲ ನಿವೇಶನಗಳು ಹಾಗೂ ಫಲಾನುಭವಿಗಳ ಪಟ್ಟಿ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳ ಕುರಿತು ರಾತ್ರಿವರೆಗೂ ವಿಚಾರಣೆ ನಡೆಸಿದರು. ನಿವೇಶನಗಳ ಹಂಚಿಕೆಯಲ್ಲಿ ಭಾಗಿಯಾಗಿದ್ದ ಸಿಬ್ಬಂದಿಯಿಂದ ವಿವರಣೆ ಪಡೆದರು’ ಎಂದು ಮೂಲಗಳು ತಿಳಿಸಿವೆ.

ಆಯೋಗದ ಭೇಟಿ ಕಾರಣಕ್ಕೆ ಮಂಗಳವಾರ ಮುಡಾಕ್ಕೆ ಸಾರ್ವಜನಿಕ ಪ್ರವೇಶ ನಿರ್ಬಂಧಿಸಲಾಗಿತ್ತು. ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್ ನೇತೃತ್ವದ ತಂಡವು ಅಗತ್ಯ ಮಾಹಿತಿ ಒದಗಿಸಿತು.

ನಿವೇಶನಗಳ ಹಂಚಿಕೆಯಲ್ಲಿ ಅಕ್ರಮದ ಆರೋಪ ಕೇಳಿಬಂದಿದ್ದರಿಂದ, ರಾಜ್ಯ ಸರ್ಕಾರವು ಜುಲೈ 14ರಂದು ವಿಚಾರಣಾ ಆಯೋಗವನ್ನು ನೇಮಿಸಿತ್ತು. ಅದಾದ ನಾಲ್ಕು ತಿಂಗಳ ಬಳಿಕ ಆಯೋಗವು ಮೊದಲ ಬಾರಿಗೆ ಮುಡಾ ಕಚೇರಿಯಲ್ಲಿ ವಿಚಾರಣೆ ನಡೆಸಿ ಮಾಹಿತಿ ಪಡೆದಿದೆ.

ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್ ಸ್ವಾಗತಿಸಿದರು

ಹರಿದಾಡಿದ 928 ನಿವೇಶನಗಳ ಪಟ್ಟಿ

ಮುಡಾದಲ್ಲಿ 50:50 ಅನುಪಾತದಲ್ಲಿ ಹಂಚಿಕೆಯಾದ ನಿವೇಶನಗಳ ಎರಡನೇ ಪಟ್ಟಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಅದರಲ್ಲಿ ಒಟ್ಟು 928 ನಿವೇಶನಗಳ ಫಲಾನುಭವಿಗಳ ವಿವರಗಳಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ, ಸಿದ್ದರಾಮಯ್ಯ ಆಪ್ತ ಹಿನಕಲ್ ಪಾಪಣ್ಣ ಸೇರಿದಂತೆ ಹಲವರ ಹೆಸರುಗಳು ಪಟ್ಟಿಯಲ್ಲಿವೆ.

ಪಾರ್ವತಿ ಅವರಿಗೆ 14, ರಾಕೇಶ್ ಪಾಪಣ್ಣ ಅವರಿಗೆ 32, ಮಹದೇವ್ – 34, ಎಂ.ರವಿಕುಮಾರ್ – 23, ಮಹೇಂದ್ರ – 19, ದೀಪು ರಾಜೇಂದ್ರ – 14, ಅಬ್ದುಲ್ ವಾಹಿದ್ –14, ಸುನೀತಾ ಬಾಯಿ ಎಂಬವರಿಗೆ 12 ನಿವೇಶನ ನೀಡಲಾಗಿದೆ. ಅಂತೆಯೇ ಕ್ಯಾಥೆಡ್ರಲ್ ಪ್ಯಾರಿಸ್ ಸೊಸೈಟಿಗೆ 48 ಬದಲಿ ನಿವೇಶನ ನೀಡಿರುವ ಮಾಹಿತಿಯೂ ಪಟ್ಟಿಯಲ್ಲಿದೆ.

ಸ್ನೇಹಮಯಿ ಕೃಷ್ಣ ವಿರುದ್ಧ ದೂರು

‘ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವ ಸ್ನೇಹಮಯಿ ಕೃಷ್ಣ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ ಮಂಗಳವಾರ ಇಲ್ಲಿನ ದೇವರಾಜ ಠಾಣೆಗೆ ದೂರು ನೀಡಿದರು.

‘ಬಿ.ಎಂ. ಪಾರ್ವತಿ ಅವರ ನಿವೇಶನ ನೋಂದಣಿಗೆ ಮುಡಾ ತಹಶೀಲ್ದಾರ್ ಅವರೇ ಮುದ್ರಾಂಕ ಶುಲ್ಕ ಕಟ್ಟಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ. ನಿವೇಶನದಾರರು ಉಪನೋಂದಣಾಧಿಕಾರಿ ಕಚೇರಿಗೆ ಹಾಜರಾಗದೇ ವಿನಾಯಿತಿ ಪಡೆದ ಪ್ರಕರಣಗಳಲ್ಲಿ ಕಾವೇರಿ ತಂತ್ರಾಂಶದಲ್ಲಿ ಖರೀದಿದಾರರ ಬದಲಿಗೆ ಮುಡಾ ಅಧಿಕಾರಿಗಳ ಹೆಸರು ನಮೂದಾಗಿರುತ್ತದೆ. ಅದನ್ನು ಮರೆಮಾಚಿ, ಸಿದ್ದರಾಮಯ್ಯ ಅವರನ್ನು ಖಳನಾಯಕರನ್ನಾಗಿ ಬಿಂಬಿಸಲೆಂದೇ ಸುಳ್ಳು ಆರೋಪ ಮಾಡಿದ್ದಾರೆ’ ಎಂದು ದೂರಿದ್ದಾರೆ.

‘₹187 ಕೋಟಿ ವಸೂಲಿ ಮಾಡಿ’

ಒಂದನೇ ಪುಟದಿಂದ...

ರಾಜ್ಯ ಆರೋಗ್ಯ ಇಲಾಖೆಯ ಸುಪರ್ದಿಯಲ್ಲಿ ಒಟ್ಟು ₹1,754 ಕೋಟಿ ವೆಚ್ಚ ಮಾಡಲಾಗಿದೆ. ಇಲ್ಲಿ ನಡೆಸಲಾದ 13 ಖರೀದಿಗಳಲ್ಲಿ ಅಕ್ರಮ ನಡೆದಿದ್ದು, ಸಂಬಂಧಿತ ಕಂಪನಿಗಳಿಂದ ₹17.84 ಕೋಟಿ ವಸೂಲಿ ಮಾಡಬೇಕು. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಮೂಲಕ ನಡೆಸಲಾದ ₹1,963.62 ಮೊತ್ತದ ಖರೀದಿಯಲ್ಲಿ, ₹170 ಕೋಟಿ ಅಕ್ರಮ ನಡೆದಿದೆ ಎಂದು ವರದಿ ಉಲ್ಲೇಖಿಸಿದೆ.

ಒಟ್ಟು 85 ಖರೀದಿ ಒಪ್ಪಂದಗಳಲ್ಲಿ 21 ಕಂಪನಿಗಳು ಭಾಗಿಯಾಗಿವೆ. ಈ ಕಂಪನಿಗಳಿಂದ ನಷ್ಟದ ಮೊತ್ತವನ್ನು ವಸೂಲಿ ಮಾಡಬೇಕು. ಅಕ್ರಮ ಎಸಗುವಲ್ಲಿ ಅಧಿಕಾರಿಗಳು ಮತ್ತು ಇತರರ ಪಾತ್ರ ಏನು ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಸಬೇಕು.

ಬಿಎಸ್‌ವೈ ಅವಧಿಯ ಒಪ್ಪಂದದ ಉಲ್ಲೇಖ

ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಮತ್ತು ಬಿ.ಶ್ರೀರಾಮುಲು ಆರೋಗ್ಯ ಸಚಿವರಾಗಿದ್ದ ಅವಧಿಯಲ್ಲಿ, ಇಬ್ಬರೂ ಅಧಿಕಾರ ದುರುಪಯೋಗದ ಮೂಲಕ ವೈಯಕ್ತಿಕ ಲಾಭ ಮಾಡಿಕೊಂಡಿದ್ದಾರೆ ಎಂದು ಆಯೋಗ ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಆ ಅವಧಿಯಲ್ಲಿ ಖರೀದಿ ಮಾಡಲಾದ ಚೀನಾದ ಕಂಪನಿಯಿಂದಲೂ ವಸೂಲಿ ಮಾಡಬೇಕು ಎಂಬ ಶಿಫಾರಸು ಆಯೋಗದ ವರದಿಯಲ್ಲಿದೆ.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿನ ಕೆಲ ಖರೀದಿ ಒಪ್ಪಂದಗಳೂ ವಸೂಲಿ ಮಾಡಬೇಕಾದ ಪಟ್ಟಿಯಲ್ಲಿವೆ.

ಈ ಪ್ರಕರಣಗಳಲ್ಲಿ ಉನ್ನತ ತನಿಖೆ ಅಥವಾ ಅಪರಾಧ ಪ್ರಕರಣಗಳನ್ನು ದಾಖಲಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ. ಇದರ ಆಧಾರದಲ್ಲಿ ಕ್ರಮ ತಗೆದುಕೊಳ್ಳಲು ಸರ್ಕಾರ ಸಿದ್ಧತೆ ನಡೆಸಿದೆ.

‘ವರದಿಯ ಎರಡನೇ ಭಾಗದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಮತ್ತು ಅದರಲ್ಲಿ ಬಳಕೆಯಾದ ಹಣದ ವಿವರ ಇದೆ. ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಕೋವಿಡ್ ತುರ್ತು ಪ್ರತಿಸ್ಪಂದನಾ ಯೋಜನೆಗಳ ಅನುಷ್ಠಾನದಲ್ಲಿ ಒಟ್ಟು ₹446 ಕೋಟಿಯನ್ನು ವೆಚ್ಚ ಮಾಡಿಯೇ ಇಲ್ಲ. ಇಷ್ಟು ದೊಡ್ಡ ಮೊತ್ತ ಲಭ್ಯವಿದ್ದರೂ ಅದನ್ನು ಬಳಸಿಕೊಳ್ಳದೆ ವ್ಯರ್ಥ ಮಾಡಲಾಗಿದೆ’ ಎಂದು ಆಯೋಗದ ವರದಿ ಹೇಳಿದೆ.

ಬಂಡಿಪೋರಾದಲ್ಲಿ ಮುಂದುವರಿದ ಗುಂಡಿನ ಚಕಮಕಿ, ಉಗ್ರರಿಗೆ ಶೋಧ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ಮಂಗಳವಾರ ಕೂಡ ಗುಂಡಿನ ಚಕಮಕಿ ನಡೆದಿದ್ದು, ಉಗ್ರರಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಉಗ್ರರ ಬಗ್ಗೆ ಲಭಿಸಿರುವ ಖಚಿತ ಗುಪ್ತಚರ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಉತ್ತರ ಕಾಶ್ಮೀರ ಜಿಲ್ಲೆಯ ನಾಗ್ಮಾರ್ಗ್‌ನಲ್ಲಿ ಶೋಧ ಕಾರ್ಯವನ್ನು ಆರಂಭಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭದ್ರತಾ ಪಡೆಗಳತ್ತ ಭಯೋತ್ಪಾದಕರು ಗುಂಡು ಹಾರಿಸಿದ್ದು, ಭದ್ರತಾ ಪಡೆಗಳು ಪ್ರತ್ಯುತ್ತರ ನೀಡಿವೆ. ಈ ಪ್ರದೇಶದಲ್ಲಿ ಉಗ್ರರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

₹29 ಕೋಟಿ ಮೌಲ್ಯದ ಮದ್ಯ ವಶ!

ರಾಮನಗರ/ಚನ್ನಪಟ್ಟಣ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಯಾದ ದಿನದಿಂದ ಇಲ್ಲಿಯವರೆಗೆ ₹29.07 ಕೋಟಿ ಮೌಲ್ಯದ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಪ-ಡಿಸಿಕೊಂಡಿದ್ದಾರೆ.

ಅಕ್ರಮವಾಗಿ ಮದ್ಯ ಸಂಗ್ರಹ ಹಾಗೂ ಪರವಾನಗಿ ಇಲ್ಲದೆ ಸಾಗಾಟಕ್ಕೆ ಸಂಬಂಧಿಸಿದಂತೆ 151 ಪ್ರಕರಣ ದಾಖಲಿಸಲಾಗಿದೆ. ಅಬಕಾರಿ ದಾಳಿ ವೇಳೆ ₹29.07 ಕೋಟಿ ಮೌಲ್ಯದ ವೈನ್ ಹೊರತುಪಡಿಸಿ ₹2.05 ಲಕ್ಷ ಅಬಕಾರಿ ವಸ್ತುಗಳು ಮತ್ತು ₹5.65 ಲಕ್ಷ ಮೌಲ್ಯದ ಮೂರು ವಾಹನಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ. ಇವೆಲ್ಲದರ ಒಟ್ಟು ಮೌಲ್ಯ ₹29.12 ಕೋಟಿ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾಲ್ಲೂಕಿನ ಮಳೂರು ಹೋಬಳಿಯ ಗಂಗೆದೊಡ್ಡಿ ಗ್ರಾಮದ-ಲ್ಲಿರುವ ಮೆ.ಸುಲಾ ವೈನ್ ಯಾರ್ಡ್ ಲಿಮಿಟೆಡ್‌ನ ಗೋದಾಮಿನ ಮೇಲೆ ನ. 8ರಂದು ದಾಳಿ ನಡೆಸಿದ ಅಧಿಕಾರಿಗಳು ಅಬಕಾರಿ ಭದ್ರತಾ ಚೀಟಿ ಮತ್ತು ಬ್ರಾಂಡ್ ಲೇಬಲ್ ಇಲ್ಲದ ಸುಮಾರು 140 ಬಾಕ್ಸ್‌ಗಳಲ್ಲಿದ್ದ ದುಬಾರಿ ಮೌಲ್ಯದ ವಿವಿಧ ಬ್ರಾಂಡ್‌ಗಳ 2.95 ಲಕ್ಷ ಲೀಟರ್ ವೈನ್ ವಶಪಡಿಸಿಕೊಂಡಿದ್ದಾರೆ. ಇದರ ಮೌಲ್ಯವೇ ₹29.06 ಕೋಟಿ ಆಗಿದೆ. ಉಳಿದಂತೆ ವಿವಿಧೆಡೆ ಸಣ್ಣ ಪ್ರಮಾಣದ ಮದ್ಯ ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ವಿಶ್ರಾಂತ ಕುಲಪತಿ ಎಂ.ಎಸ್. ತಿಮ್ಮಪ್ಪ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ, ಶಿಕ್ಷಣ ತಜ್ಞ ಪ್ರೊ.ಎಂ.ಎಸ್.ತಿಮ್ಮಪ್ಪ (83) ಅವರು ಸೋಮವಾರ ತಡರಾತ್ರಿ ನಿಧನರಾಗಿದ್ದಾರೆ.

ಅಕ್ಟೋಬರ್ 11ರಂದು ತಮ್ಮ ನಿವಾಸದಲ್ಲಿ ಕಾಲು ಜಾರಿ ಬಿದ್ದು ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು. ತಕ್ಷಣ ಅವರನ್ನು ಬಿಜಿಎಸ್ ಅಪೊಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಜನಿಸಿದ್ದ ತಿಮ್ಮಪ್ಪ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಹಾಗೂ ಎರಡು ಅವಧಿಗೆ ರಿಜಿಸ್ಟ್ರಾರ್ ಆಗಿಯೂ ಕೆಲಸ ಮಾಡಿದ್ದರು. ಮನೋವಿಜ್ಞಾನ ಪ್ರಾಧ್ಯಾಪಕರಾಗಿದ್ದು, ಹಲವು ಎಂ.ಫಿಲ್ ಮತ್ತು ಪಿಎಚ್‌.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು.

2000ರಲ್ಲಿ ಪುತ್ರಿ ಹಾಗೂ 2007ರಲ್ಲಿ ಪತ್ನಿಯನ್ನು ಕಳೆದುಕೊಂಡಿದ್ದ ತಿಮ್ಮಪ್ಪ, ನಿವೃತ್ತಿಯ ನಂತರ ಏಕಾಂಗಿಯಾಗಿ ವಾಸಿಸುತ್ತಿದ್ದರು.

ಆಕರ್ಷಕ ವ್ಯಕ್ತಿತ್ವ, ಪರಿಣಾಮಕಾರಿ ಪರಸ್ಪರ ಸಂವಹನಕ್ಕೆ ಹೆಸರುವಾಸಿಯಾಗಿದ್ದರು. ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದ ಅವರು, ಸಾರ್ವಜನಿಕ ಚರ್ಚೆಗಳಲ್ಲಿ ಸಕ್ರಿಯರಾಗಿರುತ್ತಿದ್ದರು.

ಜಯನಗರದ ಅವರ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗಳು, ಗಣ್ಯರು ಸೇರಿದಂತೆ ಕುಟುಂಬದ ವರ್ಗದವರು ಅಂತಿಮ ನಮನ ಸಲ್ಲಿಸಿದರು. ಚಾಮರಾಜಪೇಟೆ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಯೋಗಗುರು ಶರತ್

ಮೈಸೂರು: ಇಲ್ಲಿನ ಗೋಕುಲಂ ನಿವಾಸಿ, ಅಷ್ಟಾಂಗಯೋಗ ಗುರು ಶರತ್ ಜೋಯಿಸ್ (53) ಅವರು ಅಮೆರಿಕದ ವರ್ಜೀನಿಯಾದಲ್ಲಿ ಸೋಮವಾರ ತಡರಾತ್ರಿ ಹೃದಯಾಘಾತದಿಂದ ನಿಧನರಾದರು. ಅವರು ಯೋಗಗುರು ಕೆ.ಪಟ್ಟಾಭಿ ಜೋಯಿಸರ ಮೊಮ್ಮಗ. ಚಿಕ್ಕ ವಯಸ್ಸಿನಲ್ಲೇ ಯೋಗದಲ್ಲಿ ಆಸಕ್ತಿ ಬೆಳಸಿಕೊಂಡಿದ್ದ ಅವರು ತಾತನ ಹಾದಿಯಲ್ಲೇ ಸಾಗಿದ್ದರು.

‘ಅವರು ವರ್ಜೀನಿಯಾದ ಬೆಟ್ಟವೊಂದಕ್ಕೆ ತಮ್ಮ ಯೋಗ ವಿದ್ಯಾರ್ಥಿಗಳೊಂದಿಗೆ ಚಾರಣಕ್ಕೆ ತೆರಳಿದ್ದರು. ಸುಸ್ತಾದ ಅವರನ್ನು ಕೆಳಗೆ ಕರೆತರುವಷ್ಟರಲ್ಲಿ ಮೃತಪಟ್ಟಿದ್ದರು’ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರಸ್ವತಿ–ರಂಗಸ್ವಾಮಿ ದಂಪತಿಯ ಪುತ್ರರಾದ ಅವರು, ಜೆಎಸ್‌ಎಸ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್‌ನಲ್ಲಿ ಡಿಪ್ಲೊಮಾ ಪದವಿ ಪಡೆದ ಬಳಿಕ ಹೆಬ್ಬಾಳ ಎರಡನೇ ಹಂತದಲ್ಲಿ ‘ಶರತ್ ಯೋಗ ಕೇಂದ್ರ’ವನ್ನು ಸ್ಥಾಪಿಸಿದ್ದರು. ವಿದೇಶಗಳಿಗೂ ತೆರಳಿ ಯೋಗ ತರಗತಿಗಳನ್ನು ನಡೆಸುತ್ತಿದ್ದರು. ಅವರಿಗೆ ತಾಯಿ, ಪತ್ನಿ, ಮಗ, ಮಗಳು ಇದ್ದಾರೆ.

Infosys®
Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
SACHIN SUNRENDRA JANGAM	ITL018126	148290	66231694	66231738	45
		150063	266541951	266542085	135

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue Letter of Confirmation in lieu of duplicate share certificate(s) to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

November 12, 2024
Bengaluru, India

For **Infosys Limited**
Sd/-
A.G.S. Manikantha
Company Secretary

ಉದ್ಯೋಗ ವಾಣಿ

ಭಾರತ್ ಎಲೆಕ್ಟ್ರಾನಿಕ್ಸ್ / BHARAT ELECTRONICS
QUALITY, TECHNOLOGY, INNOVATION
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಗಾಝಿಯಾಬಾದ್ ಒಂದು ನವರತ್ನ ರಕ್ಷಣಾ ಮಂತ್ರಾಲಯದ ಸಾರ್ವಜನಿಕ ಉದ್ಯಮ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ 05 ವರ್ಷಗಳ ನಿಗದಿತ ಅವಧಿಗೆ ಇಂಜಿನಿಯರ್‌ಗಳ ಆವಶ್ಯಕತೆ ಇದೆ.

ಹುದ್ದೆ / ವೇತನ ಶ್ರೇಣಿ	ವಿದ್ಯಾರ್ಹತೆ / ವಿಷಯ	ಕನಿಷ್ಠ ಅರ್ಹತೆ ಮತ್ತು ಕಾರ್ಯ ಅನುಭವ	ಹುದ್ದೆಗಳ ಸಂಖ್ಯೆ	ಹುದ್ದೆಯ ಮೀಸಲಾತಿ	01.10.2024 ರಂತೆ ಗರಿಷ್ಠ ವಯೋಮಿತಿ	ನಿಯೋಜಿಸುವ ಸ್ಥಳ
ಹಿರಿಯ ಇಂಜಿನಿಯರ್ (ಇ-3) ರೂ. 50,000- 3% - ರೂ. 1,60,000	ಬಿಇ/ಬಿ.ಟೆಕ್ (ಕಂಪ್ಯೂಟರ್ ಸೈನ್ಸ್)	4 ವರ್ಷಗಳು	04	08 (ಸಾಮಾನ್ಯ -04, ಇ.ಹಿ.ವ.-02, ಪ.ಜಾ.-01, ಪ.ಪಂ.-01)	35 ವರ್ಷಗಳು	ಬೆಂಗಳೂರು
	ಬಿಇ/ಬಿ.ಟೆಕ್ (ಎಲೆಕ್ಟ್ರಾನಿಕ್ಸ್)		04			
ಉಪ ಇಂಜಿನಿಯರ್ (ಇ-2) ರೂ. 40,000- 3%- ರೂ. 1,40,000	ಬಿಇ/ಬಿ.ಟೆಕ್ (ಕಂಪ್ಯೂಟರ್ ಸೈನ್ಸ್)	ಶೂನ್ಯ	02	05 (ಸಾಮಾನ್ಯ- 02, ಇ.ಹಿ.ವ.-01, ಪ.ಪಂ.-02)	28 ವರ್ಷಗಳು	ಒಡಿಶಾ (ಚಂಡಿಪುರ)
	ಬಿಇ/ಬಿ.ಟೆಕ್ (ಎಲೆಕ್ಟ್ರಿಕಲ್)		01			ಒಡಿಶಾ (ಚಂಡಿಪುರ)
	ಬಿಇ/ಬಿ.ಟೆಕ್ (ಎಲೆಕ್ಟ್ರಾನಿಕ್ಸ್)		02			ತಮಿಳು ನಾಡು (ಸೂಲುರು, ತಾಂಬರಂ)

ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ 03ನೇ ಡಿಸೆಂಬರ್ 2024 ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಮತ್ತು ಬಿಇಎಲ್ ನಲ್ಲಿ ನೇಮಕಾತಿಯ ಅಧಿಕೃತ ಮಾಹಿತಿಗಾಗಿ ದಯವಿಟ್ಟು ಬಿಇಎಲ್ ಅಧಿಕೃತ ವೆಬ್‌ಸೈಟ್ **www.bel-india.in**ನಲ್ಲಿನ **CAREERS** ಲಿಂಕ್ ನಲ್ಲಿ ವೀಕ್ಷಿಸಿ.

ಹಿರಿಯ ಉಪ ಪ್ರಧಾನ ವ್ಯವಸ್ಥಾಪಕರು (ಮಾ.ಸಂ. ಮತ್ತು ಆಡಳಿತ)

‘ಹರ್ ಎಕ್ ಕಾಮ್ ದೇಶ್ ಕೆ ನಾಮ್’

ಭಾರತ್ ಎಲೆಕ್ಟ್ರಾನಿಕ್ಸ್ / BHARAT ELECTRONICS
QUALITY, TECHNOLOGY, INNOVATION
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ರಕ್ಷಣಾ ಮಂತ್ರಾಲಯದ ಅಧೀನ ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ ತನ್ನ ನೆಟ್‌ವರ್ಕ್ ಮತ್ತು ಸೈಬರ್ ಸೆಕ್ಯೂರಿಟಿ ವಿಭಾಗಕ್ಕೆ ಖಾಯಂ ಆಧಾರದ ಮೇಲೆ ಹಿರಿಯ ಇಂಜಿನಿಯರ್ ಹುದ್ದೆಗೆ ವೃತ್ತಿಪರರ ಆವಶ್ಯಕತೆ ಇದೆ.

ಹುದ್ದೆ/ಶ್ರೇಣಿ	ವಿಷಯ	ಹುದ್ದೆಗಳ ಸಂಖ್ಯೆ	ದಿನಾಂಕ 01.10.2024 ರಂತೆ ಗರಿಷ್ಠ ವಯೋಮಿತಿ	ದಿನಾಂಕ 01.10.2024 ರಂತೆ ಅನುಭವ	ನಿಯೋಜನೆ ಸ್ಥಳ
ಹಿರಿಯ ಇಂಜಿನಿಯರ್ / ಇ – III	ಸೈಬರ್ ಸುರಕ್ಷತೆ / ಮಾಹಿತಿ ಸುರಕ್ಷತೆ / ಮಾಹಿತಿ ತಂತ್ರಜ್ಞಾನ / ಕಂಪ್ಯೂಟರ್ ವಿಜ್ಞಾನ/ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನದಲ್ಲಿ ಬಿ.ಇ / ಬಿ.ಟೆಕ್	7	32 ವರ್ಷಗಳು	4–5 ವರ್ಷಗಳು	ಬೆಂಗಳೂರು
	ಸೈಬರ್ ಸುರಕ್ಷತೆ / ಮಾಹಿತಿ ಸುರಕ್ಷತೆ / ಮಾಹಿತಿ ತಂತ್ರಜ್ಞಾನ / ಕಂಪ್ಯೂಟರ್ ವಿಜ್ಞಾನ / ಎಲೆಕ್ಟ್ರಾನಿಕ್ಸ್ ಮತ್ತು ಸಂವಹನದಲ್ಲಿ ಎಂ.ಇ / ಎಂ.ಟೆಕ್	3		2 ವರ್ಷಗಳು	

ಸಂಗತ ಅನುಭವ ಹೊಂದಿರುವ ಅಭ್ಯರ್ಥಿಗಳು ಮಾತ್ರ **19.11.2024** ರಂದು ಅಥವಾ ಅದಕ್ಕೂ ಮುನ್ನ ಅರ್ಜಿಯನ್ನು ಸಲ್ಲಿಸತಕ್ಕದ್ದು.
ಹೆಚ್ಚಿನ ವಿವರಗಳಿಗೆ ದಯವಿಟ್ಟು ನಮ್ಮ ವೆಬ್‌ಸೈಟ್ **www.bel-india.in** ಅನ್ನು ವೀಕ್ಷಿಸಿ

‘Har Ek Kaam Desh Ke Naam’

‘ಲಂಕೇಶ್ ಬಹುತ್ವಗಳ ಶೋಧ’ ಅಧ್ಯಯನ ಶಿಬಿರದಲ್ಲಿ ಮನದಾಳ ಹಂಚಿಕೊಂಡ ಒಡನಾಡಿಗಳು

‘ಈಗಲೂ ಲಂಕೇಶ್ ಬಗ್ಗೆ ಶೋಧ’

ಪ್ರಜಾವಾಣಿ ವಾರ್ತೆ

ಗೋಷ್ಠಿಯಲ್ಲಿ ಪ್ರತಿಭಾ ನಂದಕುಮಾರ್ ಮತ್ತು ಎಂ.ಎಸ್. ಆಶಾದೇವಿ ಸಮಾಲೋಚನೆ ನಡೆಸಿದರು. ಸುಬ್ಬು ಹೊಲೆಯಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಲಂಕೇಶ್ ಅವರದ್ದು ಸಂಕೀರ್ಣ ವ್ಯಕ್ತಿತ್ವ. ಅವರ ಬಗ್ಗೆ ಪೂರ್ಣವಾಗಿ ಯಾರಿಗೂ ತಿಳಿದಿಲ್ಲ. ಯಾರಾದರೂ ಅವರ ಬಗ್ಗೆ ಗೊತ್ತು ಅಂದರೆ, ಕುರುಡರು ಆನೆಯನ್ನು ಮುಟ್ಟಿನೋಡಿ ಬಣ್ಣಿಸಿದಂತೆ, ಬೊಗಸೆ ನೀರು ಹಿಡಿದು ಸಮುದ್ರದ ಬಗ್ಗೆ ಮಾತನಾಡಿದಂತೆ ಆಗುತ್ತದೆ. ಅವರನ್ನು ಈಗಲೂ ಶೋಧಿಸುತ್ತಿದ್ದೇವೆ...’

–ಹೀಗೆ ಮನದಾಳ ಹಂಚಿಕೊಂಡವರು ಪಿ. ಲಂಕೇಶ್ ಅವರ ಒಡನಾಡಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡ ‘ಲಂಕೇಶ್ ಬಹುತ್ವಗಳ ಶೋಧ’ ಅಧ್ಯಯನ ಶಿಬಿರದ ಎರಡನೇ ದಿನವಾದ ಮಂಗಳವಾರವೂ ಲಂಕೇಶ್ ಅವರ ಕುರಿತು ವಿವಿಧ ಗೋಷ್ಠಿಗಳು ನಡೆದವು. ‘ಎಲ್ಲಿದ್ದೆ ಇಲ್ಲಿತಂಕ’ ಗೋಷ್ಠಿಯಲ್ಲಿ ಮಾತನಾಡಿದ ಲೇಖಕಿ ಪ್ರತಿಭಾ ನಂದ ಕುಮಾರ್, ‘ಲಂಕೇಶ್ ಅವರನ್ನು ಒಟ್ಟಾಗಿ ಗ್ರಹಿಸಲು ನನಗೂ ಸೇರಿ ಯಾರಿಗೂ ಸಾಧ್ಯವಾಗಿಲ್ಲ. ಅವರ ಲಂಕೇಶ್ ಪತ್ರಿಕೆಯ ಎರಡನೇ ಪುಟದಲ್ಲಿ ಪ್ರಕಟಿಸುತ್ತಿದ್ದ ಅಂಕಣ ಬರಹದಲ್ಲಿ ನನಗೂ ಅವಕಾಶ ನೀಡಿದ್ದರು. ಸ್ತ್ರೀವಾದ, ಪತಿವ್ರತೆ ಸೇರಿ ವಿವಿಧ ವಿಷಯಗಳ ಬಗ್ಗೆ ಅಂಕಣ ಬರೆಸಿದರು. ನನಗೆ ಒಂದು ಗುರುತು ನೀಡಿದ್ದೇ ಲಂಕೇಶ್ ಪತ್ರಿಕೆ ಹಾಗೂ ಲಂಕೇಶ್. ಅವರ ಬಳಿ ಖರೀದಿಸಿದ ಸಂಗೀತ ಪರಿಕರ ಹಾಗೂ ಅವರು ಕೊಡಿಸಿದ ಬ್ಯಾಗ್ ಈಗಲೂ ನನ್ನ ಬಳಿಯಿದೆ’ ಎಂದರು.

ಭಾವುಕರಾದ ಕವಿ ಸುಬ್ಬು ಹೊಲೆಯಾರ್, ‘ಇಡೀ ಕರ್ನಾಟಕದ, ಈ ಸಮಾಜದ ಕಣ್ಣು ತೆರೆಸಿದ್ದು ಲಂಕೇಶ್. ಕನ್ನಡಿಗರ ಮನಸ್ಸನ್ನು ಅವರು ಪ್ರೇರೆಪಿಸಿದರು. ಬಸವಣ್ಣ, ಕುವೆಂಪು ಹಾಗೂ ಸಂವಿಧಾನದ ಆಶಯವನ್ನು ಅವರು ಎದೆಗೆ ಒತ್ತಿಕೊಂಡಿದ್ದರು. ಸದಾ ನಿಶ್ಯಕ್ತರ ಪರವಾಗಿ ಅವರು ನಿಲ್ಲುತ್ತಿದ್ದರು. ಇಷ್ಟಾಗಿಯೂ ಕನ್ನಡ ಸಾಹಿತ್ಯವು ಮತ್ತೆ ಮತ್ತೆ ‘ಇಂತಹವರನ್ನು ದೂರ ಇಡುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಲಂಕೇಶ್ ಅವರ ಒಡನಾಡಿ ಮೂಡಲ ಗಿರಿಯಪ್ಪ, ‘ಕೆಲಸ ಇಲ್ಲದೆ ಅಲೆಯುತ್ತಿದ್ದಾಗ ಸ್ನೇಹಿತನೊಬ್ಬ ಅವರ ಬಳಿ ಕೆಲಸಕ್ಕೆ ನನ್ನನ್ನು ಸೇರಿಸಿದ. 16 ವರ್ಷಗಳು ಅವರ ಜತೆಯಲ್ಲಿದ್ದೆ. ಮನೆಗೆ ಮುಂಗಡ ಹಣ ಪಾವತಿಸುವಾಗ, ಮಕ್ಕಳನ್ನು ಶಾಲೆಗೆ ಸೇರಿಸುವಾಗ ಇಂಥ ಹಲವು ಸಂದರ್ಭಗಳಲ್ಲಿ ಆರ್ಥಿಕ ಸಹಾಯ ಮಾಡುವ ಮೂಲಕ ನೆರವಾಗಿದ್ದರು’ ಎಂದರು.

ಅಧ್ಯಯನ ಶಿಬಿರದ ನಿರ್ದೇಶಕಿಯೂ ಆಗಿರುವ ಲೇಖಕಿ ಎಂ.ಎಸ್. ಆಶಾದೇವಿ, ‘ಲಂಕೇಶ್ ಪತ್ರಿಕೆಯಲ್ಲಿ ಮಹಿಳೆಯರಿಗೂ ಹೆಚ್ಚಿನ ಅವಕಾಶ ನೀಡಲಾಗಿತ್ತು. ಇದರಿಂದ ಹಲವು ಲೇಖಕಿಯರು ಸಾಹಿತ್ಯ ಲೋಕದಲ್ಲಿ ಪರಿಚಿತರಾದರು. ಅವರು ತನ್ನ ಜತೆಯಲ್ಲಿನ ಎಲ್ಲ ಲೇಖಕ ಹಾಗೂ ಲೇಖಕಿಯರಿಗೆ ನೈತಿಕ ಬಲ ತುಂಬಿದ್ದರು’ ಎಂದರು.

ಭೂ ಸ್ವಾಧೀನ ಕೈಬಿಡಲು ರೈತರ ಒತ್ತಾಯ

ಪ್ರಜಾವಾಣಿ ವಾರ್ತೆ

ಫಲವತ್ತಾದ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ಮುಖ್ಯಮಂತ್ರಿಗಳಿಗೆ ನೂರಾರು ರೈತರು ಕೊಡಿಗೆಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಆಂಜನಮೂರ್ತಿ ಹಾಗೂ ಪಿಡಿಒ ಸಾವಿತ್ರಮ್ಮ ಮುಖಾಂತರ ಮನವಿ ಸಲ್ಲಿಸಿದರು.

ನೆಲಮಂಗಲ: ಫಲವತ್ತಾದ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಸ್ವಾಧೀನಪಡಿಸಿಕೊಳ್ಳಬಾರದು, ಬದಲಿಗೆ ಕೃಷಿ ಚಟುವಟಿಕೆಗಳಿಗೆ ಪೂರಕ ಯೋಜನೆಗಳನ್ನು ರೂಪಿಸುವಂತೆ ಒತ್ತಾಯಿಸಿ ತಾಲ್ಲೂಕಿನ ಕೊಡಿಗೆಹಳ್ಳಿ ಸುತ್ತಮುತ್ತಲಿನ ಗ್ರಾಮಗಳ ರೈತರು ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು.

ಕೆಂಚನಪುರ, ಬಳಗೆರೆ ಗ್ರಾಮಸ್ಥರು ಹಾಗೂ ವಿವಿಧ ರೈತ ಸಂಘಟನೆಗಳ ನೂರಾರು ಕಾರ್ಯಕರ್ತರು ಕೊಡಿಗೆಹಳ್ಳಿಯ ಲಕ್ಷ್ಮಣ ಸ್ವಾಮೀಜಿ ಮಠದಿಂದ ಕಾಲ್ನಡಿಗೆಯ ಮೂಲಕ ಪಂಚಾಯತಿ ಕಚೇರಿವರೆಗೆ ತೆರಳಿ ಅಧ್ಯಕ್ಷ ಆಂಜನಮೂರ್ತಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಾವಿತ್ರಮ್ಮ ಅವರಿಗೆ ಮನವಿ ಸಲ್ಲಿಸಿದರು. ಕೃಷಿ ಭೂಮಿಯನ್ನು ಸ್ವಾಧೀನವನ್ನು ಕೈಬಿಡಿ. ಅದೇ ಜಮೀನುಗಳಲ್ಲಿ ಕೃಷಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಂತಹ ಕಾರ್ಯಕ್ರಮ, ಯೋಜನೆಗಳನ್ನು ರೂಪಿಸಿ. ಕೃಷಿಕರನ್ನು ಮಾನಸಿಕವಾಗಿ ಬೆಂಬಲಿಸಬೇಕು ಎಂದು ಗ್ರಾಮದ ರೈತ ಮುಖಂಡ ಡಾ.ಜಿ. ಬೈರೇಗೌಡ ವಿನಂತಿಸಿದರು.

ಬಳಗೆರೆ ಗ್ರಾಮಸ್ಥರಾದ ಬಿ.ಎಚ್. ರಾಜು, ‘ಕೈಗಾರಿಕೆಗಳು ಬಂದರೆ, ಈ ಭಾಗದ ಅರಣ್ಯ, ಕೆರೆ ಕುಂಟೆ, ಪರಿಸರ, ಜೀವವೈವಿಧ್ಯಕ್ಕೆ ಹಾನಿಯಾಗುತ್ತದೆ’ ಎಂದರು

3M INDIA LIMITED

CIN: L31300KA1987PLC013543, Regd Office: 48-51, Electronics City, Hosur Road, Bengaluru - 560100 Website: www.3m.com/in

Extract of the Financial Results for the quarter and half year ended 30 September 2024

(Rs. in Lakhs, except per share data, unless otherwise stated)

Particulars	3 months ended 30 September 2024 (Unaudited)	6 months ended 30 September 2024 (Unaudited) (refer note 4)	3 months ended 30 September 2023 (Unaudited) (refer note 4)	12 months ended 31 March 2024 (Audited) (refer note 4
Total income from operations (including other income)	1,12,896.87	2,19,729.61	1,05,695.59	4,26,765.33
Net Profit for the period (before tax, Exceptional and / or Extraordinary items)	18,310.92	39,407.43	19,591.33	78,121.42
Net Profit for the period before tax (after Exceptional and / or Extraordinary items)	18,310.92	39,407.43	19,591.33	78,121.42
Net Profit for the period after tax	13,378.08	29,093.03	14,611.49	58,341.68
Total comprehensive income for the period [Comprising Profit / (Loss) for the period (after tax) and other comprehensive income (after tax)]	13,344.75	29,026.37	14,621.73	58,208.36
Equity share capital	1,126.51	1,126.51	1,126.51	1,126.51
Reserves (excluding revaluation reserves as per Ind AS)				2,13,563.83
Earnings per share (in Rs.) (of Rs. 10/- each)				
a) Basic (in Rs.)	118.76	258.26	129.71	517.90
b) Diluted (in Rs.)	118.76	258.26	129.71	517.90

Notes:

1. The above unaudited financial results of 3M India Limited have been reviewed by the Audit Committee and thereafter approved by the Board of Directors at their meeting held on 12 November 2024.
2. The above is an extract of the detailed format for the unaudited financial results for the quarter and half year ended 30 September 2024 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter and half year ended 30 September 2024 are available on the BSE Limited website (www.bseindia.com), the National Stock Exchange of India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.
4. The Boards of Directors of the Company and 3M Electro and Communication India Private Limited (3M E&C), wholly owned subsidiary of the Company, at their meetings held on 17 September 2021 had approved the Scheme of Amalgamation of 3M E&C with the Company under Sections 230 to 232 of the Companies Act 2013 read with the Companies (Compromises, Arrangements and Amalgamations) Rules, 2016. The Scheme of Amalgamation was approved by the National Company Law Tribunal (NCLT) vide its orders dated 8 August 2024 (Bangalore Bench) and 25 August 2023 (Chennai Branch) ('the Scheme') with retrospective appointed date of 1 April 2023.
   Accordingly, the corresponding amounts for the quarter ended 30 September 2023 and year ended 31 March 2024 have been restated by the Company after recognising the effect of the scheme as per the applicable accounting standards.
   The amalgamation has been accounted in accordance with Appendix C of Ind AS 103 – 'Business Combinations' as common control transaction using the pooling of interest method. Accordingly, all the assets, liabilities and reserves of 3M E&C as on 1 April 2023 were transferred to the Company at the book values appearing in the consolidated books of the Company immediately before the amalgamation and the value of investment was cancelled.

By Order of the Board
For 3M India Limited

Place: Bengaluru
Date: 12 November 2024

Ramesh Ramadurai
Managing Director

ವಿದ್ಯಾರ್ಥಿಗಳಿಗೆ ಆಧಾರ್ ರೀತಿಯ ‘ಅಪಾರ್’

ಒಂದನೇ ಪುಟದಿಂದ..

ಪೋಷಕರ ಸಹಿಗಾಗಿ ಈಗಾಗಲೇ ಶಾಲೆಗಳಿಂದ ಅವರಿಗೆ ಒಪ್ಪಿಗೆ ಪತ್ರ ರವಾನಿಸಲಾಗಿದೆ. ರಾಜ್ಯದ ಎಲ್ಲ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೂ ಅಪಾರ್ ಐ.ಡಿ ವಿಸ್ತರಣೆ ಆಗುತ್ತಿದೆ. ಐ.ಡಿ ಸೃಜಿಸಲು ಅನುಕೂಲ ವಾಗುವಂತೆ ಈಗಿರುವ ಯುಡೈಸ್ ತಂತ್ರಾಂಶದಲ್ಲಿ ಈಗಾಗಲೇ ಮಾಡ್ಯೂಲ್ ಸೇರ್ಪಡೆ ಮಾಡಲಾಗಿದೆ. ಶಾಲೆಯ ಮುಖ್ಯಸ್ಥರು ಮತ್ತು ಸಿಬ್ಬಂದಿಗೆ ತರಬೇತಿ ನೀಡಬೇಕು. ಐ.ಡಿ ಬಗ್ಗೆ ಯಾವುದಾದರೂ ಸಮಸ್ಯೆ ಉದ್ಭವಿಸಿದರೆ ಸಾಮಾನ್ಯ ಸೇವಾ ಕೇಂದ್ರಗಳನ್ನು (ಸಿಎಸ್‌ಸಿ) ಸಂಪರ್ಕಿಸಿ ತಾಂತ್ರಿಕ ಸಹಾಯ ಪಡೆದುಕೊಳ್ಳುವಂತೆ ಶಿಕ್ಷಣ ಇಲಾಖೆ ಈಚೆಗೆ ಆದೇಶ ಹೊರಡಿಸಿದೆ.

ಏನಿದು ಅಪಾರ್?

ಒಂದನೇ ಪುಟದಿಂದ...

ಇದರಲ್ಲಿ ಆತನ ಇಡೀ ಶೈಕ್ಷಣಿಕ ಜಾತಕವೇ ಅಡಗಿರುತ್ತದೆ. ಪೂರ್ವ ಪ್ರಾಥಮಿಕ ಶಾಲೆಯಿಂದ ಉನ್ನತ ಶಿಕ್ಷಣದವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಈ ಐ.ಡಿ ಕಾರ್ಡ್ ನೀಡಲಾಗುತ್ತದೆ. ವಿದ್ಯಾರ್ಥಿಯ ಹೆಸರು, ವಿಳಾಸ, ಜನ್ಮದಿನ, ಲಿಂಗ, ಭಾವಚಿತ್ರ, ಕ್ರೀಡಾ ಚಟುವಟಿಕೆ, ಶಿಕ್ಷಣ ಸಾಲ, ಪ್ರಶಸ್ತಿ ಸೇರಿದಂತೆ ಇತ್ಯಾದಿ ಶೈಕ್ಷಣಿಕ ಮಾಹಿತಿ ಡಿಜಿಟಲ್ ರೂಪದಲ್ಲಿರುತ್ತದೆ. ಇದರೊಂದಿಗೆ ಎಲ್ಲಾ ಪರೀಕ್ಷೆಗಳ ಫಲಿತಾಂಶ, ಶೈಕ್ಷಣಿಕ ಸಾಧನೆ, ಆರೋಗ್ಯ ಕಾರ್ಡ್, ವಿದ್ಯಾರ್ಥಿ ವೇತನ, ಒಲಿಂಪಿಯಾಡ್‌ಗಳ ಶ್ರೇಯಾಂಕ, ವಿಶೇಷ ಕೌಶಲ, ತರಬೇತಿ, ಪದವಿ, ರಿವಾರ್ಡ್ ಮುಂತಾದ ಮಾಹಿತಿಗಳನ್ನು ಒಳಗೊಂಡಿರುತ್ತದೆ. ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ದಾಖಲೆಗಳೆಲ್ಲವೂ ಡಿಜಿಟಲ್ ಲಾಕರ್‌ಗಳಲ್ಲಿ ಭದ್ರವಾಗಿರುತ್ತವೆ.ಈ ಎಲ್ಲ ಮಾಹಿತಿಯನ್ನು ಕೇಂದ್ರ ಶಿಕ್ಷಣ ಸಚಿವಾಲಯ ಸುರಕ್ಷಿತವಾಗಿ ಇಟ್ಟಿರುತ್ತದೆ. ಈ ಮಾಹಿತಿಯನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುತ್ತದೆ.

ಕನ್ನಡದಲ್ಲಿ ತಾಂತ್ರಿಕ ಕಾರ್ಯಾಗಾರ

ಬೊಮ್ಮನಹಳ್ಳಿ: ತಾಂತ್ರಿಕ ಶಿಕ್ಷಣದ ಉತ್ತೇಜನ ಮತ್ತು ಕೈಗಾರಿಕೆ 4.0 ಕ್ಷೇತ್ರದಲ್ಲಿ ಹೊಸ ಆವಿಷ್ಕಾರ ಗಳನ್ನು ಪರಿಚಯಿಸಲು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಪ್ರಾಯೋಜಿತ ‘ವಾಣಿ’ ಎಂಬ ಎರಡು ದಿನಗಳ ರಾಷ್ಟ್ರಮಟ್ಟದ ತಂತ್ರಜ್ಞಾನ ಕಾರ್ಯಾಗಾರ ಬೊಮ್ಮನಹಳ್ಳಿಯ ಆಕ್ಸ್‌ಫರ್ಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಿತು.

ಕಾರ್ಯಾಗಾರವು ಕನ್ನಡದಲ್ಲೇ ನಡೆಯುತ್ತಿರುವುದು ವಿಶೇಷ. ಜತೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ತಾಂತ್ರಿಕ ಜ್ಞಾನವನ್ನು ವಿಸ್ತರಿಸಲು ಇದು ಒಂದು ದೊಡ್ಡ ವೇದಿಕೆಯಾಗಿದೆ ಎಂದು ಆಯೋಜಕರು ತಿಳಿಸಿದರು.

ಗ್ರಾಮೀಣ ವಿದ್ಯಾರ್ಥಿಗಳು ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಇಂಗ್ಲಿಷ್ ಭಾಷೆ ತೊಡಕಾಗಿ ಪರಿಣಮಿಸಿದೆ. ಹಾಗಾಗಿ ತಾಂತ್ರಿಕ ಭಾಷೆಯನ್ನು ಸುಲಭವಾಗಿ ಅರ್ಥವಾಗಿಸಲು ಈ ಕಾರ್ಯಾಗಾರವನ್ನು ಕನ್ನಡದಲ್ಲೇ ನಡೆಸಲಾಗುತ್ತಿದೆ ಎಂದು ಕಾಲೇಜಿನ ಪ್ರಾಂಶುಪಾಲ ಹೆಚ್.ಎನ್. ರಮೇಶ್ ತಿಳಿಸಿದರು.

‘ಇಂದಿನ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಒಂದು ವಿಷಯದಲ್ಲಷ್ಟೇ ಪರಿಣತಿ ಪಡೆದರೆ ಸಾಲದು. ಬಹು ಶಿಸ್ತೀಯ ಜ್ಞಾನ, ಕೌಶಲದ ಅವಶ್ಯಕತೆ ಇಂದು ಇದೆ. ಆಗ ಮಾತ್ರವೇ ಉದ್ಯೋಗವಕಾಶಗಳು ದೊರೆಯಲು ಸಾಧ್ಯ. ಈ ದೃಷ್ಟಿಯಿಂದಲೂ ಈ ಕಾರ್ಯಾಗಾರವನ್ನು ವಿನ್ಯಾಸಗೊಳಿಸಲಾಗಿದೆ’ ಎಂದು ಅವರು ವಿವರಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

Job Opportunities at Silverline Diagnostics

A reputed Diagnostics Centre is seeking qualified, experienced, & talented candidates for the following positions:

- Sr. Staff Nurse MRI/CT – Female
- Sr. Lab Technician – Male or Female
- Medical Transcriptionist – Male or Female
- Billing, Customer Service/PR – Female
- Accounts & HR executives – Male or Female
- Marketing Executive - Male

Candidates with relevant experience in the respective field/industry can attend a walk-in interview. Preference will be given to candidates who can join immediately. Attractive salary Commensurate with experience. Salary will be in line with industry standards.

CMR Main Road, HRBR Layout 3rd Block, Kalyan Nagar, Bengaluru, Karnataka 560043

Interested Candidates can apply to
hr@silverlinediagnostics.com
+91 77956 37576

HOSMAT HOSPITAL

HOSMAT HOSPITAL, is Recruiting the following Medical Professionals at HOSMAT Main Unit, Magrath Road, Second Unit at Ring Road, Hennur Junction and Third Unit of Hosmat at Sadashivanagar, Palace Orchards, No.18, Bellary Main (Airport) Road.

1. General Surgeon with Laparoscopic and Trauma experience
2. Anesthetists and Intensivists
3. Neurologist and Stroke specialist
4. Orthopaedic Surgeon with Trauma and Sub Speciality experience
5. Radiologist
6. Urologist
7. Diabetologis
8. Nephrologist
9. Oncologist – Surgical and Medical
10. ENT – Surgeon
11. Medical & Surgical Gastroenterologist
12. CMO & Emergency Medicine Doctors
13. Operations Manager
14. Marketing Executives with Hospital experience
15. OT Scrub Nurses
16. ICU Nurses
17. Medical Transcriptionists
18. Rehabilitation Center – Manager with relevant experience
19. Chemotherapy Nurse
20. Billing Executive – With ECHS Experience
21. Billing & Recovery Executives with Hospital Experience
22. Front office Executive with Hotel/ Hospital Exp
23. Patient Care Coordinator

Medical and Surgical Specialty Groups are welcome to respond.

Call: 080 24497508/ 91084 50312
coordinatorhosmat@gmail.com; hr@hosmathospitals.com

A MALE AND LADY DOCTOR Wanted For Private Practice. For More Details Please Contact: 9972280981.

WANTED EXPERIENCED FEMALE For`BILLING and FEMALE HELPER for Store Medicine Packing`in Medical Distribution Company. Near Sunkadakatte`& Surrounding Areas. Call: 9900543702

Wanted

Existing HYDRO POWER PLANT IN KARNATAKA needs Engineers for Expansion in SOLAR Energy Sector, in Karnataka & Maharashtra

WANTED

PROJECT MANAGER

Identifying & Execution the Solar project locations initially 5 MW and Expansion on completion one by one. Having good knowledge of Govt. Policies and liason.

DIPLOMA ENGINEERS - MECHANICAL & ELECTRICALS

As trainees / fresher's Apply with detailed Bio data.

Box No. JA381 within 10 days

WANTED FEMALE Office Assistant Qulification any Degree, Good Communication Skills English, Hindi in around Rajajinagar: 9108458798/ 9845579620

Accounts & Finance

WANTED ACCOUNTANT B.Com with minimum 03 Years experience, working knowledge of Tally and MS Office for immediate appointment at The Auro School (Managed by Sri Aurobindo Complex Trust), Kanakapura Main Road.Contact: The Secretary, Mob:9880295312, send your resume to Email: sactmsf@gmail.com

Hotel

UNCLE'S KITCHEN Restaurants require immediately RESTAURANT MANAGER, WAITERS+ HELPERS. Best Salary+ Accommodation+ Food. Call: 99000-54468

Receptionist/ Secretary

FEMALE RECEPTIONIST Wanted-for Apartment Marketing Office in Lottegollahalli, Bangalore- 560094. Candidates must be fluent in Kannada, English and Hindi. Post resume to prashy.r7779@gmail.com

Factory

JOB OPENINGS at an ISO-Certified Company located in Jigani seeking qualified candidates for the following positions: 1. General manager- operations (machine shop, fabrication and machine building) 2. Purchase Engineer -Castings and sheet metal 3. Production Supervisor- Experience in fabrication and machine shop operations. 4. Stores executive- Relevant experience preferred. 5. Quality supervisors in machined parts and sheet metal 6. CNC Programmer with CAD CAM knowledge 7. CAD designer with machine tool experience 8. Fresh Graduate Engineers- Mechanical and Electrical disciplines. 9. Diploma and ITI Engineers- electrical and fitters To Apply: Send your resume to info@excelwirecut.com Or Contact: 9686198499

General

WANTED MARKETING/ Collection Executive @ Seshadripuram, Bangalore. Any degree having 3/4 years of experience in the finance field. 2 wheeler with valid DL must. Contact 9972555552

Teachers/ Professors

EDUCENTRIX Smart Education Solutions
No.600, Bhuwaneshwar Nagar, R.T. Nagar Post, Bengaluru - 560 032

VACANCIES OPEN FOR REPUTED SCHOOLS IN BANGALORE

REQUIRED

1. Principal & Vice Principal
Qualification: B.Com/ BA/ B.Sc/ M.Sc/M.Com/ B.Ed/M.Ed
Experience Min 5 years
2. Academic Co-ordinators
Qualification: BA/B.Com/ B.Sc/ B.Ed/M.Ed Preferred
Experience: Min 3 years
3. High School Teachers
Qualification: BA/MA/B.Sc/ M.Sc / B.Ed
Experience: Min 3 years
4. Primary/ Middle Primary Teacher
Qualification:BA/B.Sc/B.Com TTE / TCH Preferred
Experience: Min 1 year / Fresher
5. NTT Trained Teachers
Qualification: NTT/MTT/ TCM/D.Ed
Experience: Min 1 year/ Fresher
6. PE Teachers
Qualification: BP.Ed / MP.Ed
Experience: Min 1 year/ Fresher
7. Accountants
Qualification: B.Com/M.Com (Tally) with experience
Experience: Min 1 year
8. Cashier
Qualification: PUC/Diploma/ Graduate with experience
Experience: Min 1 year / Fresher
9. Computer Teacher
Qualification: BCA/Diploma in Computer Science
Experience: Min 1 year / Fresher

SALARY AS PER QUALIFICATION & EXPERIENCE

FOR MORE QUERIES CALL:
+91 99000 46660
+91 82776 54873
E-mail: info@educentrix.in

WANTED LADY Teachers with good English fluency and interested in Teaching English/ EVS/ Computer for Primary classes for a school with 58 years standing in Srirampuram. Contact: 9353382686 (B/W 9.00 am to 6.00 pm)

SRI_ANNAPURNA VIDYAANIKETAN, Opp.PES University, Veerabhadra-nagar, BSK 3rd Stage, Bangalore. REQUIRED-Social, Hindi & English TEACHERS for Primary & High School. Contact-9449834541.

WANTED HIGHER-PRIMARY Hindi, Mathematics and`High School,English Teacher for`a Reputed Institution`in Sunkadakatte, Magadi Main-Road. Contact: 9845892062

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Sanjaynagar

SITE AVAILABLE 60 by 40 for sale near Sanjaynagar main road. Facing south. Call 9986023257.

RENTAL PROPERTIES

Accommodation Available

Commercial

SPACE (650 Sq ft) for rent in BEML 3rd stage RR Nagar Contact Owner: 73493 01248

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

MATRIMONIAL

Brides Wanted

SC/ ST

"SC-AK (RIGHT) 26,BE, Software Engineer, Bangalore requires well Employed Bride from good family. 7760388034/ 9242135834"

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME

I, **NIRMA** D/o Bhanaram presently residing at No. 245, Bagalur, Jala Hobli, Bengaluru-562149 and holding Indian Passport no. L7965265, issued at Bangalore on 25-03-2014, have changed my name to **NIRMA B** vide affidavit dated 12.11.2024, before notary S.R. Ravikumar, Bengaluru.

I,BHAGYA LAXMI C Residing at`No.318, Srinivasa`F-301, 11th Main, 6th Cross, RBI.Layout, J.P.Nagar 7th`Phase, Bangalore-560078 have`changed my`Name`to MARAM BHAGYALAKSHMI vide`Affidavit Dtd:12.11.2024 Sworn`Before Notary G.R.Rajanna, Bangalore

I, ROOPASHREE Residing`at No.78, 3rd`Main, 4th`Cross, KSRTC Layout, Chikkalasandra, Bengaluru-560061 have changed my`name`to ROOPASHREE JAYANNA vide`affidavit dtd:12.11.2024 Sworn Before Notary H.S.Sakalesh Aradhya, Bengaluru.

PUBLIC NOTICE

PUBLIC NOTICE

My client ('Client') is desirous of acquiring the immovable property more particularly described in the 'Schedule' hereunder and is hereinafter referred to as the 'Schedule Property' from Mr. Anant Singare and Mrs. Shefali Sondhi ('Owners'). The Owners have represented to my Client that the Owners are the joint owners of the Schedule Property and have a clear and marketable title to it, with unrestricted rights of alienation over the same.

Notice is hereby given to the general public that any persons other than the Owners, asserting any right, title, charge, lien, claim/s, enforceable right or any interest whatsoever in respect of the Schedule Property and/or has any objections of any nature to the aforesaid transaction, should lodge such claim and/or objections in writing to the undersigned, together with supporting documents within 10 days hereof, failing which it would be presumed that no valid claims or objections subsists; and my Client would proceed to complete the transaction with the present Owners thereof, subject to compliance with other legal and statutory formalities.

SCHEDULE
(Description of the Schedule Property)

All that piece and parcel of residential apartment having E-Khata number 150200202600522664, bearing Flat No. H501, on the 5th floor, in Tower 'H', in the project known as **"GODREJ AQUA"**, having a super built up area of 158.09 square meters (1701.64 square feet) which is inclusive of (i) carpet area of **108.14 square meters (1164.01 square feet)**; (ii) Balcony area of **9.09 square meters (97.84 square feet)**; and (iii) proportionate share in (a) the Common Area and (b) the Common Amenities and Facilities along with One Covered car parking space bearing No. H-27 in Basement I alongwith 45.08 square meters (485.24 square feet) undivided share in land comprised in Survey No.130/6 and Survey No. 131, situated at Hosahalli Village, Jala Hobli, Bangalore North Taluk, Bangalore Urban District, Karnataka.

CHETAN P. PADIVAL, Advocate,
107/58, 4th Cross, Gavipuram Extn.,
Bangalore – 560004. Ph.: +91 98450 53113.
Email: cpadival@gmail.com
Date: November 13, 2024

DH DECCAN HERALD Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
+91 9901641752 | 080- 45557163/164

ತೋಟಗಾರಿಕಾ ಕಾಲೇಜು ಆವರಣದ 5 ಎಕರೆ ವಿಸ್ತೀರ್ಣದಲ್ಲಿ ಅಂತರರಾಷ್ಟ್ರೀಯ ಮಟ್ಟದ ಮಾರುಕಟ್ಟೆ

ಸುಸಜ್ಜಿತ ಪುಷ್ಪ ಮಾರುಕಟ್ಟೆ ನಿರ್ಮಾಣಕ್ಕೆ ಸಿದ್ಧತೆ

● ಗಾಣಧಾಳು ಶ್ರೀಕಂಠ

ಬೆಂಗಳೂರು: ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದ (ಯುಎಚ್‌ಎಸ್) ಅಧೀನ ದಲ್ಲಿರುವ ಬೆಂಗಳೂರಿನ ತೋಟಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ (ಜಿಕೆವಿಕೆ ಕ್ಯಾಂಪಸ್) ಐದು ಎಕರೆ ಪ್ರದೇಶದಲ್ಲಿ ಸುಸಜ್ಜಿತ ಅಂತರರಾಷ್ಟ್ರೀಯ ಮಟ್ಟದ ಪುಷ್ಪ ಮಾರುಕಟ್ಟೆ ತಲೆಎತ್ತಲಿದೆ.

ತೋಟಗಾರಿಕಾ ಇಲಾಖೆ ಹಾಗೂ ಹೂವು, ಹಣ್ಣು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಮೂಲಕ ಈ ಮಾರುಕಟ್ಟೆ ನಿರ್ಮಾಣಕ್ಕೆ ಸಿದ್ಧತೆಗಳು ನಡೆದಿವೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವ ತಯಾರಿ ನಡೆದಿದೆ.

ಎಪಿಎಂಸಿ ಕಾರ್ಯದರ್ಶಿ ಮತ್ತು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರು, ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಕ್ಯಾಂಪಸ್‌ನಲ್ಲಿರುವ

ಸಾಂದರ್ಭಿಕ ಚಿತ್ರ

ತೋಟಗಾರಿಕೆ ವಿಜ್ಞಾನಗಳ ಕಾಲೇಜಿನ ಆವರಣದಲ್ಲಿ ಉದ್ದೇಶಿತ ಮಾರುಕಟ್ಟೆ ನಿರ್ಮಾಣವಾಗುವ ಸ್ಥಳ ಪರಿಶೀಲಿಸಿ ವರದಿ ನೀಡಿದ್ದಾರೆ. ಸದರಿ ಜಮೀನು ಪ್ರಸ್ತಾವಿತ ಮಾರುಕಟ್ಟೆ ನಿರ್ಮಾಣಕ್ಕೆ ಸೂಕ್ತವಾಗಿದೆ ಎಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ. ಈ ವರದಿಯ ಆಧಾರದಲ್ಲಿ, ಮಾರುಕಟ್ಟೆ ನಿರ್ಮಾಣಕ್ಕೆ 5 ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆಗೆ ಗುತ್ತಿಗೆ ಆಧಾರದಲ್ಲಿ ಹಸ್ತಾಂತ ರಿಸುವಂತೆ ಬಾಗಲಕೋಟೆಯ ಯುಎಚ್‌ಎಸ್‌ಗೆ ತೋಟಗಾರಿಕೆ ಇಲಾಖೆ ಆದೇಶಿಸಿದೆ.

'ಅಂತರರಾಷ್ಟ್ರೀಯ ಪುಷ್ಪ ಮಾರುಕಟ್ಟೆ ನಿರ್ಮಾಣಕ್ಕೆ ತೋಟಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ ರುವ ಐದು ಎಕರೆ ಜಮೀನನ್ನು ಷರತ್ತುಗಳೊಂದಿಗೆ ಗುತ್ತಿಗೆ ಆಧಾರದ ಮೇಲೆ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲು ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲ ಯದ ಮಂಡಳಿ ಸಮ್ಮತಿಸಿದೆ' ಎಂದು ವಿಶ್ವ ವಿದ್ಯಾಲಯದ ಕುಲಪತಿ ವಿಷ್ಣುವರ್ಧನ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಜಮೀನು ಹಸ್ತಾಂತರ ಇನ್ನಷ್ಟೇ ಆಗಬೇಕಿದೆ. ಮಾರುಕಟ್ಟೆಯನ್ನು ಖಾಸಗಿ ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ)ದಲ್ಲಿ ನಿರ್ಮಿಸಬೇಕೋ? ಅಥವಾ ನಬಾರ್ಡ್‌ನಂತಹ ಸಂಸ್ಥೆಗಳ ನೆರವಿನೊಂದಿಗೆ ಸರ್ಕಾರವೇ ನಿರ್ಮಿಸಬೇಕೋ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಮಾರುಕಟ್ಟೆ ಯಲ್ಲಿ ಅಂದಾಜು 200 ಮಳಿಗೆಗಳನ್ನು ತೆರೆಯುವ ಪ್ರಸ್ತಾವವಿದೆ. ಇದು ಆಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ, ವಿಶಿಷ್ಟವಾದ ಪುಷ್ಪ ಮಾರುಕಟ್ಟೆ ಆಗಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸದ್ಯ ರಾಜ್ಯದಲ್ಲಿ 35 ಸಾವಿರ ಹೆಕ್ಟೇರ್ ವಿಸ್ತೀರ್ಣದಲ್ಲಿ ಪುಷ್ಪ ಕೃಷಿಯಿದೆ. ಬೆಂಗಳೂರು ಸುತ್ತಮುತ್ತ 10 ರಿಂದ 12 ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹೂವುಗಳನ್ನು ಬೆಳೆಯ ಲಾಗುತ್ತದೆ. ಬೆಂಗಳೂರು ಜಿಲ್ಲೆಯಲ್ಲಿ 535 ಹೆಕ್ಟೇರ್ ಪ್ರದೇಶದಲ್ಲಿ 2,100 ಟನ್ ಹೂವನ್ನು ಬೆಳೆಯಲಾಗು ತ್ತಿದೆ ಎಂದು ಅಂದಾಜಿಸಲಾಗಿದೆ. ಸಾವಿರಾರು ಕೋಟಿ ರೂಪಾಯಿ ವ್ಯವಹಾರವಿರುವ ಪುಷ್ಪ ಕೃಷಿಗೆ ಸರ್ಕಾರ ಸೂಕ್ತ ಮಾರುಕಟ್ಟೆ ಕಲ್ಪಿಸಬೇಕೆಂಬ ಬೇಡಿಕೆ ಇತ್ತು. ಈ ಕಾರಣದಿಂದ ಅಂತರರಾಷ್ಟ್ರೀಯ ಮಟ್ಟದ ಪುಷ್ಪ ಮಾರುಕಟ್ಟೆ ನಿರ್ಮಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸಕ್ತ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಘೋಷಿಸಿದ್ದರು.

ಷರತ್ತುಗಳು ಏನೇನು ?

- ಉದ್ದೇಶಿತ ಅಂತರರಾಷ್ಟ್ರೀಯ ಪುಷ್ಪ ಮಾರುಕಟ್ಟೆ ನಿರ್ಮಾಣಕ್ಕೆ ಗುರುತಿಸಿರುವ ಜಮೀನಿನಲ್ಲಿರುವ ಹಲಸು, ಗೋಡಂಬಿ, ಮಾವು ಮತ್ತು ತೆಂಗಿನ ಮರಗಳನ್ನು ಆದಷ್ಟು ಕಟಾವು ಮಾಡದೆ ಉಳಿಸಿಕೊಳ್ಳಬೇಕು.
- ಕೇಂದ್ರ ಕಾರ್ಯಾರಂಭ ಮಾಡಿದ ನಂತರ, ಅದರಿಂದ ಬರುವ ಆದಾಯದ ಶೇಕಡ 50ರಷ್ಟನ್ನು ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾ- ಲಯಕ್ಕೆ ನೀಡಬೇಕು.
- ವಿಶ್ವವಿದ್ಯಾಲಯದ ಹೊರಗಿನ ರಸ್ತೆಗಳು ಮತ್ತು ಕಾಂಪೌಂಡ್ ನಿರ್ಮಾಣದಂತಹ ಇತರ ಕಾಮಗಾರಿಗಳನ್ನು ಮಾಡಿಕೊಡಬೇಕು. ಜೊತೆಗೆ, ಎಪಿಎಂಸಿ ಹೂವು, ಹಣ್ಣು ಮತ್ತು ತರಕಾರಿಗಳ ವಿಭಾಗದ ಕಾರ್ಯದ- ರ್ಶಿಯವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕೆಂಬ ಷರತ್ತುಗಳನ್ನು ವಿಧಿಸಲಾಗಿದೆ.

'ಎಲ್ಲ ಸಮುದಾಯದ ಅಸಹಾಯಕರಿಗೆ ನೆರವಾಗಿ'

ಪ್ರಜಾವಾಣಿ ವಾರ್ತೆ

ಯಲಹಂಕ: ಕೇವಲ ಜಾತಿಯ ನಾಯಕರಾಗದೇ ಎಲ್ಲ ಸಮುದಾಯಗ ಳಲ್ಲಿರುವ ಬಡವರು ಮತ್ತು ಅಸಹಾಯಕ ಜನರ ನಾಯಕರಾಗಿ, ಅವರ ಕಷ್ಟಗಳಿಗೆ ಸ್ಪಂದಿಸುವ ಮೂಲಕ ಜನನಾಯಕರಾಗಿ ಹೊರಹೊಮ್ಮಬೇಕು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅಭಿಪ್ರಾಯಪಟ್ಟರು.

ರೈಲುಗಾಲಿ ಕಾರ್ಖಾನೆಯ ಮಹರ್ಷಿ ವಾಲ್ಮೀಕಿ ನಾಯಕ ನೌಕರರ ಸಂಘದ ಆಶ್ರಯದಲ್ಲಿ ರೈಲ್ವೆ ನೌಕರರ ಮನರಂಜನಾ ಕೇಂದ್ರದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲ ಸಮುದಾಯಗಳಲ್ಲಿಯೂ ಅಸಹಾಯಕ ಮತ್ತು ಬಡಜನರಿದ್ದಾರೆ. ಜನಾಂಗದ ಜನರ ಶ್ರೇಯೋಭಿವೃದ್ಧಿ ಗಾಗಿ ಮತ್ತು ಬಡಜನರ ಪರವಾದ ನ್ಯಾಯಯುತ ಹೋರಾಟಕ್ಕೆ ಎಲ್ಲರೂ ಒಟ್ಟಾಗಿ ಕೈಜೋಡಿಸಿದಾಗ ಸಫಲತೆಯನ್ನು ಕಾಣಲು ಸಾಧ್ಯವಾಗುತ್ತದೆ ಎಂದರು.

'ಭಾರತದಲ್ಲಿ ಹಲವು ರಾಮಾಯಣಗಳಿವೆ. ಇವುಗಳಲ್ಲಿ ವಾಲ್ಮೀಕಿ ರಾಮಾಯಣ ಶ್ರೇಷ್ಠ ಗ್ರಂಥವಾಗಿದೆ. ಇದನ್ನು ರಚಿಸುವ ಮೂಲಕ ಇಡೀ ಜಗತ್ತಿಗೆ ರಾಮಾಯಣ ಪರಿಚಯಿಸಿದ ಕೀರ್ತಿ ವಾಲ್ಮೀಕಿಯವರಿಗೆ ಸಲ್ಲುತ್ತದೆ' ಎಂದು ಬಣ್ಣಿಸಿದರು.

ವಾಲ್ಮೀಕಿ ಮಹಾಸಂಸ್ಥಾನಮಠದ ಪೀಠಾಧ್ಯಕ್ಷರಾದ ಸಂಜಯಕುಮಾರ ನಂದ ಸ್ವಾಮೀಜಿ, ವಾಲ್ಮೀಕಿ ನಾಯಕ ನೌಕರರ ಸಂಘದ ಅಧ್ಯಕ್ಷ ಶ್ರೀರಾಮ್. ಎಂ, ಗೌರವಾಧ್ಯಕ್ಷ ಎಸ್.ರಮೇಶ್, ಪ್ರಧಾನ ಕಾರ್ಯದರ್ಶಿ ಗುಂಡಗತ್ತಿ ನಾಗರಾಜ್, ಹುಣಸೂರು ಸರ್ಕಾರಿ ಮಹಿಳಾ ಕಾಲೇಜಿನ ಕನ್ನಡ ಸಹಪ್ರಾ ಧ್ಯಾಪಕ ಡಾ.ನಂಜುಂಡ ಸ್ವಾಮಿ, ರೈಲ್ವೆ ಕಾರ್ಯಾಗಾರದ ಹಿರಿಯ ಎಂಜಿನಿಯರ್ ಎಂ.ಆರ್.ಚಂದ್ರಶೇಖರ್, ರೈಲುಗಾಲಿ ಕಾರ್ಖಾನೆಯ ಉಪ ಮುಖ್ಯ ಯಾಂತ್ರಿಕ ಎಂಜಿನಿಯರ್ ಕೆ.ಮೋಹನ್‌ಕುಮಾರ್, ರೈಲ್ವೆ ನೌಕರರ ಸಂಘದ ಅಖಿಲ ಭಾರತ ಪರಿಶಿಷ್ಟ ಜಾತಿ-ಪಂಗಡಗಳ ಕಾರ್ಯದರ್ಶಿ ಎಂ.ಸುರೇಶ್ ಬಾಬು, ಕಾರ್ಖಾನೆಯ ಸಿಬ್ಬಂದಿ ಪರಿಷತ್ ಸದಸ್ಯ ಯು.ವಿಜಯ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದ ಘಟಿಕೋತ್ಸವ

401 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಆಯುಷ್ಮಾನ್ ಭಾರತ್ ಹಾಗೂ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಗಳು ಭಾರತದ ಆರೋಗ್ಯ ಕ್ಷೇತ್ರವನ್ನು ಸದೃಢಗೊಳಿಸುವ- ಲ್ಲಿ ಗುರುತರ ಕೊಡುಗೆ ನೀಡುತ್ತಿವೆ' ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆಗಳ ಸಚಿವ ಹೆಚ್.ಡಿ.ಕುಮಾರ- ಸ್ವಾಮಿ ಪ್ರಶಂಸೆ ವ್ಯಕ್ತಪಡಿಸಿದರು.

ಕುಂಬಳಗೋಡು ಬಳಿಯ ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಎಬಿಎಸ್ ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ 14ನೇ ಘಟಿಕೋತ್ಸವ ಸಮಾರಂಭದಲ್ಲಿ ವೈದ್ಯಕೀಯ ವಿದ್ಯಾ- ರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು

ಆರೋಗ್ಯವಂತ ಸಮುದಾಯವೇ ದೇಶದ ನಿಜವಾದ ಆಸ್ತಿ. ಈ ಹಿನ್ನೆಲೆಯಲ್ಲಿ ಆಯುಷ್ಮಾನ್ ಭಾರತ್ ಮೂಲಕ ವೈದ್ಯಕೀಯ ವಿಮೆ ಒದಗಿಸಲಾಗುತ್ತಿದೆ. ಆದಾಯ ಮಿತಿ ಪರಿಗಣಿಸಿದೆ. 70 ವರ್ಷ ಮೇಲ್ಪಟ್ಟ ವಯೋಮಾನದವರೆಲ್ಲರಿಗೂ ಆಯುಷ್ಮಾನ್ ಭಾರತ್ ಯೋಜನೆ ವಿಸ್ತರಿ- ಸಲಾಗಿದೆ ಎಂದು ಹೇಳಿದರು. ಆರೋಗ್ಯ ಸೇವೆ ಒದಗಿಸುವ ವರ್ಗದವರು ಸೇವಾ ಮನೋಭಾವ ರೂಢಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸ್ಥಾಪಕ ಕುಲಪತಿ ಡಾ.ಎ.ಸಿ.ಷಣ್ಮುಗಂ ಮಾತನಾಡಿ , ಕಲಿತ ವಿದ್ಯೆಯನ್ನು ಸದುಪ- ಯೋಗಪಡಿಸಿಕೊಳ್ಳಿ. ನಿಮ್ಮ ಯಶಸ್ಸಿನಲ್ಲಿ ಪೋಷಕರು ಹಾಗೂ ಸಮಾಜದ ಪರಿಶ್ರಮವಿದೆ. ಉತ್ತಮಕಾರ್ಯ ಮಾಡುವ ಮೂಲಕ ಋಣ ಸಂದಾಯ ಮಾಡಿ. ಎಂದು ಶುಭಕೋರಿದರು. ಇದೇ ವೇಳೆ 401 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕಾರಿ ನಿರ್ದೇಶಕ ಡಾ.ಎಸ್. ವಿಜಯಾನಂದ್, ಮುಖ್ಯ ಕಾರ್ಯ- ನಿರ್ವಾಹಣಾಧಿಕಾರಿ ಸಿ.ಎನ್. ಸೀತಾರಾಮ್, ವೈದ್ಯಕೀಯ ಅಧೀಕ್ಷಕ ಡಾ.ಪ್ರವೀಣ್‌ಕುಮಾರ್, ಪ್ರಾಂಶುಪಾಲ ಡಾ.ಎಸ್.ನವೀನ್, ಉಪಪ್ರಾಂಶುಪಾಲ ಡಾ.ಬಸವರಾಜ ಭಂಡಾರೆ ಮತ್ತಿತರರು ಉಪಸ್ಥಿತರಿದ್ದರು.

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದ 14ನೇ ಘಟಿಕೋತ್ಸವ ಸಮಾರಂಭದಲ್ಲಿ ಕೇಂದ್ರ ಸಚಿವ ಹೆಚ್. ಡಿ.ಕುಮಾರಸ್ವಾಮಿ ಪದವಿ ಪ್ರದಾನ ಮಾಡಿದರು. ಕುಲಪತಿ ಡಾ.ಎ.ಸಿ.ಷಣ್ಮುಗಂ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸಿ.ಎನ್. ಸೀತಾರಾಮ್, ವೈದ್ಯಕೀಯ ಅಧೀಕ್ಷಕ ಡಾ.ಪ್ರವೀಣ್ ಕುಮಾರ್, ಪ್ರಾಂಶುಪಾಲ ಡಾ.ಎಸ್.ನವೀನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮತದಾನದ ಮುನ್ನಾದಿನ 'ಗೃಹಲಕ್ಷ್ಮಿ' ಹಣ ಜಮೆ

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಮತದಾನದ ಮುನ್ನಾದಿನ ಮಂಗಳವಾರ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಯ 'ಗೃಹಲಕ್ಷ್ಮಿ' ಹಣ ಜಿಲ್ಲೆಯ ಹಲವು ಮಹಿಳೆಯರ ಖಾತೆಗೆ ಜಮೆಯಾಗಿದೆ.

ಚುನಾವಣೆ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಅಕ್ರಮ ತಡೆಗೆ ಜಿಲ್ಲಾಡಳಿತ ಹದ್ದಿನಕಣ್ಣು ಇರಿಸಿದೆ. ಇದರ ನಡುವೆಯೇ, ಕ್ಷೇತ್ರದ ಹಲವು ಮಹಿಳಾ ಮತದಾರರ ಖಾತೆಗಳಿಗೆ ₹ 2,000 ನಗದು ಜಮೆ ಆಗಿದೆ. ಹಣ ಜಮೆ ಆದ ಮಾಹಿತಿಯನ್ನು ಕೆಲ ಮಹಿಳಾ ಮತದಾರರು, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಮತದಾನದ ಸಂದರ್ಭದಲ್ಲಿ ಗೃಹಲಕ್ಷ್ಮಿ ಹಣ ಜಮೆ ಮಾಡಿರುವುದನ್ನು ಖಂಡಿಸಿ ಪತ್ರಿಕಾ ಹೇಳಿಕೆ ನೀಡಿರುವ ಸಂಸದ ಬಸವರಾಜ ಬೊಮ್ಮಾಯಿ, 'ಕಾಂಗ್ರೆಸ್ ಪಕ್ಷ, ಸರ್ಕಾರದ ಹಣದಲ್ಲಿ ರಾಜಕೀಯ ಭ್ರಷ್ಟಾಚಾರ ಮಾಡುತ್ತಿದೆ. ಇದು, ನೀತಿ ಸಂಹಿತೆಯ ಉಲ್ಲಂಘನೆ. ಚುನಾವಣೆ ಆಯೋಗದವರು ಕಾಂಗ್ರೆಸ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಮಹಿಳಾ ಮತದಾರರಿಗೆ ಆಮಿಷವೊಡ್ಡಿ ಜಮೆ ಮಾಡಿರುವ ಹಣವನ್ನು ವಾಪಸು ಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

'ಚುನಾವಣೆ ಪಾರದರ್ಶಕವಾಗಿರ ಬೇಕು. ರಾಜ್ಯ ಸರ್ಕಾರ ಪ್ರತಿ ಬಾರಿಯೂ ಮತದಾನದ ಮುನ್ನಾದಿನ ಸರ್ಕಾರದ ಹಣದಲ್ಲಿ ರಾಜಕೀಯದ ರೊಟ್ಟಿ ಸುಟ್ಟುಕೊಳ್ಳುವ ಕೆಲಸ ಮಾಡುತ್ತಿದೆ. ಇದು ಅತ್ಯಂತ ಖಂಡನೀಯ' ಎಂದಿದ್ದಾರೆ.

AXISCADES

AXISCADES Technologies Limited

CIN : L72200KA1990PLC084435

Regd. Office : Block C, Second Floor, Kirloskar Business Park, Bengaluru - 560024, Karnataka, India
Website: www.axiscades.com | Email: info@axiscades.com | Tel : +91 80 4193 9000 | Fax : +91 80 4193 9099

Statement of Unaudited Consolidated Financial Results for the Quarter and Half Year Ended September 30, 2024

(₹ in Lacs)

Particulars	Quarter Ended			Half Year Ended		Year Ended
	30 Sept. 2024 (Unaudited)	30 June 2024 (Unaudited)	30 Sept. 2023 (Unaudited)	30 Sept. 2024 (Unaudited)	30 Sept. 2023 (Unaudited)	31 March 2024 Audited
Total income	26,903.12	23,377.91	25,358.90	50,281.03	46,992.11	96,505.78
EBITDA*	3,290.08	3,104.63	3,581.28	6,394.71	6,878.19	13,035.27
Finance Costs	856.91	806.79	1,164.46	1,663.70	3,175.00	5,636.79
Depreciation and Amortisation expense	993.57	928.13	870.23	1,921.70	1,577.89	3,379.12
Net Profit for the period (before tax, Exceptional and /or Extraordinary items)	1,909.84	2,422.02	1,759.24	4,331.86	2,607.31	5,302.41
Share in net loss of associate	(0.35)	(0.74)	-	(1.09)	-	(0.30)
Exceptional items net	(34.39)	-	-	(34.39)	-	-
Net Profit / (Loss) for the period before tax (after Exceptional and / or Extraordinary items)	1,875.10	2,421.28	1,759.24	4,296.38	2,607.31	5,302.11
Net Profit / (Loss) for the period after tax (after Exceptional and / or Extraordinary items)	1,225.10	1,677.23	1,117.25	2,902.33	1,688.15	3,340.94
Total Comprehensive Income for the period [Comprising Profit/(Loss) for the period (after tax) and Other Comprehensive Income (aftertax)]	1,232.70	1,645.11	1,066.70	2,877.81	1,770.39	3,477.25
Equity Share Capital	2,113.49	2,098.94	1,924.38	2,113.49	1,924.38	2,098.94
Reserves (Excluding Revaluation Reserve as shown in the Audited Balance Sheet of the previous year	-	-	-	-	-	56,437.17
Earnings Per Share (of Rs. 5/- each) (For continuing and discontinued operations) -						
1. Basic:	2.93	4.07	2.89	7.00	4.36	8.40
2. Diluted:	2.86	3.77	2.63	6.67	3.96	7.74

1. In terms of Regulation 33 of the SEBI (Listing Obligations and Disclosure Requirements) Regulations 2015, the aforesaid Statement of unaudited consolidated financial results for the quarter and half year ended September 30, 2024 of AXISCADES Technologies Limited (the "Holding Company" or the "Company"), its subsidiaries (the Holding Company and its subsidiaries together hereinafter referred to as "the Group") and its associate has been reviewed by the Audit Committee and approved by the Board of Directors at their meeting held on November 12, 2024. The aforesaid unaudited consolidated financial results for the quarter and half year ended September 30, 2024 have been subjected to limited review by the statutory auditors of the Company.
2. The unaudited consolidated financial results have been prepared in accordance with the recognition and measurement principles laid down in the applicable Indian Accounting Standards ("Ind AS") as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
3. The previous period/year figures have been regrouped/rearranged wherever necessary to conform with the current period presentation.
4. Additional information on Standalone Financial Results is as follows:

(₹ in Lacs)

Particulars	Quarter Ended			Half Year Ended		Year Ended
	30 Sept. 2024 (Unaudited)	30 June 2024 (Unaudited)	30 Sept. 2023 (Unaudited)	30 Sept. 2024 (Unaudited)	30 Sept. 2023 (Unaudited)	31 March 2024 Audited
Total revenue (including other income)	9,889.94	10,633.43	8,302.65	20,523.37	16,432.54	35,786.27
EBITDA*	1,421.70	2,231.84	1,393.25	3,653.54	2,613.25	5,750.02
Profit / (Loss) before tax	356.47	1,929.97	(8.78)	2,286.44	(1,107.57)	(616.91)
Profit / (Loss) after tax	253.64	1,525.13	(8.78)	1,778.77	(807.03)	(396.81)
Total comprehensive income / (loss) for the period / year ended	215.93	1,518.83	(175.22)	1,734.76	(931.27)	(434.58)

* Excluding other income.

5. The above unaudited financial results of the Company are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed.

For **AXISCADES Technologies Limited**
Sd/-
Arun Krishnamurthi
CEO and Managing Director

Place : Bengaluru
Dated : 12.11.2024

ಬೆಂಗಳೂರು ವಿ.ವಿ ಆವರಣದಲ್ಲಿ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ವಿಶ್ವವಿದ್ಯಾಲಯದ ಮೂರು ಪ್ರವೇಶ ದ್ವಾರಗಳು ಹಾಗೂ ಸುತ್ತಲಿನ ರಸ್ತೆಗಳಲ್ಲಿ ಬಿದ್ದಿದ್ದ ತ್ಯಾಜ್ಯ ಸಂಗ್ರಹಿಸಿ, ಸ್ವಚ್ಛಗೊಳಿಸಲಾಯಿತು.

ಬಿಬಿಎಂಪಿ ಘನತ್ಯಾಜ್ಯ ವಿಭಾಗ, ಎಂಪ್ರಿ, ಅರಣ್ಯ, ಪೊಲೀಸ್ ಇಲಾಖೆ ಮತ್ತು ಬೆಂಗಳೂರು ವಿಶ್ವವಿದ್ಯಾಲ- ಯದ 350 ವಿದ್ಯಾರ್ಥಿಗಳು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಪ್ಲಾಸ್ಟಿಕ್ ಕವರ್, ಬಾಟಲ್ ಮತ್ತು ಒಣತ್ಯಾಜ್ಯ ಸೇರಿ ಸುಮಾರು 1400 ಕೆ.ಜಿ. ತ್ಯಾಜ್ಯವನ್ನು ಸಂಗ್ರಹಿಸುವ ಮೂಲಕ ಬೆಂಗಳೂರು ವಿಶ್ವವಿದ್ಯಾಲಯದ ಆವರಣವನ್ನು ಸ್ವಚ್ಛಗೊಳಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜರಾಜೇಶ್ವರಿ ನಗರ ವಲಯದ ಬಿಬಿಎಂಪಿ ಜಂಟಿ ಆಯುಕ್ತ ಅಜಯ್ ವಿ.,'ಇತ್ತೀಚಿನ ದಿನಗಳಲ್ಲಿ ಜ್ಞಾನಭಾರತಿ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ಲಾಸ್ಟಿಕ್ ಬಿಸಾಡುವವರ ಸಂಖ್ಯೆ ಹೆಚ್ಚಾಗಿದೆ. ವಿಶ್ವವಿದ್ಯಾಲಯದವರು ಸೂಕ್ತ ಕ್ರಮ ಕೈಗೊಂಡು, ತ್ಯಾಜ್ಯ ಹರಡುವುದನ್ನು ತಪ್ಪಿಸಬೇಕು. ವಿ.ವಿಯ ಪ್ರವೇಶ ದ್ವಾರಗಳಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸಿ ಕಸ ಬಿಸಾಡುವವರ ಬಗ್ಗೆ ನಿಗಾವಹಿಸುವಂತೆ ಮನವಿ ಮಾಡಿದರು.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ನಿರ್ದೇಶಕ ಬಿ.ಪಿ.ರವಿ, ಕುಲಪತಿ ಡಾ.ಎಸ್. ಎಂ. ಜಯಕರ್, ಬಿಬಿಎಂಪಿ ಘನ ತ್ಯಾಜ್ಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ಪೂರ್ಣಿಮಾ, ಭೀಮೇಶ್ ಸ್ವಚ್ಛತೆ ಪ್ರಕ್ರಿಯೆಯಲ್ಲಿ ಭಾಗಿಯಾದರು.

ಬಿಬಿಎಂಪಿ ವಲಯ ಜಂಟಿ ಆಯುಕ್ತ ಅಜಯ್ ವಿ ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ವಚ್ಛತಾ ಆಂದೋಲನದಲ್ಲಿ ಪಾಲ್ಗೊಂಡರು.

ಜಮೀರ್ ಹೇಳಿಕೆ ಸಮುದಾಯಕ್ಕೆ ಅಪಮಾನ

ಪೀಣ್ಯ ದಾಸರಹಳ್ಳಿ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸಚಿವ ಜಮೀರ್ ಅಹಮದ್ ಅವರು 'ಕರಿಯ' ಎಂದು ಲೇವಡಿ ಮಾಡಿರುವುದು ಪ್ರಜಾಪ್ರಭುತ್ವಕ್ಕೆ ಹಾಗೂ ಒಕ್ಕಲಿಗ ಸಮುದಾಯಕ್ಕೆ ಅಪಮಾನ ಮಾಡಿದಂತಾಗಿದೆ. ಇದು ಸಂವಿಧಾನ ವಿರುದ್ಧದ ಹೇಳಿಕೆಯಾಗಿದೆ' ಎಂದು ಒಕ್ಕಲಿಗರ ಕ್ರಿಯಾ ಸಮಿತಿ ಒತ್ತಾಯಿಸಿದೆ.

ಕೆ.ಜಿ. ಕುಮಾರ್

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕಲಿಗರ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್, 'ಸಮಾಜವಾದಿ ಚಿಂತನೆಯುಳ್ಳ ಮುಖ್ಯಮಂತ್ರಿಯ- ವರು, ಜಮೀರ್ ಅಹ್ಮದ್ ಅವರ ವರ್ಣಭೇದ ಹೇಳಿಕೆಯನ್ನು ಖಂಡಿಸಿ ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು. ಇಲ್ಲವಾದಲ್ಲಿ ಈ ಹೇಳಿಕೆ ಜನಾಂಗೀಯ ಸಂಘರ್ಷಕ್ಕೆ ನಾಂದಿಯಾಗುತ್ತದೆ' ಎಂದು ಅವರು ಹೇಳಿದರು.

'ಕ್ರಮ ಕೈಗೊಳ್ಳದಿದ್ದರೆ ಸರ್ಕಾರ ಮತ್ತು ಸಚಿವರ ವಿರುದ್ಧ ನಮ್ಮ ಒಕ್ಕಲಿಗರ ಕ್ರಿಯಾ ಸಮಿತಿಯಿಂದ ಮುಂದಿನ ದಿನಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ' ಎಂದು ಅವರು ಎಚ್ಚರಿಸಿದ್ದಾರೆ.

'ಗೌಡರ ಕುಟುಂಬದಿಂದ ಸಮಾಜಕ್ಕೆ ಮಹಾ ದ್ರೋಹ'

ತುಮಕೂರು: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಕುಟುಂಬ ಈ ಸಮಾಜಕ್ಕೆ ದ್ರೋಹ ಮಾಡಿದೆ. ಸಮಾಜದ ಸ್ವಾಸ್ಥ್ಯ ಹಾಳು ಮಾಡಿದ ಸಾಧನೆಯ ಕಿರೀಟ ಹೊತ್ತುಕೊಂಡಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಆರೋಪ ಮಾಡಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪೂರ್ಣ ವಿಚಾರ ಹೊರ ಬಂದರೆ ಎಷ್ಟು ಕುಟುಂಬಗಳು ಹಾಳಾಗುತ್ತವೆ ಎಂಬುದು ಗೊತ್ತಿದೆಯೇ' ಎಂದು ಪ್ರಶ್ನಿಸಿದರು.

ಗೌಡರು ಪದೇ ಪದೇ ನಿಖಿಲ್ ಹೆಸರು ಹೇಳುತ್ತಾರೆ. ಅಪ್ಪಿತಪ್ಪಿಯೂ ಪ್ರಜ್ವಲ್ ಹೆಸರು ಹೇಳಲ್ಲ. ಪ್ರಜ್ವಲ್ ಮೊಮ್ಮಗ ಅಲ್ಲವೇ? ಇಂತಹ ಅನಾಚಾರ ಮಾಡಿ ದವರಿಗೆಲ್ಲ ಪ್ರಾಯಶ್ಚಿತ್ತ ಆಗಬೇಕು ಎಂದರು.

ಕೆ.ಎನ್.ರಾಜಣ್ಣ

'ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿ ಮಗ ನಿಖಿಲ್ ಕುಮಾರಸ್ವಾಮಿ ಯನ್ನು ಗೆಲ್ಲಿಸಲು ಪ್ರಯತ್ನಿಸುವುದು ತಪ್ಪಲ್ಲ. ಆದರೆ, ದೇವೇಗೌಡರಿಗೆ ವಯಸ್ಸಾಗಿದ್ದು, ಆರೋಗ್ಯ ಸಮಸ್ಯೆ ಇದೆ. ಆದರೂ ಅವರನ್ನು ಕರೆತಂದು ಬೀದಿ, ಬೀದಿ ಅಲೆಸಿ ಹಿಂಸೆ ಕೊಡುತ್ತಿದ್ದಾರೆ' ಎಂದು ಹೇಳಿದರು.

ಇಂಧನ ತಂತ್ರಜ್ಞಾನ ಶೃಂಗಸಭೆಯಲ್ಲಿ ಕೇಂದ್ರ ಸಚಿವ ಹರ್ದೀಪ್ ಸಿಂಗ್

ಜೈವಿಕ ಇಂಧನ ಮಿಶ್ರಣ ಕೃಷಿಗೆ ವರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈವಿಕ ಇಂಧನ ಮಿಶ್ರಣದ ಮೂಲಕ ದೇಶದ ಆಮದು ವೆಚ್ಚದಲ್ಲಿ ₹91 ಸಾವಿರ ಕೋಟಿ ಉಳಿಸಬಹುದು. ಈ ಉಳಿತಾಯದ ಹಣವನ್ನು ಕೃಷಿ ಕ್ಷೇತ್ರಕ್ಕೆ ವಿನಿಯೋಗಿಸಬಹುದು' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದರು.

'ಸೆಂಟರ್ ಫಾರ್ ಹೈಟೆಕ್ನಾಲಜಿ' ಮತ್ತು 'ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್' ಸಹಯೋಗದಲ್ಲಿ ನಗರದಲ್ಲಿ ಆರಂಭಿಸಿರುವ ಮೂರು ದಿನಗಳ 'ಇಂಧನ ತಂತ್ರಜ್ಞಾನ ಶೃಂಗ- ಸಭೆ'ಯನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದರು.

'ಜೈವಿಕ ಇಂಧನ ಮಿಶ್ರಣದಲ್ಲಿ ಭಾರತ ಜಾಗತಿಕವಾಗಿ ಎರಡನೇ ಸ್ಥಾನ ಗಳಿಸಿದೆ. ಮುಂದಿನ ವರ್ಷದ ವೇಳೆಗೆ ಭಾರತವು ಶೇಕಡ 20ರಷ್ಟು ಜೈವಿಕ ಇಂಧನ ಮಿಶ್ರಣದ ಗುರಿಯನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ಸಾಧಿಸಲಿದೆ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

'ನಮ್ಮ ಸಂಸ್ಕರಣಾಗಾರಗ- ಳು ಹಸಿರು ಇಂಧನದತ್ತ ವಾಲಿದ್ದು, ಹಸಿರು ಜಲಜನಕ ಗುರಿಯತ್ತ ದೇಶವು ಯಶಸ್ವಿಯಾಗಿ ಸಾಗುತ್ತಿದೆ. 2047ರ ವೇಳೆಗೆ ದೇಶದ ಇಂಧನ ಬೇಡಿಕೆ ಎರಡೂವರೆ ಪಟ್ಟು ಹೆಚ್ಚಾಗಲಿದೆ. ಭಾರತದ ಕಚ್ಚಾ ತೈಲ ಸಂಸ್ಕರಣಾ ಸಾಮರ್ಥ್ಯವು ವರ್ಷಕ್ಕೆ 400 ರಿಂದ 450 ದಶಲಕ್ಷ ಮೆಟ್ರಿಕ್ ಟನ್ ತಲುಪಿದ್ದು, ಇದು ಜಾಗತಿಕ ಸರಾಸರಿಯ ಮೂರನೇ ಒಂದು ಭಾಗವಾಗಿದೆ' ಎಂದು ತಿಳಿಸಿದರು.

'2070ರ ವೇಳೆಗೆ ನಿವ್ವಳ ಇಂಗಾಲ ಶೂನ್ಯ ಹೊರಸೂಸುವಿಕೆ' ಗುರಿ ಸಾಧಿಸಲು ದೇಶವು ತನ್ನ ಪ್ರಯತ್ನಗಳನ್ನು ದ್ವಿಗುಣ ಗೊಳಿಸುವ ಅಗತ್ಯವಿದೆ. ಇಂಧನ ಕ್ಷೇತ್ರದಲ್ಲಿನ ಗುರಿಗಳನ್ನು ಸಾಧಿಸಲು ಇಂಧನ ಭದ್ರತೆ, ಸುಸ್ಥಿರತೆ ಮತ್ತು ತಂತ್ರಜ್ಞಾನ ನಾವೀನ್ಯ ಜೊತೆಜೊತೆಯಾಗಿ ಸಾಗಬೇಕು ಎಂದು ಸಚಿವರು ಹೇಳಿದರು.

ಇಂಡಿಯಲ್ ಆಯಿಲ್ ನಿರ್ದೇಶಕ ವಿ.ಸತೀಶ್ ಕುಮಾರ್ ಮಾತನಾಡಿದರು. ಸಮಾವೇಶದಲ್ಲಿ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ನಗರದಲ್ಲಿ ಆರಂಭಗೊಂಡಿರುವ 'ಇಂಧನ ತಂತ್ರಜ್ಞಾನ ಶೃಂಗಸಭೆಯಲ್ಲಿ ಗೇಲ್ ಇಂಡಿಯಾ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಕುಮಾರ್ ಗುಪ್ತಾ, ಇಂಡಿಯಲ್ ಆಯಿಲ್ ಕಾರ್ಪೊರೇಷನ್ ನಿರ್ದೇಶಕ ವಿ.ಸತೀಶ್ ಕುಮಾರ್, ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್ ನಿರ್ದೇಶಕಿ ವರ್ತಿಕಾ ಶುಕ್ಲಾ, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ರಜನೀಶ್ ನಾರಂಗ್ ಪಾಲ್ಗೊಂಡಿದ್ದರು

ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಲಾರಿ, ಇನೋವಾ ಕಾರು, ಬಿಎಂಟಿಸಿ ವೋಲ್ವೊ ಬಸ್ ಮಧ್ಯೆ ಅಪಘಾತ

ಸರಣಿ ಅಪಘಾತ: ಇಬ್ಬರು ಚಾಲಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದ ಯಲಹಂಕ ಸಮೀಪದ ಮೇಲ್ಸೇತುವೆ ಬಳಿ ಸೋಮವಾರ ತಡರಾತ್ರಿ ಇನೋವಾ ಕಾರು, ಕಾಂಕ್ರೀಟ್ ಮಿಶ್ರಣದ ಲಾರಿ ಹಾಗೂ ಬಿಎಂಟಿಸಿ ಬಸ್ ಮಧ್ಯೆ ಸಂಭವಿಸಿದ ಸರಣಿ ಅಪಘಾತದಲ್ಲಿ ಲಾರಿ ಹಾಗೂ ಕಾರಿನ ಚಾಲಕರು ಮೃತಪಟ್ಟಿದ್ದಾರೆ.

ಲಾರಿ ಚಾಲಕ, ಉತ್ತರ ಪ್ರದೇಶದ ಕುಲದೀಪ್ ಕುಮಾರ್ (42) ಹಾಗೂ ಬಾದಾಮಿ ತಾಲ್ಲೂಕಿನವರಾದ ಕಾರು ಚಾಲಕ ಜಗದೀಶ್ (40) ಮೃತಪಟ್ಟವರು.

ಬಸ್ ಚಾಲಕ ಪುಟ್ಟಸ್ವಾಮಿ ಅವರ ಕೈ ಹಾಗೂ ಕಾಲಿಗೆ ಸಣ್ಣಪುಟ್ಟ ಗಾಯವಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ.

'ಇನೋವಾ ಕಾರಿನ ಮಾಲೀಕರು ದುಬೈನಲ್ಲಿ ನೆಲಸಿದ್ದು, ಅವರು ವಿಮಾನದ ಮೂಲಕ ಬೆಂಗಳೂರಿಗೆ ಸೋಮವಾರ ತಡರಾತ್ರಿ ಬರುತ್ತಿದ್ದರು. ಅವರನ್ನು ವಿಮಾನ ನಿಲ್ದಾಣದಿಂದ ಮನೆಗೆ ಕರೆತರಲು ಜಗದೀಶ್ ಅವರು ಕಾರಿನಲ್ಲಿ ತೆರಳುತ್ತಿದ್ದರು. ರಾತ್ರಿ 11.30ರ ಸುಮಾರಿಗೆ ಕಾಂಕ್ರೀಟ್ ಮಿಶ್ರಣ ಮಾಡುವ ಲಾರಿಯೂ ದೇವನಹಳ್ಳಿಯತ್ತ ಸಾಗುತ್ತಿತ್ತು. ಜಿ.ಕೆ.ವಿ.ಕೆ ಮೇಲ್ಸೇತುವೆ ಬಳಿ ಇಳಿಮುಖ ರಸ್ತೆಯ ಬಲಭಾಗದಲ್ಲಿ ಕಾರು ಮತ್ತು ಲಾರಿ ಮಧ್ಯೆ ಅಪಘಾತ ಸಂಭವಿಸಿತ್ತು. ಬಲಭಾಗಕ್ಕೆ ವಾಹನ ನಿಲುಗಡೆ ಮಾಡಿ ಕೆಳಕ್ಕೆ ಇಳಿದಿದ್ದ ಇಬ್ಬರೂ ಚಾಲಕರು, ಪರಸ್ಪರ ಗಲಾಟೆಯಲ್ಲಿ ತೊಡಗಿದ್ದರು. ಎರಡೂ ವಾಹನಗಳ ಮಧ್ಯೆ ಚಾಲಕರು ನಿಂತಿದ್ದರು' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

'ಅದೇ ವೇಳೆಗೆ ರಾಜರಾಜೇಶ್ವರಿ ನಗರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದತ್ತ ತೆರಳುತ್ತಿದ್ದ ಬಿಎಂಟಿಸಿ ವೋಲ್ವೊ ಬಸ್, ಬಲಭಾಗದಲ್ಲಿ ನಿಂತಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಲಾರಿ ಮುಂದಕ್ಕೆ ಚಲಿಸಿ, ಚಾಲಕರಿಗೆ ಡಿಕ್ಕಿ ಹೊಡೆದಿದೆ' ಎಂದು ಪೊಲೀಸರು ತಿಳಿಸಿದರು.

'ಲಾರಿ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಕಾರು ಚಾಲಕ ಜಗದೀಶ್ ಅವರನ್ನು ಅಶ್ವಿನಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಅಲ್ಲಿ ಮೃತಪಟ್ಟಿದ್ದಾರೆ. ಬಸ್ ಚಾಲಕ ಪುಟ್ಟಸ್ವಾಮಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಶ್ವಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಅವೈಜ್ಞಾನಿಕ ನಿಲುಗಡೆ: ಎರಡೂ ವಾಹನಗಳನ್ನು ಅವೈಜ್ಞಾನಿಕ ರೀತಿಯಲ್ಲಿ ರಸ್ತೆಬದಿಯಲ್ಲಿ ನಿಲ್ಲಿಸಿಕೊಂಡು ಮಾತಿನ ಚಕಮಕಿಯಲ್ಲಿ ಚಾಲಕರು ತೊಡಗಿದ್ದರು. ಸ್ಥಳದಲ್ಲಿ ಕತ್ತಲಿನ ವಾತಾವರಣ ಇತ್ತು. ಕತ್ತಲಿದ್ದ ಕಾರಣಕ್ಕೆ ಬಸ್ ಚಾಲಕ ಸಮೀಪಕ್ಕೆ ಬಂದ ಮೇಲೆ ನಿಂತಿದ್ದ ವಾಹನವನ್ನು ಗಮನಿಸಿದ್ದರು. ಬಸ್ ನಿಯಂತ್ರಿಸಲಾಗದೇ ಸರಣಿ ಅಪಘಾತವಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಬಸ್‌ನಲ್ಲಿ ಒಬ್ಬರು ಮಾತ್ರ ಪ್ರಯಾಣ ಮಾಡುತ್ತಿದ್ದರು. ಬಸ್ಸಿನ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ಅಪಘಾತದ ಸ್ಥಳಕ್ಕೆ ಸಂಚಾರ ವಿಭಾಗದ ಪೊಲೀಸರು, ವೋಲ್ವೊ ವಲಯದ ವಿಭಾಗೀಯ ನಿಯಂತ್ರಣಾಧಿಕಾರಿ, ವಿಭಾಗೀಯ ಸಂಚಾರ ಅಧಿಕಾರಿಗಳು ಮತ್ತು ವಿಭಾಗೀಯ ಯಾಂತ್ರಿಕ ಎಂಜಿನಿಯರ್ ಭೇಟಿ ನೀಡಿ ಪರಿಶೀಲಿಸಿದರು.

ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಯಲಹಂಕ ಸಮೀಪದ ಮೇಲ್ಸೇತುವೆ ಬಳಿ ಸೋಮವಾರ ತಡರಾತ್ರಿ ಸಂಭವಿಸಿದ ಸರಣಿ ಅಪಘಾತದಲ್ಲಿ ಬಿಎಂಟಿಸಿ ವೋಲ್ವೊ ಬಸ್ ಜಖಂಗೊಂಡಿದೆ (ಎಡಚಿತ್ರ) ಕಾಂಕ್ರೀಟ್ ಮಿಶ್ರಣ ಲಾರಿ ನಜ್ಜುಗುಜ್ಜಾಗಿದೆ

ಸುದ್ದಿ 2 ನಿಮಿಷ

ಡ್ರಗ್ಸ್ ಮಾರಾಟ: 64 ಮಂದಿ ಸೆರೆ

ಬೆಂಗಳೂರು: ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾದ ಆರೋಪದ ಅಡಿ 401 ಆರೋಪಿಗಳನ್ನು ಅಕ್ಟೋಬರ್‌ನಲ್ಲಿ ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ಮಟ್ಕಾ, ಆನ್‌ಲೈನ್ ಬೆಟ್ಟಿಂಗ್, ಎನ್‌ಡಿಪಿಎಸ್ ಸೇರಿದಂತೆ ವಿವಿಧ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪಿಗಳ ವಿರುದ್ಧ 237 ಪ್ರಕರಣ ದಾಖಲಿಸಿಕೊಂಡು, ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

'ಕಳೆದ ತಿಂಗಳು ಎನ್‌ಡಿಪಿಎಸ್ ಅಡಿ 42 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 10 ವಿದೇಶಿ ಪ್ರಜೆಗಳೂ ಸೇರಿ 64 ಮಂದಿ ಬಂಧಿಸಲಾಗಿದೆ' ಎಂದು ತಿಳಿಸಿದರು.

ಬಂಧಿತರಿಂದ 140 ಗ್ರಾಂ ಗಾಂಜಾ, 1 ಕೆ.ಜಿ 217 ಗ್ರಾಂ ಗಾಂಜಾ ಎಣ್ಣೆ, 609 ಗ್ರಾಂ ಅಫೀಮು, 770 ಗ್ರಾಂ ಹೆರಾಯಿನ್, 2 ಕೆ.ಜಿ 436 ಗ್ರಾಂ ಚರಸ್, 509 ಗ್ರಾಂ ಕೊಕೇನ್, 5 ಕೆ.ಜಿ 397 ಗ್ರಾಂ ಎಂಡಿಎಂಎ, 11,908 ಎಕ್ಸ್‌ಟೆಸಿ ಮಾತ್ರೆಗಳು , 2,569 ಎಲ್‌ಎಸ್‌ಡಿ ಸ್ಟ್ರಿಪ್ಸ್ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಚಿನ್ನಾಭರಣ ಕಳ್ಳತನ: ನಿವೃತ್ತ ವನಪಾಲಕನ ಬಂಧನ

ಬೆಂಗಳೂರು: ಮನೆಗಳಿಗೆ ಹಾಕಿದ್ದ ಬೀಗ ಒಡೆದು ಚಿನ್ನಾಭರಣ, ನಗದು ಕಳ್ಳತನ ಮಾಡುತ್ತಿದ್ದ ಅರಣ್ಯ ಇಲಾಖೆಯ ನಿವೃತ್ತ ವನಪಾಲಕನನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆಜಿಎಫ್‌ನ ನಾಗರಾಜ್ ಅಲಿಯಾಸ್ 'ಫಾರೆಸ್ಟ್' ನಾಗ(66) ಬಂಧಿತ.

ಆರೋಪಿಯಿಂದ ₹2.5 ಲಕ್ಷ ನಗದು, ₹25 ಲಕ್ಷ ಮೌಲ್ಯದ 208 ಗ್ರಾಂ ಚಿನ್ನಾಭರಣ, 1 ಕೆ.ಜಿ 100 ಗ್ರಾಂ ಬೆಳ್ಳಿಯ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕೋಣನಕುಂಟೆ ಕ್ರಾಸ್ ಮನೆಯೊಂದರಲ್ಲಿ 182 ಗ್ರಾಂ ಚಿನ್ನಾಭರಣ, 200 ಗ್ರಾಂ ಬೆಳ್ಳಿಯ ವಸ್ತುಗಳು ಮತ್ತು ₹5 ಲಕ್ಷ ನಗದು ಕಳವು ನಡೆದಿತ್ತು. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ನಾಗರಾಜ್ ಈ ಹಿಂದೆ ರಾಮನಗರ, ಕೋಲಾರ ಸೇರಿ ರಾಜ್ಯದ ವಿವಿಧೆಡೆ ಅರಣ್ಯ ವನಪಾಲಕನಾಗಿ ಕೆಲಸ ಮಾಡಿದ್ದ. 2008ರಲ್ಲಿ ಕೆಲಸದಿಂದ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದ. ನಂತರ ಕಳ್ಳತನಕ್ಕೆ ಮುಂದಾಗಿದ್ದ' ಎಂದು ಪೊಲೀಸರು ಹೇಳಿದರು.

'ಕಳ್ಳತನದಿಂದ ಬಂದ ಹಣದಲ್ಲಿ ಮನೆ ನಿರ್ವಹಣೆ, ಮೋಜಿನ ಜೀವನ ನಡೆಸುತ್ತಿದ್ದ. ಇತ್ತೀಚೆಗೆ ಕಳವು ಮಾಡಿದ್ದ ಚಿನ್ನಾಭರಣಗಳನ್ನು ಸ್ನೇಹಿತನಿಗೆ ಕೊಟ್ಟಿದ್ದ. ಈ ಮಾಹಿತಿ ಮೇರೆಗೆ ಅವರ ಮನೆಗಳಿಗೆ ತೆರಳಿ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಮಾಲೀಕನ ಪ್ರಜ್ಞೆ ತಪ್ಪಿಸಿ ಕಳ್ಳತನ: ಮೂವರ ಸೆರೆ

ಔಷಧ ಬೆರೆಸಿ ಕುಡಿಸಿದ್ದ ಆರೋಪಿಗಳು • 1 ಕೆ.ಜಿ 600 ಗ್ರಾಂ ಚಿನ್ನ, 450 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ಸಂಪಿಗೆ ಚಿತ್ರಮಂದಿರದ ಮಾಲೀಕ ನಾಗೇಶ್ ಅವರ ಪ್ರಜ್ಞೆ ತಪ್ಪಿಸಿ ಮನೆಯಲ್ಲಿದ್ದ ಚಿನ್ನಾಭರಣ, ನಗದು ದೋಚಿದ್ದ ನೇಪಾಳದ ಮೂವರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಪತ್ತೆಯಾದ ದಂಪತಿ

ನೇಪಾಳದ ಕೊಡಾರಿ ರಾಜ್ಯದ ಕಾಲಿಕೋಟ್ ಜಿಲ್ಲೆ ಲಾಲು ಗ್ರಾಮದ ಪ್ರಕಾಶ್, ಜಗದೀಶ್ ಶಾಹಿ ಹಾಗೂ ಅಪೀಲ್ ಶಾಹಿ ಬಂಧಿತರು. ಪ್ರಕರಣದ ಪ್ರಮುಖ ಆರೋಪಿಗಳಾದ ದಂಪತಿ ಗಣೇಶ್ ಹಾಗೂ ಗೀತಾ ನಾಪತ್ತೆ ಆಗಿದ್ದಾರೆ.

ಪ್ರಕಾಶ್

ಅಪೀಲ್ ಶಾಹಿ

ಜಗದೀಶ್ ಶಾಹಿ

ವರ್ತೂರಿನ ಮನೆಯಲ್ಲಿ ಆರೋಪಿಯೊಬ್ಬ ಬಚ್ಚಿಟ್ಟಿದ್ದ 1 ಕೆ.ಜಿ 600 ಗ್ರಾಂ ಚಿನ್ನಾಭರಣ, 450 ಗ್ರಾಂ ಬೆಳ್ಳಿ ಸಾಮಗ್ರಿ, ಕೃತ್ಯಕ್ಕೆ ಬಳಸಿದ್ದ ಒಂದು ಬೈಕ್ ಅನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಂಗಳವಾರ ತಿಳಿಸಿದರು.

ಅಕ್ಟೋಬರ್ 21ರಂದು ನಾಗೇಶ್ ಅವರು ಜಯನಗರದ 3ನೇ ಬ್ಲಾಕ್‌ನಲ್ಲಿರುವ ತಮ್ಮ ಮನೆಯಲ್ಲಿದ್ದಾಗಲೇ, ಆರೋಪಿಗಳು ಚಿನ್ನಾಭರಣ, ನಗದು ದೋಚಿ ಪರಾರಿ ಆಗಿದ್ದರು. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ದಂಪತಿ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಔಷಧ ಬೆರೆಸಿ ಕುಡಿಸಿದ್ದರು: ನಾಗೇಶ್ ಅವರ ಮನೆಯಲ್ಲಿ ಎರಡು ವರ್ಷಗಳಿಂದಲೂ ನೇಪಾಳದ ಗಣೇಶ್ ಹಾಗೂ ಗೀತಾ ದಂಪತಿ ಕೆಲಸ ಮಾಡಿಕೊಂಡಿದ್ದರು. ಸಂಬಂಧಿಕರ ಮನೆಯಲ್ಲಿ ಕಾರ್ಯಕ್ರಮವಿದ್ದ ಕಾರಣಕ್ಕೆ ನಾಗೇಶ್ ಅವರನ್ನು ಹೊರತುಪಡಿಸಿ ಮನೆಯವರೆಲ್ಲರೂ ತೆರಳಿದ್ದರು. ಮನೆಯಲ್ಲಿ ಒಂಟಿಯಾಗಿದ್ದ ನಾಗೇಶ್ ಅವರು ಮದ್ಯಪಾನ ಮಾಡುವಾಗ ಆರೋಪಿ ದಂಪತಿ ಪ್ರಜ್ಞೆ ತಪ್ಪಿಸುವ ಔಷಧ ಬೆರೆಸಿ ಕುಡಿಸಿದ್ದರು. ಬಳಿಕ, ಉಳಿದ ಆರೋಪಿಗಳ ನೆರವಿನಿಂದ ಮನೆಯಲ್ಲಿದ್ದ 2 ಕೆಜಿ 500 ಗ್ರಾಂ ಚಿನ್ನಾಭರಣ ಹಾಗೂ ಬೆಳ್ಳಿಯ ಆಭರಣಗಳೂ ಸೇರಿದಂತೆ ₹5 ಲಕ್ಷ ನಗದು ಕದ್ದು ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

'ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಹಾಗೂ ಮೊಬೈಲ್ ನೆಟ್‌ವರ್ಕ್ ಲೊಕೇಶನ್ ಆಧರಿಸಿ ಹೈದರಾಬಾದ್, ಮುಂಬೈ, ಗುಜರಾತ್‌ನಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ದಂಪತಿ ಬಂಧನಕ್ಕೆ ಕಾರ್ಯಾಚರಣೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ವಿಲಾಸಿ ಜೀವನ ನಡೆಸಲು ಕಳ್ಳತನ

ಆನೇಕಲ್: ಪ್ರೇಯಸಿ ತಾಯಿಯ ಚಿಕಿತ್ಸೆ ಮತ್ತು ವಿಲಾಸಿ ಜೀವನಕ್ಕಾಗಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ಜಿಗಣಿ ಪೊಲೀಸರು, 50 ಗ್ರಾಂ ಚಿನ್ನ ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತನನ್ನು ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಹುಲ್ಲೂರು ನಿವಾಸಿ ಸೈಯದ್ ಬಾಳಾಸಾಬ್ ನದಾಫ್ (25) ಎಂದು ಗುರುತಿಸಲಾಗಿದೆ.

ಸೈಯದ್ ಡಾನ್ಸ್ ಮಾಸ್ಟರ್ ಆಗಿದ್ದ ಎನ್ನಲಾಗಿದೆ.

ಆಗಸ್ಟ್ ತಿಂಗಳಿನಲ್ಲಿ ಜಿಗಣಿಯ ಸತ್ತಾರ್ ಸಾಬ್ ದಿಣ್ಣೆಯಲ್ಲಿ ಮಹಿಳೆಯೊಬ್ಬರು ತನ್ನ ಚಿನ್ನದ ಸರ ಕಳ್ಳತನವಾಗಿದೆ ಎಂದು ಜಿಗಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ದೂರು ಆಧರಿಸಿ ಜಿಗಣಿ ಸರ್ಕಲ್ ಇನ್‌ಸ್ಪೆಕ್ಟರ್ ಮಂಜುನಾಥ್ ನೇತೃತ್ವದಲ್ಲಿ ತನಿಖೆ ಪ್ರಾರಂಭಿಸಲಾಗಿತ್ತು. ಸಿಸಿ ಟಿವಿ ದೃಶ್ಯ ಆಧರಿಸಿ ಪೊಲೀಸರು ಆರೋಪಿಯ ಬಂಧನಕ್ಕೆ ಕಾರ್ಯಾಚರಣೆ ಕೈಗೊಂಡಿದ್ದರು.

ಸೈಯದ್ ವಿರುದ್ಧ ಬೆಂಗಳೂರು ನಗರ, ತುಮಕೂರು, ರಾಮನಗರ, ದಾವಣಗೆರೆ ಜಿಲ್ಲೆಗಳ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿವೆ. ಸೈಯದ್ ವಿಲಾಸಿ ಜೀವನ ನಡೆಸಲು ಮತ್ತು ತನ್ನ ಪ್ರೇಯಸಿಯ ಖರ್ಚುಗಳನ್ನು ನೋಡಿಕೊಳ್ಳಲು ಕಳವು ಮಾಡುತ್ತಿದ್ದ ಎನ್ನಲಾಗಿದೆ. ಈತನ ಪ್ರೇಯಸಿ ತಾಯಿಗೆ ಹೃದಯ ಸಂಬಂಧಿ ಕಾಯಿಲೆಯಿದ್ದು, ಚಿಕಿತ್ಸೆಗಾಗಿ ಸರಗಳ್ಳತನ ಮಾಡುತ್ತಿದ್ದ ಎಂದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಗಣಿ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಎಸ್.ಮಂಜುನಾಥ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಶಿವಲಿಂಗ ನಾಯಕ್, ಶಬಾನಾ ಯಾಸೀನ್, ಸಿಬ್ಬಂದಿ ಆನಂದ್, ಪರ್ವೇಜ್, ವೆಂಕಟೇಶ್, ಚನ್ನಬಸವ ನಾಯಕ್, ಮಂಜುನಾಥ್, ಗುರುರಾಜ ತಂಡದಲ್ಲಿದ್ದರು.

ಅಪರಾಧ ಸುದ್ದಿ

ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಮೆಕಾನಿಕ್ ಸೆರೆ

ಬೆಂಗಳೂರು: ಬಿಎಂಟಿಸಿ ಬಸ್ ಚಾಲಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದ ಆರೋಪದ ಅಡಿ ಕಲಾಸಿಪಾಳ್ಯದ ನಿವಾಸಿ, ಬೈಕ್ ಮೆಕಾನಿಕ್ ಮುಜಾಹಿದ್ ಎಂಬಾತನನ್ನು ಎಸ್.ಜೆ ಪಾರ್ಕ್ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಕಾರ್ಪೊರೇಷನ್ ಜಂಕ್ಷನ್ ಬಳಿ ಮಂಗಳವಾರ ಸಂಜೆ ತೆರಳುತ್ತಿದ್ದ ಬೈಕ್‌ಗೆ ಬಸ್ ತಾಗಿತ್ತು. ಈ ವಿಚಾರಕ್ಕೆ ಬಸ್ ಅನ್ನು ಅಡ್ಡಗಟ್ಟಿದ್ದ ಆರೋಪಿ, ಚಾಲಕನನ್ನು ನಿಂದಿಸಿದ್ದ. ಅಲ್ಲದೇ ಬೈಕ್‌ನಲ್ಲಿದ್ದ ದುರಸ್ತಿ ಉಪಕರಣಗಳಿಂದ ಚಾಲಕನ ಮೇಲೆ ಹಲ್ಲೆ ನಡೆಸಿದ್ದ' ಎಂದು ಪೊಲೀಸರು ಹೇಳಿದರು. ಆರೋಪಿಯ ವೈದ್ಯಕೀಯ ಪರೀಕ್ಷೆ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು' ಎಂದರು.

'ಸಾಲದ ಮೊತ್ತ ಕಡಿತ ಬೇಡ'

ಹುಬ್ಬಳ್ಳಿ: 'ರೈತರಿಗೆ ಸಾಲ ನೀಡುವ ಸಹಕಾರಿ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ನೀಡುವ ಸಾಲದ ಮೊತ್ತವನ್ನು ಕಡಿಮೆ ಮಾಡುವುದರಿಂದ ಕೃಷಿ ಕ್ಷೇತ್ರಕ್ಕೆ ಹಿನ್ನಡೆಯಾಗಲಿದೆ. ಈ ಮೊದಲಿನ ಪ್ರಮಾಣದಲ್ಲೇ ಸಾಲ ನೀಡಬೇಕು' ಎಂದು ಸಚಿವ ಶಿವಾನಂದ ಪಾಟೀಲ ಅವರು ನಬಾರ್ಡ್‌ಗೆ ಆಗ್ರಹಿಸಿದರು.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ಕೈಕೊಟ್ಟ ನಬಾರ್ಡ್: ಸಾಲಕ್ಕೆ ಕುತ್ತು' ವಿಶೇಷ ವರದಿಗೆ ಪ್ರತಿಕ್ರಿಯಿಸಿದ ಅವರು, 'ಈಗಾಗಲೇ ಎರಡು ಸಲ ಮುಖ್ಯಮಂತ್ರಿ ಮೂಲಕ ಪತ್ರ ಬರೆಸಿದ್ದರೂ ನಬಾರ್ಡ್‌ನಿಂದ ಉತ್ತರ ಬಂದಿಲ್ಲ. ಮತ್ತೊಮ್ಮೆ ಮುಖ್ಯಮಂತ್ರಿ ಮೂಲಕ ಪತ್ರ ಬರೆಯುತ್ತೇವೆ' ಎಂದರು.

ಬೊಮ್ಮನಹಳ್ಳಿ ಠಾಣೆ ಪೊಲೀಸರಿಂದ ಇಬ್ಬರ ಬಂಧನ

ನಿಶ್ಚಿತ ಠೇವಣಿ ಹಣಕ್ಕಾಗಿ ತಾಯಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ಮತ್ತು ಮನೆ ಮಾರಾಟ ಮಾಡಿದ್ದ ಹಣ ಕೊಡದ ಕೋಪಕ್ಕೆ ತಾಯಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದ ಪುತ್ರ, ಆತನ ಸಂಬಂಧಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಹೊಂಗಸಂದ್ರ ನಿವಾಸಿ ಉಮೇಶ್(28) ಮತ್ತು ಆತನ ಸಂಬಂಧಿ ಸುರೇಶ್(43) ಬಂಧಿತರು.

ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಆರೋಪಿಗಳು ಜಯಮ್ಮ(45) ಅವರನ್ನು ಕೊಲೆ ಮಾಡಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

'ತಮಿಳುನಾಡಿನ ಜಯಮ್ಮ ಅವರು ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದು ನೆಲಸಿದ್ದರು. ಜಯಮ್ಮ ಅವರ ಪತಿ ಮೃತಪಟ್ಟಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದು, ಹೊಂಗಸಂದ್ರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಇಬ್ಬರು ಪುತ್ರರ ಪೈಕಿ, ಕಿರಿಯ ಪುತ್ರ ಗಿರೀಶ್‌ಗೆ ಕೆಲವು ದಿನಗಳ ಹಿಂದೆ ಕೆಎಸ್‌ಆರ್‌ಟಿಸಿಯಲ್ಲಿ ಉದ್ಯೋಗ ಸಿಕ್ಕಿದ್ದು, ಆನೇಕಲ್ ಡಿಪೊದಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಉಮೇಶ್ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮದ್ಯ ವ್ಯಸನಿಯಾಗಿದ್ದು, ಸ್ನೇಹಿತರ ಜತೆ ಸುತ್ತಾಡಿಕೊಂಡಿದ್ದ. ಜಯಮ್ಮ ಅವರು ಮಗನಿಗೆ ಕೆಲಸಕ್ಕೆ ಹೋಗುವಂತೆ ಬುದ್ಧಿಮಾತು ಹೇಳುತ್ತಿದ್ದರು. ಆದರೂ, ಕೆಲಸಕ್ಕೆ ಹೋಗಿರಲಿಲ್ಲ. ಪುತ್ರನ ನಡೆ ಜಯಮ್ಮ ಅವರಿಗೆ ಬೇಸರ ತರಿಸಿತ್ತು. ಪುತ್ರನ ಬಗ್ಗೆ ಸ್ವಲ್ಪ ನಿರ್ಲಕ್ಷ್ಯ ವಹಿಸಿದ್ದರು' ಎಂದು ಪೊಲೀಸರು ಹೇಳಿದರು.

ಸುರೇಶ್

ಉಮೇಶ್

'ಪತಿಗೆ ಸೇರಿದ ಜಮೀನು ಮತ್ತು ಮನೆಯನ್ನು ಜಯಮ್ಮ ಅವರು ಮಾರಾಟ ಮಾಡಿ ಆ ಹಣವನ್ನು ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ಇಟ್ಟಿದ್ದರು. ಆ ಹಣವನ್ನು ತನಗೆ ಕೊಡುವಂತೆ ಆರೋಪಿ ನಿತ್ಯ ಪೀಡಿಸುತ್ತಿದ್ದ. ಬಳಿಕ ಸಹೋದರ ಸಂಬಂಧಿ ಸುರೇಶ್ ಜತೆಗೆ ಸೇರಿಕೊಂಡು ತಾಯಿ ಕೊಲೆಗೆ ಸಂಚು ರೂಪಿಸಿದ್ದ' ಎಂದು ಪೊಲೀಸರು ಹೇಳಿದರು.

'ನ.8ರಂದು ತಡರಾತ್ರಿ ಜಯಮ್ಮ ಮನೆಯಲ್ಲಿ ಒಬ್ಬರೇ ಇದ್ದರು. ಆಗ ಮನೆಗೆ ನುಗ್ಗಿದ ಆರೋಪಿಗಳು ಜಯಮ್ಮನ ಮುಖಕ್ಕೆ ಹಲ್ಲೆ ಮಾಡಿ ಬಳಿಕ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿ ಆಗಿದ್ದರು' ಎಂದು ತಿಳಿಸಿದರು.

ಅನುಮತಿ ಕೋರಿ ಸರ್ಕಾರಕ್ಕೆ ಪತ್ರ ಬರೆದ ತನಿಖಾಧಿಕಾರಿಗಳು

ದರ್ಶನ್ ಪ್ರಕರಣ: ಮೇಲ್ಮನವಿ ಸಲ್ಲಿಕೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರಿಗೆ ನ್ಯಾಯಾಲಯವು ನೀಡಿರುವ ಮಧ್ಯಂತರ ಜಾಮೀನಿನ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ನಗರ ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಮೇಲ್ಮನವಿ ಸಲ್ಲಿಸಲು ಅನುಮತಿ ನೀಡುವಂತೆಯೂ ಗೃಹ ಇಲಾಖೆಗೆ ಪತ್ರ ಬರೆದಿದ್ದಾರೆ.

'ಮೇಲ್ಮನವಿ ಸಲ್ಲಿಸಲು ಸರ್ಕಾರದ ಮಟ್ಟದಲ್ಲಿ ತೀರ್ಮಾನ ಆಗಬೇಕು. ನಾವು ಪತ್ರ ಬರೆದಿದ್ದೇವೆ. ಅನುಮತಿ ಲಭಿಸಿದ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ದರ್ಶನ್

ಬಳ್ಳಾರಿ ಜೈಲಿನಲ್ಲಿದ್ದಾಗ ದರ್ಶನ್ ಅವರಿಗೆ ಬೆನ್ನು ನೋವು ಕಾಣಿಸಿಕೊಂಡಿತ್ತು. ಚಿಕಿತ್ಸೆಗೆ ಜಾಮೀನು ನೀಡುವಂತೆ ದರ್ಶನ್ ಪರ ವಕೀಲರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಜಾಮೀನು ಸಿಕ್ಕಿದ ಬಳಿಕ ಜೈಲಿನಿಂದ ದರ್ಶನ್ ಬಿಡುಗಡೆಯಾಗಿ ಕೆಂಗೇರಿಯ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ತನಿಖೆ ಪ್ರಗತಿಯಲ್ಲಿದೆ: 'ವಿಜಯನಗರದ ಅರಿಹಂತ್ ಚಿನ್ನಾಭರಣ ಅಂಗಡಿ ಮಾಲೀಕ ಸುರೇಂದ್ರ ಕುಮಾರ್ ಜೈನ್ ಅವರು ಮನೆಯಲ್ಲಿದ್ದ ₹14.75 ಕೋಟಿ ಮೌಲ್ಯದ ಚಿನ್ನಾಭರಣ, ₹40.80 ಲಕ್ಷ ನಗದು ಕಳ್ಳತನ ಪ್ರಕರಣದ ತನಿಖೆ ಪ್ರಗತಿಯಲ್ಲಿ ಇದೆ. ಸುರೇಂದ್ರ ಕುಮಾರ್ ಅವರು ಗುಜರಾತ್‌ಗೆ ಹೋಗುವಾಗ ಕೆಲಸಗಾರನಿಗೆ ಮನೆಯ ಕೀ ನೀಡಿ ತೆರಳಿದ್ದರು. ಪ್ರಕರಣದ ಸಂಬಂಧ ಕೆಲವು ಸುಳಿವು ಸಿಕ್ಕಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಬಿ.ದಯಾನಂದ ಹೇಳಿದರು.

'ನಗರ ಹೊರವಲಯದ ಹೆಬ್ಬಗೋಡಿನಲ್ಲಿ ನಡೆದಿದ್ದ ರೇವ್ ಪಾರ್ಟಿಯ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಸಿಸಿಬಿ ಪೊಲೀಸರ ವಿರುದ್ಧ ತನಿಖೆ ನಡೆಸುವಂತೆ ಮಾನವ ಹಕ್ಕುಗಳ ಆಯೋಗದಿಂದ ಯಾವುದೇ ಆದೇಶ ಬಂದಿಲ್ಲ. ಲೋಕಾಯುಕ್ತಕ್ಕೆ ಆದೇಶ ನೀಡಿರಬಹುದು. ರೇವ್ ಪಾರ್ಟಿ ತನಿಖೆ ಪ್ರಗತಿಯಲ್ಲಿ ಇರುವಾಗಲೇ ದಿಕ್ಕು ತಪ್ಪಿಸುವ ಉದ್ದೇಶದಿಂದ ಆರೋಪಿಗಳು ಕೆಲವು ಆಪಾದನೆ ಮಾಡಿದ್ದರು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವ್ಯವಸಾಯ ಸೇವಾ ಸಹಕಾರ ಸಂಘ ರಚನೆಗೆ ನಿರ್ಣಯ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ರಚಿಸಲು ಸೋಮವಾರ ಏರ್ಪಡಿಸಿದ್ದ ಗ್ರಾಮಸಭೆಯಲ್ಲಿ ಸಾರ್ವಜನಿಕರು ಒಕ್ಕೊರಲಿನಿಂದ ನಿರ್ಣಯ ತೆಗೆದುಕೊಂಡರು.

ದಶಕಗಳ ಹಿಂದೆಯೇ ಸಹಕಾರ ಸಂಘ ರಚನೆ ಆಗಬೇಕಿತ್ತು. ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಈಗ ಕಾಲ ಕೂಡಿ ಬಂದಿದೆ. ಪಕ್ಷಾತೀತವಾಗಿ ಎಲ್ಲರೂ ಒಗ್ಗೂಡಿ ಸಂಘ ರಚನೆಗೆ ಮುಂದಾಗಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಜಿ.ನಾಗರಾಜು ಸಲಹೆ ನೀಡಿದರು.

ಸಾಲ ತೀರಿಸಲು ಚಿನ್ನ ಕದ್ದಿದ್ದ ಚಾಲಕ

ಬೆಂಗಳೂರು: ವಂಚನೆ ಪ್ರಕರಣದಲ್ಲಿ ಸಿಲುಕಿದ್ದ ಆರೋಪಿಯೊಬ್ಬ ಪ್ರಕರಣದ ಸಂಬಂಧ ವಕೀಲರ ಶುಲ್ಕ ಪಾವತಿಸಲು ಮಾಡಿದ್ದ ಸಾಲ ತೀರಿಸಲು ಚಿನ್ನಾಭರಣ ಕಳ್ಳತನ ಮಾಡಿ ಮತ್ತೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಕಳ್ಳತನ ಪ್ರಕರಣದಲ್ಲಿ ಸುಂಕದಕಟ್ಟೆ ನಿವಾಸಿ, ಕ್ಯಾಬ್ ಚಾಲಕ ಬಿ.ಎಸ್.ಲಿಖಿತ್(25) ಎಂಬಾತನನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹9 ಲಕ್ಷ ಮೌಲ್ಯದ 126 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ.

'ಆರೋಪಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ₹25 ಲಕ್ಷ ವಂಚನೆ ಮಾಡಿದ್ದ. ಕಂಪನಿಯವರು ನೀಡಿದ ದೂರು ಆಧರಿಸಿ, ಲಿಖಿತ್‌ನನ್ನು ಪೊಲೀಸರು ಬಂಧಿಸಿದ್ದರು. ಆರೋಪಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದ. ಜಾಮೀನು ಪ್ರಕ್ರಿಯೆ ಹಾಗೂ ವಕೀಲರ ಶುಲ್ಕ ಪಾವತಿಗೆಂದು ಆರೋಪಿ ಸಾಲ ಮಾಡಿಕೊಂಡಿದ್ದ. ಮಾಡಿದ್ದ ಸಾಲ ತೀರಿಸಲು ಆರೋಪಿ ಕಳ್ಳತನ ಮಾಡಿದ್ದ' ಎಂದು ಮೂಲಗಳು ಹೇಳಿವೆ.

'ವಂಚನೆ ಪ್ರಕರಣದಲ್ಲಿ ಜಾಮೀನು ಪಡೆದು ಬಿಡುಗಡೆಯಾದ ಮೇಲೆ ಆರೋಪಿ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ನ.7ರಂದು ಪ್ರಯಾಣಿಕರೊಬ್ಬರನ್ನು ಚಂದಾಪುರಕ್ಕೆ ಕರೆದೊಯ್ದಿದ್ದ. ಅಲ್ಲಿ ಗ್ರಾಹಕರ ಸೋಗಿನಲ್ಲಿ ಚಿನ್ನಾಭರಣ ಮಳಿಗೆಯೊಂದಕ್ಕೆ ತೆರಳಿ, ಚಿನ್ನದ ಸರ ಹಾಗೂ ಉಂಗುರ ತೋರಿಸುವಂತೆ ಹೇಳಿದ್ದ. ಅಂಗಡಿ ಮಾಲೀಕರು, ಚಿನ್ನದ ಸರ ತೋರಿಸಿದ್ದರು. ಬಳಿಕ ಆರೋಪಿ ಉಂಗುರ ತೋರಿಸುವಂತೆ ಹೇಳಿದ್ದ. ಆಗ ಮಾಲೀಕರು ಉಂಗುರ ತರಲು ಮಳಿಗೆಯ ಒಳಗಡೆಯಿದ್ದ ಕೋಣೆಗೆ ತೆರಳಿದ್ದರು. ಅದೇ ವೇಳೆಯಲ್ಲಿ ಚಿನ್ನಾಭರಣ ಸಹಿತ ಆರೋಪಿ ಪರಾರಿ ಆಗಿದ್ದ' ಎಂದು ಪೊಲೀಸರು ಹೇಳಿದರು.

'ಚಿನ್ನಾಭರಣ ಅಂಗಡಿಗೆ ಕದ್ದ ಚಿನ್ನ ಮಾರಾಟ ಮಾಡಲು ಬಂದಿದ್ದ ವೇಳೆ ಆರೋಪಿಯನ್ನು ಬಂಧಿಸಲಾಯಿತು. ಸಾಲ ತೀರಿಸಲು ಕಳ್ಳತನ ಮಾಡುತ್ತಿದ್ದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಟರ್ಮಿನಲ್, ಲಾಂಜ್‌ಗಳಲ್ಲಿ ಮಧ್ಯಾಹ್ನ ವಿಶ್ರಾಂತಿ • ಪ್ರಯಾಣಿಕರ ಆಕ್ರೋಶ

ವಿಮಾನ ನಿಲ್ದಾಣದಲ್ಲಿ ಬೀದಿನಾಯಿಗಳ ಹಿಂಡು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೀದಿನಾಯಿಗಳ ಹಾವಳಿ ಮಿತಿಮೀರಿದ್ದು, ನಿತ್ಯವೂ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ.

ಟರ್ಮಿನಲ್–1 ಹಾಗೂ ಹೊಸದಾಗಿ ನಿರ್ಮಿಸಲಾದ ಟರ್ಮಿನಲ್–2ರ ಆಗಮನ ಮತ್ತು ನಿರ್ಗಮನ ದ್ವಾರಗಳ ಬಳಿ ಬೀದಿ ನಾಯಿಗಳು ಬೀಡು ಬಿಟ್ಟಿರುತ್ತವೆ. ಪ್ರಯಾಣಿಕರು ವಿಶ್ರಾಂತಿ ಪಡೆಯಲು ನಿರ್ಮಿಸಲಾದ ಲಾಂಜ್ ಪ್ರದೇಶಗಳಲ್ಲಿ ಬೀದಿ ನಾಯಿಗಳು ಕೂಡ ವಿಶ್ರಾಂತಿ ಪಡೆಯುತ್ತವೆ.

ನಿಲ್ದಾಣದಲ್ಲಿ ಬೀದಿನಾಯಿಗಳ ಹಾವಳಿ ದಿನೇ ದಿನೇ ಹೆಚ್ಚಾಗುತ್ತಿದೆ ಎಂದು ಪ್ರಯಾಣಿಕರು ಆತಂಕದ ಜೊತೆಗೆ ಆಕ್ರೋಶ ಹೊರ ಹಾಕಿದ್ದಾರೆ. ವಿಮಾನ ನಿಲ್ದಾಣದ ಟರ್ಮಿನಲ್‌ಗಳಲ್ಲಿ ಬೀದಿನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕು ಎಂದು ಪ್ರಯಾಣಿಕರು ಸಾಮಾಜಿಕ ಜಾಲತಾಣ 'ಎಕ್ಸ್‌'ನಲ್ಲಿ ಒತ್ತಾಯಿಸಿದ್ದಾರೆ.

ಕೋಹಂಸೋಹಂ ಎಂಬುವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡುತ್ತಿರುವ ಬೀದಿನಾಯಿಗಳ ಚಿತ್ರಗಳನ್ನು ತೆಗೆದು 'ಎಕ್ಸ್‌'ನಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೆ, 'ಟರ್ಮಿನಲ್–2ರಲ್ಲಿ ನಾಯಿಗಳದ್ದೇ ಕಾರುಬಾರು' ಎಂದು ಬರೆದುಕೊಂಡಿದ್ದಾರೆ.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರಲ್ಲಿ ಬೀಡು ಬಿಟ್ಟಿರುವ ಬೀದಿನಾಯಿಗಳು

ಆಹಾರ ಮಳಿಗೆಗಳಿಂದ ತಿಂಡಿ ಮತ್ತು ತಿನಿಸು ತೆಗೆದುಕೊಂಡು ಹೋಗುವವರನ್ನು ನಾಯಿಗಳು ಹಿಂಬಾಲಿಸುತ್ತವೆ. ಪ್ರಾಣಿಪ್ರಿಯರು ಆಹಾರ ನೀಡುತ್ತಾರೆ. ಯಾವುದೇ ಆಹಾರ ಸಿಗದಿದ್ದಾಗ ಮತ್ತು ಯಾರೂ ಆಹಾರ ನೀಡದಿದ್ದಾಗ ಜೋರಾಗಿ ಬೊಗಳುತ್ತವೆ. ನಾಯಿಗಳನ್ನು ಕಂಡು ಹೆದರುವ ಕೆಲವು ಪ್ರಯಾಣಿಕರು ಅವುಗಳಿಂದ ತಪ್ಪಿಸಿಕೊಳ್ಳಲು ಸಾಹಸ ಮಾಡಬೇಕಾಗುತ್ತದೆ.

'ವಿಮಾನ ನಿಲ್ದಾಣದ ಟರ್ಮಿನಲ್‌ಗಳಲ್ಲಿ ಬೀದಿನಾಯಿಗಳು ಎಲ್ಲೆಂದರಲ್ಲಿ ಬೀಡುಬಿಟ್ಟಿದ್ದು ಇಲ್ಲಿ ಕೆಲಸ ಮಾಡುವ ಸಿಬ್ಬಂದಿ, ವಿಮಾನಕ್ಕಾಗಿ ಬರುವ ಪ್ರಯಾಣಿಕರು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇದರಿಂದಾಗಿ ನಿಲ್ದಾಣದ ಸ್ವಚ್ಛತೆ ಹಾಗೂ ಭದ್ರತೆಗೆ ಧಕ್ಕೆಯಾಗಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸಬೇಕು' ಎಂದು ಬೆಂಗಳೂರಿನ ವಸಂತ್ ಎಂಬುವರು ಮನವಿ ಮಾಡಿದ್ದಾರೆ.

'ಕಾನೂನು ತೊಡಕು'

'ಬೀದಿನಾಯಿಗಳ ಹಾವಳಿಯಿಂದ ಸಮಸ್ಯೆ ಎದುರಿಸಿದ ಪ್ರಯಾಣಿಕರಿಗೆ ಕ್ಷಮೆ ಕೋರುತ್ತೇವೆ. ವಿಮಾನ ನಿಲ್ದಾಣದಲ್ಲಿ ಬೀಡುಬಿಟ್ಟ ನಾಯಿಗಳ ಸಮಸ್ಯೆ ನಿವಾರಣೆಗೆ ವಿಮಾನ ನಿಲ್ದಾಣದ ಕಾರ್ಯಾಚರಣೆ ತಂಡವು ಸ್ಥಳೀಯ ಸಂಸ್ಥೆ ಮತ್ತು ಬಿಬಿಎಂಪಿ ಜೊತೆಗೆ ಕಾರ್ಯಪ್ರವೃತ್ತವಾಗಿದೆ. ವಿಮಾನ ನಿಲ್ದಾಣದಲ್ಲಿರುವ ನಾಯಿಗಳನ್ನು ಹಿಡಿದು ಬೇರೆಡೆ ಸ್ಥಳಾಂತರಿಸಲು ಕಾನೂನು ತೊಡಕು ಇದೆ. ಆದಾಗ್ಯೂ, ಬೀದಿ ನಾಯಿಗಳಿಗೆ ಲಸಿಕೆ ಮತ್ತು ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ. ಯಾವುದೇ ಪ್ರಯಾಣಿಕರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ 'ಎಂದು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ತಿಳಿಸಿದೆ.

ಉರಿಗಾಂ: ಆನೆ ಕಳೇಬರ ಪತ್ತೆ

ಕಾದಾಟದಲ್ಲಿ ಬಂಡೆ ಮೇಲಿಂದ ಬಿದ್ದು ಮೃತಪಟ್ಟಿರುವ ಶಂಕೆ

ಪ್ರಜಾವಾಣಿ ವಾರ್ತೆ

ಆನೇಕಲ್: ಹೊಸೂರು ಸಮೀಪದ ಉರಿಗಾಂ ಅರಣ್ಯ ಪ್ರದೇಶದಲ್ಲಿ ತಿಂಗಳ ಹಿಂದೆ ಬಂಡೆ ಮೇಲಿನಿಂದ ಉರುಳಿ ಬಿದ್ದು ಮೃತಪಟ್ಟ ಆನೆ ಕಳೇಬರ ಮಂಗಳವಾರ ಪತ್ತೆಯಾಗಿದೆ.

ಕಾಡಿನಿಂದ ಆಹಾರ ಅರಸಿ ಬಂದಿದ್ದ ಕಾಡಾನೆಗಳ ಹಿಂಡಿನಲ್ಲಿದ್ದ ಆನೆಯೊಂದು ಕಾದಾಟದ ವೇಳೆ ಬಂಡೆ ಮೇಲಿಂದ ಉರುಳಿ ಬಿದ್ದು ಮೃತಪಟ್ಟಿರುವ ಸಾಧ್ಯತೆ ಇದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಆನೆಗಳ ಗುಂಪಿನಲ್ಲಿ ಕಾದಾಟ ಸಹಜ. ಇದು ದಂತಚೋರರ ಕೃತ್ಯವಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶು ವೈದ್ಯರು ಕಳೇಬರದ ಮರೋಣತ್ತರ ಪರೀಕ್ಷೆ ನಡೆಸಿದ ಬಳಿಕ ದಂತ ಬೇರ್ಪಡಿಸಲಾಯಿತು. ನಂತರ ಅಲ್ಲಿಯೇ ಅರಣ್ಯ ಇಲಾಖೆ ಸಿಬ್ಬಂದಿ ಆನೆ ಕಳೇಬರವನ್ನು ಶವಸಂಸ್ಕಾರ ಮಾಡಿದರು.

ಆನೆ ಸಾವಿಗೀಡಾಗಿ ತಿಂಗಳಾದರೂ ಅರಣ್ಯ ಇಲಾಖೆ ಅಥವಾ ಸಾರ್ವಜನಿಕರ ಗಮನಕ್ಕೆ ಬಂದಿರಲಿಲ್ಲ. ದನ ಮೇಯಿಸಲು ಕಾಡಿಗೆ ಹೋಗಿದ್ದ ರೈತರು ಅರಣ್ಯ ಪ್ರದೇಶದಲ್ಲಿ ಕೆಟ್ಟ ವಾಸನೆ ಬರುತ್ತಿರುವ ಬಗ್ಗೆ ಅರಣ್ಯಾಧಿಕಾರಿಗಳ ಗಮನಕ್ಕೆ ತಂದರು.



ಆನೇಕಲ್ ಸಮೀಪದ ತಮಿಳುನಾಡಿನ ಹೊಸೂರು ಸಮೀಪದ ಉರಿಗಾಂ ಅರಣ್ಯ ಪ್ರದೇಶದಲ್ಲಿ ಆನೆ ಮೃತಪಟ್ಟಿದೆ

ಕೂಡಲೇ ಕಾರ್ಯಪ್ರವೃತ್ತರಾದ ತಮಿಳುನಾಡಿನ ಅರಣ್ಯ ಇಲಾಖೆ ಅಧಿಕಾರಿಗಳ ತಂಡವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಗಂಡಾನೆ ಮೃತಪಟ್ಟು ಗೆದ್ದಲು ತಿಂದಿರುವ ದೃಶ್ಯ ಕಂಡು ಬಂತು. ಆನೆಯಲ್ಲಿನ ದಂತ ಬೇರ್ಪಡಿಸಿ ಮರಣೊತ್ತರ ಪರೀಕ್ಷೆ ನಡೆಸಿ ಅಲ್ಲಿಯೇ ಶವಸಂಸ್ಕಾರ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಹೊಸೂರು, ಉರಿಗಾಂ ಸುತ್ತಮುತ್ತ ಇತ್ತೀಚಿನ ದಿನಗಳಲ್ಲಿ 20ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಗ್ರಾಮಗಳತ್ತ ಬರುತ್ತಿವೆ. ಸೋಮವಾರ, ಮಂಗಳವಾರ ಸಹ ಕಾಡಾನೆಗಳ ಹಿಂಡು ಶಾನುಮಾವು ಅರಣ್ಯ ಪ್ರದೇಶದಲ್ಲಿ ಓಡಾಟ ನಡೆಸಿರುವುದು ಕಂಡುಬಂದಿದೆ. ರಾಗಿ, ಭತ್ತ ಮತ್ತಿತರ ತೋಟದ ಬೆಳೆಗಳಿಗೆ ಕಾಡಾನೆ ಹಿಂಡು ದಾಳಿ ಇಡುತ್ತಿವೆ.

ನಗರದ ಕೆರೆಗಳು, ರಾಜಕಾಲುವೆಗಳ ಒತ್ತುವರಿ ತೆರವಿಗೆ ಮನವಿ: ಹಲವು ಪಿಐಎಲ್‌ಗಳ ವಿಚಾರಣೆ

ಖಾಸಗಿ ತೆಕ್ಕೆಗೆ ಕೆರೆ ಮಿಥ್ಯಾರೋಪ: ಎಜಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇದೇ 19ಕ್ಕೆ ಟಿಪ್ಪಣಿ ನೀಡಲು ಉಭಯತ್ರರಿಗೆ ಸೂಚನೆ
- ತೀರ್ಪು ಕಾಯ್ದಿರಿಸಿದ ಸಿ.ಜೆ ನೇತೃತ್ವದ ವಿಭಾಗೀಯ ನ್ಯಾಯಪೀಠ

ಬೆಂಗಳೂರು: 'ರಾಜಧಾನಿಯಲ್ಲಿ ಸದ್ಯ ಅಸ್ತಿತ್ವದಲ್ಲಿರುವ 185 ಕೆರೆಗಳ ನಿರ್ವಹಣೆಗೆ ವರ್ಷಕ್ಕೆ ₹650 ಕೋಟಿ ಬೇಕು. ಅದಕ್ಕಾಗಿ ಖಾಸಗಿ ಸಂಸ್ಥೆಗಳಿಂದ ನೆರವು ಪಡೆದುಕೊಳ್ಳಲಾಗುತ್ತಿದೆಯೇ ಹೊರತು ಅವುಗಳನ್ನು ಖಾಸಗಿಯವರ ತೆಕ್ಕೆಗೇ ಒಪ್ಪಿಸುವುದಿಲ್ಲ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

'ಬೆಂಗಳೂರಿನ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿ ಅವುಗಳನ್ನು ರಕ್ಷಿಸಲು ಸರ್ಕಾರಕ್ಕೆ ಅಗತ್ಯ ನಿರ್ದೇಶನ ನೀಡಬೇಕು' ಎಂದು ಕೋರಿ 2014ರಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಜಯ್ನಾ ಕೊಠಾರಿ, ನಗರದ ಎಲ್ಲಾ ಕೆರೆಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಖಾಸಗಿ ಸಂಸ್ಥೆಗಳ ಮಡಿಲಿಗೆ ಹಾಕಲಾಗಿದೆ. ಈ ನಿಟ್ಟಿನಲ್ಲಿ ಒಡಂಬಡಿಕೆಯನ್ನೂ ಮಾಡಿಕೊಳ್ಳಲಾಗಿದೆ. ಈ ಕ್ರಮ ಆತಂಕಕಾರಿಯಾಗಿದೆ. ಅರ್ಜಿದಾರರಿಗೆ ಇದರಲ್ಲಿ ಯಾವುದೇ ಸ್ವಹಿತಾಸಕ್ತಿ ಇಲ್ಲ. ಕೇವಲ ಸಾರ್ವಜನಿಕ ಸ್ವತ್ತಿನ ಉಳಿವಿನ ಕಾಳಜಿ ಮಾತ್ರವೇ ಅಡಗಿದೆ' ಎಂದು ಪ್ರತಿಪಾದಿಸಿದರು.

'ಕೆರೆಗಳನ್ನು ಉಳಿಸಬೇಕು, ರಕ್ಷಿಸಬೇಕು ಎನ್ನುವುದೇ ನಮ್ಮ ಉದ್ದೇಶ. ಹಣ ಖರ್ಚಾಗುತ್ತದೆ ಎಂದು ಕೆರೆಗಳನ್ನು ಸಂಪೂರ್ಣವಾಗಿ ಖಾಸಗಿಯವರ ಸುಪರ್ದಿಗೆ ನೀಡುವುದು ಅಪಾಯಕಾರಿ. ಹೀಗಾದರೆ ಬಿಬಿಎಂಪಿ ಮತ್ತು ಸರ್ಕಾರದ ಜವಾಬ್ದಾರಿಯಾದರೂ ಏನು' ಎಂದು ಪ್ರಶ್ನಿಸಿದರು.

'ನಿರ್ವಹಣೆಗೆ ಖಾಸಗಿ ಸಂಸ್ಥೆಗಳಿಂದ ಹಣ ಪಡೆದುಕೊಳ್ಳಲಿ, ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ, ನಿರ್ವಹಣೆಯನ್ನೆಲ್ಲಾ ಖಾಸಗಿಯವರಿಗೇ ನೀಡಿದರೆ ಅದು ಮಾರಕವಾದ ಕ್ರಮವಾಗುತ್ತದೆ. ಬಹಳ ಮುಖ್ಯವಾಗಿ, ಸರ್ಕಾರದ ಈ ನೀತಿ 2020ರ ಹೈಕೋರ್ಟ್ ಆದೇಶಕ್ಕೆ ಸಂಪೂರ್ಣ ವಿರುದ್ಧವಾಗಿದೆ' ಎಂದು ಬಲವಾಗಿ ಆಕ್ಷೇಪಿಸಿದರು.

ಅರ್ಜಿದಾರರ ವಾದವನ್ನು ಅಷ್ಟೇ ಬಲವಾಗಿ ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಅರ್ಜಿದಾರರು ತಪ್ಪು ಗ್ರಹಿಕೆಯಿಂದ ವಾದ ಮಂಡಿಸುತ್ತಿದ್ದಾರೆ. ವಾಸ್ತವದಲ್ಲಿ ಕೆರೆಗಳನ್ನು ಖಾಸಗಿಯವರಿಗೆ ನೀಡುವ ಯಾವುದೇ ಉದ್ದೇಶ ಸರ್ಕಾರದ ಮನದಲ್ಲಿ ಇಲ್ಲ' ಎಂದರು.

ಅರ್ಜಿದಾರರ ಪರ ಮತ್ತೊಬ್ಬ ಹಿರಿಯ ವಕೀಲ ಸಿ.ಕೆ.ನಂದಕುಮಾರ್ ಮತ್ತು ಜಿ.ಆರ್.ಮೋಹನ್ ಕೂಡಾ ವಾದ ಮಂಡಿಸಿದರು. ಬಿಬಿಎಂಪಿ ಪರ ವಕೀಲ ಎಚ್.ಎಸ್.ಪ್ರಶಾಂತ್ ಹಾಜರಿದ್ದರು.

ವರ್ಷಕ್ಕೆ ₹650 ಕೋಟಿ ಬೇಕು...



'ನಗರದಲ್ಲಿರುವ 185 ಕೆರೆಗಳ ನಿರ್ವಹಣೆಗೆ ವರ್ಷಕ್ಕೆ ಅಂದಾಜು ₹650 ಕೋಟಿ ಬೇಕು. ಅದಕ್ಕಾಗಿಯೇ ಸರ್ಕಾರ ಖಾಸಗಿಯವರ ನೆರವು ಪಡೆದುಕೊಳ್ಳುತ್ತಿದೆ' ಎಂದು ಶಶಿಕಿರಣ್ ಶೆಟ್ಟಿ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು. 'ಸರ್ಕಾರದ ಉದ್ದೇಶವೂ ಕೆರೆಗಳನ್ನು ಉಳಿಸಬೇಕು ಎಂಬುದೇ ಆಗಿದೆ. ವಾಸ್ತವದಲ್ಲಿ ಈ ಅರ್ಜಿ 2014ರಿಂದಲೂ ಬಾಕಿ ಇದೆ. ನಾವೀಗ 2024ರಲ್ಲಿ ಇದ್ದೇವೆ. ಕಳೆದ 10 ವರ್ಷಗಳಲ್ಲಿ ನಗರದ ಕೆರೆಗಳು ನಿರ್ವಹಣೆ, ಅಭಿವೃದ್ಧಿ ಇಲ್ಲದೆ ಬಡವಾಗಿವೆ. ಈ ಅರ್ಜಿ ಬಾಕಿ ಇರುವ ಕಾರಣದಿಂದಾಗಿಯೇ ನಗರದ ಕೆರೆಗಳು ನಳನಳಿಸುವ ಬದಲಿಗೆ ನರಳುತ್ತಿವೆ' ಎಂದು ವಿವರಿಸಿದರು.

ಅರ್ಜಿದಾರರ ಪರ ವಕೀಲರು ಕಲ್ಪನೆಗಳ ಆಧಾರದಲ್ಲಿ ನಕರಾತ್ಮಕ ವಾದ ಮಂಡಿಸುತ್ತಿದ್ದಾರೆ. ಸಕಾರಾತ್ಮಕ ವಾದಗಳನ್ನಿಟ್ಟರೆ ಅದನ್ನು ಸರ್ಕಾರ ಒಪ್ಪಿಕೊಳ್ಳಲಿದೆ ಮತ್ತು ಅವರ ಎಲ್ಲ ಅನುಮಾನಗಳಿಗೆ ಉತ್ತರ ಕೊಡಲಿದೆ.

ಕೆ.ಶಶಿಕಿರಣ್ ಶೆಟ್ಟಿ
ಅಡ್ವೊಕೇಟ್ ಜನರಲ್

ಪಂಜಿನ ಮೆರವಣಿಗೆ

ಕೇಂದ್ರದ ಮಾಜಿ ಸಚಿವ ಅನಂತಕುಮಾರ್ ಅವರ ಪುಣ್ಯಸ್ಮರಣೆ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಅನಂತ ಸ್ಮೃತಿ ನಡಿಗೆ' ಪಂಜಿನ ಮೆರವಣಿಗೆಯಲ್ಲಿ ಅದಮ್ಯ ಚೇತನ ಟ್ರಸ್ಟ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಕೃಷ್ಣಭಟ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್ ಸದಸ್ಯ ಎಸ್. ನರೇಶ್ ಕುಮಾರ್, ಶಾಸಕರಾದ ಎಲ್.ಎ. ರವಿ ಸುಬ್ರಮಣ್ಯ, ಸಿ.ಕೆ. ರಾಮಮೂರ್ತಿ, ಬಿಬಿಎಂಪಿ ಮಾಜಿ ಸದಸ್ಯರಾದ ಸದಾಶಿವ, ಸುಬ್ಬಣ್ಣ ಪಾಲ್ಗೊಂಡಿದ್ದರು

ಕಾನೂನು ಸೇವೆಗಳ ದಿನಾಚರಣೆ

ಬೆಂಗಳೂರು: 'ಲಭ್ಯವಿರುವ ಉಚಿತ ಕಾನೂನು ನೆರವು ಮತ್ತು ಕಾನೂನು ಸೇವಾ ಸಂಸ್ಥೆಗಳ ಚಟುವಟಿಕೆಗಳನ್ನು ಸಾರ್ವಜನಿಕರಿಗೆ ತಿಳಿಸಿಕೊಡುವ ಉದ್ದೇಶದಿಂದ ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ಆಚರಿಸಲಾಗುತ್ತಿದೆ' ಎಂದು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯಕಾರಿ ಅಧ್ಯಕ್ಷರೂ ಆದ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ತಿಳಿಸಿದರು.

ಹೈಕೋರ್ಟ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾನೂನು ಸೇವೆಗಳ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಸಕಲರಿಗೂ ನೆರವು ತಲುಪಿಸುವ ಮೂಲಕ ನ್ಯಾಯದ ಸಬಲೀಕರಣ ಎಂಬ ಘೋಷವಾಕ್ಯದಡಿ ಈ ಬಾರಿಯ ರಾಷ್ಟ್ರೀಯ ಕಾನೂನು ಸೇವೆಗಳ ದಿನ ಆಚರಿಸಲಾಗುತ್ತಿದೆ. ಪ್ರಸಕ್ತ ವರ್ಷ ಮೂರು ರಾಷ್ಟ್ರೀಯ ಲೋಕ ಅದಾಲತ್ ನಡೆದಿದೆ' ಎಂದರು.

ಕಾಮಗಾರಿ ಮುಂದುವರಿದರೆ ತಕ್ಕ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿಯ ಚನ್ನಸಂದ್ರ ಹಾಗೂ ಹಲಗೆವಡೇರಹಳ್ಳಿ ನಡುವೆ ಹಾದು ಹೋಗುವ ರಾಜಕಾಲುವೆ ಒತ್ತುವರಿ ಮಾಡಲಾಗಿದೆ ಎನ್ನುವ ಸ್ಥಳದಲ್ಲಿ ಅಕ್ರಮ ನಿರ್ಮಾಣದ ಕಟ್ಟಡ ಕಾಮಗಾರಿ ಮುಂದುವರಿಸಿದರೆ ಸಂಬಂಧಿಸಿದವರು ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಎಚ್ಚರಿಸಿದೆ.

ಈ ಸಂಬಂಧ ಸಿ.ಕೆ.ಮಂಜುನಾಥ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ, ರಾಜ್ಯ ಸರ್ಕಾರ, ಬೆಂಗಳೂರು ನಗರ ಜಿಲ್ಲಾಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್, ಬಿಬಿಎಂಪಿ ಮುಖ್ಯ ಆಯುಕ್ತ, ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ ಆಯುಕ್ತ ಹಾಗೂ ಒತ್ತುವರಿದಾರರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ಮನವಿ: 'ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವ ಖಾಸಗಿ ವ್ಯಕ್ತಿಗಳು ರಾಜಕೀಯ ಪ್ರಭಾವಿಗಳಾಗಿದ್ದು, ಪಾಲಿಕೆಯ ಮಾಜಿ ಕಾರ್ಪೊರೇಟರ್ ಸಂಬಂಧಿಗಳಾಗಿದ್ದಾರೆ. ಇವರೊಂದಿಗೆ ಬಿಬಿಎಂಪಿ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಕಾಮಗಾರಿ ಪ್ರತಿನಿತ್ಯವೂ ಮುಂದುವರಿದಿದ್ದು, ಈಗಾಗಲೇ ಶೇ 70ರಷ್ಟು ಕಾಮಗಾರಿ ಮುಗಿದಿದೆ. ಒಂದೊಮ್ಮೆ ಕಾಮಗಾರಿ ಪೂರ್ಣಗೊಂಡರೆ ಅರ್ಜಿ ಅರ್ಥ ಕಳೆದುಕೊಳ್ಳುತ್ತದೆ. ಹಾಗಾಗಿ, ನಿರ್ಮಾಣ ಕಾಮಗಾರಿಗೆ ತಡೆ ನೀಡಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಕೆಪಿಸಿಎಲ್: ನೇಮಕಾತಿ ಪತ್ರ ವಿತರಣೆ ಇಲ್ಲ–ಸರ್ಕಾರ

ಬೆಂಗಳೂರು: 'ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) ವಿವಿಧ ಹುದ್ದೆಗಳಿಗೆ ನಡೆದಿರುವ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾದವರಿಗೆ ಹೈಕೋರ್ಟ್ ಆದೇಶ ನೀಡುವವರೆಗೆ ನೇಮಕಾತಿ ಪತ್ರ ವಿತರಿಸುವುದಿಲ್ಲ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮುಚ್ಚಳಿಕೆ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಎನ್.ನವೀನ್ ಕುಮಾರ್ ಮತ್ತಿತರರು ಸಲ್ಲಿಸಿರುವ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಈ ಕುರಿತಂತೆ ಸರ್ಕಾರ ತಿಳಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಎಂ.ಕೆ.ಪೃಥ್ವೀಶ್, 'ತಾತ್ಕಾಲಿಕ ಆಯ್ಕೆ ಪಟ್ಟಿ ಸಂದರ್ಭದಲ್ಲಿ ನೆಗೆಟಿವ್ ಮಾರ್ಕಿಂಗ್ ಇದೆ ಎಂಬ ನಿಗಮದ ಆದೇಶ ಕಾನೂನು ಬಾಹಿರ. ಇದರಿಂದ ವಿದ್ಯಾರ್ಥಿಗಳಿಗೆ ಸಾಕಷ್ಟು ಅನ್ಯಾಯವಾಗಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಯಾಗಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಹೈಕೋರ್ಟ್ ಆದೇಶ ನೀಡುವವರೆಗೆ ಆಯ್ಕೆಯಾದವರಿಗೆ ನೇಮಕಾತಿ ಆದೇಶ ನೀಡುವುದಿಲ್ಲ' ಎಂದು ಭರವಸೆ ನೀಡಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಇದೇ 26 ಕ್ಕೆ ಮುಂದೂಡಿತು.

ನ್ಯಾಯಾಧೀಶರ ವಿರುದ್ಧ ಅವಹೇಳನಕಾರಿ ಪೋಸ್ಟ್

ವಕೀಲನ ವಿರುದ್ಧದ ಪ್ರಕರಣ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾರಾಣಸಿಯ ಜ್ಞಾನವಾಪಿ ಮಸೀದಿಯಲ್ಲಿ ಹಿಂದೂಗಳಿಗೆ ಪೂಜೆಗೆ ಅವಕಾಶ ಕಲ್ಪಿಸಿ ತೀರ್ಪು ನೀಡಿದ್ದ ಉತ್ತರ ಪ್ರದೇಶದ ಜಿಲ್ಲಾ ನ್ಯಾಯಾಧೀಶರ ಬಗ್ಗೆ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ್ದಾರೆ' ಎಂಬ ಆರೋಪದಡಿ ರಾಮನಗರದ ವಕೀಲ ಛನ್ ಪಾಷಾ ಐಜೂರು ವಿರುದ್ಧದ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ರಾಮನಗರದ ಗೌಸಿಯಾ ನಗರ್ ನಿವಾಸಿಯಾದ ವಕೀಲ ಛನ್ ಪಾಷಾ ಐಜೂರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ 'ಈ ಸಂಬಂಧ ವಿಚಾರಣಾ ನ್ಯಾಯಾಲಯದ ಮುಂದೆಯೇ ನಿಮ್ಮ ಅರ್ಜಿ ಸಲ್ಲಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ತಾಕೀತು ಮಾಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಛನ್ ಪಾಷಾ ರಾಮನಗರದಲ್ಲಿ ವಕೀಲಿಕೆ ನಡೆಸುತ್ತಿದ್ದು, ಅವರ ಫೇಸ್‌ಬುಕ್ ಖಾತೆ ಹ್ಯಾಕ್ ಮಾಡಲಾಗಿದೆ. ಈ ಬಗ್ಗೆ ಅವರು ಪೊಲೀಸರಿಗೆ ದೂರು ನೀಡಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಅರ್ಜಿ ಪರಿಶೀಲಿಸಿ ಖಾರವಾಗಿ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, 'ಯಾವುದೇ ಹೇಳಿಕೆ ನೀಡುವುದಕ್ಕೂ ಒಂದು ಇತಿ-ಮಿತಿ ಇರುತ್ತದೆ. ಪೋಸ್ಟ್‌ನಲ್ಲಿ ಭಯಾನಕ ಪದಗಳನ್ನು ಬಳಸಲಾಗಿದೆ. ನಿಜವಾಗಿಯೂ ಇದೊಂದು ದುರ್ವರ್ತನೆ. ಹಾಗಾಗಿ, ನಾನು ಪ್ರಕರಣದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಬೇಕಿದ್ದರೆ ನೀವು ವಿಚಾರಣಾ ನ್ಯಾಯಾಲಯದ ಮುಂದೆಯೇ ಆರೋಪಗಳನ್ನು ಕೈಬಿಡುವಂತೆ ಕೋರಿ ಅರ್ಜಿ ಹಾಕಿಕೊಳ್ಳಿ' ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿತು.

ಪ್ರಕರಣವೇನು?: 'ಜ್ಞಾನವಾಪಿ ಮಸೀದಿಯಲ್ಲಿ ಹಿಂದೂಗಳಿಗೆ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಿರುವ ಉತ್ತರ ಪ್ರದೇಶದ ವಾರಾಣಸಿ ಜಿಲ್ಲಾ ನ್ಯಾಯಾಧೀಶರು ಸೇವೆಯಿಂದ ನಿವೃತ್ತರಾಗುವ ಒಂದು ದಿನ ಮೊದಲು ಈ ತೀರ್ಪು ನೀಡಿದ್ದಾರೆ. ಬಿಜೆಪಿಯ ಎಂಜಲು ಕಾಸಿಗೆ ತಟ್ಟೆ ಹಿಡಿಯುವವರು' ಎಂದೆಲ್ಲ ಬರೆದಿದ್ದ ಪೋಸ್ಟ್‌ನಲ್ಲಿ 'ನ್ಯಾಯಾಧೀಶನಿಗೆ ಧಿಕ್ಕಾರವಿರಲಿ ಎಂದು ಪೋಸ್ಟ್ ಹಾಕಿದ್ದಾರೆ' ಎಂದು ಆರೋಪಿಸಿ ಪಿ.ಶಿವಾನಂದ ರಾಮನಗರ ಟೌನ್ ಪೊಲೀಸ್ ಠಾಣೆಗೆ 2024ರ ಫೆಬ್ರುವರಿ 3ರಂದು ದೂರು ನೀಡಿದ್ದರು.

ಪ್ರಕರಣ ರದ್ದು ಕೋರಿದ ಬೊಮ್ಮಾಯಿ

ಬೆಂಗಳೂರು: 'ಸವಣೂರಿನಲ್ಲಿ ನಿಂತು ಎಲ್ಲೇ ಕಲ್ಲೆಸದರೂ ಅದು ಬಿದ್ದ ಜಾಗ ವಕ್ಫ್ ಆಸ್ತಿ ಎನ್ನುವಂತಾಗಿದೆ ಎಂಬ ಹೇಳಿಕೆ ಆಧರಿಸಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

'ಹಾವೇರಿ ಜಿಲ್ಲೆಯ ಸವಣೂರು ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಇದೇ 16ರಂದು ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ್ದು ಇದನ್ನು ರದ್ದುಪಡಿಸಬೇಕು' ಎಂದು ಬೊಮ್ಮಾಯಿ ಕೋರಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಇದೇ ಸಂದರ್ಭದಲ್ಲಿ ಮಾತನಾಡಿದ್ದ ಬಿಜೆಪಿಯ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, 'ರೈತರ ಜಮೀನು, ದೇವಸ್ಥಾನ, ಕೆರೆಗಳ ಜಾಗವನ್ನು ವಕ್ಫ್ ಹೆಸರಿನಲ್ಲಿ ನೋಂದಾಯಿಸಲಾಗುತ್ತಿದೆ. ನಿಮಗೆ ಸಂವಿಧಾನ ದೊಡ್ಡದೋ ಅಥವಾ ಷರಿಯಾ ಕಾನೂನು ದೊಡ್ಡದೋ? ಜಮೀರ್ ಅಹ್ಮದ್ ಖಾನ್, ನಿಮ್ಮ ಷರಿಯಾ ಕಾನೂನು ಇಲ್ಲಿ ನಡೆಯುವುದಿಲ್ಲ' ಎಂದು ಹೇಳಿರುವುದಾಗಿಯೂ ದೂರಿನಲ್ಲಿ ವಿವರಿಸಲಾಗಿದೆ.

'ವಕ್ಫ್ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಬಸವರಾಜ ಬೊಮ್ಮಾಯಿ, ಸಿ.ಟಿ.ರವಿ, ಶಾಸಕ ಅರವಿಂದ ಬೆಲ್ಲದ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಮತ್ತಿತರರು ಇದೇ 4ರಂದು ಸವಣೂರಿನಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದರು' ಎಂದು ಗುಪ್ತಚರ ವಿಭಾಗದ ಪೊಲೀಸ್ ಮಂಜುನಾಥ ಮಣ್ಣಿಯವರ, ಸವಣೂರು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಇದರನ್ವಯ ಇಬ್ಬರ ವಿರುದ್ಧವೂ, ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 196(1)(ಎ) ಅಡಿ ಪ್ರಕರಣ ದಾಖಲಿಸಲಾಗಿದೆ.

ಚಿನ್ನಾಭರಣ ಕಳ್ಳತನ: ಮನೆ ಕೆಲಸದಾಕೆಯ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಯುವತಿಯನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟ ರಸ್ತೆಯ ಸಿ.ಕೆ.ಪಾಳ್ಯ ನಿವಾಸಿ ಸೋನಿಯಾ(25) ಬಂಧಿತೆ.

ಆರೋಪಿಯಿಂದ ₹12 ಲಕ್ಷ ಮೌಲ್ಯದ 108 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕೋಣನಕುಂಟೆಯ ಅಂಜನಾದ್ರಿ ಬಡಾವಣೆಯ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಭಾವನಾ ಫಣೀಂದ್ರ ಅವರು ಕುಟುಂಬಸ್ಥರ ಜತೆಗೆ ವಾಸವಿದ್ದರು. ಆ ಫ್ಲ್ಯಾಟ್‌ನಲ್ಲಿ ಚಿನ್ನಾಭರಣ ಕಳವು ನಡೆದಿತ್ತು. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಭಾವನಾ ಅವರ ಅತ್ತೆ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರನ್ನು ನೋಡಿಕೊಳ್ಳಲು ಸೋನಿಯಾ ಅವರನ್ನು ನೇಮಿಸಿಕೊಂಡಿದ್ದರು. ಅಕ್ಟೋಬರ್ 7ರಂದು ಮನೆಯವರು ದೇವರ ವ್ರತ ಆಚರಿಸಿದ ಬಳಿಕ ಚಿನ್ನಾಭರಣವನ್ನು ಕೊಠಡಿಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟಿದ್ದರು. ಆ ಚಿನ್ನವನ್ನು ಸೋನಿಯಾ ಕಳವು ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ವಿದೇಶಿ ಪ್ರಜೆಗಳ ಮೇಲೆ ಹಲ್ಲೆ: ವಿದೇಶಿ ಪ್ರಜೆಗಳಿದ್ದ ಮನೆಗೆ ನುಗ್ಗಿ ಚಾಕುವಿನಿಂದ ಹಲ್ಲೆ ಮಾಡಿ ಸುಲಿಗೆ ಮಾಡಿದ್ದ ಆರೋಪದಡಿ ಭರತ್, ಗಯಾಜ್, ಅಭಿಷೇಕ್ ಹಾಗೂ ಶ್ರೇಯಸ್ ಎಂಬುವರನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ಎರಡು ದ್ವಿಚಕ್ರ ವಾಹನ, 11 ಗ್ರಾಂ. ಚಿನ್ನದ ಸರ, ಮೂರು ಐ-ಫೋನ್‌ಗಳ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಅಕ್ಟೋಬರ್ 27ರಂದು ರಾತ್ರಿ ಬಾಗಲಗುಂಟೆ ಠಾಣೆ ವ್ಯಾಪ್ತಿಯ ದೊರೆಸಾನಿ ಪಾಳ್ಯದಲ್ಲಿ ಆಫ್ರಿಕಾ ಪ್ರಜೆಗಳು ವಾಸವಿದ್ದ ಮನೆಗೆ ನುಗ್ಗಿದ್ದ ಆರೋಪಿಗಳು, ಚಾಕು ತೋರಿಸಿ, ಹಣ, ಐ-ಫೋನ್ ಕೊಡುವಂತೆ ಬೆದರಿಸಿದ್ದರು. ನಿರಾಕರಿಸಿದಾಗ ಅವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ, ಐ-ಫೋನ್‌ಗಳು, 11 ಗ್ರಾಂ ತೂಕದ ಚಿನ್ನದ ಸರ, ನಗದು ಕಸಿದುಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

'ಯೋಚನಾ ಶಕ್ತಿ ಹೆಚ್ಚಿಸುವ ಚೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಯೋಚನಾ ಶಕ್ತಿ ಹೆಚ್ಚಿಸಲು ಚೆಸ್ ಅತ್ಯುತ್ತಮ ಆಟವಾಗಿದೆ' ಎಂದು ಕರ್ನಾಟಕದ ಕಿರಿಯ ಗ್ರ್ಯಾಂಡ್ ಮಾಸ್ಟರ್ ಪ್ರಣವ್ ಆನಂದ್ ಹೇಳಿದ್ದಾರೆ.

ಕೆಎಸ್‌ಸಿಎ ಮತ್ತು ಬಿಯುಡಿಸಿಎ ಆಶ್ರಯದಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಐಕ್ಯೂಎಸಿ ಸಹಯೋಗದಲ್ಲಿ ಕೋಳೂರಿನ ಯೂನಿವರ್ಸಲ್ ಕ್ಯಾಂಪಸ್‌ನಲ್ಲಿ ಮಕ್ಕಳ ಚೆಸ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, 'ಚೆಸ್‌ನಲ್ಲಿ ಸಾಧನೆಗೆ ನಿರಂತರ ಅಭ್ಯಾಸ ಅಗತ್ಯ' ಎಂದರು.

ಯುಜಿಐ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಮಾತನಾಡಿ, 'ಚೆಸ್ ವಿಶ್ವಕ್ಕೆ ಭಾರತ ನೀಡಿದ ಶ್ರೇಷ್ಠ ಕೊಡುಗೆಯಾಗಿದೆ. ಮಕ್ಕಳ ಕೌಶಲ, ಮಾನಸಿಕ ಸಾಮರ್ಥ್ಯ ಚುರುಕುಗೊಳಿಸುವುದರ ಜತೆಗೆ ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆಗೆ ಸಹಕಾರಿ' ಎಂದು ಅಭಿಪ್ರಾಯಪಟ್ಟರು.

ಮಕ್ಕಳ ಚೆಸ್ ಪಂದ್ಯಾವಳಿಯನ್ನು ಕಿರಿಯ ಗ್ರ್ಯಾಂಡ್ ಮಾಸ್ಟರ್ ಪ್ರಣವ್ ಆನಂದ್ ಉದ್ಘಾಟಿಸಿದರು.

9ರಿಂದ -19 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು.

ಯುನಿವರ್ಸಲ್ ಸಮೂಹದ ಆಡಳಿತಾಧಿಕಾರಿ ಜೆ. ಸಂತೋಷ್ ಶೆಟ್ಟಿ, ಯುನಿವರ್ಸಲ್ ಪಿಯು ಕಾಲೇಜಿನ ಪ್ರಾಂಶುಪಾಲ ನವೀನ್ ಪ್ರಸಾದ್, ಐಕ್ಯೂಎಸಿ ಸಂಯೋಜಕಿ ಸುಚಿತ್ರಾ ಶೆಟ್ಟಿ, ದೈಹಿಕ ಶಿಕ್ಷಣ ನಿರ್ದೇಶಕ ಜಲಕ್ ಶರ್ಮಾ, ಕೆಡಿಸಿಎ ಸಂಸ್ಥಾಪಕ ಅಧ್ಯಕ್ಷ ಜಯಪಾಲ ಚಂದಾಡಿ, ಬಿಯುಡಿಸಿಎ ಅಧ್ಯಕ್ಷೆ ಎಂ.ಯು. ಸೌಮ್ಯಾ ಹಾಜರಿದ್ದರು.

ಎನ್‌ಟಿಸಿಎ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಅಭಯಾರಣ್ಯದಲ್ಲಿ ನಿಯಮಬಾಹಿರವಾಗಿ ಪ್ರವಾಸೋದ್ಯಮ ಚಟುವಟಿಕೆಗಳು ನಡೆದರೂ ಮೌನ ವಹಿಸಿದ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯವು ವನ್ಯಜೀವಿ ವಿಭಾಗಕ್ಕೆ ನಿರ್ದೇಶನ ನೀಡಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಉಲ್ಲಂಘಿಸಿ ನಿಯಮಬಾಹಿರವಾಗಿ ಹಲವು ಕಾಮಗಾರಿಗಳನ್ನು ನಡೆಸಿರುವ ಅಧಿಕಾರಿಗಳ ಹಾಗೂ ದೂರು ನೀಡಿದರೂ ಕ್ರಮ ಕೈಗೊಳ್ಳದ ಎನ್‌ಟಿಸಿಎ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಹಿತಿ ಹಕ್ಕು ಕಾರ್ಯಕರ್ತ ಅಕ್ಕೀವ್ ಅವರು ದೂರು ಸಲ್ಲಿಸಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ಪ್ರಧಾನಿ ಸಚಿವಾಲಯವು ಅರಣ್ಯ ಸಚಿವಾಲಯಕ್ಕೆ ಸೂಚಿಸಿತ್ತು.

'ಈ ಪ್ರಕರಣದಲ್ಲಿ ಐಎಫ್‌ಎಸ್ ಅಧಿಕಾರಿ ವಿರುದ್ಧ ಆರೋಪ ಮಾಡಲಾಗಿದೆ. ಶಿಸ್ತು ಪ್ರಾಧಿಕಾರವಾಗಿರುವ ರಾಜ್ಯ ಸರ್ಕಾರವೇ ಈ ಪ್ರಕರಣದಲ್ಲಿ ಕ್ರಮ ಕೈಗೊಳ್ಳಬೇಕಿದೆ. ನಿಯಮಗಳನ್ನು ಹಾಗೂ ಮಾರ್ಗಸೂಚಿಗಳನ್ನು ಪರಿಶೀಲಿಸಿ ಅಧಿಕಾರಿ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸಚಿವಾಲಯವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿತ್ತು.

'ಎನ್‌ಟಿಸಿಎ ಅಧಿಕಾರಿಗಳ ವಿರುದ್ಧ ದೂರು ನೀಡಲಾಗಿತ್ತು. ಆದರೆ, ಸಚಿವಾಲಯವು ತಪ್ಪು ಮಾಹಿತಿ ನೀಡಿದೆ ಹಾಗೂ ಹೊಣೆಯಿಂದ ಜಾರಿಕೊಂಡಿದೆ. ಎನ್‌ಟಿಸಿಎ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಇರುವುದು ಪರಿಸರ ಸಚಿವಾಲಯಕ್ಕೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಅಕ್ಕೀವ್ ಅವರು ಸಚಿವಾಲಯಕ್ಕೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಇದೀಗ, ಎನ್‌ಟಿಸಿಎ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಚಿವಾಲಯ ತೀರ್ಮಾನಿಸಿದೆ.

ದೂರಿನಲ್ಲಿ ಏನಿತ್ತು?:

'ಹುಲಿ ಮೀಸಲು ಪ್ರದೇಶದ ಕೋರ್ ಪ್ರದೇಶವಾದ ನುಜ್ಜಿ ನರ್ಸರಿ ಪ್ರದೇಶದಲ್ಲಿ ಬೃಹತ್ ಮರಗಳನ್ನು ಕಡಿದು ಆರ್ಕಿಡೇರಿಯಂ ನಿರ್ಮಿಸಲಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಕೋರ್ ಪ್ರದೇಶದಲ್ಲಿ ಯಾವುದೇ ಹೊಸ ಪ್ರವಾಸಿ ನಿರ್ಮಾಣ ಕಾಮಗಾರಿಗೆ ಅನುವು ಮಾಡಿಕೊಡುವುದಿಲ್ಲ ಎಂದು ಎನ್‌ಟಿಸಿಎ ಈ ಹಿಂದೆಯೇ ತೀರ್ಮಾನ ತೆಗೆದುಕೊಂಡಿದೆ. ಆದರೆ, ಈ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಕಾಮಗಾರಿ ನಡೆಸಲು ಅವಕಾಶ ನೀಡಲಾಗಿದೆ' ಎಂದು ಅಕ್ಕೀವ್ ದೂರಿದ್ದರು.

'ಹುಲಿ ಸಂರಕ್ಷಿತ ಪ್ರದೇಶದ ಹುಲಿ ಸಂರಕ್ಷಣಾ ಯೋಜನೆಯಲ್ಲಿ ಉಲ್ಲೇಖವಿರದಿದ್ದರೂ ಕ್ಯಾಸಲ್ ರಾಕ್ ವಲಯದಲ್ಲಿ ಕಾನೂನುಬಾಹಿರವಾಗಿ ಜಂಗಲ್ ರೈಡ್ ಹೆಸರಿನಲ್ಲಿ ಕೆನೋಪಿ ವಾಕ್ ಪ್ರದೇಶ, ಪಾಪುಲ್ವಾಡಿ ಜಲಪಾತ ಪ್ರದೇಶ ಸೇರಿದಂತೆ ಹಲವೆಡೆ ಜಂಗಲ್ ಸಫಾರಿ ಆರಂಭಿಸಲಾಗಿದೆ. ಅನುಮತಿ ನೀಡಿರುವ ಚಾರಣ ಪಥಗಳನ್ನು ಹೊರತುಪಡಿಸಿ ಇನ್ನೂ ಐದು ದಾರಿಗಳಲ್ಲಿ ಅಕ್ರಮವಾಗಿ ಚಾರಣಕ್ಕೆ ಅವಕಾಶ ಕಲ್ಪಿಸಿದ್ದಾರೆ' ಎಂದು ದೂರಲಾಗಿತ್ತು.

'ಶಿವಪುರ ಬಳಿ ತೂಗು ಸೇತುವೆಯನ್ನು ಅರಣ್ಯ ಸಂರಕ್ಷಣಾ ಕಾಯ್ದೆ 1980 ನ್ನು ಉಲ್ಲಂಘಿಸಿ ನಿರ್ಮಿಸಲಾಗಿದೆ. ನೀಲಿ ಜಲಪಾತದ ಬಳಿಯಲ್ಲಿ ಅನಧಿಕೃತವಾಗಿ ಪ್ರವಾಸೋದ್ಯಮ ಚಟುವಟಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕಾಳಿ ನದಿಯ ಹಿನ್ನೀರಿನಲ್ಲಿ ಬೋಟ್ ಸಫಾರಿ ಆರಂಭಿಸಲಾಗಿದೆ. ವನ್ಯಜೀವಿ ಕಾಯ್ದೆಗಳನ್ನು ಗಾಳಿಗೆ ತೂರಿ ಈ ಎಲ್ಲ ಚಟುವಟಿಕೆಗಳಿಗೆ ಅನುವು ಮಾಡಿಕೊಡಲಾಗಿದೆ' ಎಂದು ದೂರಲಾಗಿತ್ತು.

'ವಕ್ಫ್ ಆಸ್ತಿ ಹೆಚ್ಚಿದರೆ ದೇಶಕ್ಕೆ ಅಪಾಯ'

ದಾವಣಗೆರೆ: ವಕ್ಫ್ ಮಂಡಳಿಯ ಆಸ್ತಿ ಹತ್ತು ವರ್ಷಗಳಲ್ಲಿ ಶೇ 30ರಷ್ಟು ಹೆಚ್ಚಾಗಿದೆ. ಇದು ಹೀಗೆ ಮುಂದುವರಿದರೆ ದೇಶ ವಿರೋಧಿ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕು ದೊಡ್ಡ ಅಪಾಯ ಎದುರಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

'ವಕ್ಫ್ ಆಸ್ತಿಯನ್ನು ಮುಸ್ಲಿಂ ಸಮುದಾಯದವರ ಬಳಕೆಗೆ ನೀಡಲಾಗುತ್ತದೆ. ಆಗ ಅಲ್ಲಿ ಎಂಥ ಚಟುವಟಿಕೆಗಳು ನಡೆಯುತ್ತವೆ ಎಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ವಿಶೇಷ ಸ್ಥಾನ ಪಡೆದಿದ್ದ ಕಾಶ್ಮೀರ ಭಯೋತ್ಪಾದಕರ ನೆಲೆಯಾಗಿರಲಿಲ್ಲವೇ?' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

ಮೈಸೂರು ರೇಸ್

ರೈಸ್ ಎ ಬಕ್ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೈಸ್ ಎ ಬಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ರೇಕ್ ಅವೇ 1, ನ್ಯಾಚುರಲ್ ಫ್ಲೈ 2, ಗೇಮ್ ಬಾಯ್ 8
2ನೇ ರೇಸ್: ಎಪ್ಸಮ್ ಡೌನ್ಸ್ 7, ಬಂಡೆಲ್‌ಖಾಂಡ್ ಕ್ವೀನ್ 6, ಪೋಲಾರ್ ಕ್ವೀನ್ 10
3ನೇ ರೇಸ್: ಇನ್‌ಎಕ್ಸಾಸ್ಟಿಬಲ್ 5, ಐಲ್ಯಾಂಡ್ ಲಾಸ್ 2, ನಾಡಿ ಮೆಥಡ್ಸ್ 9
4ನೇ ರೇಸ್: ವೆಲ್ಲಿಂಗ್ಟನ್ 4, ಡಿ ರೋಮನ್ ರೀನ್ಸ್ 5, ಕೋರ್ಟ್ ಜೆಸ್ಟರ್ 1
5ನೇ ರೇಸ್: ರೈಸ್ ಎ ಬಕ್ 12, ಹೀರೊಯಿಸ್ಮ್ 14, ಸ್ಪೆಕ್ಟಾಕ್ಯುಲರ್ 2
6ನೇ ರೇಸ್: ಸರ್ವೋತ್ತಮ್ 7, ಟಾರೆಕ್ 1, ಫ್ರೀ ಸ್ಪಿರಿಟೆಡ್ 10
7ನೇ ರೇಸ್: ಟೈಗರ್‌ಕಿಂಗ್ 1, ಬ್ರಿಲಿಯಂಟ್ ಲೈಟ್ 5, ರಿವಿಲೇಟರ್ 12

ಉತ್ತಮ ಬೆಟ್: ಇನ್‌ಎಕ್ಸಾಸ್ಟಿಬಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸಂಚಾರ ವಿಭಾಗದ ಪೊಲೀಸರ ಅಭಿಯಾನಕ್ಕೆ ಲಕ್ಷಕ್ಕೂ ಹೆಚ್ಚು ಚಾಲಕರ ಬೆಂಬಲ

ಆಟೊಗಳಲ್ಲಿ ಅನ್ಯ ಭಾಷಿಕರಿಗೆ 'ಕನ್ನಡ ಪಾಠ'

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ನೆಲೆಸಿರುವ ಅನ್ಯ ಭಾಷಿಕರಿಗೆ 'ಕನ್ನಡ ಭಾಷೆ' ಕಲಿಸುವ ಸಂಚಾರ ವಿಭಾಗದ ಪೊಲೀಸರ ವಿನೂತನ ಅಭಿಯಾನಕ್ಕೆ ಲಕ್ಷಕ್ಕೂ ಅಧಿಕ ಆಟೊ ಚಾಲಕರು ಕೈ ಜೋಡಿಸಿದ್ದು, ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

'ಕನ್ನಡ ಕಲಿಸಿ, ಕನ್ನಡ ಬಳಸಿ' ಎಂಬ ಧ್ಯೇಯ ವಾಕ್ಯದಡಿ ಆಟೊಗಳಿಗೆ ಪ್ರದರ್ಶಕ ಫಲಕಗಳನ್ನು ವಿತರಿಸಲಾಗಿದ್ದು, ಅದರಲ್ಲಿ ಕನ್ನಡ ಪದಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆಯಲಾಗಿದೆ. ಇದರಿಂದ ಚಾಲಕ ಮತ್ತು ಪರಭಾಷಿಕ ಪ್ರಯಾಣಿಕರ ನಡುವೆ ಸಂವಹನದಲ್ಲಿನ ತೊಡಕು ನಿವಾರಣೆಗೆ ಅನುಕೂಲ ಕಲ್ಪಿಸಲಾಗಿದೆ. ಇದರ ಮೂಲಕ ಅನ್ಯಭಾಷಿಕರಿಗೆ ಕನ್ನಡ ಕಲಿಸುವ ಪ್ರಯತ್ನ ಆರಂಭವಾಗಿದೆ.

ನಗರದ ಪ್ರತಿ ಸಂಚಾರ ಪೊಲೀಸ್ ಠಾಣೆಗಳ ಪೊಲೀಸರು ಆಟೊ ಚಾಲಕರಿಗೆ ಪ್ರದರ್ಶಕ ಫಲಕಗಳನ್ನು ವಿತರಿಸಿದ್ದಾರೆ. ಇವುಗಳನ್ನು ಮೀಟರ್ ಬಾಕ್ಸ್ ಬಳಿ ಚಾಲಕರು ಅಳವಡಿಸಿಕೊಂಡಿದ್ದಾರೆ. ಫಲಕದಲ್ಲಿ ಕ್ಯೂಆರ್ ಕೋಡ್ ನೀಡಲಾಗಿದ್ದು, ಮೊಬೈಲ್‌ಗಳಲ್ಲಿ ಕ್ಯೂ ಆರ್ ಕೋಡ್ ಸ್ಕ್ಯಾನರ್ ಬಳಸಿ ಸಂವಹನ ನಡೆಸಬಹುದಾಗಿದೆ. ಅನ್ಯಭಾಷಿಕರ ಜತೆ ಸಂವಹನ ಹೇಗೆ ನಡೆಸಬೇಕು? ಎಂಬುದರ ಕುರಿತು ಆಟೊ ಚಾಲಕರಿಗೆ ಮಾರ್ಗದರ್ಶನ ನೀಡಲಾಗಿದೆ. ತುರ್ತು ಸೇವೆಯ ನಂಬರ್ 112 ಅನ್ನೂ ಸಹ ಪ್ರದರ್ಶಿಸಲಾಗಿದೆ.

ಸಂಚಾರ ಪೊಲೀಸರ ಅಭಿಯಾನಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡಿಗರು ಮೆಚ್ಚುಗೆ ವ್ಯಕ್ತಪಡಿಸಿ, ಕಾರ್ಯವನ್ನು ಶ್ಲಾಘಿಸಿದ್ದಾರೆ.

'ಕನ್ನಡೇತರರು ಕನ್ನಡದ ಕೆಲವು ಪದಗಳನ್ನು ಕಲಿಯುವುದರಿಂದ ನಮ್ಮ ಜತೆ ಸಂವಹನ ನಡೆಸಲು ಅನುಕೂಲವಾಗುತ್ತದೆ. ಚಾಲಕರೊಂದಿಗೆ ಸ್ನೇಹಪರ ಸಂಪರ್ಕ ಹೊಂದಲು ಇದು ಉತ್ತಮ ಮಾರ್ಗವಾಗಿದೆ. ಪ್ರದರ್ಶಕ ಫಲಕಗಳನ್ನು ನೋಡಿ, ಕೆಲ ಪ್ರಯಾಣಿಕರು ಕನ್ನಡ ಕಲಿಯಲು ಪ್ರಯತ್ನಿಸಿದ್ದಾರೆ. ಇದು ಉತ್ತಮ ಬೆಳವಣಿಗೆ' ಎಂದು ಆಟೊ ಚಾಲಕ ಸುರೇಶ್ ಹೇಳಿದರು.

ಆಟೊದಲ್ಲಿ ಹಾಕಿರುವ ಪರಭಾಷಿಕರಿಗೆ ಕನ್ನಡ ಕಲಿಸುವ ಪ್ರದರ್ಶಕ ಫಲಕ.

ಅನ್ಯ ಭಾಷಿಕರಿಗೆ ಕನ್ನಡ ಕಲಿಸಲು ಲಕ್ಷಕ್ಕೂ ಅಧಿಕ ಆಟೊಗಳಿಗೆ ಪ್ರದರ್ಶಕ ಫಲಕಗಳನ್ನು ತಲುಪಿಸುವ ಗುರಿ ಹೊಂದಲಾಗಿದೆ. ಇದರಿಂದ ಪ್ರಯಾಣಿಕರು ಮತ್ತು ಆಟೊ ಚಾಲಕರು ಸಂವಹನ ನಡೆಸಲು ಸಹಕಾರಿಯಾಗುತ್ತದೆ

ಕುಲದೀಪ್ ಜೈನ್,
ಸಂಚಾರ ವಿಭಾಗದ ಡಿಸಿಪಿ

ಅಜ್ಮಲ್‌ರ ಕನ್ನಡದ ಕೆಲಸ ಪ್ರೇರಣೆ:

ನಿತ್ಯ ತನ್ನ ಆಟೊದಲ್ಲಿ ಪ್ರಯಾಣಿಸುವ ಕನ್ನಡೇತರರಿಗೆ ಕನ್ನಡ ಕಲಿಸುವ ಮೂಲಕ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿಯಾಗಿದ್ದ ಆಟೊ ಚಾಲಕ ಅಜ್ಮಲ್ ಸುಲ್ತಾನ್ ಅವರಿಂದ ಪ್ರೇರೇಪಿತರಾಗಿ ಸಂಚಾರ ವಿಭಾಗದ ಪೊಲೀಸರು ಈ ಅಭಿಯಾನ ಆರಂಭಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಇಳಕಲ್‌ನ ಅಜ್ಮಲ್ ಅವರು ಹತ್ತು ವರ್ಷದಿಂದ ನಗರದಲ್ಲಿ ನೆಲೆಸಿದ್ದಾರೆ. ತಮ್ಮ ಆಟೊದಲ್ಲಿ ಪ್ರಯಾಣದ ಸಂದರ್ಭದಲ್ಲಿ ಅಗತ್ಯವಿರುವ ಕನ್ನಡದ ಕೆಲ ವಾಕ್ಯಗಳನ್ನು ಇಂಗ್ಲಿಷ್ ಹಾಗೂ ಕನ್ನಡ ಭಾಷೆಯಲ್ಲಿ ಬರೆದ ಫಲಕ ಹಾಕಿಕೊಂಡಿದ್ದಾರೆ. ಇಲ್ಲಿ ಕನ್ನಡ ಭಾಷೆಯೂ ಇಂಗ್ಲಿಷ್ ಪದದಲ್ಲಿ ಇರುವುದರಿಂದ ಪರಭಾಷಿಕರು ಸರಳವಾಗಿ ಓದಿ ಅರ್ಥೈಸಿಕೊಂಡು ಬಳಸಬಹುದು.

ಸಂಚಾರ ವಿಭಾಗದ ಪೊಲೀಸರು ನೀಡಿರುವ ಫಲಕಗಳಲ್ಲಿ ಸ್ವಲ್ಪ ಬದಲಾವಣೆ ಮಾಡಲಾಗಿದ್ದು, ಪ್ರಯಾಣಿಕರ ಪ್ರಶ್ನೆಯೊಂದಿಗೆ ಚಾಲಕರ ಉತ್ತರದ ಮಾದರಿಯೂ ಒಳಗೊಂಡಿದೆ.

'ಈವರೆಗೂ ಒಂದು ಸಾವಿರ ಫಲಕಗಳನ್ನು ಮುದ್ರಿಸಿ ಆಟೊ ಚಾಲಕರಿಗೆ ನೀಡಲಾಗಿದೆ. ಇದಕ್ಕೆ ವಿವಿಧ ಸಂಘಟನೆಗಳು ಸಹಕಾರ ನೀಡಿವೆ.ಈ ಫಲಕ ನೋಡಿ ಕನ್ನಡೇತರರು ಕನ್ನಡ ಕಲಿಯಲು ಆರಂಭಿಸಿದ್ದಾರೆ. ಕನ್ನಡ ಕಲಿಯಲು ಅವಕಾಶ ಹಾಗೂ ಸಮಯದ ಕೊರತೆಯಿರುತ್ತದೆ. ಇಂತಹ ಪ್ರಯಾಣಿಕರಿಗೆ ಆಟೊದಲ್ಲಿ ಪ್ರಯಾಣಿಸುವಾಗಲೇ ಕನ್ನಡ ಪದಗಳನ್ನು ಹೇಳಿಕೊಟ್ಟು, ಬಳಸಿದ ಉದಾಹರಣೆಗಳು ಇವೆ' ಎಂದು ಅಜ್ಮಲ್ ಹೇಳಿದರು.

ಯಂಗ್ ಓರಿಯನ್ಸ್ ತಂಡಗಳಿಗೆ ಜಯ

ಬೆಂಗಳೂರು: ಯಂಗ್ ಓರಿಯನ್ಸ್ ತಂಡಗಳು ಮಂಗಳವಾರ ಎಸ್‌ಎಸಿ ಕಪ್‌ಗಾಗಿ ರಾಜ್ಯ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗದ ಲೀಗ್ ಪಂದ್ಯಗಳಲ್ಲಿ ಜಯ ಸಾಧಿಸಿದವು.

ವಿವೇಕ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಶ್ರಯದಲ್ಲಿ ಜಾಲಹಳ್ಳಿಯ ಸೇಂಟ್ ಕ್ಲಾರೆಟ್ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಡೆದ ಪುರುಷರ ಪಂದ್ಯದಲ್ಲಿ ಯಂಗ್ ಓರಿಯನ್ಸ್ ತಂಡವು 74–53ರಿಂದ ಭಾರತ್ ತಂಡವನ್ನು ಮಣಿಸಿತು. ಓರಿಯನ್ಸ್‌ನ ಆರೋನ್ 25 ಅಂಕ ಗಳಿಸಿದರೆ, ಭಾರತ್ ತಂಡದ ವಿನುಷ್ 20 ಪಾಯಿಂಟ್ಸ್ ಕಲೆ ಹಾಕಿದರು. ಮಹಿಳೆಯರ ಪಂದ್ಯದಲ್ಲಿ ಓರಿಯನ್ಸ್ ತಂಡವು 23–6ರಿಂದ ಆತಿಥೇಯ ವಿವೇಕ್ಸ್ ತಂಡವನ್ನು ಮಣಿಸಿತು.

ಲೀಗ್ ಪಂದ್ಯಗಳ ಫಲಿತಾಂಶಗಳು: ಪುರುಷರು: ಬ್ಯಾಂಕ್ ಆಫ್ ಬರೋಡಾ 87–39ರಿಂದ ವಿವೇಕ್ಸ್ ವಿರುದ್ಧ; ಯಂಗ್ ಓರಿಯನ್ಸ್ 74–53ರಿಂದ ಭಾರತ್ ವಿರುದ್ಧ; ಜೆಎಸ್‌ಸಿ 79–55 ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ; ಕೆಎಸ್‌ಪಿ 62–49ರಿಂದ ಎಂಸಿಎಚ್‌ಎಸ್ ವಿರುದ್ಧ ಜಯ ಸಾಧಿಸಿತು.

ಮಹಿಳೆಯರು: ಡಿವೈಇಎಸ್ ಮೈಸೂರು 50–34ರಿಂದ ಸದರ್ನ್ ಬ್ಲೂಸ್ ಎದುರು; ಬೀಗಲ್ಸ್ 54–47 ಬೆಂಗಳೂರು ವ್ಯಾನ್ಗಾರ್ಡ್ಸ್ ಎದುರು; ಯಂಗ್ ಓರಿಯನ್ಸ್ 23–6ರಿಂದ ವಿವೇಕ್ಸ್ ಎದುರು ಗೆಲುವು ಸಾಧಿಸಿತು.

ಎಚ್.ಡಿ.ಕೋಟೆ ತಾಲ್ಲೂಕಿನ ಕೆರೆಹಾಡಿಯಲ್ಲಿ ನಡೆದ ಸಂವಾದದಲ್ಲಿ ಸಿ.ಎಂ ಸಿದ್ದರಾಮಯ್ಯ ಭರವಸೆ

‘ಆದಿವಾಸಿಗಳಿಗೆ ಅಭಿವೃದ್ಧಿ ನಿಗಮ’

ಪ್ರಜಾವಾಣಿ ವಾರ್ತೆ

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಕೆರೆಹಾಡಿಯಲ್ಲಿ ಮಂಗಳವಾರ ಆದಿವಾಸಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೋಲಾಟ ಆಡಿದರು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ‘ಅರಣ್ಯದಲ್ಲಿ ವಾಸಿಸುವ ಆದಿವಾಸಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲು ಕ್ರಮ ವಹಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತಾಲ್ಲೂಕಿನ ಕೆರೆಹಾಡಿಯಲ್ಲಿ ಮಂಗಳವಾರ ಸಂಜೆ ನಡೆದ ಸಂವಾದದಲ್ಲಿ, ‘ಪರಿಶಿಷ್ಟ ಪಂಗಡದ ಮೀಸಲಿನಲ್ಲಿ ಆದಿವಾಸಿಗಳಿಗೆ ಒಳಮೀಸಲಾತಿ ಕೊಡಲು ಅವಕಾಶವಿಲ್ಲ. ಮುಂದಿನ ದಿನಗಳಲ್ಲಿ ಸಮಿತಿ ರಚಿಸಲಾಗುವುದು. ವರದಿ ಆಧರಿಸಿ ಒಳ ಮೀಸಲಾತಿಗೆ ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು’ ಎಂದರು.

‘ವನ್ಯಜೀವಿ ಕಾನೂನಿನಡಿ ಆದಿವಾಸಿ ಗಳಿಗೆ ಯಾವ ಸೌಲಭ್ಯ ಕೊಡಬಹುದೆಂಬುದರ ಬಗ್ಗೆ ವರದಿ ನೀಡಲು ಉನ್ನತ ಅಧಿಕಾರಿಯನ್ನು ನೇಮಿಸಲಾಗುವುದು’ ಎಂದು ಭರವಸೆ ನೀಡಿದರು.

ಅಧಿಕಾರಿಗಳದ್ದೇ ಭಯ: ‘ಹಾಡಿಯಲ್ಲಿ ಕುಡಿಯುವ ನೀರಿಲ್ಲ, ಮನೆ ಕಟ್ಟಲು ಅರಣ್ಯಾಧಿಕಾರಿಗಳು ಅವಕಾಶ ಕೊಡುತ್ತಿಲ್ಲ. ಆನೆ, ಹುಲಿ, ಚಿರತೆಯಂತಹ ವನ್ಯಪ್ರಾಣಿಗಳ ಭಯವಿಲ್ಲ. ಆದರೆ, ಅರಣ್ಯ ಅಧಿಕಾರಿಗಳದ್ದೇ ‘ಭಯ’ ಎಂದು ಕೆರೆಹಾಡಿ ನಿವಾಸಿ ರಾಜಪ್ಪ ಅಳಲು ತೋಡಿಕೊಂಡರೆ, ‘ನಾಲ್ಕು ಎಕರೆಯಲ್ಲಿ ಬೇಸಾಯ ಮಾಡುತ್ತಿದ್ದರೂ ಒಂದೆರಡು ಗುಂಟೆ ಜಾಗ ನೀಡಿದ್ದಾರೆ’ ಎಂದು ಮಾಳದ ಹಾಡಿ ನಿವಾಸಿ ಸೋಮೇಶ್ ಗಮನ ಸೆಳೆದರು.

ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಮನೆ ನಿರ್ಮಾಣಕ್ಕೆ ತೊಂದರೆ ನೀಡಬಾರದು. ಕಾನೂನಿನ ಅನುಗುಣವಾಗಿ ಅರಣ್ಯಾಧಿಕಾರಿಗಳು ಸೌಲಭ್ಯ ಕಲ್ಪಿಸಬೇಕು. ಭೂಮಿ ನೀಡುವ ಬಗ್ಗೆ ವನ್ಯಜೀವಿ ಮಂಡಳಿಯ ಸಭೆ ನಡೆಸಿ ತೀರ್ಮಾನಿಸಲಾಗುವುದು’ ಎಂದರು.

ಆದಿವಾಸಿ ಮುಖಂಡ ಕಾಳ ಕಲ್ಲರ್, ‘ಪ್ರೊ.ಮುಜಾಫರ್ ಅಸ್ಸಾದಿ ವರದಿಯಂತೆ 34 ಶಿಫಾರಸುಗಳನ್ನು ಸಚಿವ ಸಂಪುಟ ಅನುಷ್ಠಾನಗೊಳಿಸಬೇಕು. ಸಾಗುವಳಿ ಭೂಮಿಗೆ ಪಕ್ಕಾ ಪೋಡು ಮಾಡಿಸಬೇಕು. ಬಜೆಟ್ ಅನುದಾನದ ಜೊತೆಗೆ ಮುಖ್ಯಮಂತ್ರಿ ನಿಧಿಯಿಂದ ಆದಿವಾಸಿ ಹಾಡಿಗಳನ್ನು ಮಾದರಿ ಹಾಡಿಯಾಗಿ ಮಾಡಬೇಕು’ ಎಂದು ಕೋರಿದರು.

ಅಭಿವೃದ್ಧಿ ಕೆಲಸಗಳಿಗೆ ಹಣವಿದೆ: ‘ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಗಳಿಗೆ ಸರ್ಕಾರದ ಬಳಿ ಹಣವಿಲ್ಲವೆಂದು ವಿರೋಧ ಪಕ್ಷಗಳ ಟೀಕೆಯಲ್ಲಿ ಸತ್ಯಾಂಶವಿಲ್ಲ. ಸುಳ್ಳೇ ಅವರ ಮನೆ ದೇವರು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

‘ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಸರ್ಕಾರದ ಬಳಿ ಹಣವಿಲ್ಲವೆಂದು ಬಿಜೆಪಿಯವರು ಹೇಳುತ್ತಿದ್ದಾರೆ. ಎಲ್ಲರಿಗೂ ಸಂಬಳ ಆಗುತ್ತಿಲ್ಲವೆ? ಎಚ್.ಡಿ.ಕೋಟೆಯಲ್ಲಿ ₹ 443.64 ಕೋಟಿ, ತಿ.ನರಸೀಪುರದಲ್ಲಿ ₹ 500 ಕೋಟಿ ವೆಚ್ಚದ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಈಗ ಹೇಳಿ ಸರ್ಕಾರದ ಬಳಿ ಹಣವಿಲ್ಲವೇ' ಎಂದು ಜನರನ್ನು ಪ್ರಶ್ನಿಸಿದರು.

ನಾಗೇಂದ್ರಗೆ ಸಚಿವ ಸ್ಥಾನ: ಮುಖ್ಯಮಂತ್ರಿ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ‘ಶಾಸಕ ಬಿ.ನಾಗೇಂದ್ರ ಅವರನ್ನು ಉಪಚುನಾವಣೆ ನಂತರ ಸಚಿವ ಸಂಪುಟಕ್ಕೆ ಸೇರಿಸಿ ಕೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಟ್ಟಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ₹443.64 ಕೋಟಿ ವೆಚ್ಚದಲ್ಲಿ ಎಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

‘ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣ ದುರುಪಯೋಗ ಆಗಿದೆಯೆಂದು ಬಿಜೆಪಿಯವರು ಸುಳ್ಳು ಪ್ರಕರಣವನ್ನು ದಾಖಲಿಸಿದ್ದರು. ನಾಗೇಂದ್ರ ಅವರು ಜಾಮೀನು ಪಡೆದು ಹೊರಬಂದಿದ್ದಾರೆ. ಈ ಹಿಂದೆಯೂ ಸಚಿವರಾಗಿದ್ದರು. ಉಪ ಚುನಾವಣೆ ಮುಗಿದ ನಂತರ ಸಚಿವ ಸ್ಥಾನ ಕೊಡಲಾಗುವುದು’ ಎಂದರು.

‘ಶಾಸಕ ಅನಿಲ್ ಚಿಕ್ಕಮಾದು ಅವರಿಗೂ ಸಚಿವ ಸ್ಥಾನ ನೀಡಬೇಕು’ ಎಂಬ ಬೇಡಿಕೆ ವೇದಿಕೆಯಿಂದ ಬಂದಾಗ, ರಾಜನಹಳ್ಳಿ ಮಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅವರನ್ನು ಉದ್ದೇಶಿಸಿ, ‘ನಾಗೇಂದ್ರ ನಂತರ ಅನಿಲ್ ಅವರಿಗೆ ಅವಕಾಶ ನೀಡಲಾಗುವುದು. ನಾನು ಮಾತಿಗೆ ತಪ್ಪುವುದಿಲ್ಲ. ಅನಿಲ್ ಅವರಿಗೂ ರಾಜಕೀಯವಾಗಿ ಶಕ್ತಿ ತುಂಬುವ ಕೆಲಸವನ್ನು ಮಾಡುತ್ತೇನೆ’ ಎಂದರು.

‘ಪರಿಶಿಷ್ಟ ಜಾತಿ, ಪಂಗಡ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಹಣವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡುವುದಿಲ್ಲ. ಎಲ್ಲ ಜಾತಿಯ ಬಡವರು, ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕು. ಈ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ’ ಎಂದರು.

‘ಯಕ್ಷಶ್ರೀ ಪ್ರಶಸ್ತಿ’ ಪ್ರದಾನ

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಮಣ್ಣಿಗೆಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಶ್ರೀಗಣೇಶ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಕಡತೋಕದ ಆರ್.ಗಣೇಶ ಅವರಿಗೆ ‘ಉತ್ತರ ಕನ್ನಡ ಜಿಲ್ಲಾ ಯಕ್ಷಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹1 ಲಕ್ಷ ನಗದು, ಬೆಳ್ಳಿ ಕಡಗ ಒಳಗೊಂಡಿದೆ. ಯಕ್ಷಗಾನ ಕಲಾವಿದ ರಾಮಚಂದ್ರ ಹೆಗಡೆ ಕೊಂಡದಕುಳಿ, ಟ್ರಸ್ಟ್ ಅಧ್ಯಕ್ಷ ಸತ್ಯನಾರಾಯಣ ಶೆಟ್ಟಿ, ರಂಗ ನಿರ್ದೇಶಕ ಜಿ.ಪಿ.ಭಟ್ಟ ಕೆಕ್ಕಾರ, ಸಂತೋಷ ಯಾಜಿ, ಸಾಹಿತಿ ಹಂ.ಪ.ನಾಗರಾಜಯ್ಯ, ಸೆಲ್ಕೊ ಸಿಇಒ ಮೋಹನ ಹೆಗಡೆ ಪಾಲ್ಗೊಂಡಿದ್ದರು

ಮದುವೆ ಖರ್ಚಿನಲ್ಲಿ ಶಾಲೆಗಳಿಗೆ ನೀರಿನ ಯಂತ್ರ

ಶಿವಕುಮಾರ್– ಸಂಗೀತಾ ದಂಪತಿ

ಅರಕಲಗೂಡು ತಾಲ್ಲೂಕಿನ ಕಸಬಾ ಸರ್ಕಾರಿ ಪ್ರಾಥಮಿಕ ಶಾಲೆಗೆ ಕುಡಿಯುವ ನೀರಿನ ಶುದ್ಧೀಕರಣ ಯಂತ್ರಗಳನ್ನು ಕೊಡುಗೆಯಾಗಿ ನೀಡಿದ ಶಿವಕುಮಾರ್

ಅರಕಲಗೂಡು (ಹಾಸನ ಜಿಲ್ಲೆ): ತಾಲ್ಲೂಕಿನ ಹೊನ್ನವಳ್ಳಿ ಕೊಪ್ಪಲಿನ ಬಿದುರುವಳ್ಳಿಯ ಎಂಜಿನಿಯರ್ ಶಿವಕುಮಾರ್ ಅವರು, ಮಂಡ್ಯ ಜಿಲ್ಲೆ ಕೆರೆಗೋಡು ಹಲ್ಲೆಗೆರೆಯ ಸಂಗೀತಾ ಅವರೊಂದಿಗೆ ಸೋಮವಾರ ಸರಳವಾಗಿ ಮದುವೆ ಯಾಗಿದ್ದು, ಉಳಿಸಿದ ಹಣದಲ್ಲಿ ಕಸಬಾ ಹೋಬಳಿಯ 26 ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರಿನ ಶುದ್ಧೀಕರಣ ಯಂತ್ರಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ದೇವರಾಜೇಗೌಡ– ರತ್ನಮ್ಮ ದಂಪತಿ ಪುತ್ರರಾದ ಅವರು, ರೈತ ಸಂಘದ ಹೋರಾಟಗಾರರಾಗಿದ್ದ ಹೊ.ತಿ. ಹುಚ್ಚಪ್ಪ ಅವರ ಮೊಮ್ಮಗ. ತಾತ ಮತ್ತು ತಂದೆ ಕಲಿತಿದ್ದ ಹೊನ್ನವಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮದುವೆಗೂ ಮುಂಚೆಯೇ, ನವೆಂಬರ್ 9ರಂದು ಕಾರ್ಯಕ್ರಮ ಏರ್ಪಡಿಸಿ ₹ 5 ಲಕ್ಷ ವೆಚ್ಚದ ಯಂತ್ರಗಳನ್ನು 26 ಶಾಲೆಗಳಿಗೆ ನೀಡಿದರು.

‘ಮದುವೆಯ ನೆನಪಿಗಾಗಿ ಶಿವಕುಮಾರ್ ಪುಣ್ಯದ ಕೆಲಸ ಮಾಡಿದ್ದಾರೆ’ ಎಂದು ಹೇಳಿದ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ್ ಶುಭ ಹಾರೈಸಿದರು. ಹುಚ್ಚಪ್ಪ ಅವರ ಪುತ್ರ ಖಂಡೇಶ್ವರ ಕುಮಾರ್ ಮಾತನಾಡಿ, ‘ನಮ್ಮ ತಂದೆಯು ಮಕ್ಕಳಿಗೆ ಸರಳ ವಿವಾಹ ಮಾಡಿ ಆದರ್ಶ ಮೆರೆದಿದ್ದರು. ಅವರ ಮೊಮ್ಮಗನೂ ಅದೇ ಹಾದಿಯಲ್ಲಿ ನಡೆದು ಸರಳತೆಯ ಹಾದಿಯಲ್ಲಿ ನಡೆದಿರುವುದು ಸಂತಸದ ಸಂಗತಿ’ ಎಂದರು.

ಶಿಕ್ಷಣ ಸಂಯೋಜಕ ಶಿವಪ್ರಕಾಶ್, ಸಿಆರ್‌ಪಿ ಬಾಲು, ನಯಾಜ್, ಮುಖ್ಯ ಶಿಕ್ಷಕಿ ಲಿಂಗಮ್ಮ, ಶಿಕ್ಷಕರಾದ ಲತಾಮಣಿ, ಲೀಲಾ, ನಾಗವೇಣಿ, ಲೋಕೇಶ್ ಮುಖಂಡರಾದ ಸರೋಜಮ್ಮ, ರತ್ನಮ್ಮ, ದೇವರಾಜೇಗೌಡ, ಎಚ್.ಎಚ್. ಜನಾರ್ದನ್, ಪುಷ್ಪಾ, ಶಿವಕುಮಾರ್ ಈ ಅಪರೂಪದ ಸನ್ನಿವೇಶಕ್ಕೆ ಸಾಕ್ಷಿಯಾದರು.

ಗೇಟ್ ಬಿದ್ದು ಬಾಲಕ ಸಾವು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಹುಂಜನಕೆರೆ ಗ್ರಾಮದಲ್ಲಿ ಚನ್ನಕೇಶವ ದೇವಾಲಯದ ಕಾಂಪೌಂಡ್‌ಗೆ ಅಳವಡಿಸಲು ತಂದಿರಿಸಿದ್ದ ಕಬ್ಬಿಣದ ಗೇಟ್ ಬಿದ್ದು, ಗ್ರಾಮದ ಸಿದ್ದರಾಜು ಅವರ ಪುತ್ರ ಜಿಷ್ಣು (6) ಸೋಮವಾರ ರಾತ್ರಿ ಮೃತಪಟ್ಟಿದ್ದಾನೆ

ಎರಡನೇ ಕಾರ್ತಿಕ ಸೋಮವಾರದ ಪೂಜೆಯಾಗಿ, ಭಕ್ತರು ಮನೆಗಳಿಗೆ ತೆರಳಿದ ನಂತರ ರಾತ್ರಿ 9 ಗಂಟೆ ಸುಮಾರಿಗೆ ಬಾಲಕ ಗೇಟ್ ಹಿಡಿದು ಆಟವಾಡುವಾಗ ಅದು ಆತನ ಮೇಲೆ ಬಿದ್ದಿತ್ತು. ತೀವ್ರವಾಗಿ ಗಾಯಗೊಂಡಿದ್ದ ಆತನನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಜಿಷ್ಣು

ತಹಶೀಲ್ದಾರ್ ವಿರುದ್ಧ ದೂರು: ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದು, 6 ತಿಂಗಳ ಹಿಂದೆ ಮುರಿದಿದ್ದ ಗೇಟ್ ಅನ್ನು ಸರಿಪಡಿಸಿರಲಿಲ್ಲ. ಗೋಡೆ ಪಕ್ಕ ನಿಲ್ಲಿಸಿದ್ದ ಗೇಟ್ ಅನ್ನು ಅಳವಡಿಸದ ಕಾರಣ ಈ ದುರಂತ ಸಂಭವಿಸಿದೆ. ತಹಶೀಲ್ದಾರ್, ಅರಕೆರೆ ಹೋಬಳಿಯ ಕಂದಾಯ ನಿರೀಕ್ಷಕ, ಗ್ರಾಮಲೆಕ್ಕಿಗ ಮತ್ತು ದೇವಾಲಯದ ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದ ಘಟನೆ ನಡೆದಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಾಲಕನ ತಂದೆ ಸಿದ್ದರಾಜು ಪೊಲೀಸರಿಗೆ ದೂರು ನೀಡಿದ್ದಾರೆ. ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಕಲಬುರಗಿ

ಸಂಖ್ಯೆ: ಜಿಪಂಗು/ಯೋಶಾ/ಕೆಕೆಆರ್‌ಡಿಬಿ/ಕಲಿಕಾಸರೆ& ಸೃಟಿ.ಲ್ಯಾಬ್/2024–25 ದಿನಾಂಕ : 08–11–2024

:: ಟೆಂಡರ್ ಪ್ರಕಟಣೆ ::

ಈ ಕೆಳಕಂಡ ಸೇವೆ /ಸರಬರಾಜು ಕಾಮಗಾರಿಗೆ ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಆಹ್ವಾನಿಸಲಾಗಿದೆ.
1) 2024–25 ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಕಲಬುರಗಿ ಸಂಖ್ಯೆ: ZPKLB/ PLANSEC/ KKRDB/KALIKAASARE/ 2024-25 ಅರ್ಹ ಗುತ್ತಿಗೆದಾರರಿಂದ 9ನೇ ಮತ್ತು 10ನೇ ತರಗತಿಯ ಫಲಿತಾಂಶ ಸುಧಾರಣೆಗಾಗಿ ವಿದ್ಯಾರ್ಥಿಗಳಿಗೆ ಕಲಿಕಾಸರೆ ಅಭ್ಯಾಸ ಪುಸ್ತಕಗಳು ಸರಬರಾಜು ಮಾಡಲು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. **89,06,400/-**, ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2%) : **1,78,128/–**
2) 2024–25 ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ, ಕಲಬುರಗಿ ಸಂಖ್ಯೆ: ಎಸ್.ಎಸ್.ಕೆ/ಎ.ವಿ. & ಕೆ.ಪಿ.ಎಸ್. / ಸೃಷ್ಟಿ ಲ್ಯಾಬ್ ಟೆಂಡರ್ / 2024–25 ಯೋಜನೆಯಡಿ ಕಲಬುರಗಿ ಜಿಲ್ಲೆಯ 2 ಕೆ.ಪಿ.ಎಸ್. ಶಾಲೆಗಳಿಗೆ ಸೃಷ್ಟಿ ಟಿಂಕರಿಂಗ್ ಲ್ಯಾಬ್ ಸ್ಥಾಪಿಸಲು ಟೆಂಡರ ಅಂದಾಜು ಮೊತ್ತ ರೂ. **16,00,000/-**, ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2%) : ರೂ. 32,000/–
1) ಟೆಂಡರ ಪ್ರಕಟಣೆ ದಿನಾಂಕ : **08-11-2024,** 2) ಟೆಂಡರ ಫಾರಂ ಅಪಲೋಡ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ: **19-11-2024** ಸಾಯಂಕಾಲ 16:00 ಗಂಟೆಯವರೆಗೆ, 3) ಪ್ರಿಬಿಡ್ ಸಭೆಯ ದಿನಾಂಕ: ಮತ್ತು ಸಮಯ : **13-11-2024** 11:00 ಗಂಟೆಗೆ 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **20-11-2024** ಮತ್ತು ವೇಳೆ: ಸಾಯಂಕಾಲ 16:01 ಗಂಟೆಗೆ, 5) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **26-11-2024** ಬೆಳಿಗ್ಗೆ 11.00 ಗಂಟೆಗೆ.
ಮೇಲಿನ ಎರಡು ಟೆಂಡರ್‌ನ ಸಂಪೂರ್ಣ ವಿವರವನ್ನು **www.kppp.karnataka.gov.in** ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ದಸ್ತಾವೇಜುಗಳನ್ನು ಗಮನಿಸುವುದು.

ಸಹಿ/– ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/614/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 19/2024–25
ದಿನಾಂಕ : 04–11–2024

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ : ನರೇಗಾ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು KG-1 & KG-2 (Standard Tender Document) ಪ್ರಕಾರ KPPP ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು KTPP Act 1999 and KTPP Rule 2000 ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ದ್ವಿ ಲಕೋಟೆ ಪದ್ದತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 796.62 ಲಕ್ಷಗಳು ಒಟ್ಟು 25 ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : 06–11–2024 ಕೊನೆಯ ದಿನಾಂಕ : 22–11–2024 ಸಂಜೆ 17.00 ಗಂಟೆಯ ವರೆಗೆ. ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25–11–2024 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು KPPP website www.kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226–223019ಕ್ಕೆ ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗ
ಸಂ:ವಾಸಾಸಂಇ:ಚಾನಗರ:391:2024–25 ಚಾಮರಾಜನಗರ

ಮಹಾನಗರ ಪಾಲಿಕೆ, ವಿಜಯಪುರ

ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್ಎ/ಟಿಎನ್‌ಡಿ/ಇಪ್ರೊ/2024–25/
ದಿನಾಂಕ: 12.11.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **ಮಹಾನಗರ ಪಾಲಿಕೆಯ ಅನುದಾನದಲ್ಲಿ 05 ಕಾಮಗಾರಿಗಳು** ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 28.11.2024.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/408/ಕೆಎಸ್ಎಂಸಿಎ/2024–25

ಜಿಲ್ಲಾಧಿಕಾರಿಯವರ ಕಛೇರಿ,
ತುಮಕೂರು ಜಿಲ್ಲೆ, ತುಮಕೂರು

ಟೆಂಡರ್‌ಬುಲೆಟಿನ್ ಸಂಖ್ಯೆ:ಜಿಪವಕ:ತುಮ:ಹೊ.ಸಂ.ಹಾಸ್ಟೆಲ್:ಸಿಆರ್:05/2024–25, ದಿನಾಂಕ: 13–11–2024

ಮರು–ಟೆಂಡರ್ ಬುಲೆಟಿನ್

ಟೆಂಡರ್ ಹೊರಡಿಸುವ ಪ್ರಾಧಿಕಾರ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ. ಟೆಂಡರ್ ಕ್ರಮಾಂಕ: ಜಿಪವಕ:ತುಮ:ಹೊ.ಸಂ.ಹಾಸ್ಟೆಲ್:ಸಿಆರ್ : 05/2024–25. ಕಾಮಗಾರಿ ವಿವರ : ಹೊರಸಂಪನ್ಮೂಲ ಏಜೆನ್ಸಿಯಿಂದ ವಿದ್ಯಾರ್ಥಿನಿಲಯಗಳಿಗೆ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ ಹಾಗೂ ಇತರೆ ಗ್ರೂಪ್–ಡಿ ನೌಕರರ ಸೇವೆಯನ್ನು ಪಡೆಯಲು ಅಲ್ಪಾವಧಿ ಮರುಟೆಂಡರ್ ಪ್ರಕಟಿಸುವ ಬಗ್ಗೆ. ಅಂದಾಜು ಮೊತ್ತ (ಕೋಟಿಗಳಲ್ಲಿ): **1.51** ಇ.ಎಂ.ಡಿ ಮೊತ್ತ (ರೂಗಳಲ್ಲಿ): **2,27,000/–**. ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ : **13/11/2024**. ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **27/11/2024**. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **27/11/2024**. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ **28/11/2024**. ಟೆಂಡರ್ ಸ್ವೀಕರಿಸುವ ಪ್ರಾಧಿಕಾರ : **ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ.**

ಸಹಿ/– ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ,
DIPR/TUM/RO-77/24-25/Oysters ತುಮಕೂರು ಜಿಲ್ಲೆ.

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ಪ್ರಾದೇಶಿಕ ಉಪ–ವಿಭಾಗ, ಚಿತ್ರದುರ್ಗ–577501

ದೂ. ಸಂಖ್ಯೆ: 08194–230402 ಇಮೇಲ್:acfchitradurga@gmail.com
ಸಂಖ್ಯೆ:ಎ2/ಜಿಜಿಟಿ/ಟೆಂಡರ್/ಸಿಆರ್–01/2024–25 ದಿನಾಂಕ:07.11.2024

ಟೆಂಡರ್ ಪ್ರಕಟಣೆ

ಚಿತ್ರದುರ್ಗ ವಿಭಾಗದಲ್ಲಿ ವಿವಿಧ ಯೋಜನೆಗಳಡಿ 2024–25 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬೇಕಾದ "ಕೆಎಂಇಆರ್‌ಸಿ" ಮತ್ತು "ನಗರವನ" ಯೋಜನೆಗಳಡಿಯಲ್ಲಿ ಮುಂಗಡ ಕಾಮಗಾರಿ ಮತ್ತು ಸಿವಿಲ್ ಕಾಮಗಾರಿಗಳ ಸಂಬಂಧ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ರೂ. 1216.019 ಲಕ್ಷಗಳ ಮೊತ್ತದ ಒಟ್ಟು 61 ಯೂನಿಟ್‌ಗಳಿಗೆ ದಿನಾಂಕ: 07.11.2024 ರಿಂದ 16.11.2024 ರವರೆಗೆ ನಿಗಧಿಪಡಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:15.11.2024 ರಂದು 16:00 ಗಂಟೆಯವರೆಗೆ [ಸಂಜೆ:4.00 ಗಂಟೆ] ನಿಗಧಿಪಡಿಸಲಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 16.11.2024 ರಂದು ಸಂಜೆ 4.00 ಗಂಟೆಯ ನಂತರ ತೆರೆಯಲಾಗುತ್ತದೆ. ಒಂದು ವೇಳೆ ಸದರಿ ಟೆಂಡರ್‌ಗಳಲ್ಲಿ ಅರ್ಹ ಬಿಡ್ಡುದಾರರು ಯಾರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಮರು ಟೆಂಡರ್‌ನ್ನು 17.11.2024 ರಿಂದ 23.11.2024 ರವರೆಗೆ ಮರು ಟೆಂಡರ್ ಕರೆಯಲಾಗುವುದು. ಕಾಮಗಾರಿಗಳ ಹೆಚ್ಚಿನ ವಿವರಗಳ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿಲಾಗಿರುತ್ತದೆ.

RO.No.355:DIPR/CTA/KSMCA/2024-25
ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.
ಚಿತ್ರದುರ್ಗ ಉಪ–ವಿಭಾಗ, ಚಿತ್ರದುರ್ಗ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1&2/ಇ–ಟೆಂಡರ್ ಪ್ರಕಟಣೆ/2024–25/ 3097, ದಿ:08.11.2024

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–2, 3 ಮತ್ತು 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2024–25 ನೇ ಸಾಲಿನ ಲೆಕ್ಕಶೀರ್ಷಿಕೆ ಕೆ.ಕೆ.ಆರ್.ಡಿ.ಬಿ. ಯೋಜನೆ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ಜಿಲ್ಲೆ ಯಾದಗಿರಿ ಉಪ–ವಿಭಾಗ (1)16651 ಮತ್ತು ಶಹಾಪೂರ ಉಪ–ವಿಭಾಗ (1)16142, (2)16198, (3)16393, (4)16394 & (5)16395 ಹಾಗೂ ಸುರಪೂರ ಉಪ–ವಿಭಾಗ (1)15999, (2)16589 & (3)16627 ಒಟ್ಟು 9 (ಒಂಭತ್ತು) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.30.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು ಮತ್ತು ಎಂಎಸ್ಎಂಇ 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಪ್ರೀ ಬಿಡ್ ಮೀಟಿಂಗ್ ದಿನಾಂಕ:** 16.11.2024 (11.30 ಗಂಟೆ ನಂತರ)(ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ) 6) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 20.11.2024 (17.30 ಗಂಟೆವರೆಗೆ) 7) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 22.11.2024 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 25.11.2024 (11.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 27.11.2024 (11.30 ಗಂಟೆ ನಂತರ) 10) **ಹೆಚ್ಚಿನ ವಿವರಗಳಿಗೆ :** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in
ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/278/ಕೆ.ಎಸ್.ಎಂ.ಸಿ.&ಎ/2024–25 ಲೋಕೋಪಯೋಗಿ ಇಲಾಖೆ, ವಿಭಾಗ: ಯಾದಗಿರಿ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಮುಇಂವಿ/ಟಿಮತ್ತುಪಿ/ಅಇಂ(ವಿ)–1/2/2024–25/5389–412 ದಿನಾಂಕ: 12.11.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ
1.	**Enquiry No.:KPTCL/2024-25/SS/WORK_INDENT1443** ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, **ಮದ್ದೂರಿನಲ್ಲಿ** 2x150ಎಂ.ವಿ.ಎ, & 1x12.5ಎಂವಿಎ, 220/66/11ಕೆವಿ ವಿದ್ಯುತ್ ಉಪ–ಕೇಂದ್ರದ ನಿರ್ಮಾಣ ಹಾಗೂ 5 ಸಂಖ್ಯೆಗಳ 66ಕೆವಿ ಟರ್ಮಿನಲ್ ಬೇಗಳು ಮತ್ತು **4.573 ಕಿಮೀಗಳ** 220ಕೆವಿ ಪ್ರಸರಣ ಮಾರ್ಗ, **48.93 ಕಿಮೀಗಳ** 66ಕೆವಿ ಪ್ರಸರಣ ಮಾರ್ಗಗಳನ್ನು ನಿರ್ಮಿಸುವುದು.
2.	**Enquiry No.:KPTCL/2024-25/SS/WORK_INDENT1444** ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನ **ಯರೇಹಳ್ಳಿಯಲ್ಲಿ** 2x20 ಎಂ.ವಿ.ಎ, 110/11 ಕೆವಿ ಉಪ–ಕೇಂದ್ರವನ್ನು ನಿರ್ಮಿಸುವುದು ಮತ್ತು ಹಾಲಿಯಿರುವ 110 ಕೆವಿ ಶಿವಮೊಗ್ಗ–ನೇರಳೆಕೆರೆ (SBT-2) ಮಾರ್ಗದಿಂದ ಪ್ರಸ್ತಾವಿತ ಯರೇಹಳ್ಳಿ ಉಪ–ಕೇಂದ್ರದ ವರೆಗೆ **1.510 ಕಿ.ಮೀ.,** ಉದ್ದಕ್ಕೆ ಲಿಂಕ್ಸ್ ವಾಹಕದ 110 ಕೆವಿ ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3.	**Enquiry No.: KPTCL/2024-25/SS/WORK_INDENT1441** ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ **ಕುಪ್ಪಗಡ್ಡೆಯಲ್ಲಿ** 2x20 ಎಂ.ವಿ.ಎ, 110/11 ಕೆವಿ ಉಪ–ಕೇಂದ್ರವನ್ನು ನಿರ್ಮಿಸುವುದು ಮತ್ತು ಹಾಲಿಯಿರುವ 110/11 ಕೆವಿ ತೊಗರ್ಸಿ ಉಪಕೇಂದ್ರದಿಂದ ಪ್ರಸ್ತಾವಿತ 110 ಕೆ.ವಿ ಕುಪ್ಪಗಡ್ಡೆ ಉಪಕೇಂದ್ರದ ವರೆಗೆ ಪ್ಯಾಂಥರ್ ವಾಹಕದಿಂದ **11.68 ಕಿ.ಮೀ.** ಉದ್ದಕ್ಕೆ 110ಕೆವಿ ಡಿಸಿ ಪ್ರಸರಣ ಮಾರ್ಗವನ್ನು ಹಾಗೂ ಹಾಲಿಯಿರುವ 110ಕೆವಿ ತೊಗರ್ಸಿ ಉಪಕೇಂದ್ರದಲ್ಲಿ 2 ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.
4.	**Enquiry No.: KPTCL/2023-24/SS/WORK_INDENT1446** ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, **ಸಿದ್ದಾಪುರ (ಬೀಟಿಕಾಡು)** ದಲ್ಲಿ 2x12.5 ಎಂ.ವಿ.ಎ, 66/11 ಕೆವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66/11 ಕೆವಿ ವಿರಾಜಪೇಟೆ ಉಪ–ಕೇಂದ್ರದಿಂದ 66ಕೆವಿ ಡಿಸಿ ಗೋಪುರಗಳ ಮೇಲೆ **14.201 ಕಿ.ಮೀ.** ಉದ್ದಕ್ಕೆ ಡಿಸಿ ಪ್ರಸರಣ ಮಾರ್ಗವನ್ನು ಮತ್ತು 2 ಸಂಖ್ಯೆಯ 66 ಕೆವಿಯ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.
5.	**Enquiry No.: KPTCL/2023-24/SS/WORK_INDENT1451** ಕೊಡಗು ಜಿಲ್ಲೆ, ಪೊನ್ನಂಪೇಟೆ ತಾಲ್ಲೂಕಿನ **ಬಾಳೆಲೆಯಲ್ಲಿ** 2x20ಎಂವಿಎ 66/11ಕೆವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗು ಅಸ್ತಿತ್ವದಲ್ಲಿರುವ 66ಕೆವಿ ಹನಗೋಡು–ಪೊನ್ನಂಪೇಟೆ ಎಸ್‌ಸಿ (SC) ಮಾರ್ಗದಿಂದ 11.515 ಕಿ.ಮೀಗಳ ಉದ್ದಕ್ಕೆ 66 ಕೆವಿ ಲಿಲೋ ಮಾರ್ಗವನ್ನು ನಿರ್ಮಿಸುವುದು.
6.	**Enquiry No: KPTCL/2024-25/SS/WORK_INDENT1445** ವಿಜಯಪುರ ಜಿಲ್ಲೆ, ದೇವರಹಿಪ್ಪರಗಿ ತಾಲ್ಲೂಕಿನ **ಚಿಕ್ಕರೂಗಿಯಲ್ಲಿ** 2x20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಇಂಡಿ–ದೇವರಹಿಪ್ಪರಗಿ ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆವಿ ಚಿಕ್ಕರೂಗಿ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **0.899 ಕಿ.ಮೀಗಳ** ಉದ್ದಕ್ಕೆ 110 ಕೆವಿ ಲೀಲೋ(LILO)ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ “ಇ ಪ್ರೊಕ್ಯೂರ್ಮೆಂಟ್ ಕವಿಪ್ರನಿನಿ” ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **15.11.2024 ರಂದು ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **16.12.2024 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು**. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್
ಕವಿಪ್ರನಿನಿ, ಕಾವೇರಿ ಭವನ, 3ನೇ ಮಹಡಿ, ಬೆಂಗಳೂರು–560 009.

ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ,
ಬಿ.ಹೆಚ್.ರಸ್ತೆ, ತುಮಕೂರು–572101

ದೂರವಾಣಿ :0816–2257404, ಸ.ಆ.ಅ–2251250 ಇ–ಮೇಲ್–dstumkur@gmail.com
ಜಿಆತು/ಹೆಚ್.ಎನ್.ಎಸ್/06/2024–25 ದಿ: 08.11.2024

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಜಿಲ್ಲಾ ಆಸ್ಪತ್ರೆಗೆ 2024–25ನೇ ಸಾಲಿನಲ್ಲಿ ಅವಶ್ಯಕ ವಸ್ತುಗಳನ್ನು ಮತ್ತು ಲೇಖನಾ ಸಾಮಾಗ್ರಿಗಳನ್ನು ಒದಗಿಸಲು ಇ–ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಆಹ್ವಾನಿಸಿದ್ದು ಆಸಕ್ತಿಯುಳ್ಳವರು ಟೆಂಡರ್ ಫಾರಂಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಈ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 08.11.2024 ರಿಂದ 19.11.2024 ಸಂಜೆ 4.30ಗಂಟೆಯೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು,
DIPR/TUM/424/KSMCA/2024-25 ಜಿಲ್ಲಾ ಆಸ್ಪತ್ರೆ, ತುಮಕೂರು

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:11:2024–25, ದಿನಾಂಕ:08–11–2024

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2024–25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ, 22020–21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, 2021–22ನೇ ಸಾಲಿನ 15ನೇ ಹಣಕಾಸು ಯೋಜನೆ ಅನುದಾನ, 2021–22ನೇ ಸಾಲಿನ ಎಂ.ಪಿ.ಸಿ ಅನುದಾನ, 2022–23ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ (Tied), 2022–23ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ (Untied), 2024–25ನೇ ಸಾಲಿನ ನಗರಸಭೆ ನಿಧಿಯ ಎಸ್.ಸಿ.ಎಸ್.ಪಿ ಅನುದಾನ, 2024–25ನೇ ಸಾಲಿನ ನಗರಸಭೆ ನಿಧಿಯ ಟಿ.ಎಸ್.ಪಿ ಅನುದಾನ, 2024–25ನೇ ಸಾಲಿನ ನಗರಸಭೆ ನಿಧಿಯ ಶೇಕಡ 7.25ರ ಅನುದಾನ, ಸ್ವಚ್ಛ ಭಾರತಮಿಷನ್–2ಅನುದಾನ ಮತ್ತು ನಗರಸಭೆ ನಿಧಿ ಅನುದಾನಗಳಲ್ಲಿ ಅನುಮೋದನೆಯಾಗಿರುವ ರೂ.213.78 ಲಕ್ಷಗಳ 16 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ವಿವರ ಈ ಕೆಳಕಂಡಂತೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥಾವ ನಗರಭೆಯ ಅಂತರ್‌ಜಾಲ www.chitradurgacity.mrc.gov.in ನಲ್ಲಿ ಪಡೆಯಬಹುದಾಗಿದೆ. ಜಿ.ಎಸ್.ಟಿ.ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (16ಕಾಮಗಾರಿಗಳ ಇಂಡೆಂಟ್‌ಗಳನ್ನು ಪ್ರತ್ಯೇಕವಾಗಿ ಪ್ರಚುರಪಡಿಸಲಾಗುವುದು) (ಗರಿಷ್ಠ ಮೊತ್ತ ರೂ.39.40 ಲಕ್ಷಗಳು)
ಪೂರ್ಣಾವಧಿ ಟೆಂಡರ್ ಪ್ರಕಟಣೆ:– (1) ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿಮಾಡಿ ಸಲ್ಲಿಸುವ ಕೊನೆಯ ದಿನಾಂಕ: 02–12–2024 ರ 5.00 ಗಂಟೆ ಸಂಜೆವರೆಗೆ (2) ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 03–12–2024 ರ 5.30 ಗಂಟೆಗೆ (3) ಟೆಂಡರ್‌ನ್ನು ತೆರೆಯುವ ದಿನಾಂಕ (ಆರ್ಥಿಕ) 04–12–2024 ರ 5.30 ಗಂಟೆಗೆ (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ
ಇತರೆ **Others:**-DMA/2024-25/WS/WORK_INDENT31987DMA/2024-25/WS/WORK_INDENT31988, DMA/2024-25/WS/WORK_INDENT31989, DMA/2024-25/WS/WORK_INDENT31990, DMA/2024-25/WS/WORK_INDENT31992, DMA/2024-25/RD/WORK_INDENT31993, DMA/2024-25/OW/WORK_INDENT31995, DMA/2024-25/OW/WORK_INDENT31996, DMA/2024-25/OW/WORK_INDENT31998, DMA/2024-25/OW/WORK_INDENT31999, DMA/2024-25/OW/WORK_INDENT31935 (2) **ಪರಿಶಿಷ್ಟ ಜಾತಿ (SC):**- DMA/2024-25/WS/WORK_INDENT31991, DMA/2024-25/RD/WORK_INDENT32000, DMA/2024-25/WS/WORK_INDENT32001 (3) **ಪರಿಶಿಷ್ಟ ಪಂಗಡ (ST):**- DMA/2024-25/RD/WORK_INDENT31994, DMA/2024-25/OW/WORK_INDENT31997

DIPR/CTA/KSMCA/353/2024-25 ಸಹಿ/–ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
‘ಖನಿಜ ಭವನ’, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1
ದೂ: 080–22258131–33, ಇ–ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: http://ksiidc.karnataka.gov.in

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಾಡಿಗೆ ಆಧಾರದ ಮೇಲೆ ಆಂಬ್ಯುಲೆನ್ಸ್ ಒದಗಿಸಲು ಏಜೆನ್ಸಿಯ ಆಯ್ಕೆಗಾಗಿ ಇ–ಟೆಂಡರ್ ಪ್ರಕಟಣೆ (ಕರೆ–5).

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರ, ಇವರು ಶಿವಮೊಗ್ಗ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದ್ದಾರೆ. ಕೆಎಸ್‌ಐಐಡಿಸಿಯು ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬ್ಯುಲೆನ್ಸ್‌ಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ಏಜೆನ್ಸಿಯ ಆಯ್ಕೆಗಾಗಿ ಟೆಂಡರ್ (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಪಡೆಯಬಹುದು.
ಇ.ಎಂ.ಡಿ. ರೂ.75,000/– (ರೂಪಾಯಿ ಎಪ್ಪತ್ತೈದು ಸಾವಿರ ಮಾತ್ರ).
ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ 13.11.2024ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ **ದಿನಾಂಕ 21.11.2024 ರಂದು 11.00 ಗಂಟೆಗೆ**. ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ **ದಿನಾಂಕ 07.12.2024 ರಂದು 17.30 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ https://kppp.karnataka.gov.in ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಪ್ರ), ಕೆಎಸ್‌ಐಐಡಿಸಿ ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಜನವರಿಯಿಂದ ಜಾರಿ– ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್

‘ಪ್ರವೇಶ ಪರೀಕ್ಷೆ ಸುಧಾರಣೆ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಜನವರಿ ತಿಂಗಳಿನಿಂದ ಅನ್ವಯವಾಗುವಂತೆ ಪ್ರವೇಶ ಪರೀಕ್ಷೆಗಳ ಪ್ರಕ್ರಿಯೆಯಲ್ಲಿ ಹಲವು ಸುಧಾರಣೆ ಕ್ರಮಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

‘ವಿವಿಧ ಪ್ರವೇಶ ಪರೀಕ್ಷೆಗಳನ್ನು ದೋಷ ಮುಕ್ತವಾಗಿಸಲು ಅಗತ್ಯ ಸಹಕಾರ ನೀಡಬೇಕು’ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಂಗಳವಾರ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದರು.

‘ದೋಷಮುಕ್ತ ಮತ್ತು ನ್ಯಾಯ ಸಮ್ಮತವಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಕಾರ್ಯವೈಖರಿಯಲ್ಲಿ ಬದಲಾವಣೆ, ವಿವಿಧ ಸುಧಾರಣೆಗಳ ಬಗ್ಗೆ ಶಿಫಾರಸು ಮಾಡಿ ರಾಧಾಕೃಷ್ಣನ್ ಸಮಿತಿ ವರದಿ ನೀಡಿದೆ. ಇದರ ಜಾರಿಗೆ ರಾಜ್ಯಗಳ ಸಹಕಾರ ಅಗತ್ಯ’ ಎಂದು ಹೇಳಿದರು.

ವಿವಿಧ ರಾಜ್ಯಗಳ ಕಾರ್ಯದರ್ಶಿಗಳು ಪಾಲ್ಗೊಂಡಿದ್ದ, ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರ ಜೊತೆಗೆ ಮಾತನಾಡಿದರು.

ರಾಜ್ಯಗಳ ಶಿಕ್ಷಣ ಇಲಾಖೆಗಳ ಕಾರ್ಯದರ್ಶಿಗಳ ಜೊತೆಗೆ ಈ ಕುರಿತು ಚರ್ಚಿಸಿದ್ದೇನೆ. ಪರೀಕ್ಷೆಗಳನ್ನು, ಮುಖ್ಯವಾಗಿ ಪ್ರವೇಶ ಪರೀಕ್ಷೆಗಳನ್ನು ದೋಷಮುಕ್ತವಾಗಿ ನಡೆಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಣೆಗಾರಿಕೆಯಾಗಿದೆ. ಈ ವಿಷಯದಲ್ಲಿ ವಿದ್ಯಾರ್ಥಿ ಸಮುದಾಯದಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಲು ನಾವು ಒಂದು ತಂಡವಾಗಿ ಕಾರ್ಯನಿರ್ವಹಿಸಲಿದ್ದೇವೆ’ ಎಂದು ಅವರು ಹೇಳಿದರು.

ಪ್ರವೇಶ ಪರೀಕ್ಷೆಗಳ ಹೊಸ ಸರಣಿಯು ಜನವರಿಯಿಂದ ಆರಂಭವಾಗಲಿವೆ. ಕಳೆದ ವರ್ಷದ ಅನುಭವಗಳ ಆಧಾರದಲ್ಲಿ ಸರ್ಕಾರ ಹಲವು ಹೊಸ ಕ್ರಮಗಳನ್ನು ಜಾರಿಗೊಳಿಸಲಿದೆ

ಧರ್ಮೇಂದ್ರ ಪ್ರಧಾನ್
ಕೇಂದ್ರ ಶಿಕ್ಷಣ ಸಚಿವ

ನೀಟ್, ಪಿಎಚ್‌.ಡಿ ಪ್ರವೇಶ ಪರೀಕ್ಷೆ, ಎನ್‌ಇಟಿ ಪರೀಕ್ಷೆಗಳಲ್ಲಿನ ಅವ್ಯವಸ್ಥೆಯು ತೀವ್ರ ಟೀಕೆಗೆ ಒಳಗಾಗಿತ್ತು. ಹೀಗಾಗಿ ಸುಧಾರಣಾ ಕ್ರಮಗಳ ಬಗ್ಗೆ ಅಗತ್ಯ ಸಲಹೆ ನೀಡಲು ಕೇಂದ್ರ ಸರ್ಕಾರ ಜೂನ್ ತಿಂಗಳಲ್ಲಿ ಇಸ್ರೊದ ಮಾಜಿ ಮುಖ್ಯಸ್ಥ ಕೆ.ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು.

ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ಹಲವು ಅವ್ಯವಸ್ಥೆಗಳಿಂದಾಗಿ ನೀಟ್ ಟೀಕೆಗೆ ಗುರಿಯಾಗಿದ್ದರೆ, ಪರೀಕ್ಷೆಯ ವಿಶ್ವಾಸಾರ್ಹತೆ ಕುರಿತ ಮಾಹಿತಿ ಆಧರಿಸಿ ಕೇಂದ್ರ ಸರ್ಕಾರವೇ ಯುಜಿಸಿ–ನೆಟ್ ಪರೀಕ್ಷೆಯನ್ನು ರದ್ದುಪಡಿಸಿತ್ತು. ಈ ಎರಡರ ಬಗ್ಗೆ ಸಿಬಿಐ ತನಿಖೆ ನಡೆಯುತ್ತಿದೆ.

ಇದರ ಹೊರತಾಗಿ ಮುಂಜಾಗ್ರತೆ ಕ್ರಮವಾಗಿ ಸಿಎಸ್‌ಐಆರ್– ಯುಜಿಸಿ ನೆಟ್ ಮತ್ತು ನೀಟ್– ಪಿ.ಜಿ ಪರೀಕ್ಷೆಗಳನ್ನು ಕೊನೆಯ ಕ್ಷಣದಲ್ಲಿ ಸರ್ಕಾರವೇ ರದ್ದುಪಡಿಸಿತ್ತು.

ರಾಧಾಕೃಷ್ಣನ್ ಸಮಿತಿಯಲ್ಲಿ ಕುಲಪತಿಗಳು ಸೇರಿದಂತೆ ಶಿಕ್ಷಣ ಕ್ಷೇತ್ರದ ಹಲವು ತಜ್ಞರು, ಶಿಕ್ಷಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಗೋವಿಂದ ಜೈಸ್ವಾಲ್ ಇದ್ದಾರೆ.

ಹಂತ ಹಂತವಾಗಿ ಆನ್‌ಲೈನ್ ಪರೀಕ್ಷೆಗೆ ಆದ್ಯತೆ ನೀಡುವುದು, ಡಿಜಿಟಲ್ ಸ್ವರೂಪದಲ್ಲಿ ಪ್ರಶ್ನೆಪತ್ರಿಕೆ ರವಾನೆಯ ಹೈಬ್ರಿಡ್ ಮಾದರಿ ಅಳವಡಿಕೆ, ವಿದ್ಯಾರ್ಥಿಗಳ ಮೇಲಿನ ಒತ್ತಡ ತಗ್ಗಿಸುವುದು, ಮೌಲ್ಯಮಾಪನ ಕ್ರಮದಲ್ಲಿ ಸುಧಾರಣೆ ಸೇರಿ ಹಲವು ಕ್ರಮಗಳನ್ನು ಸಮಿತಿಯು ಉಲ್ಲೇಖಿಸಿದೆ.

ಐದು ಕ್ಷೇತ್ರಗಳತ್ತ ಗಮನಹರಿಸಲು ಸಲಹೆ

- ನವೀನ ವಿಧಾನ, ಆರ್ಥಿಕ ನೆರವಿನ ಮೂಲಕ ವಿಶ್ವವಿದ್ಯಾಲಯಗಳನ್ನು ಬಲಪಡಿಸಿ
- ಸ್ಥಳೀಯ ಮತ್ತು ಕೈಗಾರಿಕೆಗಳ ಅಗತ್ಯಗಳಿಗೆ ಸ್ಪಂದಿಸಲು ಪೂರಕವಾಗಿ ಪಠ್ಯಕ್ರಮ ರೂಪಿಸಲು ಚಿಂತಕರ ಸಮಿತಿ ರಚಿಸಿ
- ಸಂಶೋಧನೆ ಮತ್ತು ಅನ್ವೇಷಣೆಗೆ ಒತ್ತು ನೀಡಲು ಬಹುಶಿಸ್ತೀಯ ಕ್ರಮಗಳಿಗೆ ಒತ್ತು ನೀಡಿ
- ಕೇಂದ್ರ ಮತ್ತು ರಾಜ್ಯಗಳ ಪ್ರಮುಖ ಸಂಸ್ಥೆಗಳ ಸಹಯೋಗದಲ್ಲಿ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು
- ಕ್ಯಾಂಪಸ್‌ಗಳಲ್ಲಿ ಕ್ರೀಡೆ, ಚರ್ಚೆ, ರಂಗ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಿ

ಮಣಿಪುರ: ಇಬ್ಬರು ವೃದ್ಧರ ಶವ ಪತ್ತೆ

ಕಾಣೆಯಾದ ಮಹಿಳೆಯರು, ಮಕ್ಕಳ ಪತ್ತೆಗೆ ಮುಂದುವರಿದ ಶೋಧ ಕಾರ್ಯ

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್/ಗುವಾಹಟಿ: ಸಂಘರ್ಷ ಪೀಡಿತ ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಮಂಗಳವಾರ ಬೆಳಿಗ್ಗೆ ಸುಟ್ಟಿರುವ ಸ್ಥಿತಿಯಲ್ಲಿ ಮೈತೇಯಿ ಸಮುದಾಯದ ಇಬ್ಬರು ವೃದ್ಧರ ಶವಗಳು ಪತ್ತೆಯಾಗಿವೆ. ಇದೇ ಸ್ಥಳದಲ್ಲಿ ಒಂದು ದಿನದ ಹಿಂದೆ ಶಂಕಿತ ಹಮರ್ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಜಿರೀಬಾಮ್‌ನಲ್ಲಿ ಹಿಂಸಾಚಾರ ಭುಗಿಲೆದ್ದ ನಂತರ ನಾಪತ್ತೆಯಾಗಿರುವ ಮೂವರು ಮಹಿಳೆಯರು ಮತ್ತು ಮೂವರು ಮಕ್ಕಳನ್ನು ಪತ್ತೆಹಚ್ಚಲು ಕಾರ್ಯಾಚರಣೆ ಮುಂದುವರಿದಿದೆ ಎಂದು ಐಜಿಪಿ (ಕಾರ್ಯಾಚರಣೆ) ಐ.ಕೆ. ಮುಹಿವ್ ಹೇಳಿದ್ದಾರೆ.

ಸೋಮವಾರ ಕುಕಿ ಜೋ ಸಮುದಾಯದ ಶಂಕಿತ ಉಗ್ರರು ಕೆಲವು ಅಂಗಡಿಗಳಿಗೆ ಬೆಂಕಿ ಹಚ್ಚಿದ್ದ ಜಕುರಾಧೋರ್ ಕರೋಂಗ್ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆಯ ವೇಳೆ ಲೈಶ್ರಾಮ್ ಬಾಲೆನ್ ಮತ್ತು ಮೈಬಮ್ ಕೇಶೋ ಎಂಬ ವೃದ್ಧರ ಶವಗಳು ಪತ್ತೆಯಾಗಿವೆ ಎಂದು ಇನ್ನೊಬ್ಬ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಉಗ್ರರಿಂದ ವಶಪಡಿಸಿಕೊಂಡಿರುವ ಶಸ್ತ್ರಾಸ್ತ್ರ ಪಿಟಿಐ ಚಿತ್ರ

ಸಿಆರ್‌ಪಿಎಫ್‌ಗೆ ಕೆಎಸ್‌ಒ ಎಚ್ಚರಿಕೆ

ಶಂಕಿತ 11 ಹಮರ್ ಉಗ್ರರ ಹತ್ಯೆ ಮಾಡಿರುವುದಕ್ಕೆ ಸಿಆರ್‌ಪಿಎಫ್ ವಿರುದ್ಧ ಕುಕಿ ಜೊ ಸಮುದಾಯಗಳಲ್ಲಿ ಆಕ್ರೋಶ ವ್ಯಕ್ತವಾಗಿದ್ದು, ‘ಹಮರ್ ಯುವಕರನ್ನು ಕೊಂದಿದ್ದಕ್ಕಾಗಿ ಸಿಆರ್‌ಪಿಎಫ್ ಕ್ಷಮೆಯಾಚಿಸಬೇಕು’ ಎಂದು ಕುಕಿ ವಿದ್ಯಾರ್ಥಿಗಳ ಸಂಘಟನೆಗಳು (ಕೆಎಸ್‌ಒ) ಮಂಗಳವಾರ ಒತ್ತಾಯಿಸಿವೆ.

‘ಸಿಆರ್‌ಪಿಎಫ್ ಸಿಬ್ಬಂದಿ ತಮ್ಮ ಶಿಬಿರಗಳಿಂದ ಹೊರಗೆ ಕದಲಬಾರದು. ಈ ಸೂಚನೆಯನ್ನು ಸಿಆರ್‌ಪಿಎಫ್ ಯಾವುದೇ ಸಿಬ್ಬಂದಿ ಉಲ್ಲಂಘಿಸಿದರೆ, ಅದರಿಂದ ಆಗುವ ಅಪಾಯಕ್ಕೆ ಅವರೇ ಹೊಣೆ’ ಎಂದು ಎಚ್ಚರಿಕೆ ನೀಡಿ, ಕೆಎಸ್‌ಒ ಹೇಳಿಕೆ ಬಿಡುಗಡೆ ಮಾಡಿದೆ.

ಮತ್ತೆ ಹಿಂಸಾಚಾರ

ಜಿರೀಬಾಮ್ ಜಿಲ್ಲೆಯಲ್ಲಿನ ಘಟನೆಯ ನಂತರ, ಇಂಫಾಲ್ ಕಣಿವೆಯ ಅನೇಕ ಸ್ಥಳಗಳಲ್ಲಿ ಮತ್ತೆ ಹಿಂಸಾಚಾರ ನಡೆದಿರುವುದು ಮಂಗಳವಾರ ವರದಿಯಾಗಿದೆ.

ಎರಡು ಸಮುದಾಯಗಳ ಸಶಸ್ತ್ರ ಗುಂಪುಗಳು ಪರಸ್ಪರ ಗುಂಡಿನ ಚಕಮಕಿಯಲ್ಲಿ ತೊಡಗಿವೆ ಎಂದು ರಾಜ್ಯ ಪೊಲೀಸರು ತಿಳಿಸಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಹಲವು ಸುಧಾರಿತ ಮಾರ್ಟರ್ ಶೆಲ್‌ಗಳನ್ನು ಪೊಲೀಸರು ಮತ್ತು ಭದ್ರತಾ ಪಡೆಗಳು ಬೆಳಿಗ್ಗೆ ವಶಪಡಿಸಿಕೊಂಡಿದ್ದಾರೆ.

ಉಗ್ರರ ನಿಗ್ರಹ ಕಾರ್ಯಾಚರಣೆ ಮುಂದುವರಿದಿದೆ. ಪ್ರಕ್ಷುಬ್ಧಗೊಂಡಿರುವ ಪ್ರದೇಶಗಳಲ್ಲಿ ಅಸ್ಸಾಂ ರೈಫಲ್ಸ್ ಮತ್ತು ಸಿಆರ್‌ಪಿಎಫ್ ಒಳಗೊಂಡ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಇ.ಡಿ ಶೋಧ: ನಕಲಿ ಆಧಾರ್, ಪಾಸ್‌ಪೋರ್ಟ್ ವಶ

ರಾಂಚಿ (ಪಿಟಿಐ): ಬಾಂಗ್ಲಾದೇಶದಿಂದ ಅಕ್ರಮ ಒಳನುಸುಳುವಿಕೆಯ ಜತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಜಾರ್ಖಂಡ್‌ನ ಹಲವು ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಜಾರ್ಖಂಡ್ ವಿಧಾನಸಭೆ ಚುನಾವಣೆಯ ಮೊದಲ ಹಂತದ ಮತದಾನಕ್ಕೆ ಒಂದು ದಿನ ಮೊದಲು ಕೇಂದ್ರ ತನಿಖಾ ಸಂಸ್ಥೆಯ ರಾಂಚಿ ಕಚೇರಿ ಅಧಿಕಾರಿಗಳು ಹಲವು ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ. ಇದರ ಜತೆಗೆ ನೆರೆಯ ಎರಡು ರಾಜ್ಯಗಳ ಒಟ್ಟು 17 ಸ್ಥಳಗಳಲ್ಲಿ ಶೋಧ ಕೈಗೊಳ್ಳಲಾಗಿತ್ತು.

ನಕಲಿ ಆಧಾರ್ ಕಾರ್ಡ್‌ಗಳು, ನಕಲಿ ಪಾಸ್‌ಪೋರ್ಟ್‌ಗಳು, ಅಕ್ರಮ ಶಸ್ತ್ರಾಸ್ತ್ರ, ಸ್ಥಿರ ಆಸ್ತಿ ದಾಖಲೆಗಳು, ನಗದು, ಆಭರಣಗಳು, ನಕಲಿ ಕಾರ್ಡ್‌ಗಳನ್ನು ತಯಾರಿಸಲು ಬಳಸಿರುವ ಮುದ್ರಣ ಕಾಗದ ಮತ್ತು ಯಂತ್ರಗಳು ಹಾಗೂ ಖಾಲಿ ಅರ್ಜಿ ನಮೂನೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶೋಧ ಕಾರ್ಯ ಮುಂದುವರಿದಿದೆ ಎಂದು ಇ.ಡಿಯು ‘ಎಕ್ಸ್’ನಲ್ಲಿ ಹೇಳಿಕೆ ನೀಡಿದೆ.

ರಾಂಚಿಯ ಬರಿಯಾಟು ರಸ್ತೆಯಲ್ಲಿರುವ ಹೋಟೆಲ್ ಮತ್ತು ನಗರದ ರೆಸಾರ್ಟ್‌ನ ಹೊರಗೆ ಭದ್ರತೆಗೆ ಸಿಆರ್‌ಪಿಎಫ್ ಸಿಬ್ಬಂದಿ ನಿಯೋಜಿಸಿರುವ ದೃಶ್ಯಗಳನ್ನು ಮಾಧ್ಯಮಗಳು ಪ್ರಸಾರ ಮಾಡಿವೆ.

ಇ.ಡಿ ತಂಡಗಳು ಲೆಡ್ಜರ್ ನಮೂದುಗಳು ಮತ್ತು ಹಣಕಾಸಿನ ದಾಖಲೆಗಳಿಗಾಗಿ ಶೋಧ ನಡೆಸುತ್ತಿವೆ.

ಬಾಂಗ್ಲಾದೇಶದ ಕೆಲ ಮಹಿಳೆಯರನ್ನು ಜಾರ್ಖಂಡ್‌ಗೆ ಒಳನುಸುಳುವಿಕೆ ಮತ್ತು ಕಳ್ಳಸಾಗಣೆ ಮಾಡಿ, ಆ ಮೂಲಕ ಅಕ್ರಮವಾಗಿ ಹಣ ಸಂಪಾದಿಸಲಾಗುತ್ತಿದೆ ಎಂಬ ಆರೋಪದ ತನಿಖೆಗೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಪ್ರಕರಣ ಇ.ಡಿ ಸೆಪ್ಟೆಂಬರ್‌ನಲ್ಲಿ ದಾಖಲಿಸಿದೆ.

ಈ ಎಲ್ಲಾ ತಂತ್ರಗಳನ್ನು ರಾಜ್ಯದ ಜನರು ಅರ್ಥ ಮಾಡಿಕೊಂಡಿದ್ದಾರೆ. ಬಿಜೆಪಿಗೆ ತಕ್ಕ ಉತ್ತರ ನೀಡಲಿದ್ದಾರೆ

ರಾಕೇಶ್ ಸಿನ್ಹಾ
ಜಾರ್ಖಂಡ್‌ನ ಕಾಂಗ್ರೆಸ್ ವಕ್ತಾರ

ಈ ದಾಳಿ ಬಿಜೆಪಿಯ ಸುಳ್ಳಿನ ಸಂಕಥನವನ್ನು ಸತ್ಯವೆಂದು ಬಿಂಬಿಸುವುದು ಮತ್ತು ಜನರ ದಿಕ್ಕುತಪ್ಪಿಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ

ಮನೋಜ್ ಪಾಂಡೆ, ಜೆಎಂಎಂ ವಕ್ತಾರ

ಬಿಜೆಪಿಗೆ ನೆರವಾಗಲು ಇ.ಡಿ ದಾಳಿ: ಜೆಎಂಎಂ ಟೀಕೆ

ರಾಂಚಿ(ಪಿಟಿಐ): ಮೊದಲ ಹಂತದ ಮತದಾನದ ಮುನ್ನಾ ದಿನ ಮಂಗಳವಾರ ರಾಜ್ಯದ ಹಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ನಡೆಸಿರುವುದಕ್ಕೆ ಆಡಳಿತಾರೂಢ ಜೆಎಂಎಂ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿದೆ.

ಕೇಸರಿ ಪಕ್ಷವು ಹೆಣೆದಿರುವ ಬಾಂಗ್ಲಾದೇಶಿಯರ ಒಳನುಸುಳುವಿಕೆಯ ಸುಳ್ಳಿನ ಸಂಕಥನ ಮುಂದಿಟ್ಟುಕೊಂಡು ಇ.ಡಿ ನಡೆಸಿರುವ ಈ ದಾಳಿಯು ಚುನಾವಣೆಯಲ್ಲಿ ಬಿಜೆಪಿಗೆ ‘ನೆರವಾಗುವ ಪ್ರಯತ್ನ’ ಎಂದು ಆರೋಪಿಸಿದೆ.

‘ಇ.ಡಿ ದಾಳಿಯು ಬಾಂಗ್ಲಾದೇಶದ ನುಸುಳುಕೋರರಿಗಾಗಿ ಅಲ್ಲ, ರಾಜ್ಯದಲ್ಲಿ ಬಿಜೆಪಿಯ ರಾಜಕೀಯ ನೆಲೆ ಉಳಿಸುವ ಕೊನೆಯ ಪ್ರಯತ್ನ’ ಎಂದು ಜೆಎಂಎಂ ನೇತೃತ್ವದ ಸರ್ಕಾರದ ಮಿತ್ರಪಕ್ಷವಾದ ಕಾಂಗ್ರೆಸ್ ಆರೋಪಿಸಿದೆ.

ಜಾರ್ಖಂಡ್ ಬಾಂಗ್ಲಾದೇಶದ ಜತೆಗೆ ಗಡಿ ಹಂಚಿಕೊಂಡಿಲ್ಲ. ಬಿಜೆಪಿ ಆಡಳಿತದ ಅಸ್ಸಾಂ ಬಾಂಗ್ಲಾದೇಶದೊಂದಿಗೆ ಗಡಿ ಹಂಚಿಕೊಂಡಿದೆ. ಹಾಗಾಗಿ, ಜಾರ್ಖಂಡ್ ಬದಲಿಗೆ ಮೊದಲು ಅಸ್ಸಾಂನಲ್ಲಿ ಇ.ಡಿ ದಾಳಿ ನಡೆಸಬೇಕು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರನ್ನು ಬಿಜೆಪಿಯು ಜಾರ್ಖಂಡ್‌ಗೆ ಮತಗಳನ್ನು ಧ್ರುವೀಕರಿಸಲು ಕಳುಹಿಸಿದೆ. ಆದರೆ. ಕೇಸರಿ ಪಾಳಯ ಇದರಲ್ಲಿ ಯಶಸ್ವಿಯಾಗುವುದಿಲ್ಲ ಎಂದು ಜಾರ್ಖಂಡ್‌ನ ಕಾಂಗ್ರೆಸ್ ವಕ್ತಾರ ರಾಕೇಶ್ ಸಿನ್ಹಾ ಹೇಳಿದ್ದಾರೆ.

ಶಾರುಕ್ ಖಾನ್‌ಗೆ ಬೆದರಿಕೆ ವಕೀಲರೊಬ್ಬರ ಬಂಧನ

ರಾಯಪುರ/ ಮುಂಬೈ (ಪಿಟಿಐ): ಬಾಲಿವುಡ್ ನಟ ಶಾರುಕ್ ಖಾನ್ ಅವರಿಗೆ ಜೀವಬೆದರಿಕೆ ಒಡ್ಡಿದ್ದ ಪ್ರಕರಣದಲ್ಲಿ ಮುಂಬೈ ಪೊಲೀಸರು ಛತ್ತೀಸಗಢದ ರಾಜಧಾನಿ ರಾಯಪುರದಲ್ಲಿ ವಕೀಲರೊಬ್ಬರನ್ನು ಮಂಗಳವಾರ ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಕರಣದ ತನಿಖೆಗಾಗಿ ಮುಂಬೈ ಪೊಲೀಸರು ನವೆಂಬರ್ 7ರಂದು ರಾಯಪುರಕ್ಕೆ ತೆರಳಿದ್ದರು. ವಕೀಲ ಫೈಜಾನ್ ಖಾನ್ ಅವರಿಗೆ ವಿಚಾರಣೆಗಾಗಿ ಸಮನ್ಸ್ ನೀಡಿದ್ದರು.

‘ಫೈಜಾನ್ ಅವರನ್ನು ಬಂಧಿಸಿರುವುದಾಗಿ ಮುಂಬೈ ಪೊಲೀಸರು ಮಂಗಳವಾರ ರಾಯಪುರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ’ ಎಂದು ರಾಯಪುರ ಎಸ್‌ಪಿ ಸಂತೋಷ್ ಸಿಂಗ್ ತಿಳಿಸಿದರು.

‘ಪ್ರಾಥಮಿಕ ಮಾಹಿತಿ ಪ್ರಕಾರ, ಫೈಜಾನ್ ಅವರ ಹೆಸರಿನಲ್ಲಿ ನೋಂದಣಿಯಾದ ಫೋನ್ ನಂಬರ್ ಮೂಲಕ ಶಾರುಕ್‌ಗೆ ಬೆದರಿಕೆ ಕರೆ ಮಾಡಲಾಗಿದೆ’ ಎಂದು ಹೇಳಿದರು.

ಸಲ್ಮಾನ್‌ಗೆ ಬೆದರಿಕೆ– ಆರೋಪಿ ಬಂಧನ: ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಹೆಸರಿನಲ್ಲಿ ಸಲ್ಮಾನ್ ಖಾನ್‌ಗೆ ಜೀವ ಬೆದರಿಕೆ ಹಾಕಿದ ಆರೋಪದಲ್ಲಿ ಮುಂಬೈ ಪೊಲೀಸರು ಸೊಹೇಲ್ ಪಾಶಾ ಎಂಬಾತನನ್ನು ಕರ್ನಾಟಕದ ರಾಯಚೂರಿನಲ್ಲಿ ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೃಹ ವ್ಯವಹಾರಗಳ ಕುರಿತ ಸ್ಥಾಯಿ ಸಮಿತಿ ಸಭೆ

‘ಮಣಿಪುರದ ಮಾಹಿತಿ ಎಕಿಲ್ಲ?’

ಪ್ರಜಾವಾಣಿ ವಾರ್ತೆ

ನವದೆಹಲಿ: ಗೃಹ ವ್ಯವಹಾರಗಳ ಕುರಿತ ಸಂಸದೀಯ ಸ್ಥಾಯಿ ಮುಂದೆ ವಿಷಯ ಮಂಡನೆ ಮಾಡುವ ವೇಳೆ, ಹಿಂಸಾಚಾರ ಪೀಡಿತ ಮಣಿಪುರದಲ್ಲಿನ ಪರಿಸ್ಥಿತಿ ಕುರಿತು ಗೃಹ ಕಾರ್ಯದರ್ಶಿ ಗೋವಿಂದ ಮೋಹನ್ ಪ್ರಸ್ತಾಪಿಸದೇ ಇರುವುದನ್ನು ಸಮಿತಿ ಯಲ್ಲಿರುವ ವಿಪಕ್ಷಗಳ ಸದಸ್ಯರು ಮಂಗಳವಾರ ಪ್ರಶ್ನಿಸಿದ್ದಾರೆ.

ರಾಧಾ ಮೋಹನ್ ಅಗರವಾಲ್

ಗೋವಿಂದ ಮೋಹನ್ ಅವರು ಈಶಾನ್ಯ ರಾಜ್ಯಗಳ ವಿದ್ಯಮಾನಗಳ ಕುರಿತು ಮೂರು ಪುಟಗಳಷ್ಟು ಮಾಹಿತಿಯನ್ನು ಸಮಿತಿ ಮುಂದೆ ಮಂಡಿಸಿದರು. ಈ ವೇಳೆ, ಮಣಿಪುರ ಕುರಿತು ಮಾಹಿತಿಯನ್ನೇ ಒದಗಿಸಲಿಲ್ಲ ಎಂದು ಮೂಲಗಳು ಹೇಳಿವೆ.

ಬಿಜೆಪಿ ಸಂಸದ ರಾಧಾಮೋಹನ್ ಅಗರವಾಲ್ ನೇತೃತ್ವದ ಸ್ಥಾಯಿ ಸಮಿತಿಗೆ ಗೋವಿಂದ ಮೋಹನ್ ಅವರು ಗೃಹ ಸಚಿವಾಲಯದ ಕಾರ್ಯಗಳ ಕುರಿತು 70 ಪುಟಗಳಷ್ಟು ಮಾಹಿತಿ ಒದಗಿಸಿದ್ದಾರೆ.

ಜಮ್ಮು–ಕಾಶ್ಮೀರ, ಈಶಾನ್ಯ ರಾಜ್ಯಗಳು, ಎಡಪಂಥೀಯ ಉಗ್ರವಾದ, ವಿಪತ್ತು ನಿರ್ವಹಣೆ ಹಾಗೂ ಸೈಬರ್ ಅಪರಾಧಗಳು ಸೇರಿದಂತೆ ‘ಪ್ರಮುಖ ಸಾಧನೆಗಳು’ ಹಾಗೂ ‘ವಿಷನ್@2047’ ಕುರಿತು ಅವರು ಮಾಹಿತಿ ನೀಡಿದರು ಎಂದು ಮೂಲಗಳು ಹೇಳಿವೆ.

‘ಈಶಾನ್ಯ ರಾಜ್ಯಗಳಲ್ಲಿ ದಂಗೆಯಂತಹ ಕೃತ್ಯಗಳಲ್ಲಿ ಶೇ 71ರಷ್ಟು ಇಳಿಕೆ ಕಂಡುಬಂದಿದೆ. ಯೋಧರ ಸಾವಿನ ಸಂಖ್ಯೆಯಲ್ಲಿ ಶೇ 60ರಷ್ಟು, ನಾಗರಿಕರ ಸಾವುಗಳ ಸಂಖ್ಯೆಯಲ್ಲಿ ಶೇ 82ರಷ್ಟು ಇಳಿಕೆ ಕಂಡುಬಂದಿದೆ’ ಎಂದು ಗೋವಿಂದ ಮೋಹನ್ ತಿಳಿಸಿದ್ದಾರೆ.

‘ಬಂಡುಕೋರರ ಸಂಘಟನೆಗಳೊಂದಿಗೆ 8 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, ಅಂದಾಜು 4,500 ಬಂಡುಕೋರರು ಶಸ್ತ್ರತ್ಯಾಗ ಮಾಡಿ, ಶರಣಾಗಿದ್ದಾರೆ’ ಎಂದೂ ತಿಳಿಸಿದ್ದಾರೆ.

ಚೆನ್ನೈನಲ್ಲಿ ಮಳೆ ಶಾಲೆಗಳಿಗೆ ರಜೆ

ಚೆನ್ನೈ (ಪಿಟಿಐ): ಚೆನ್ನೈ ನಗರ ಹಾಗೂ ಉಪನಗರಗಳಲ್ಲಿ ಸೋಮವಾರ ರಾತ್ರಿಯಿಂದ ಮಳೆ ಸುರಿಯುತ್ತಿದ್ದು, ಮಂಗಳವಾರ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು.

‘ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು ಮಾರುತಗಳು ರೂಪುಗೊಂಡಿವೆ. ನ.11ರಿಂದ ಒಂದು ವಾರ ಚೆನ್ನೈನಲ್ಲಿ ಮಳೆಯಾಗಲಿದೆ’ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು.

‘ಮಾರುತವು ಪಶ್ಚಿಮ ದಿಕ್ಕಿಗೆ ಧಾವಿಸುತ್ತಿದ್ದು, ತಮಿಳುನಾಡು, ಶ್ರೀಲಂಕಾ ಕರಾವಳಿಗೆ ಇನ್ನೆರಡು ದಿನಗಳಲ್ಲಿ ಅಪ್ಪಳಿಸಲಿದೆ’ ಎಂದೂ ಹವಾಮಾನ ಇಲಾಖೆ ಹೇಳಿದೆ.

ಭಾರತಕ್ಕೆ ಕಾನ್ಸಲರ್ ನೇಮಿಸಿದ ತಾಲಿಬಾನ್

ನವದೆಹಲಿ (ಪಿಟಿಐ): ತಾಲಿಬಾನ್ ಸರ್ಕಾರವು ಮುಂಬೈನಲ್ಲಿರುವ ಅಫ್ಗಾನಿಸ್ತಾನದ ಕಾನ್ಸಲೇಟ್ ಕಚೇರಿಗೆ ಹಂಗಾಮಿ ಕಾನ್ಸಲರ್ ಆಗಿ ಇಕ್ರಮುದ್ದೀನ್ ಕಾಮಿಲ್ ಅವರನ್ನು ನೇಮಕ ಮಾಡಿದೆ.

ಭಾರತದಲ್ಲಿನ ತನ್ನ ಕಾನ್ಸಲೇಟ್‌ಗೆ ತಾಲಿಬಾನ್ ಸರ್ಕಾರ ಇದೇ ಮೊದಲ ಬಾರಿಗೆ ಅಧಿಕಾರಿಯೊಬ್ಬರನ್ನು ನೇಮಕ ಮಾಡಿದೆ. ನೂತನ ಕಾನ್ಸಲರ್ ನೇಮಕದ ಬಗ್ಗೆ ಭಾರತ ಪ್ರತಿಕ್ರಿಯೆ ನೀಡಿಲ್ಲ.

ಕಾಮಿಲ್ ಅವರನ್ನು ಕಾನ್ಸಲರ್ ಆಗಿ ನೇಮಿಸಿರುವ ಬಗ್ಗೆ ಅಫ್ಗಾನಿಸ್ತಾನದ ವಿದೇಶಾಂಗ ಇಲಾಖೆ ಘೋಷಣೆ ಮಾಡಿದೆ ಎಂದು ತಾಲಿಬಾನ್ ನಿಯಂತ್ರಣದಲ್ಲಿರುವ ಬಖ್ತಾರ್ ಸುದ್ದಿ ಸಂಸ್ಥೆ ವರದಿ ಮಾಡಿರುವುದಾಗಿ ಮೂಲಗಳು ತಿಳಿಸಿವೆ.

ಪ್ರಸ್ತುತ ಮುಂಬೈನಲ್ಲೇ ಇರುವ ಕಾಮಿಲ್, ಅಫ್ಗಾನಿಸ್ತಾನದ ರಾಜತಾಂತ್ರಿಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಹೇಳಿವೆ.

ಭಾರತದೊಂದಿಗಿನ ರಾಜತಾಂತ್ರಿಕ ಸಂಬಂಧ ವೃದ್ಧಿಸುವ, ವಿದೇಶಗಳಲ್ಲಿ ತಮ್ಮ ಅಸ್ತಿತ್ವ ಹೆಚ್ಚಿಸುವ ಪ್ರಯತ್ನದ ಭಾಗವಾಗಿ ತಾಲಿಬಾನ್ ಈ ನೇಮಕ ಮಾಡಿದೆ ಎಂದು ವರದಿ ತಿಳಿಸಿದೆ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂ ಸಂ: 080–29557021, e-mail : pdksaps@gmail.com
ಸಂಖ್ಯೆ: ಕೆ.ಎಸ್.ಬಿ.ಟಿ.ಸಿ/ಬಿಎಸ್/19/2023–24 ದಿನಾಂಕ: 11.11.2024

ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನ ಪ್ರಕಟಣೆ

ಸರ್ಕಾರಿ ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕ್‌ಗಳ ಹೆಚ್ಚುವರಿ ಪ್ಲಾಸ್ಮಾದ ಏಕರೂಪದ ವಿನಿಮಯಕ್ಕಾಗಿ ಸೇವಾ ಪೂರೈಕೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆ ಮತ್ತು ತಾಂತ್ರಿಕ ನಿರ್ದಿಷ್ಟತೆಯ ವಿವರಗಳು, ನಿಯಮಗಳು ಮತ್ತು ಷರತ್ತುಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ : https://kppp.karnataka.gov.in ನಲ್ಲಿ ಲಭ್ಯವಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.12.2024, ಸಂಜೆ 5.00 ಗಂಟೆವರೆಗೆ.

ಸಹಿ/– ಯೋಜನಾ ನಿರ್ದೇಶಕರು,
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು
DIPR/CP/3158/Zen/2024-25

ತೋಟಗಾರಿಕೆ ಇಲಾಖೆ
ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ
ಕೇಂದ್ರ ಕಛೇರಿ: ನೇಕಾರ ಭವನ, ವಿದ್ಯಾನಗರ, ಹುಬ್ಬಳ್ಳಿ – 580031.
ದೂರವಾಣಿ ಸಂಖ್ಯೆ: 0836 – 2375030
ಇ–ಮೇಲ್: spiceboardhbl@gmail.com, ವೆಬ್‌ಸೈಟ್: www.karnatakaspices.com
ಕ್ರಸಂ: ವ್ಯ.ನಿ/ಕರಾಸಾಪಅಮಂ/ಹು/ವಿನಿ/ಕಡತ ಸಂ–4/2024–25 ದಿನಾಂಕ: 12–11–2024

ಸೀಮಿತ ಮರು ಇ–ಟೆಂಡರ್ ಪ್ರಕಟಣೆ

ವಿಷಯ: ಚಿಕ್ಕಮಗಳೂರು ಜಿಲ್ಲೆಯಲ್ಲಿ PPP ಅಡಿ ಸ್ಪೈಸ್ ಪಾರ್ಕ್ ನಿರ್ಮಿಸುವ ಯೋಜನೆ ಅನುಷ್ಠಾನಕ್ಕೆ ವ್ಯವಹರಣಾ ಸಮಾಲೋಚಕರನ್ನು (Transaction Advisor) ಆಯ್ಕೆ ಮಾಡಲು ಪ್ರಸ್ತಾವನೆ ಮನವಿಗಳ (Request for Praposal) ಸೀಮಿತ ಮರು ಟೆಂಡರ್ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, **ಚಿಕ್ಕಮಗಳೂರು ಜಿಲ್ಲೆಯಲ್ಲಿ PPP ಅಡಿ ಸ್ಪೈಸ್ ಪಾರ್ಕ್ ನಿರ್ಮಿಸುವ ಯೋಜನೆ ಅನುಷ್ಠಾನಕ್ಕೆ** ಸೀಮಿತ ಮರು ಟೆಂಡರ್‌ನ್ನು RFP (Request for Praposal) ಯಲ್ಲಿ ಇರುವಂತೆ, ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ರವರಿಂದ ನೋಂದಾಯಿಸಲ್ಪಟ್ಟ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಣೆ ಮಾಡುವ ದಿನಾಂಕ: **12–11–2024.** 2) ಪ್ರೀ–ಬಿಡ್ ಸಭೆಯ ದಿನಾಂಕ: **20–11–2024 ರ ಬೆಳಿಗ್ಗೆ 11.30 ಗಂಟೆಗೆ.** 3) ಟೆಂಡರ್ ಕುರಿತಂತೆ ಪ್ರಶ್ನೆ / ಸ್ಪಷ್ಟೀಕರಣಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **25–11–2024 ರ ಸಂಜೆ 5.30 ಗಂಟೆಯೊಳಗೆ.** 4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11–12–2024 ರ ಸಂಜೆ 5.30 ಗಂಟೆಯೊಳಗೆ.** 5) ಟೆಕ್ನಿಕಲ್ ಬಿಡ್‌ನ್ನು ತೆರೆಯುವ ದಿನಾಂಕ: **13–12–2024 ರ ಬೆಳಿಗ್ಗೆ 11.00 ಗಂಟೆಯ ನಂತರ** ಮತ್ತು **ಇ.ಎಂ.ಡಿ ಮೊತ್ತ ರೂ. 1,00,000/– (ಒಂದು ಲಕ್ಷ ಮಾತ್ರ).** ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಸಂಪರ್ಕಿಸುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಹುಬ್ಬಳ್ಳಿ.
ವಾಸಾಸಂಇ/ಧಾರವಾಡ/600/ಅಡ್ವರ್ಟೋ/2024–25

ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ
ಸಂ: ಕ್ರಿಮ್ಸ್/ಮರು–ಟೆಂಡರ್/2024–25 ದಿನಾಂಕ: 12.11.2024

ಮರು–ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕ್ರ.ಸಂ.1: ಟೆಂಡರ್ ಸಂಖ್ಯೆ: ಕ್ರಿಮ್ಸ್/ಮರು–ಟೆಂಡರ್/157/2024–25 ದಿನಾಂಕ: 12.11.2024, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ "L1 Registered AEBAS (Adhar Enabled Biometric Attendance System) devices" ಗಾಗಿ ಮರು–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 13.11.2024, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.11.2024 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.2: ಟೆಂಡರ್ ಸಂಖ್ಯೆ: ಕ್ರಿಮ್ಸ್/ಮರು–ಟೆಂಡರ್/158/2024–25 ದಿನಾಂಕ: 12.11.2024, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿಯಲ್ಲಿ ವಿವಿಧ ಸಲಕರಣಗಳ ಪೂರೈಕೆಗೆ ಮರು–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 13.11.2024, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.11.2024 ರಂದು ಸಂಜೆ 5.00 ರ ಒಳಗೆ

ಈ ಮೇಲ್ಕಂಡ ಟೆಂಡರ್‌ಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

DIPR/KWR/KSMCA/500/24-25 dt. 12.11.2024 ಸಹಿ/– ನಿರ್ದೇಶಕರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಎನ್/48/2024/924 ದಿನಾಂಕ: 12.11.2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಅಧಿಸೂಚನೆ ಸಂಖ್ಯೆ: ಕವಿನಿಆ/ಎನ್/48/2024/900, ದಿನಾಂಕ: 05.11.2024ರ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಶುಲ್ಕ), ವಿನಿಯಮಗಳು, 2024 ನ್ನು ದಿನಾಂಕ: 07.11.2024ರ ಕರ್ನಾಟಕ ರಾಜ್ಯಪತ್ರದಲ್ಲಿ ಸಂಚಿಕೆ 214, ಸಂಪುಟ 159ರಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ / ಆಸಕ್ತರಿಂದ ಸಲಹೆ/ಅನಿಸಿಕೆ/ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು. ಸದರಿ ಕರಡು ವಿನಿಯಮಗಳನ್ನು ಆಯೋಗದ ಅಂತರ್ಜಾಲತಾಣ: https://kerc.karnataka.gov.in ದಲ್ಲಿ ಪ್ರಕಟಿಸಲಾಗಿದೆ.

ಆಯೋಗವು ಈ ವಿಷಯದಲ್ಲಿ ಸಾರ್ವಜನಿಕರ / ಆಸಕ್ತರ ಅಭಿಪ್ರಾಯಗಳನ್ನು ಪಡೆಯಲು **ದಿನಾಂಕ: 25.11.2024ರಂದು ಬೆಳಿಗ್ಗೆ 11.00 ಗಂಟೆಗೆ ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052 ರ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು** ನಿಗದಿಪಡಿಸಿದೆ. ಆಸಕ್ತ ವ್ಯಕ್ತಿಗಳು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಲಿಖಿತ/ಮೌಖಿಕ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/3157/2024-25

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆ.ಜಿ.ರಸ್ತೆ, ಬೆಂಗಳೂರು–560009,
ದೂರವಾಣಿ: 080–23118888
No: RGRHCL/CMPPCSP/03/2024 Date: 12.11.2024

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ (2ನೇ ಕರೆ)

(ದ್ವಿ–ಲಕೋಟೆ ಟೆಂಡರ್ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
ರಾಜೀವ್ ಗಾಂಧಿ ವಸತಿ ನಿಗಮದ **ಕಛೇರಿಯ ಉಪಯೋಗಕ್ಕಾಗಿ ಕಂಪ್ಯೂಟರ್ / ಲ್ಯಾಪ್‌ಟಾಪ್‌ಗಳ ಸರಬರಾಜು ಮತ್ತು ಅಳವಡಿಕೆಗಾಗಿ** ಹೆಸರಾಂತ ಮೂಲ ತಯಾರಕರು (OEM) ಅಥವಾ ಅಧಿಕೃತ ಡೀಲರ್ (AUD) / OEM ನ ವಿತರಕರಿಂದ ದ್ವಿ–ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲೆಗಳನ್ನು RGHCL ನಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ https://kppp.karnataka.gov.in ನಿಂದ ದಿನಾಂಕ: **12–11–2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ರೂ.60,000/–ಗಳ ಭದ್ರತಾ ಠೇವಣಿಯೊಂದಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **22–11–2024** ರಂದು ಸಂಜೆ 4.00 ರವರೆಗೆ. ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ನಿಂದ ಮಾಹಿತಿ ಪಡೆಯಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಕಾರ್ಯಕ್ರಮ ಅನುಷ್ಠಾನ)
ರಾಜೀವ್ ಗಾಂಧಿ ವಸತಿ ನಿಗಮ ನಿ.,
DIPR/CP/SPAN/3171/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ: ಟೆಂಪ್ರ:ಸಇಂ–2:2024–25/1668 ದಿ:11/11/2024

ಅಲ್ಪಾವಧಿ ಟೆಂಡರ್/ಮರು ಟೆಂಡರ್ ಪ್ರಕಟಣೆ ಸಂಖ್ಯೆ:27/2024–25

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ 5054 ಯೋಜನೆ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಟೆಂಡರಿಗಿಟ್ಟ ಮೊತ್ತ ಗರಿಷ್ಠ ರೂ.84.30 ಲಕ್ಷ & ಕನಿಷ್ಠ ರೂ.42.20 ಲಕ್ಷ ಮೊತ್ತದ ಒಟ್ಟು 8 ಪ್ಯಾಕೇಜ್ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್/ಮರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಪಡೆಯಬಹುದು. ಟೆಂಡರ್‌ಗಳನ್ನು https://kppp.karnataka.gov.in, ಆನ್‌ಲೈನ್ ಮೂಲಕ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:20.11.2024ರ ಸಂಜೆ 4.00 ಗಂಟೆವರೆಗೆ ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿಎ/434/2024–25

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ,
ವಸಂತನಗರ, ಬೆಂಗಳೂರು–560052.
ಸಂಖ್ಯೆ: ಅಸಂನಿ/ಅ/ಹೊಸ ವಿನಿ–ಕಾಟ್/ಸಿಆರ್–45/2024–25 ದಿನಾಂಕ: 12–11–2024

ಟೆಂಡರ್ ಪ್ರಕಟಣೆ

2024–25ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕೆ "ಟೂ ಟೈಯರ್ ಕಾಟ್‌ಗಳನ್ನು" ಸರಬರಾಜುದಾರರಿಂದ ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಂತೆ ಆನ್‌ಲೈನ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕ್ರಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	12.11.2024.
2.	ಟೆಂಡರ್ ಮೊತ್ತ:	ರೂ.990.00 ಲಕ್ಷಗಳು.
3.	ಇಎಂಡಿ ಮೊತ್ತ	ರೂ. 14,85,000/–
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	21.11.2024 ಬೆಳಿಗ್ಗೆ 11:30 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	12.12.2024 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	16.12.2024 ಬೆಳಿಗ್ಗೆ 11:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	19.12.2024 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22535902/ 080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/3168/ಎಂಎಎ/2024–25

ಬೆಂಗಳೂರು ವಿಶ್ವವಿದ್ಯಾಲಯ
ಯು.ಜಿ.ಸಿ. ಮಾನ್ಯತೆ ಹಾಗೂ ನ್ಯಾಕ್ 'ಎ++' ಶ್ರೇಣಿ ಪಡೆದಿದೆ.
ದೂರ ಶಿಕ್ಷಣ ಮತ್ತು ಆನ್–ಲೈನ್ ಶಿಕ್ಷಣ ಕೇಂದ್ರ
ಜ್ಞಾನಭಾರತಿ ಆವರಣ, ಬೆಂಗಳೂರು–560056
ದೂರವಾಣಿ: 080–22961261, 080–46807810
ಇ–ಮೇಲ್ : dccbub@gmail.com / admission@ddebubonline.in
ಸಂಖ್ಯೆ: ಬಿ.ಯು/ಸಿಡಿಒಇ/ಆನ್–ಲೈನ್/2024–25 ದಿನಾಂಕ: 12.11.2024

ಪ್ರವೇಶಾತಿ ಅಧಿಸೂಚನೆ
2024–25ನೇ ಸಾಲಿನ ಅಕ್ಟೋಬರ್ ಆವೃತ್ತಿಗೆ ಆನ್‌ಲೈನ್ ಶಿಕ್ಷಣದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ

ಸದರಿ ಪದವಿಗಳು ಯು.ಜಿ.ಸಿ ಯ (ದೂರ ಶಿಕ್ಷಣ ಮತ್ತು ಮುಕ್ತ ಕಾರ್ಯಕ್ರಮಗಳ ಮತ್ತು ಆನ್ ಲೈನ್ ಕಾರ್ಯಕ್ರಮಗಳ) ನಿಯಮಾವಳಿಗಳು, 2020 ರ ನಿಬಂಧನೆ 3 (ಬಿ) (ಎ)ರ ಅನುಸಾರ ಯು.ಜಿ.ಸಿ. ಯ ಮಾನ್ಯತೆ ಪಡೆದಿವೆ.

ಸ್ನಾತಕ ಪದವಿ ಕೋರ್ಸು (3 ವರ್ಷಗಳು / 6 ಸೆಮಿಸ್ಟರ್‌ಗಳು):
(i) ಬಿ.ಕಾಂ. (ಬ್ಯಾಚುಲರ್ ಆಫ್ ಕಾಮರ್ಸ್)
ಸ್ನಾತಕೋತ್ತರ ಪದವಿ ಕೋರ್ಸುಗಳು: (2 ವರ್ಷಗಳು / 4 ಸೆಮಿಸ್ಟರ್ ಗಳು)
(I) ಎಂ.ಎ. 1. ಕನ್ನಡ, 2. ಇಂಗ್ಲೀಷ್ 3. ಹಿಂದಿ, 4. ಅರ್ಥಶಾಸ್ತ್ರ, 5. ಇತಿಹಾಸ, 6. ಸಮಾಜಶಾಸ್ತ್ರ, 7. ರಾಜ್ಯಶಾಸ್ತ್ರ.
(ii) ಎಂ.ಕಾಂ. ಮಾಸ್ಟರ್ ಆಫ್ ಕಾಮರ್ಸ್ (ಸಾಮಾನ್ಯ)
(iii) ಎಂ.ಎಸ್ಸಿ (ಗಣಿತ ಶಾಸ್ತ್ರ)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 15.11.2024

- ಪ್ರವೇಶಾತಿಯ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮೂಲಕ ನಡೆಯಲಿದೆ
- ಆನ್–ಲೈನ್ ಕೋರ್ಸ್‌ಗಳಿಗೆ ರಾಜ್ಯ/ದೇಶದ/ವಿದೇಶದ ಯಾವುದೇ ಭಾಗದ ಆಸಕ್ತ ಅರ್ಹ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಅಂತರ್ಜಾಲವನ್ನು ವೀಕ್ಷಿಸಬಹುದಾಗಿದೆ:
www.bangaloreuniversity.karnataka.gov.in
ಸಹಿ/–
ಕುಲಸಚಿವರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ 11/2024–25 ದಿನಾಂಕ: 08.11.2024

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" KW-1, KW-2 & KW-4 ನಲ್ಲಿನ ಷರತ್ತುಗಳಿಗನುಗುಣವಾಗಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒಟ್ಟು 5–ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 08.11.2024 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 587.05 ಲಕ್ಷಗಳು ಮತ್ತು ಕನಿಷ್ಠ 4.92 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.8,80,600/– ಮತ್ತು ಕನಿಷ್ಠ ರೂ.12,300/– ಗುತ್ತಿಗೆ ಕಾಲಾವಧಿ ಗರಿಷ್ಠ 6–ತಿಂಗಳು ಮತ್ತು ಕನಿಷ್ಠ 45–ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 22.11.2024 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS-774/KSMCA-530/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಬದುಕುವುದಕ್ಕಾಗಿ ಸಂಪತ್ತೇ ವಿನಾ ಸಂಪತ್ತಿಗಾಗಿ ಬದುಕು ಅಲ್ಲ.

–ಸಿದ್ಧೇಶ್ವರ ಸ್ವಾಮೀಜಿ

ಹವಾಮಾನ ಬದಲಾವಣೆ ತಡೆ ಸಮಾವೇಶ ಮಾನವನ ಉಳಿವಿಗೆ ದೇಶಗಳ ಬದ್ಧತೆ ಅಗತ್ಯ

ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ತಡೆ ಸಮಾವೇಶವು (ಸಿಒಪಿ29) ಅಜರ್‌ಬೈಜಾನ್‌ನ ಬಾಕುವಿನಲ್ಲಿ ಆರಂಭವಾಗಿದೆ. ಇಂಗಾಲ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದು ಮತ್ತು ಹವಾಮಾನ ಬದಲಾವಣೆ ತಡೆ ಕಾರ್ಯಕ್ರಮಗಳಿಗೆ ಹಣಕಾಸು ಹೊಂದಿಸುವ ವಿಚಾರದಲ್ಲಿ ಹಲವು ಸವಾಲುಗಳು ಮತ್ತು ಭೀತಿಗಳು ಇದ್ದರೂ ಆಶಾಕಿರಣವೂ ಗೋಚರಿಸಿದೆ. 198 ದೇಶಗಳ ಪ್ರತಿನಿಧಿಗಳು ಮತ್ತು ಸಾವಿರಾರು ಮಂದಿ ಪರಿಸರ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರು ಆಯ್ಕೆ ಆಗಿರುವ ಸಂದರ್ಭದಲ್ಲಿಯೇ ಈ ಸಮಾವೇಶವೂ ನಡೆಯುತ್ತಿದೆ. ಟ್ರಂಪ್ ಅವರು ಹವಾಮಾನ ಬದಲಾವಣೆ ತಡೆ ಕ್ರಮಗಳ ಪರವಾಗಿ ಇಲ್ಲ. ಅವರು ಮೊದಲ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಇದ್ದಾಗ ಪ್ಯಾರಿಸ್ ಒಪ್ಪಂದ ಸೇರಿದಂತೆ ಹವಾಮಾನ ಬದಲಾವಣೆ ತಡೆಯ ಎಲ್ಲ ಅಂತರರಾಷ್ಟ್ರೀಯ ಒಪ್ಪಂದಗಳಿಂದ ಅಮೆರಿಕ ಹೊರಹೋಗಿತ್ತು. ಅಮೆರಿಕವು ಜಗತ್ತಿನಲ್ಲಿಯೇ ಅತಿ ಹೆಚ್ಚು ಇಂಗಾಲ ಹೊರಸೂಸುವ ದೇಶ. ಜೊತೆಗೆ ಜಗತ್ತಿನ ಅತ್ಯಂತ ಶ್ರೀಮಂತ ದೇಶ. ಹೀಗಾಗಿ, ಹವಾಮಾನ ಬದಲಾವಣೆ ತಡೆ ಕಾರ್ಯಕ್ರಮದ ವೆಚ್ಚ ಭರಿಸುವಲ್ಲಿ ಅಮೆರಿಕವು ದೊಡ್ಡ ಹೊಣೆಗಾರಿಕೆ ವಹಿಸಿಕೊಳ್ಳಬೇಕು ಎಂಬ ನಿರೀಕ್ಷೆ ಇದೆ. ಆದರೆ, ಅಮೆರಿಕ ಯಾವ ಪಾತ್ರ ವಹಿಸಬಹುದು ಎಂಬ ವಿಚಾರದಲ್ಲಿ ಈಗ ಅನಿಶ್ಚಿತ ಸ್ಥಿತಿ ಎದುರಾಗಿದೆ. ಶ್ರೀಮಂತ ದೇಶಗಳು, ತೈಲ ಉತ್ಪಾದಕ ದೇಶಗಳು ಸಮಾವೇಶದ ಗುರಿಗಳಿಗೆ ಯಾವ ಪ್ರಮಾಣದ ಬದ್ಧತೆ ತೋರಬಹುದು ಎಂಬುದರ ಕುರಿತು ಪ್ರಶ್ನೆಗಳು ಇವೆ. ಆತಿಥೇಯ ದೇಶದ ಬಗ್ಗೆಯೂ ಇದೇ ಬಗೆಯ ಪ್ರಶ್ನೆಗಳಿವೆ.

ಪ್ರತಿ ದೇಶವೂ ನವೀಕರಿಸಬಹುದಾದ ಇಂಧನ ಬಳಕೆಯನ್ನು ಹೆಚ್ಚಿಸುವ ಹೊಸ ಗುರಿಗಳನ್ನು ನಿಗದಿಪಡಿಸಿಕೊಳ್ಳಬೇಕಿದೆ

ವಿಶ್ವಸಂಸ್ಥೆಯು ನೀಡಿದ ಎಚ್ಚರಿಕೆಯೊಂದಿಗೆ ಸಮಾವೇಶ ಆರಂಭಗೊಂಡಿತು; ಪ್ಯಾರಿಸ್ ಹವಾಮಾನ ಒಪ್ಪಂದದ ಗುರಿಗಳು 'ಬಹುದೊಡ್ಡ ಗಂಡಾಂತರ ಎದುರಿಸುತ್ತಿವೆ' ಮತ್ತು 2024ರಲ್ಲಿ ತಾಪಮಾನವು ಈ ಹಿಂದಿನ ಎಲ್ಲ ದಾಖಲೆಗಳನ್ನು ಮುರಿಯಲಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಹವಾಮಾನ ಬದಲಾವಣೆ ತಡೆ ಕಾರ್ಯಕ್ರಮಗಳಿಗೆ ಹಣಕಾಸು ಹೊಂದಿಸುವುದೇ ಸಮಾವೇಶದ ಪ್ರಮುಖ ಕಾರ್ಯಸೂಚಿ– ಇದು ಅತಿ ಹೆಚ್ಚು ವಿವಾದಾತ್ಮಕವಾದ ವಿಷಯವೂ ಹೌದು. ಹವಾಮಾನ ಬದಲಾವಣೆ ತಡೆ ಮತ್ತು ಇಂಗಾಲ ಹೊರಸೂಸುವಿಕೆಯನ್ನು ಕನಿಷ್ಠಗೊಳಿಸುವ ಹೊಸ ತಂತ್ರಜ್ಞಾನ ಅಳವಡಿಕೆಗಾಗಿ 2020ರ ಹೊತ್ತಿಗೆ ವಾರ್ಷಿಕ 10 ಸಾವಿರ ಕೋಟಿ ಡಾಲರ್ (ಸುಮಾರು ₹ 8.43 ಲಕ್ಷ ಕೋಟಿ) ಮೊತ್ತವನ್ನು ಅಭಿವೃದ್ಧಿಶೀಲ ದೇಶಗಳಿಗೆ ನೀಡಬೇಕು ಎಂಬ 15 ವರ್ಷಗಳ ಹಿಂದಿನ ಕರಾರು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಆಗಿಲ್ಲ. ಜಾಗತಿಕ ತಾಪಮಾನ ಏರಿಕೆಯನ್ನು ನಿಲ್ಲಿಸಬೇಕಿದ್ದರೆ ಚೀನಾವನ್ನು ಹೊರತುಪಡಿಸಿ ಇತರ ಅಭಿವೃದ್ಧಿಶೀಲ ದೇಶಗಳಿಗೆ 2030ರ ಹೊತ್ತಿಗೆ ವರ್ಷಕ್ಕೆ ಎರಡು ಲಕ್ಷ ಕೋಟಿ ಡಾಲರ್ (ಸುಮಾರು ₹168 ಲಕ್ಷ ಕೋಟಿ) ಬೇಕು ಎಂದು ವಿಶ್ವಸಂಸ್ಥೆ ಬೆಂಬಲಿತ ವರದಿಯೊಂದು ಹೇಳಿದೆ. ಇದರಲ್ಲಿ ಒಂದು ಲಕ್ಷ ಕೋಟಿ ಡಾಲರ್ (ಸುಮಾರು ₹84 ಲಕ್ಷ ಕೋಟಿ) ಅನ್ನು ಶ್ರೀಮಂತ ದೇಶಗಳು, ಹೂಡಿಕೆದಾರರು ಮತ್ತು ಅಭಿವೃದ್ಧಿ ಉದ್ದೇಶದ ಬ್ಯಾಂಕುಗಳು ನೀಡಬೇಕು; ಉಳಿದ ಮೊತ್ತವನ್ನು ಆಯಾ ದೇಶಗಳು ಆಂತರಿಕವಾಗಿ ಹೊಂದಿಸಿಕೊಳ್ಳಬೇಕು. ಬಾಕು ಸಮಾವೇಶದಲ್ಲಿ ಈ ನಿರ್ಣಾಯಕ ವಿಚಾರದ ಕುರಿತು ತೀರ್ಮಾನ ಆಗಬಹುದು, ಹಣಕಾಸಿನ ಹೊಸ ಗುರಿ ನಿಗದಿಯಾಗಬಹುದು ಮತ್ತು ಹಣಕಾಸು ಹೊಂದಿಸಿಕೊಳ್ಳಲು ಹೊಸ ವ್ಯವಸ್ಥೆ ರೂಪುಗೊಳ್ಳಬಹುದು ಎಂದು ನಿರೀಕ್ಷಿಸಲಾಗಿದೆ.

ಇಂಗಾಲ ಹೊರಸೂಸುವಿಕೆಯ ಪ್ರಮಾಣಕ್ಕೆ ಅನುಗುಣವಾಗಿ ಹವಾಮಾನ ಬದಲಾವಣೆ ತಡೆ ಕಾರ್ಯಕ್ರಮಗಳ ಹೊಣೆಯನ್ನು ದೇಶಗಳು ವಹಿಸಿಕೊಳ್ಳಬೇಕು. ಅದರ ಪ್ರಕಾರ, ಹವಾಮಾನ ಬದಲಾವಣೆ ತಡೆ ಪ್ರಯತ್ನಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳು ಹೆಚ್ಚಿನ ದೇಣಿಗೆ ನೀಡಬೇಕು. ಆದರೆ, ಇದು ಸರಿಯಾಗಿ ಅನುಷ್ಠಾನ ಆಗಿಲ್ಲ. ಚೀನಾ ಮತ್ತು ಭಾರತದಲ್ಲಿ ತಲಾ ಇಂಗಾಲ ಹೊರಸೂಸುವಿಕೆಯು ಶ್ರೀಮಂತ ದೇಶಗಳಿಗೆ ಹೋಲಿಸಿದರೆ ಬಹಳ ಕಡಿಮೆ ಇದೆ; ಹಾಗಿದ್ದರೂ ಈ ಎರಡೂ ದೇಶಗಳು ದೇಣಿಗೆ ನೀಡಬೇಕು ಎಂದು ಅಭಿವೃದ್ಧಿ ಹೊಂದಿದ ದೇಶಗಳು ಬಯಸುತ್ತಿವೆ. ಪ್ರತಿಯೊಂದು ದೇಶವೂ ಇಂಗಾಲ ಹೊರಸೂಸುವಿಕೆ ಮತ್ತು ಪಳೆಯುಳಿಕೆ ಇಂಧನ ಬಳಕೆಯನ್ನು ಕಡಿತಗೊಳಿಸಿ, ನವೀಕರಿಸಬಹುದಾದ ಇಂಧನ ಬಳಕೆಯನ್ನು ಹೆಚ್ಚಿಸುವ ಹೊಸ ಗುರಿಗಳನ್ನು ನಿಗದಿಪಡಿಸಿಕೊಳ್ಳಬೇಕಿದೆ. ಪ್ಯಾರಿಸ್ ಒಪ್ಪಂದದ ನಂತರದ ರಾಷ್ಟ್ರೀಯ ಹವಾಮಾನ ತಡೆಯ ಮೊದಲ ಪರಿಷ್ಕೃತ ಕಾರ್ಯಕ್ರಮಗಳನ್ನು ದೇಶಗಳು ಪ್ರಕಟಿಸುವ ಸಾಧ್ಯತೆ ಇದೆ. ಪ್ಯಾರಿಸ್ ಒಪ್ಪಂದದ ಬದ್ಧತೆಗಳಿಗೆ ಸಂಬಂಧಿಸಿ ಭಾರತವು ಇತರೆಲ್ಲ ದೇಶಗಳಿಗೆ ಹೋಲಿಸಿದರೆ ಅತ್ಯುತ್ತಮ ಕೆಲಸ ಮಾಡಿದೆ. ಹಾಗಿದ್ದರೂ ಬಾಕು ಸಮಾವೇಶದಲ್ಲಿ ಭಾರತದ ಉಪಸ್ಥಿತಿಯು ಮಿತವಾದ ಪ್ರಮಾಣದಲ್ಲಷ್ಟೇ ಇದೆ.

ದಿನದ ಟ್ವೀಟ್

ಭ್ರಷ್ಟಾಚಾರಕ್ಕೆ ಬೀಳಲಿ ಕಡಿವಾಣ

ಅಬಕಾರಿ ಇಲಾಖೆಯು ಎಂದಿನಿಂದಲೂ ಹೀಗೇ ಇದೆಯಲ್ಲವೇ? ಏನಾದರೂ ಬದಲಾವಣೆ ಆಗುತ್ತದೆ ಎಂದು ಯಾರಾದರೂ ಭಾವಿಸಿದರೆ, ಅದು ಅವರ ಮೂರ್ಖತನವಾಗುತ್ತದೆ. ಅಲ್ಲಿ ಪ್ರತಿಯೊಬ್ಬರೂ ಭ್ರಷ್ಟರೇ ಆಗಿದ್ದಾರೆ.

(ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ ಎಂಬ ಟೀಕೆಗೆ ಪ್ರತಿಕ್ರಿಯೆ)

ಕಿರಣ್ ಅರಸ್

ಕಿಡಿನುಡಿ

ಎಚ್.ಡಿ.ದೇವೇಗೌಡ ಅವರು 'ರಾಜ್ಯ ಸರ್ಕಾರವನ್ನು ತೆಗೆದುಬಿಡ್ತೀನಿ' ಎಂದು ಹಲ್ಲು ಕಡಿಯುತ್ತಾರೆ. ಕಾಂಗ್ರೆಸ್‌ನ 136 ಶಾಸಕರು ಗೌಡರ ಮನೆಯ ಜೀತ ಮಾಡುವ ನೌಕರರೇ? ಶಾಸಕರಿಗೆ ಸ್ವಶಕ್ತಿ, ಸ್ವಬುದ್ಧಿ ಇರುವುದಿಲ್ಲವೇ? ಈ ರೀತಿ ಹೇಳುವುದು ಪ್ರಜಾಪ್ರಭುತ್ವಕ್ಕೆ ಶೋಭೆ ತರುವುದಿಲ್ಲ. ಹಿರಿತನಕ್ಕೆ ಗೌರವ ಬರುವ ರೀತಿಯಲ್ಲಿ ಮಾತನಾಡಲಿ.

ಕೆ.ಎನ್.ರಾಜಣ್ಣ, ಸಹಕಾರ ಸಚಿವ

25 ವರ್ಷಗಳ ಹಿಂದೆ

ಶನಿವಾರ, 13-11-1999

- **ಕಾಂಗ್ರೆಸ್ ಬೆಂಬಲ ವಾಪಸ್ ಬಿಕ್ಕಟ್ಟಿನಲ್ಲಿ ರಾಬ್ಡಿ ಸರ್ಕಾರ**

ನವದೆಹಲಿ, ನ. 12 (ಯುಎನ್ಐ)– ಬಿಹಾರದಲ್ಲಿ ರಾಬ್ಡಿದೇವಿ ನೇತೃತ್ವದ ರಾಷ್ಟ್ರೀಯ ಜನತಾದಳ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಪಕ್ಷ ವಾಪಸು ಪಡೆಯುವುದರೊಂದಿಗೆ ರಾಜ್ಯದಲ್ಲಿ ರಾಜಕೀಯ ಬಿಕ್ಕಟ್ಟು ತಲೆದೋರಿದೆ.

ರಾಜ್ಯ ವಿಧಾನಸಭೆಯಲ್ಲಿ 29 ಸದಸ್ಯಬಲ ಹೊಂದಿರುವ ಕಾಂಗ್ರೆಸ್ ಪಕ್ಷ ಬೆಂಬಲ ವಾಪಸು ಪಡೆದಿದ್ದರೂ ಸರ್ಕಾರಕ್ಕೆ ಅಪಾಯ ಎದುರಾಗುವ ಸಾಧ್ಯತೆಗಳು ಕಡಿಮೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಕಾಂಗ್ರೆಸ್ ಬೆಂಬಲವೂ ಸೇರಿ ರಾಬ್ಡಿ ನೇತೃತ್ವದ ಸರ್ಕಾರ 324 ಸದಸ್ಯ ಬಲದ ವಿಧಾನಸಭೆಯಲ್ಲಿ 180 ಮಂದಿಯ ಬೆಂಬಲ ಹೊಂದಿತ್ತು. ಇದೀಗ ಕಾಂಗ್ರೆಸ್ ಬೆಂಬಲ ವಾಪಸು ಪಡೆದಿದ್ದು, ಸರ್ಕಾರವನ್ನು ಬೆಂಬಲಿಸುವ ಸದಸ್ಯರ ಸಂಖ್ಯೆ 151ಕ್ಕೆ ಇಳಿದಿದೆ. ಸರಳ ಬಹುಮತಕ್ಕೆ ಇನ್ನೂ 11 ಶಾಸಕರ ಕೊರತೆ ಇದೆ.

- **'ಈರುಳ್ಳಿ ಬೆಲೆ ಸುಧಾರಿಸದಿದ್ದರೆ ಸರ್ಕಾರದಿಂದ ಖರೀದಿ'**

ಬೆಂಗಳೂರು, ನ. 12– ಈರುಳ್ಳಿ ಬೆಲೆಯಲ್ಲಿ ಚೇತರಿಕೆಯಾಗದಿದ್ದರೆ ರೈತರ ಅನುಕೂಲಕ್ಕಾಗಿ ಸರ್ಕಾರವೇ ಈರುಳ್ಳಿ ಖರೀದಿಗೆ ವ್ಯವಸ್ಥೆ ಮಾಡಲು ಸಿದ್ಧ ಎಂದು ಕೃಷಿ ಸಚಿವ ಟಿ.ಬಿ. ಜಯಚಂದ್ರ ಅವರು ಇಂದು ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಉತ್ತರ ಕರ್ನಾಟಕ ಭಾಗದಲ್ಲಿ ಮತ್ತು ಕೋಲಾರ ಜಿಲ್ಲೆಯಲ್ಲಿ ಇತ್ತೀಚೆಗೆ ಈರುಳ್ಳಿ ಬೆಲೆ ಕುಸಿದು ರೈತರಿಗೆ ತೀವ್ರ ಸಮಸ್ಯೆ ಎದುರಾಗಿದೆ ಎಂದು ಜನತಾದಳ (ಯು) ಗುಂಪಿನ ನಾಯಕ ಪಿ.ಜಿ.ಆರ್. ಸಿಂಧ್ಯಾ ಅವರು ಸರ್ಕಾರದ ಗಮನ ಸೆಳೆದಾಗ ಕೃಷಿ ಸಚಿವರು ಈ ಆಶ್ವಾಸನೆ ನೀಡಿದರು.

50 ವರ್ಷಗಳ ಹಿಂದೆ

ಬುಧವಾರ, 13-11-1974

- **'ಕಳ್ಳಸಾಗಣೆಗೆ ರಾಜಕೀಯ ಆಶ್ರಯ': ಸಂಬಂಧಿಸಿದ ಎಲ್ಲರ ಮೇಲೆ ಕ್ರಮ**

ನವದೆಹಲಿ, ನ. 12– ರಾಜಕೀಯ ಹಾಗೂ ಆಡಳಿತ ಹಂತಗಳಲ್ಲಿ ಅಕ್ರಮ ಸಾಗಾಣಿಕೆದಾರರ ಜೊತೆ ಸಂಬಂಧ ಹೊಂದಿರುವವರೆಲ್ಲರ ಬಗ್ಗೆಯೂ ಸರ್ಕಾರ ಉಗ್ರ ಕ್ರಮ ಕೈಗೊಳ್ಳುವುದು.

ಆಂತರಿಕ ಭದ್ರತಾ ಶಾಸನದನ್ವಯ ಅಕ್ರಮ ಸಾಗಾಣಿಕೆದಾರರ ಬಂಧನ ಕುರಿತ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಅರ್ಥ ಸಚಿವ ಸುಬ್ರಹ್ಮಣ್ಯಂ ಅವರು ಇಂದು ರಾಜ್ಯಸಭೆಯಲ್ಲಿ ಈ ಕ್ರಮವನ್ನು ಘೋಷಿಸಿದರು.

ಕಾಂಗ್ರೆಸ್ ನಾಯಕರು ಕೆಲವರು ಭಾರಿ ಅಕ್ರಮ ಸಾಗಾಣಿಕೆದಾರರಿಗೆ ರಕ್ಷಣೆ ನೀಡುತ್ತಿದ್ದಾರೆಂಬ ಆಪಾದನೆಯನ್ನು ಸುಬ್ರಹ್ಮಣ್ಯಂ ನಿರಾಕರಿಸಿದರು.

- **ಶಿಷ್ಯ ಪರಿಗ್ರಹ 'ಭಗವತಿಯ ಕೃಪೆ': ಶೃಂಗೇರಿ ಶ್ರೀಗಳು**

ಶೃಂಗೇರಿ, ನ. 12– 'ಇಂಥವರು ಮಠಕ್ಕೆ ದೊರಕಿದ್ದು ಪುಣ್ಯವಿಶೇಷ' –ಇದು ಶೃಂಗೇರಿ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ತಮ್ಮ ಶಿಷ್ಯ ಶ್ರೀ ಭಾರತೀತೀರ್ಥ ಸ್ವಾಮಿಗಳ ಬಗ್ಗೆ ಹೇಳಿದ ಮಾತು.

ನಿನ್ನೆ ಸಂಜೆ ಪ್ರವಚನ ಮಂದಿರದ ಮುಂಭಾಗದಲ್ಲಿ ಭಕ್ತವೃಂದದಿಂದ ಕಾಣಿಕೆ ಸ್ವೀಕರಿಸಿ, ಪಂಡಿತ ಸಮುದಾಯದವರನ್ನು ಸನ್ಮಾನಿಸಿ ಅನುಗ್ರಹ ಸಂದೇಶ ನೀಡಿದ ಶ್ರೀ ಜಗದ್ಗುರುಗಳು 'ಭಾಷೆ–ಪ್ರದೇಶಗಳ ದೃಷ್ಟಿಯಿಂದ ತಮ್ಮ ಶಿಷ್ಯ ಆಯ್ಕೆ ಬಗ್ಗೆ ಅಪಾರ್ಥ ಕಲ್ಪಿಸುವುದು ಬೇಡ' ಎಂದು ತಿಳಿಸಿದರು.

ಶಿಷ್ಯ ಪರಿಗ್ರಹವು 'ಭಗವತಿಯ ಕೃಪೆ'ಯಿಂದ ನಡೆದುದು ಎಂದರು.

ಸುಸಂಬದ್ಧ ಮತ್ತು ಪರಿಣಾಮಕಾರಿ ರಾಜಕಾರಣ ರೂಪಿಸುವುದು ಈ ಹೊತ್ತಿನ ಅಗತ್ಯ

ಮುಸ್ಲಿಮರಿಗೆ ಬೇಕಿದೆ ಉತ್ತಮ ರಾಜಕಾರಣ

ವಿಶ್ಲೇಷಣೆ

ಯೋಗೇಂದ್ರ ಯಾದವ್

'ಕಪ್ಪು ಜನರು ತನಗೆಂದಿಗೂ ಮತ ನೀಡುವುದೇ ಇಲ್ಲ ಎಂದೇ ರಿಪಬ್ಲಿಕನ್ ಪಕ್ಷವು ಅವರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಂತೆಯೇ ಕಪ್ಪು ಜನರು ತನಗೇ ಮತ ಹಾಕುತ್ತಾರೆ ಎಂದೇ ಡೆಮಾಕ್ರಟಿಕ್ ಪಕ್ಷ ಸಹ ಅವರ ಬಗ್ಗೆ ಯೋಚಿಸುವುದಿಲ್ಲ'– ಅಮೆರಿಕದ ರಾಜಕಾರಣದ ಬಗ್ಗೆ ಜನಜನಿತವಾಗಿರುವ ಈ ಅಣಕವು ಸಮಕಾಲೀನ ಭಾರತದ ಮುಸ್ಲಿಮರ ಪರಿಸ್ಥಿತಿಗೆ ಚೆನ್ನಾಗಿ ಹೊಂದುತ್ತದೆ.

ದೇಶದಲ್ಲಿನ ಮುಸ್ಲಿಮೇತರ ಪ್ರತಿಯೊಂದು ಸಮುದಾಯವೂ ವಿದ್ಯುತ್, ರಸ್ತೆ, ನೀರು ಅಥವಾ ಶಿಕ್ಷಣ, ಆರೋಗ್ಯ, ಉದ್ಯೋಗದಂತಹ ವಿಷಯಗಳ ಆಧಾರದಲ್ಲಿ ಮತವನ್ನು ಹಾಕುತ್ತದೆ. ಆದರೆ ಮುಸ್ಲಿಮರು ಮಾತ್ರ ಬದುಕುಳಿಯಲು, ಗುಂಪು ಹಲ್ಲೆ, ಬುಲ್ಡೋಜರ್ ಮತ್ತು ಗಲಭೆಗಳಿಂದ ತಪ್ಪಿಸಿಕೊಳ್ಳಲು ಮತ ಹಾಕಬೇಕಾದ ಶೋಚನೀಯ ಸ್ಥಿತಿಗೆ ಸಿಲುಕಿದ್ದಾರೆ. ತಮ್ಮನ್ನು ತೀರಾ ದ್ವೇಷದಿಂದ, ತಿರಸ್ಕಾರದಿಂದ ನಡೆಸಿಕೊಳ್ಳುವ ಪಕ್ಷಕ್ಕಂತೂ ಅವರು ಮತ ಹಾಕುವುದಿಲ್ಲ. ಅಂತೆಯೇ ಅವರು ಮತ ಹಾಕುವ ಪಕ್ಷವೂ ಅವರನ್ನು ತೀರಾ ಭಿನ್ನವಾಗೇನೂ ನಡೆಸಿಕೊಳ್ಳುವುದಿಲ್ಲ.

ಒತ್ತೆಯಾಳಿನಂತಹ ಈ ಸ್ಥಿತಿಯನ್ನು ಮುಸ್ಲಿಮರೇ ತಂದುಕೊಂಡದ್ದಲ್ಲ. ಮುಸ್ಲಿಂ ವಿರೋಧಿ ನೀತಿ–ನಿಲುವುಗಳನ್ನೇ ಆತುಕೊಂಡು ಬೆಳೆಯುತ್ತಿರುವ ಬಿಜೆಪಿ, ದೇಶದ ಅತ್ಯಂತ ದೊಡ್ಡ ಅಲ್ಪಸಂಖ್ಯಾತ ಸಮುದಾಯವನ್ನು ಇಂತಹದ್ದೊಂದು ಸ್ಥಿತಿಗೆ ದೂಡಿದೆ. ಮುಸ್ಲಿಮರ ಈ ಸ್ಥಿತಿಗೆ, ಮುಸ್ಲಿಂ ರಾಜಕೀಯ ನಾಯಕತ್ವ ಮತ್ತು 'ಜಾತ್ಯತೀತ' ಪಕ್ಷಗಳ ಕೊಡುಗೆಯೂ ಕಡಿಮೆಯೇನಿಲ್ಲ. ಮುಸ್ಲಿಮರಿಗೆ ಅಭದ್ರತೆ ಕಾಡುವಂತೆ ಮಾಡಿ ಮತ್ತು ಅವರನ್ನು ದೌರ್ಜನ್ಯಕ್ಕೆ ತುತ್ತಾಗುವಂತೆ ಇರಿಸಿ ಅವರ ಮತಗಳನ್ನು ಸಾಮೂಹಿಕವಾಗಿ ತಮ್ಮದಾಗಿಸಿಕೊಳ್ಳುವ ರಾಜಕಾರಣವು ಬಿಜೆಪಿಯ ಬೆಳವಣಿಗೆಯ ಜೊತೆಗೇ ಆರಂಭವಾಗಿದ್ದಲ್ಲ.

ಇದೊಂದು ಬೌದ್ಧಿಕ ಕಸರತ್ತಿನ ಬಲೆಯ ರೂಪದಲ್ಲಿ ವ್ಯಕ್ತವಾಗುತ್ತದೆ. ಮುಸ್ಲಿಮರ ವಿಷಯಗಳಿಗೆ ಸಂಬಂಧಿಸಿದಂತೆ 'ಜಾತ್ಯತೀತ'ರ ಪ್ರತಿಕ್ರಿಯೆಯು ಅವರು ವಿರೋಧಿಸುವ ಹಿಂದೂ ಬಹುಸಂಖ್ಯಾತ ಕೋಮುವಾದಿ ರಾಜಕಾರಣದ ಪ್ರತಿಬಿಂಬದಂತೆಯೇ ಇರುತ್ತದೆ. ಆರ್‌ಎಸ್‌ಎಸ್–ಬಿಜೆಪಿ ಒಂದು ಕಾರ್ಯಸೂಚಿಯನ್ನು ರೂಪಿಸುತ್ತವೆ, ಅವರು ಹೇಳಿದ್ದನ್ನೇ ನಾವು ತಲೆಕೆಳಗು ಮಾಡಿ ತೋರಿಸುತ್ತೇವೆ. ಮುಸ್ಲಿಮರನ್ನು ನಕಾರಾತ್ಮಕ ನೆಲೆಯಲ್ಲಿ, ಅವರು ಖಳರು ಎಂಬಂತೆ ಬಿಜೆಪಿ ಚಿತ್ರಿಸುತ್ತದೆ; ಮುಸ್ಲಿಮರದ್ದು ಸಂತ್ರಸ್ತರ ದೊಡ್ಡ ಏಕರೂಪಿ ಸಮುದಾಯ ಎಂದು ನಾವು ಹೇಳುತ್ತೇವೆ. ಮುಸ್ಲಿಮರನ್ನು ಏಕರೂಪಿ ರಾಜಕೀಯ ಗುಂಪು ಎಂದೇ ನಾವು ಮತ್ತು ಅವರು ಬಿಂಬಿಸುತ್ತಿದ್ದೇವೆ.

ಇದೇ ಕಾರ್ಯಸೂಚಿಯ ಭಾಗವಾಗಿ ಬಿಜೆಪಿಯು ಪ್ರತಿಯೊಬ್ಬ ಹಿಂದೂ ಮತದಾರನನ್ನು, ಆತ ಹಿಂದೂ ಅಷ್ಟೇ ಎಂಬಲ್ಲಿಗೆ ಸೀಮಿತಗೊಳಿಸುತ್ತಿದೆ. ನಾವೂ ಮುಸ್ಲಿಮರನ್ನು ಅವರ ಧಾರ್ಮಿಕ ಅಸ್ಮಿತೆಗಷ್ಟೇ ಸೀಮಿತ ಆಗಿಸುತ್ತಿದ್ದೇವೆ. ಜಾತ್ಯತೀತ ಎಂಬುದು ಮುಸ್ಲಿಂ ಪರ ನಿಲುವು ಎಂದು ಆರ್‌ಎಸ್‌ಎಸ್–ಬಿಜೆಪಿ ಕೂಗುತ್ತವೆ. ನಾವೂ ಜಾತ್ಯತೀತ ನಿಲುವು ಮತ್ತು ಮುಸ್ಲಿಮರ ಪರ ಎಂಬುದರ ಮಧ್ಯೆ ಇರುವ ವ್ಯತ್ಯಾಸವನ್ನು ತೋರಿಸಲು ವಿಫಲವಾಗಿ ಆರ್‌ಎಸ್‌ಎಸ್–ಬಿಜೆಪಿ ಪ್ರತಿಪಾದನೆಯನ್ನೇ ಗಟ್ಟಿಗೊಳಿಸುತ್ತಿದ್ದೇವೆ.

ಇವೆಲ್ಲವುಗಳನ್ನು ಅರ್ಥಮಾಡಿಕೊಳ್ಳದೇ ಇರುವುದು ಮತ್ತು ಅಶಕ್ತ ರಾಜಕಾರಣದ ಕಾರಣದಿಂದ ಇಂದಿನ ಭಾರತದಲ್ಲಿ ಮುಸ್ಲಿಮರಿಗಾಗಿ ಒಂದು ಸುಸಂಬದ್ಧ ಕಾರ್ಯಸೂಚಿ ಅಥವಾ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲ ಶಕ್ತಿ ರೂಪುಗೊಂಡಿಲ್ಲ. ಇದರಾಚೆಗೆ ಮುಸ್ಲಿಮರ ಎದುರು ಈಗ ಇರುವುದು ಮೂರು ಆಯ್ಕೆಗಳು ಮಾತ್ರ: ತಾವು ಅಂಚಿನಲ್ಲಿರುವ ಅಲ್ಪಸಂಖ್ಯಾತರು ಎಂಬುದನ್ನು ಸಿಟ್ಟಿನಿಂದಾದರೂ ಒಪ್ಪಿಕೊಳ್ಳುವುದು ಅಥವಾ ಆಳುತ್ತಿರುವವರೊಂದಿಗೆ ಮುಜುಗರದಿಂದಲೇ ಕೈಜೋಡಿಸುವುದು ಅಥವಾ ವ್ಯಗ್ರ ಸಂತ್ರಸ್ತರಂತಾಗುವುದು, ಇದರಿಂದಲಂತೂ ಅವರು ಸಮಾಜದಲ್ಲಿ ಇನ್ನಷ್ಟು ಪರಕೀಯರಾಗುತ್ತಾರೆ. ಈ ಮೂರರಲ್ಲಿ ಯಾವುದೂ ಘನತೆಯ ಆಯ್ಕೆಯಲ್ಲ.

ಮುಸ್ಲಿಮರಲ್ಲಿ ನಾಯಕತ್ವಕ್ಕೆ, ಸೃಜನಾತ್ಮಕ ಚಿಂತನೆಗಳಿಗೆ ಮತ್ತು ಹೋರಾಡುವ ಸಾಮರ್ಥ್ಯಕ್ಕೆ ಬರವಿಲ್ಲ ಎಂಬುದನ್ನು ಶಾಹೀನ್ ಬಾಗ್ ಚಳವಳಿ ನಮಗೆ ತೋರಿಸಿಕೊಟ್ಟಿದೆ. ಆದರೆ ಅವ್ಯಾವುವೂ ಮುಖ್ಯವಾಹಿನಿಯ ರಾಜಕೀಯದೊಂದಿಗೆ ನಂಟು ಹೊಂದಿಲ್ಲ. ಮುಸ್ಲಿಮರಿಗಾಗಿ ಒಂದು ಸುಸಂಬದ್ಧ ಮತ್ತು ಪರಿಣಾಮಕಾರಿ ರಾಜಕಾರಣವನ್ನು ರೂಪಿಸುವುದು ಈ ಹೊತ್ತಿನ ಅಗತ್ಯ ಮತ್ತು ಅತ್ಯಂತ ಕಠಿಣ ಗುರಿಗಳಲ್ಲಿ ಒಂದು.

ಮುಸ್ಲಿಮರ ಈ ಪ್ರಶ್ನೆ ಮತ್ತು ಸವಾಲುಗಳ ಕುರಿತು, ಸಿಎಸ್‌ಡಿಎಸ್‌ನಲ್ಲಿ ಸಹೋದ್ಯೋಗಿಯಾಗಿದ್ದ ಮತ್ತು ನನ್ನ ಸ್ನೇಹಿತರಾದ ಹಿಲಾಲ್ ಅಹಮದ್ ಕಟುವಾಗೇ ಬರೆಯುತ್ತಾರೆ. ಅವರ ಈಚಿನ, 'ಎ ಬ್ರೀಫ್ ಹಿಸ್ಟರಿ ಆಫ್ ದಿ ಪ್ರೆಸೆಂಟ್: ಮುಸ್ಲಿಂ ಇನ್ ನ್ಯೂ ಇಂಡಿಯಾ', 'ಅಲ್ಲಾ ನಾಮ್ ಕಿ ಸಿಯಾಸತ್' ಎಂಬ ಪುಸ್ತಕಗಳು 2014ರ ನಂತರದ 'ನವ ಭಾರತ'ದಲ್ಲಿ ಮುಸ್ಲಿಮರ ಸ್ಥಿತಿಯ ಕುರಿತೇ ಚರ್ಚಿಸುತ್ತವೆ. ಈ ಪ್ರಶ್ನೆಗಳನ್ನು ಎದುರಿಸಲು ಅಹಮದ್ ಒಂದು ವಿಶಿಷ್ಟವಾದ ನೆಲೆಯನ್ನು ಕಂಡುಕೊಂಡಿದ್ದಾರೆ. ಸಿಎಸ್‌ಡಿಎಸ್ ಕಚೇರಿಯಲ್ಲಿನ ಅವರ ಕ್ಯಾಬಿನ್‌ನಲ್ಲಿ ಪವಿತ್ರ ಕಾಬಾ, ಮಹಾತ್ಮ ಗಾಂಧಿ ಮತ್ತು ಚೆ ಗುವೆರಾ ಅವರ ಚಿತ್ರಗಳಿದ್ದವು. ಪರಸ್ಪರ ತೀರಾ ಭಿನ್ನವಾದ ಸಿದ್ಧಾಂತಗಳನ್ನು ಒಂದುಗೂಡಿಸುವ ಯತ್ನವಾಗಿ ಅವರ ಕ್ಯಾಬಿನ್ ಕಾಣುತ್ತದೆ. ಪ್ರತಿದಿನ ಐದು ಪ್ರಾರ್ಥನೆಗಳನ್ನು ಮಾಡುವ, ರಂಜಾನ್ ಮಾಸದ ಎಲ್ಲ ದಿನಗಳಲ್ಲೂ ಉಪವಾಸವಿರುವ ಆಸ್ತಿಕ ಮುಸ್ಲಿಂ ಆತ. ಅದೇ ವೇಳೆ ಮಾರ್ಕ್ಸ್‌ವಾದ ಪ್ರೇರಿತವಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಕ್ರಾಂತಿಕಾರಿಯೂ ಹೌದು. ಇವಿಷ್ಟು ಸಾಲದೆಂಬಂತೆ ಆತ, ಮಹಾತ್ಮ ಗಾಂಧಿ ಅವರ ಸರ್ವಧರ್ಮಗಳೂ ಸಮಾನ ಎನ್ನುವ ಮತ್ತು ಸತ್ಯಾಗ್ರಹದ ಅಹಿಂಸಾ ರಾಜಕಾರಣದ ಕಡುಪಾಲಕರೂ ಹೌದು.

ಈ ಮೂರು ಭಿನ್ನ ಎಳೆಗಳನ್ನು ಪರಸ್ಪರ ಹೆಣೆಯುವುದು ಕಷ್ಟಕರ ಮತ್ತು ಆತ ಆ ಕೆಲಸವನ್ನು ಮುಂದುವರಿಸಿದ್ದಾರೆ. ಆದರೆ ಈ ಯತ್ನದಲ್ಲಿ ಅವರಿಗೊಂದು ವಿಶಿಷ್ಟ ದೃಷ್ಟಿಕೋನ ದತ್ತವಾಗಿದೆ: ನಾನು ಮುಸ್ಲಿಂ ಎಂಬ ಅಸ್ಮಿತೆಯನ್ನು ಬಿಟ್ಟುಕೊಡುವುದಿಲ್ಲ. ಅದೇ ಸಮಯದಲ್ಲಿ, ನಾನು ಮುಸ್ಲಿಮನಾಗಿಯಷ್ಟೇ ದನಿ ಎತ್ತುವುದಿಲ್ಲ. 'ಮುಸ್ಲಿಮರು ಎಂಬುದಕ್ಕಿಂತಲೂ ಹೆಚ್ಚು' ಎಂಬ ರಾಜಕಾರಣದ ಬಗ್ಗೆ ಚಿಂತಿಸಲು ಅವರ ಈ ನಿಲುವು ಉದ್ದೀಪಿಸುತ್ತದೆ. ಈ ನಿಲುವು ಜಾತ್ಯತೀತ ರಾಜಕಾರಣಕ್ಕೆ ಒಂದು ಒಳ್ಳೆಯ ನೆಲೆ. ಇಲ್ಲಿ ಒಂದು ಕಾಲು ಸಮುದಾಯ ಹಾಗೂ ಸಂಪ್ರದಾಯದಲ್ಲಿ ಭದ್ರವಾಗಿ ಇದ್ದರೆ, ಮತ್ತೊಂದು ಕಾಲು ಅದರ ಆಚೆ ಇರುತ್ತದೆ. ಮುಸ್ಲಿಮರ ಮೇಲೆ ಪ್ರತಿದಿನ ನಡೆಯುತ್ತಿರುವ ಭೌತಿಕ ಮತ್ತು ಸಾಂಕೇತಿಕ ಹಲ್ಲೆಗಳ ಬಗ್ಗೆ ಅಹಮದ್ ಕಳವಳ ಹೊಂದಿದ್ದರೂ, ಆ ಬಗೆಗಿನ ಆತಂಕ ತಮ್ಮ ನಿಲುವನ್ನು ಪ್ರಭಾವಿಸಲು ಅವರು ಆಸ್ಪದ ಕೊಡುವುದಿಲ್ಲ.

ಏಕರೂಪಿ ಮುಸ್ಲಿಂ ರಾಜಕಾರಣ ಎಂಬುದು ಕಾರ್ಯಸಾಧುವಲ್ಲ, ಒಪ್ಪಿತವೂ ಅಲ್ಲ ಮತ್ತು ಅದರಿಂದ ನಿರೀಕ್ಷೆಗೆ ವಿರುದ್ಧವಾದ ಫಲವೇ ಸಿಗುತ್ತದೆ ಎಂಬುದಂತೂ ಸ್ಪಷ್ಟ. ಒಂದು ಆರೋಗ್ಯಕರ ಮುಸ್ಲಿಂ ರಾಜಕಾರಣವು ಎಲ್ಲ ಮುಸ್ಲಿಮರನ್ನು ಒಳಗೊಳ್ಳಬೇಕು ಮತ್ತು ಅವರೆಲ್ಲರಿಗೂ ಭಿನ್ನ ರಾಜಕೀಯ ಆಯ್ಕೆಗಳನ್ನು ಒದಗಿಸಬೇಕು. ಹಿಂದೂ ಎಂಬುದು ಒಂದೇ ಏಕರೂಪಿ ಸಮುದಾಯ ಅಲ್ಲ. ಅದೇ ರೀತಿ ಭಾರತದ ಮುಸ್ಲಿಮರದ್ದು ಏಕರೂಪಿ ಗುಂಪು ಅಲ್ಲ. ಅದು ಭಿನ್ನ ಸಂಪ್ರದಾಯ, ಸಂಸ್ಕೃತಿ, ಭಾಷೆ, ಸಾಮಾಜಿಕ–ಆರ್ಥಿಕ ಸ್ಥಿತಿ ಮತ್ತು ಧಾರ್ಮಿಕ ಆಚರಣೆಗಳನ್ನು ಒಳಗೊಂಡ ಅನೇಕ ಸಮುದಾಯಗಳ ಒಂದು ಗುಚ್ಛ. ಮುಸ್ಲಿಮರನ್ನು ಏಕರೂಪಗೊಳಿಸುವ ಯತ್ನವು ಬಿಜೆಪಿಯ ಏಕರೂಪಿ ಹಿಂದೂ ಎಂಬ ಸಂಕಥನವನ್ನು ಉದ್ದೀಪಿಸುತ್ತದೆ. ಮುಸ್ಲಿಮರು ರೈತರು, ನೇಕಾರರು, ಕರಕುಶಲಿಗಳು, ಸಂಘಟಿತ ಕಾರ್ಮಿಕರು, ನಿರುದ್ಯೋಗಿಗಳೂ ಹೌದು. ಪರಿಣಾಮವಾಗಿ ಮುಸ್ಲಿಂ ರಾಜಕಾರಣವು ದಲಿತ, ಆದಿವಾಸಿ ಮತ್ತು ಬಹುಜನ ರಾಜಕಾರಣದೊಂದಿಗೆ ಬೆರೆಯುತ್ತದೆ. ಮುಸ್ಲಿಂ ರಾಜಕಾರಣದ ನಿಲುವು ಎಲ್ಲ ವರ್ಗಗಳ ಮುಸ್ಲಿಮರನ್ನೂ ಮುಸ್ಲಿಮೇತರರನ್ನೂ ಒಳಗೊಳ್ಳುವಂಥದ್ದಾಗಿರಬೇಕು.

'ಮುಸ್ಲಿಮರು ಎಂಬುದಕ್ಕಿಂತಲೂ ಹೆಚ್ಚು' ಎಂಬ ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ. ಯಜಮಾನನಂತೆ ಎಲ್ಲವನ್ನೂ ನಿಯಂತ್ರಣದಲ್ಲಿ ಇರಿಸಿಕೊಂಡಿರುವ ಬಿಜೆಪಿಯು ಈ ವಿಷಯವನ್ನು ಪ್ರಧಾನ ನೆಲೆಗೆ ತರಲು ಬಿಡುತ್ತದೆಯೇ? ಮುಖ್ಯವಾಹಿನಿಯ ಬಿಜೆಪಿಯೇತರ ರಾಜಕೀಯ ಪಕ್ಷಗಳು ಇದನ್ನು ಕೈಗೆತ್ತಿಕೊಳ್ಳುತ್ತವೆಯೇ? ಅವರಲ್ಲದಿದ್ದರೆ ಮತ್ಯಾರು ಇದನ್ನು ಕೈಗೆತ್ತಿಕೊಳ್ಳಬಹುದು? ಬೇರೆಲ್ಲಾ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸುವ ಹಿಲಾಲ್ ಅಹಮದ್ ಬಳಿಯೂ ಇದಕ್ಕೆ ತೃಪ್ತಿಕರ ಉತ್ತರವಿಲ್ಲ. ಇತರರ ಬಳಿಯೂ ಇಲ್ಲ.

ಚುರುಮುರಿ

ವೋಟ್ ಫಾರ್...

• ಮಣ್ಣೆ ರಾಜು

ಉಪಚುನಾವಣೆ ಅಭ್ಯರ್ಥಿಗಳ ಪ್ರಣಾಳಿಕೆ, ಕರಪತ್ರ ಹರಡಿಕೊಂಡು ಶಂಕ್ರಿ, ಸುಮಿ ಮತ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. 'ಯೋಗ್ಯ ಅಭ್ಯರ್ಥಿಗೆ ವೋಟ್ ಹಾಕಬೇಕು, ಯೋಗ್ಯರನ್ನು ಗುರುತಿಸುವುದೇ ಕಷ್ಟವಾಗಿದೆ' ಅಂದಳು ಸುಮಿ.

'ಕಣದಲ್ಲಿ ಇರುವವರಲ್ಲಿ ಉತ್ತಮರನ್ನು ಆಯ್ಕೆ ಮಾಡಬೇಕಷ್ಟೇ. ಅಭ್ಯರ್ಥಿಗಳು ರೂಢಿಸಿಕೊಂಡಿರುವ ಸಿದ್ಧಾಂತ, ಮಾಡಿಕೊಂಡ ರಾದ್ಧಾಂತಗಳನ್ನು ಲೆಕ್ಕ ಹಾಕಿ, ಅವರ ಭರವಸೆಗಳನ್ನು ಅಳೆದು-ತೂಗಿ ನಿರ್ಧಾರ ಮಾಡಬೇಕು' ಅಂದ ಶಂಕ್ರಿ.

'ಒಬ್ಬ ಅಭ್ಯರ್ಥಿ ಕ್ಷೇತ್ರದ ಉದ್ದಕ್ಕೂ ನೀರಾವರಿ ಸೌಲಭ್ಯ ಕಲ್ಪಿಸುವ ಭರವಸೆ ನೀಡಿದ್ದಾರೆ, ಇನ್ನೊಬ್ಬರು ಹಾಂಗ್‌ಕಾಂಗ್, ಸಿಂಗಪುರ ಮಾಡುತ್ತೇನೆಂದು ಹೇಳಿದ್ದಾರೆ, ಮತ್ತೊಬ್ಬರು ಪ್ರತಿ ಕುಟುಂಬಕ್ಕೂ ವಸತಿ, ಉದ್ಯೋಗ ನೀಡುವ ಮಾತು ಕೊಟ್ಟಿದ್ದಾರೆ. ಇವರಲ್ಲಿ ಯಾರಿಗೆ ಮತ ಹಾಕಬೇಕು?'

'ಕೊಟ್ಟ ಭರವಸೆ ಈಡೇರಿಸುವ ಸಾಮರ್ಥ್ಯ ಅವರಿಗಿದೆಯೇ ಎಂದು ಮಾಪನ ಮಾಡಬೇಕು'.

'ಅಭ್ಯರ್ಥಿಗಳ ಗುಣಗಳನ್ನು ಗುಣಿಸಿ, ಭರವಸೆಗಳನ್ನು ಭಾಗಿಸಿ, ಸುಳ್ಳುಗಳನ್ನು ಕಳೆದು, ಸರಿಯನ್ನು ಕೂಡಿಸಿ ಉತ್ತರ ಕಂಡುಕೊಳ್ಳಬೇಕು'.

'ಬರೀ ಗಣಿತದ ಲೆಕ್ಕಾಚಾರ ಸಾಲದು, ಅಭ್ಯರ್ಥಿಗಳ ಹಿಸ್ಟರಿ, ಎಕನಾಮಿಕ್ಸ್, ಲ್ಯಾಂಗ್ವೇಜ್, ಬಾಡಿ ಲ್ಯಾಂಗ್ವೇಜನ್ನೂ ಪರಿಗಣಿಸಬೇಕು. ಅವರು ಯಾರಿಗೆ ಎಷ್ಟು ಬೈದರು, ಯಾರ್‍ಯಾರಿಂದ ಬೈಸಿಕೊಂಡರು ಅನ್ನುವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು'.

'ಚುನಾವಣಾ ಪ್ರಚಾರ ಸಭೆಯಲ್ಲಿ ಅತ್ತ, ಅಳಿಸಿದ ಅಭ್ಯರ್ಥಿಗಳನ್ನೂ ಪರಿಗಣಿಸಬೇಕೆ?'

'ಹೌದು, ಅಳುವುದು ಸಹಜ ಧರ್ಮ, ಅಳಿಸುವುದು ಪರಧರ್ಮ'.

'ಎಲ್ಲಾ ಅಂಶಗಳನ್ನು ಕ್ಯಾಲ್ಕುಲೇಟ್ ಮಾಡಿ ಬೆಟರ್ ಅಭ್ಯರ್ಥಿಯನ್ನು ಗುರುತಿಸಿ, ವೋಟ್ ಹಾಕಿ, ಬೆರಳಿಗೆ ಅಳಿಸಲಾಗದ ಶಾಹಿ ಹಾಕಿಸಿಕೊಂಡರೆ ನಮ್ಮ ಕರ್ತವ್ಯ ಮುಗಿಯಿತು'.

'ತಪ್ಪು ಅಭ್ಯರ್ಥಿಗೆ ವೋಟ್ ಹಾಕಿ ನಮ್ಮ ಮುಖಕ್ಕೆ ನಾವೇ ಅಳಿಸಲಾಗದ ಮಸಿ ಬಳಿದುಕೊಂಡೆವು ಎನ್ನುವ ಪಶ್ಚಾತ್ತಾಪ ಆಗದಂತೆ ಎಚ್ಚರ ವಹಿಸಬೇಕು' ಎಂದ ಶಂಕ್ರಿ.

ಸಂಗತ

ಬೇಕಿರುವುದು ಬರೀ ಆದರ್ಶದ ಮಾತಲ್ಲ

ತಮ್ಮ ಮನಸ್ಸನ್ನು ನಿಗ್ರಹಿಸುವುದು ಹೇಗೆ, ಅದನ್ನು ಶಕ್ತಿಯಾಗಿ ಜೀವನದಲ್ಲಿ ಪ್ರವಹಿಸುವ ಬಗೆ ಹೇಗೆ ಎಂಬುದನ್ನು ಮಕ್ಕಳಿಗೆ ಕಲಿಸಿದಾಗ ಮಾತ್ರ ಅವರಿಗೆ ನಾವು ನೆರವಾದಂತೆ

• ಶಿವಾನಂದ ಎಂ.ಸಿ.

ನಾಡಿನ ಸುದ್ದಿಮಾಧ್ಯಮಗಳಲ್ಲಿ ಇತ್ತೀಚೆಗೆ ನವೀನ್ ಸೋಲಂಕಿ ಎಂಬ 36 ವರ್ಷದ ತರುಣ ಹಾಗೂ ಬೋರೇಗೌಡ ಎಂಬ 65ರ ನಿವೃತ್ತ ಶಿಕ್ಷಕರ ಬಗ್ಗೆ ಸಣ್ಣ ಸುದ್ದಿಗಳು ಹರಿದಾಡಿ ಗಮನ ಸೆಳೆದಿದ್ದವು. ಮೈಸೂರಿನವರಾದ ನವೀನ್ ಜಮ್ಮು ಕಾಶ್ಮೀರದ ಶ್ರೀನಗರದಿಂದ, ತಮಿಳುನಾಡಿನ ಕನ್ಯಾಕುಮಾರಿಯವರೆಗಿನ 3,758 ಕಿ.ಮೀ. ದಾರಿಯನ್ನು ಸೈಕಲ್‌ನಲ್ಲಿ 255 ಗಂಟೆಗಳಲ್ಲಿ (10 ದಿನ 15 ಗಂಟೆ) ಕ್ರಮಿಸಿ, ಸೈಕಲ್ ರೇಸ್‌ನಲ್ಲಿ ಐದನೇ ಸ್ಥಾನ ಗಳಿಸಿದರು. ಪ್ರತಿದಿನ 18ರಿಂದ 20 ಗಂಟೆಗಳ ಸೈಕಲ್ ಸವಾರಿ ಹಾಗೂ ಬರೀ ನಾಲ್ಕು ಗಂಟೆ ನಿದ್ರೆ ಮಾಡಿ, ದೇಶದ ಉದ್ದನೆಯ ಸೈಕಲ್ ರೇಸ್‌ನಲ್ಲಿ ಪಾಲ್ಗೊಂಡಿದ್ದರು. ಮಂಡ್ಯ ಭಾಗದ ನಿವೃತ್ತ ಪ್ರೊಫೆಸರ್ ಬೋರೇಗೌಡ, ನಿವೃತ್ತಿಯ ನಂತರ ತಮ್ಮ ಹಳ್ಳಿಯಲ್ಲಿ 2.10 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಕೈಗೊಂಡು, ಸತತ ಪರಿಶ್ರಮದಿಂದ ತರಹೇವಾರಿ ಬೆಳೆ ಬೆಳೆದು ಯುವಕರಿಗೆ ಹೊಸ ಮಾದರಿಯಾಗಿ ನಿಂತಿದ್ದಾರೆ.

ಶಾಲಾ ಕಾಲೇಜುಗಳಲ್ಲಿ ಇಂದು ತಾಂತ್ರಿಕ ಶಿಕ್ಷಣ ಸೇರಿದಂತೆ ಸಾಂಪ್ರದಾಯಿಕ ಶಿಕ್ಷಣದ ನೆರಳಿನಲ್ಲಿರುವ ಮಕ್ಕಳಿಗೆ ಈ ಮೇಲಿನ ಸಂಗತಿಗಳು ಒಂದು ಮಾರ್ಗದರ್ಶನದಂತೆ ಇವೆ. ಸಾಧನೆ ಎಂಬುದು ಮಹಾನ್ ವ್ಯಕ್ತಿಗಳಿಗಷ್ಟೇ ಸೀಮಿತವಾದದ್ದು ಎಂಬುದು ಬರೀ ಭ್ರಮೆ. ಅಂದರೆ ಅವರು ಅಸಾಮಾನ್ಯರಾದ್ದರಿಂದ ವಿಶೇಷ ಶಕ್ತಿ ಅವರಿಗೆ ಒಲಿದಿದೆ ಎಂಬ ಭಾವನೆಯನ್ನು ಇಂದಿನ ಮಕ್ಕಳಿಗೆ ತಪ್ಪಾಗಿ ತಿಳಿಸಲಾಗಿದೆ. ಹೀಗಾಗಿ, ವಿಚಾರವನ್ನು ಬದಿಗೊತ್ತಿ ಬರಿಯ ಆಚಾರವನ್ನಷ್ಟೇ ಆಲಿಂಗಿಸಿಕೊಳ್ಳುವ ಭಾರತದಲ್ಲಿ, ಗಾಂಧೀಜಿ, ಬಸವಣ್ಣ, ವಿವೇಕಾನಂದ, ಲೋಹಿಯಾ, ಅಂಬೇಡ್ಕರ್ ಅವರಂತಹ ದಾರ್ಶನಿಕರು ಒಂದೋ ಉಪಾಸನೆಗೆ ಒಳಗಾಗುತ್ತಾರೆ ಇಲ್ಲವೇ ಉಪೇಕ್ಷೆಗೆ ಈಡಾಗುತ್ತಾರೆ.

ಅವರೂ ನಮ್ಮಂತೆಯೇ ಸಾಮಾನ್ಯ ಮನುಷ್ಯರಾಗಿದ್ದವರು, ಆದರೆ ತಮ್ಮ ಶಕ್ತಿಯನ್ನು ಒಂದು ಕಡೆ ಕಟ್ಟಿಹಾಕಿ ಶಕ್ತಿಯ ಸಂಚಯ ಮಾಡಿದರು. ಸಮಾಜದ ಜೀವನ ಕೃಷಿಗೆ ಸಂಜೀವಿನಿಯಾದರು ಅಷ್ಟೇ. ಅದು ಸಾಧ್ಯವಾಗಿದ್ದು ಅವರ ನಿರಂತರ ಪರಿಶ್ರಮ ಹಾಗೂ ಸಾಧನೆಯಿಂದ. ಆದರೆ ನಾವು ಅವರಂತೆ ಮೇಲೇರುವುದಕ್ಕೆ ಹಂಬಲಿಸದೆ ಅದಕ್ಕೆ ದೈವಿಕತೆಯ ಪಟ್ಟ ತೊಡಿಸಿ, ನಮಗದು ಸಾಧ್ಯವಿಲ್ಲವೇನೋ ಎಂದು ಸಮಾಧಾನ ಪಟ್ಟುಕೊಳ್ಳುವ ಹುಂಬತನ ತೋರಿಸುತ್ತಿದ್ದೇವೆ. ಹಾಗಾಗಿ, ಬೆಪ್ಪಾಗಿ ಕಾಣುತ್ತಿದ್ದ ಅಂಧಶ್ರದ್ಧೆ ಹಾಗೂ ಅವಿವೇಕ ಇಂದು ಜಾಣಪೆದ್ದರಂತೆ ನಮ್ಮ ವ್ಯವಸ್ಥೆಯ ಸರಪಳಿಯಲ್ಲಿ ಸುಳಿದಾಡುತ್ತಿವೆ. ಈ ಸಂದರ್ಭದಲ್ಲಿ, ವಿಶ್ವದ ಎಲ್ಲ ಅತ್ಯುತ್ತಮ ವಿಚಾರಗಳ ಸಂಗಮದಂತಿದ್ದ ಸ್ವಾಮಿ ವಿವೇಕಾನಂದರ ನುಡಿ ಮಹನೀಯವಾಗಿ ಕಾಣುತ್ತದೆ: 'ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ. ಹಾಗಾಗಿ, ದೌರ್ಬಲ್ಯವನ್ನು ತ್ಯಜಿಸಿ'.

ಇಂದು ಶಾಲಾ-ಕಾಲೇಜುಗಳ ಶಿಕ್ಷಕರ ಮುಂದೆ ಒಂದು ಬಹುದೊಡ್ಡ ಸವಾಲಿದೆ. ಮೊಬೈಲ್ ಫೋನ್ ಹಾಗೂ ಸಾಮಾಜಿಕ ಮಾಧ್ಯಮಗಳ ಹಾವಳಿ ಇಂದು ತರಗತಿಯ ಒಳಗೂ ಬಂದಿದೆ. ಕ್ರಿಯಾಶೀಲತೆಯ ಕತ್ತು ಹಿಸುಕುತ್ತಿದೆ. ನಮ್ಮ ಮಕ್ಕಳು ತೇಜಸ್ಸಿಲ್ಲದ ಶರೀರದಂತೆ ಆಗಿದ್ದಾರೆ. ಇದರಿಂದ ಹೊರತಂದು ಅವರನ್ನು ಗುರಿ ಸಾಧಿಸುವವರೆಗೆ ಜಾಗೃತಗೊಳಿಸುವವರಾರು? ಎಲ್ಲಾ ಕಡೆ 'ಉತ್ತಮರಾಗಿ' ಎಂಬ ಬೋಧನೆಯನ್ನು ನಿತ್ಯ ಮಾಡುತ್ತೇವೆ. ಕಳಬೇಡ, ಹುಸಿಯ ನುಡಿಯಬೇಡ ಎಂಬುದನ್ನು ಮಕ್ಕಳಿಗೆ ಹೇಳುತ್ತೇವೆ. ಆದರೆ ಅದನ್ನು ಜೀವನದಲ್ಲಿ ಹೇಗೆ ಸಾಧಿಸಬೇಕು ಎಂಬುದನ್ನು ಮಾತ್ರ ನಾವ್ಯಾರೂ ಹೇಳುತ್ತಿಲ್ಲ. ಬರೀ ಆದರ್ಶದ ಮಾತುಗಳು ಅವರಿಗೆ ಸಹಾಯ ಮಾಡಲಾರವು. ಏತಕ್ಕೆ ಕಳ್ಳನಾಗಬಾರದು? ಕದಿಯದೇ ಇರುವುದು ಹೇಗೆ ಎಂಬುದನ್ನು ನಾವು ಮಕ್ಕಳಿಗೆ ಕಲಿಸುವುದಿಲ್ಲ. ತನ್ನ ಮನಸ್ಸನ್ನು ನಿಗ್ರಹಿಸುವುದು ಹೇಗೆ, ಅದನ್ನು ಶಕ್ತಿಯಾಗಿ ಜೀವನದಲ್ಲಿ ಪ್ರವಹಿಸುವ ಬಗೆ ಹೇಗೆ ಎಂಬುದನ್ನು ಕಲಿಸಿದಾಗ ಮಾತ್ರ ಅವರಿಗೆ ನಾವು ನೆರವಾದಂತೆ.

ಮಕ್ಕಳ ಕೆಟ್ಟ ಅಭ್ಯಾಸಕ್ಕೆ ಚಿಕಿತ್ಸೆ ಎಂದರೆ ಅದಕ್ಕೆ ವಿರುದ್ಧವಾದ ಒಳ್ಳೆಯ ಅಭ್ಯಾಸವನ್ನು ರೂಢಿಸುವುದು. ಎಲ್ಲಾ ಕೆಟ್ಟ ಅಭ್ಯಾಸಗಳನ್ನು ಒಳ್ಳೆಯ ಅಭ್ಯಾಸದ ಬಲದಿಂದ ನಿಗ್ರಹಿಸುವ ಕಾರ್ಯತಂತ್ರ ನಮ್ಮ ಶಿಕ್ಷಣದ ನೀತಿಯಲ್ಲೇ ಇದೆ. ನಿರಂತರವಾಗಿ ಒಳ್ಳೆಯದನ್ನು ಮಾಡುತ್ತಾ ಹೋಗಬೇಕು, ಒಳ್ಳೆಯದನ್ನು ಆಲೋಚಿಸಲು ತಿಳಿಸಬೇಕು. ಇದು ನಮ್ಮಲ್ಲಿ ಇರಬಹುದಾದ ಕೆಟ್ಟ ಸ್ವಭಾವವನ್ನು ದಮನ ಮಾಡುವುದಕ್ಕೆ ಇರುವ ಏಕೈಕ ಮಾರ್ಗವಾಗಿದೆ. ಶಾಲಾ ಕಾಲೇಜುಗಳಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್ ಜೊತೆಗೆ ಇತ್ತೀಚೆಗೆ ಶಿಕ್ಷಣ ಇಲಾಖೆ ಆರಂಭಿಸಿರುವ 'ನಾವು ಮನುಜರು' ಕಾರ್ಯಕ್ರಮ ಈ ದಿಸೆಯಲ್ಲಿ ಸಹಾಯಕ.

'ದೇವರಲ್ಲಿ ನಂಬಿಕೆ ಇಡದವನನ್ನು ನಾಸ್ತಿಕ ಎಂದು ಹಳೆಯ ಧರ್ಮ ಹೇಳಿತು, ಆದರೆ ತನ್ನಲ್ಲಿ ನಂಬಿಕೆ ಇಡದವನು ನಾಸ್ತಿಕ ಎಂದು ಹೊಸ ಧರ್ಮ ಕರೆಯುತ್ತದೆ' ಎಂಬ ಸ್ವಾಮಿ ವಿವೇಕಾನಂದರ ನುಡಿ ನಮ್ಮ ಮಕ್ಕಳ ಬೆಳಕಾಗಬೇಕು. ಅವರಲ್ಲಿ ಅಡಗಿರುವ ಶಕ್ತಿಯ ಪರಿಚಯವನ್ನು ದರ್ಶನ ಮಾಡಿಸಬೇಕು. 'ನಮಗೆ ಇಷ್ಟೊಂದು ಶಕ್ತಿ ಇದೆಯೇ?!' ಎಂದು ಅಚ್ಚರಿ ಮೂಡಿಸಿ, ಅದು ನಿಜಕ್ಕೂ ಸತ್ಯ ಎಂಬುದನ್ನು ನಿತ್ಯ ಸಂಗತಿಗಳ ಮೂಲಕ ತಿಳಿಸಬೇಕು. ಆಗಮಾತ್ರ ಜಡ ವಿದ್ಯಾರ್ಥಿಯೂ ಚೈತನ್ಯದ ಚಿಲುಮೆ ಆಗುತ್ತಾನೆ. ಗಾಳಿ ತುಂಬಿದ ಚೆಂಡಿನಂತೆ, ಒಣಗಿದ ಭೂಮಿಗೆ ಮಳೆ ಬಿದ್ದಂತೆ, ಜೀವನಪ್ರೀತಿ, ವಾಸ್ತವದ ಅರಿವು ಮೂಡಿ ಶಕ್ತಿವಂತನಾಗುತ್ತಾನೆ, ಅಜೇಯನಾಗುತ್ತಾನೆ, ಸಿಡಿಲಮರಿಯಾಗುತ್ತಾನೆ. ಸಮಾಜದ ನೆರವಿಗೆ ಮಿಂಚುಹುಳವೂ ಆಗುತ್ತಾನೆ, ಮತ್ತೊಂದು ಮಾದರಿಗೆ ಚೈತನ್ಯ ತಾನೇ ಆಗುತ್ತಾನೆ.

ಲೇಖಕ: ಮುಖ್ಯ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಮುದಗಂದೂರು, ಮಂಡ್ಯ

ವಾಚಕರ ವಾಣಿ

ವೇದನೆ ತಂದ ಹನಕೆರೆ ಪ್ರಕರಣ

ಮಂಡ್ಯದ ಹನಕೆರೆ ಗ್ರಾಮದಲ್ಲಿ ದಲಿತರು ದೇವಾಲಯ ಪ್ರವೇಶ ಮಾಡಿದ್ದಕ್ಕೆ ಪ್ರತಿಯಾಗಿ ಗ್ರಾಮದ ಸವರ್ಣೀಯರು ಅಲ್ಲಿನ ಉತ್ಸವ ಮೂರ್ತಿಯನ್ನು ಹೊರತಂದ ಸುದ್ದಿಯನ್ನು ತಿಳಿದು ಅತೀವ ವೇದನೆಯಾಯಿತು. ಇದೊಂದು ಅಮಾನವೀಯ ಪ್ರಕರಣ. ಹಿಂದೂಗಳು ಎಲ್ಲ ಒಂದು ಎನ್ನುತ್ತೇವೆ. ಬಸವಣ್ಣನವರು ದಯೆಯೇ ಧರ್ಮದ ಮೂಲವಯ್ಯ ಎಂದರು. ಮಾನವೀಯತೆಯೇ ನಿಜವಾದ ಧರ್ಮ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ ಎಂಬುದಕ್ಕೆ ಹನಕೆರೆ ಪ್ರಕರಣ ನಿದರ್ಶನವಾಗಿ ನಿಲ್ಲುತ್ತದೆ.

ಗುರು ಜಗಳೂರು, ಹರಿಹರ

ಸ್ಥಳೀಯ ಭಾಷೆಗೆ ಆದ್ಯತೆ: ಇತರ ಬ್ಯಾಂಕುಗಳಿಗೂ ವಿಸ್ತರಿಸಿ

ಸ್ಥಳೀಯ ಭಾಷಾ ಜ್ಞಾನ ಇರುವವರನ್ನು ಮಾತ್ರ ನೇಮಿಸಲು ಅನುವಾಗುವಂತೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ (ಆರ್‌ಆರ್‌ಬಿ) ನೇಮಕಾತಿ ನಿಯಮವನ್ನು ಮಾರ್ಪಡಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೂಚನೆ ನೀಡಿರುವುದಾಗಿ ವರದಿಯಾಗಿದೆ. ಅಭ್ಯರ್ಥಿಗಳಿಗೆ ಇರುವ ಸ್ಥಳೀಯ ಭಾಷೆಯ ಜ್ಞಾನ ಮತ್ತು ಪ್ರಾವೀಣ್ಯವನ್ನು ಖಚಿತಪಡಿಸಿಕೊಳ್ಳಲು ನೇಮಕಾತಿ ನಿಯಮಗಳನ್ನು ಪರಿಶೀಲಿಸಲು ಮತ್ತು ಅವನ್ನು ಸೂಕ್ತವಾಗಿ ಮಾರ್ಪಡಿಸಲು ಹಣಕಾಸು ಸೇವೆಗಳ ಇಲಾಖೆಗೆ ಅವರು ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ. ಇದು ಎಂದೋ ಆಗಬೇಕಾಗಿದ್ದ ಕೆಲಸ. ಈಗ ವಿಳಂಬವಾದರೂ ಸಂಬಂಧಪಟ್ಟವರ ಗಮನಕ್ಕೆ ಬಂದು, ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿರುವುದು ಸ್ವಾಗತಾರ್ಹ.

ಹಿಂದಿಯೇತರ ರಾಜ್ಯಗಳಲ್ಲಿ, ಮುಖ್ಯವಾಗಿ ದಕ್ಷಿಣದ ರಾಜ್ಯಗಳಲ್ಲಿ ಮುಂದಿನ ದಿನಗಳಲ್ಲಿ ಗ್ರಾಮೀಣ ಬ್ಯಾಂಕ್ ಗ್ರಾಹಕರು ಭಾಷಾ ಗೊಂದಲವಿಲ್ಲದೆ ತಮ್ಮ ಬ್ಯಾಂಕ್ ವ್ಯವಹಾರವನ್ನು ಮಾಡಬಹುದು ಎನ್ನುವ ನಿರೀಕ್ಷೆಯಲ್ಲಿದ್ದಾರೆ. ಹಾಗೆಯೇ ಸಚಿವರ ಈ ನಿರ್ದೇಶನ ಇತರ ಬ್ಯಾಂಕುಗಳಿಗೂ ವಿಸ್ತರಿಸಲಿ ಎಂಬ ಆಶಯ ಗ್ರಾಹಕರದ್ದಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

ಬಾಲಿಶ ಹೇಳಿಕೆಗಳಿಗೆ ಕಡಿವಾಣ ಹಾಕಿ

ಉಪಚುನಾವಣಾ ಪ್ರಚಾರದ ಸಮಯದಲ್ಲಿ ರಾಜ್ಯದ ಸಚಿವ ಜಮೀರ್ ಅಹಮದ್ ಖಾನ್ ಅವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು 'ಕರಿಯ' ಎಂದು ಕರೆದಿದ್ದಾಗಿ ವರದಿಯಾಗಿದೆ (ಪ್ರ.ವಾ., ನ. 12). ಜಮೀರ್ ಅವರು ತಾವು ಸಚಿವ ಎಂಬುದನ್ನೇ ಮರೆತು ಇಂತಹ ಬಾಲಿಶವಾದ ಹೇಳಿಕೆ ನೀಡುವುದರಲ್ಲಿ ಸಿದ್ಧಹಸ್ತರು. ಅವರ ಬಾಯಿಂದ ಇಂತಹ ಹೇಳಿಕೆಗಳೇ ಉದುರುತ್ತಿರುತ್ತವೆ.

ಮನುಷ್ಯ ಉನ್ನತ ಸ್ಥಾನಕ್ಕೆ ಏರಿದಂತೆಲ್ಲಾ ಆತನ ನಡೆ– ನುಡಿ ಬೇರೆಯವರಿಗೆ ಮಾದರಿಯಾಗಿರಬೇಕು. ಆಗಮಾತ್ರ ಆ ಸ್ಥಾನಕ್ಕೆ ಘನತೆ, ಗೌರವ ಬರಲು ಸಾಧ್ಯ. ಇನ್ನೊಬ್ಬರ ಮೈಬಣ್ಣದಂತಹ ವೈಯಕ್ತಿಕ ವಿಚಾರಗಳ ಬಗ್ಗೆ ಮಾತನಾಡುವುದು ಖಂಡನೀಯ. ಇಂತಹವುಗಳೆಲ್ಲ ಈಗಿನ ರಾಜಕಾರಣಿಗಳಿಗೆ ಅರ್ಥವಾಗದ ಸಂಗತಿಗಳು!

ಜಮೀರ್ ಅವರು ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಮುಜುಗರವಾಗುವಂತಹ ಹೇಳಿಕೆಗಳನ್ನು ಪದೇ ಪದೇ ನೀಡುತ್ತಿದ್ದರೂ ಅದಕ್ಕೆ ಕಡಿವಾಣ ಹಾಕಲು ಪಕ್ಷದ ವರಿಷ್ಠರಾಗಲೀ, ಸರ್ಕಾರದ ನೇತೃತ್ವ ವಹಿಸಿದವರಾಗಲೀ ಪ್ರಯತ್ನಿಸಿದಂತೆ ಕಾಣುವುದಿಲ್ಲ. ಇದರಿಂದ ಅವರ ಪಕ್ಷಕ್ಕೇ ಹಾನಿ ಆಗಲಿದೆ ಎಂಬುದನ್ನು ಅವರು ಮರೆಯಬಾರದು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಹಣ, ಉಡುಗೊರೆ ತಲುಪಿಸಲು ಬಳಕೆ?

ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣೆ ಹಾಗೂ ಕರ್ನಾಟಕದ ಉಪಚುನಾವಣೆಯಲ್ಲಿನ ಪ್ರಚಾರದ ವೈಖರಿಯು ಪ್ರಜಾಪ್ರಭುತ್ವಕ್ಕೆ ಹಿನ್ನಡೆಯಾಗುವ ರೀತಿಯಲ್ಲಿತ್ತು ಎಂಬ ವೆಂಕಟೇಶ ಮಾಚಕನೂರ ಅವರ ಅಭಿಪ್ರಾಯ (ವಾ.ವಾ., ನ. 12) ಸರಿಯಾದುದು. ಚುನಾವಣೆಯಲ್ಲಿ ಪ್ರಚಾರ ಮತ್ತು ಜನಸಂಪರ್ಕದ ಅವಕಾಶವು ಹಣ, ಮದ್ಯದಂತಹವುಗಳ ಹಸ್ತಾಂತರಕ್ಕೆ ಬಳಕೆ ಆಗುತ್ತಿದೆ ಎಂಬ ಅನುಮಾನವಿದೆ. ಚುನಾವಣಾ ಆಯೋಗವು ಕಣ್ಣು ಮುಚ್ಚಿ ಕೂತಿದೆಯೇನೊ ಎಂಬ ಗುಮಾನಿ ಮೂಡುವುದುಂಟು.

ಆರ್.ಕೆ.ದಿವಾಕರ, ಬೆಂಗಳೂರು

ಕಾಂಗ್ರೆಸ್ ದುರಂತವಲ್ಲ, ಎಡಪಕ್ಷಗಳ ದುರಂತ

'ಅಮೆರಿಕದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪಾಠವಿದೆ' ಎಂಬ ಎ.ಸೂರ್ಯ ಪ್ರಕಾಶ್ ಅವರ ಲೇಖನದಲ್ಲಿ (ಪ್ರ.ವಾ., ನ. 11) ಹಲವು ಸತ್ಯಾಂಶಗಳಿವೆ. ಲೇಖಕರು ಕಾಂಗ್ರೆಸ್ ಪಕ್ಷವು ತನ್ನನ್ನು ಹೈಜಾಕ್ ಮಾಡಲು ಎಡಪಂಥೀಯರಿಗೆ ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ. ಒಂದು ವೇಳೆ ಇದು ನಿಜವೇ ಆಗಿದ್ದರೆ ಅದು ಕಾಂಗ್ರೆಸ್ ಪಕ್ಷದ ದುರಂತವಲ್ಲ, ಎಡಪಕ್ಷಗಳ ದುರಂತ ಎನ್ನಬಹುದು. ತೃತೀಯ ರಂಗದ ನೇತೃತ್ವ ವಹಿಸಿ ಅದನ್ನು ಸಂಘಟಿಸಬೇಕಾಗಿದ್ದ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಕೂಟಕ್ಕೆ ಜೋತುಬಿದ್ದ ಪರಿಣಾಮವಾಗಿ, ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಎನ್‌ಡಿಎ ಪರ ವಾಲುವಂತಾಯಿತು. ರಾಜ್ಯ ಮಟ್ಟದಲ್ಲಿ ಆ ಪಕ್ಷಗಳಿಗೆ ಕಾಂಗ್ರೆಸ್ ಎದುರಾಳಿ ಆಗಿದ್ದುದೇ ಇದಕ್ಕೆ ಕಾರಣ.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತೃತೀಯರಂಗದ ಅಸ್ತಿತ್ವವೇ ಇರಲಿಲ್ಲವಾದ್ದರಿಂದ, ಕಾಂಗ್ರೆಸ್ ವಿರೋಧಿ ಮತಗಳೆಲ್ಲವೂ ಅನಿವಾರ್ಯವಾಗಿ ಎನ್‌ಡಿಎ ಕೂಟಕ್ಕೆ ಬೀಳುವಂತಾಯಿತು. ಬಿಜೆಪಿಯು ಬರೀ 240 ಸ್ಥಾನಗಳಿಗೆ ಸೀಮಿತವಾದ ಈ ಸಂದರ್ಭದಲ್ಲಿ, ಒಂದು ವೇಳೆ ತೃತೀಯ ರಂಗವು ಅಸ್ತಿತ್ವದಲ್ಲಿ ಇದ್ದಿದ್ದರೆ ಯಾರು ಸರ್ಕಾರ ರಚಿಸುತ್ತಿದ್ದರು ಎನ್ನುವುದನ್ನು ಊಹಿಸಬಹುದು.

ಭೀಮನಗೌಡ ಕಾಶಿರೆಡ್ಡಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಾಥಮಿಕ ಶಾಲೆಗೆ ಪ್ರವೇಶ: ರಾಜ್ಯಕ್ಕೆ 2ನೇ ಸ್ಥಾನ

ಆರೋಗ್ಯ, ಶಿಕ್ಷಣ, ಆರ್ಥಿಕ ಒಳಗೊಳ್ಳುವಿಕೆ, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳ ವಸ್ತುಸ್ಥಿತಿ: ಸಿಎಎಂಎಸ್ ವರದಿ

ಸಿಎಎಂಎಸ್ ಏನು ಎತ್ತ? ಜುಲೈ 2022 – ಜೂನ್ 2023 ಸಮೀಕ್ಷೆ ನಡೆಸಲಾದ ಅವಧಿ	15,298	3,02,086	1,73,096	1,28,990	13 ಲಕ್ಷ	7.85 ಲಕ್ಷ	5.15 ಲಕ್ಷ	49,988
	ಸಮೀಕ್ಷೆಗಾಗಿ ಆಯ್ಕೆ ಮಾಡಲಾದ ಮೊದಲ ಹಂತದ ಬ್ಲಾಕ್‌ಗಳು	ಸಮೀಕ್ಷೆಗಾಗಿ ಸಂದರ್ಶಿಸಲಾದ ಕುಟುಂಬಗಳು	ಗ್ರಾಮೀಣ ಭಾಗದ ಕುಟುಂಬಗಳು	ನಗರ ಪ್ರದೇಶದ ಕುಟುಂಬಗಳು	ಸಮೀಕ್ಷೆಯಲ್ಲಿ ಭಾಗವಹಿಸಿದವರು	ಸಮೀಕ್ಷೆಯಲ್ಲಿ ಭಾಗವಹಿಸಿದ ಗ್ರಾಮೀಣ ಜನರು	ಸಮೀಕ್ಷೆಯಲ್ಲಿ ಭಾಗವಹಿಸಿದ ನಗರ ಪ್ರದೇಶದವರು	ಸಮೀಕ್ಷೆಯಲ್ಲಿ ಭಾಗವಹಿಸಿದ ಕರ್ನಾಟಕದವರು

ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್‌ನ (ಎನ್‌ಎಸ್‌ಎಸ್‌ಒ) 79ನೇ ಸಮಗ್ರ ವಾರ್ಷಿಕ ಸ್ಥಿತಿಗತಿ ಸಮೀಕ್ಷೆ (ಸಿಎಎಂಎಸ್)-2022-23ನೇ ಸಾಲಿನ ವರದಿಯು ದೇಶ ಮತ್ತು ರಾಜ್ಯಗಳಲ್ಲಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಸ್ತುಸ್ಥಿತಿಯನ್ನು ಬಿಂಬಿಸುತ್ತದೆ. ಶಿಕ್ಷಣ, ಆರೋಗ್ಯ, ಆರ್ಥಿಕ ಒಳಗೊಳ್ಳುವಿಕೆ, ಮೊಬೈಲ್ ಇಂಟರ್‌ನೆಟ್, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಗಿರುವ ಸಾಧನೆ ಮತ್ತು ಕೊರತೆಯ ಬಗೆಗಿನ ಮಾಹಿತಿಗಳನ್ನು ವರದಿ ಒಳಗೊಂಡಿದೆ. ಮೊಬೈಲ್ ಮತ್ತು ಇಂಟರ್‌ನೆಟ್ ಬಳಕೆಯ ಅಂಕಿಅಂಶಗಳು ಉತ್ತಮವಾಗಿದ್ದರೆ, ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿಅಂಶಗಳು ಖಾಸಗಿ ಶಾಲೆಗಳ ಪ್ರಭಾವ ಹೆಚ್ಚಾಗಿರುವುದು ಮತ್ತು ನಗರ–ಗ್ರಾಮೀಣ ಅಂತರ ಹೆಚ್ಚಿರುವುದನ್ನು ಸೂಚಿಸುತ್ತಿವೆ. ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳ ಜನ ಹೆಚ್ಚು ಸಾಲಗಾರರಾಗಿರುವ ಬಗ್ಗೆಯೂ ವರದಿ ಗಮನ ಸೆಳೆಯುತ್ತದೆ. ಜುಲೈ 2022ರಿಂದ ಜೂನ್ 2023ರವರೆಗಿನ ಅವಧಿಯಲ್ಲಿ ಮಾದರಿ ಸಂಗ್ರಹಿಸಲಾಗಿತ್ತು





2022ರ ಜೂನ್‌ನಿಂದ –2023ರ ಜುಲೈ ನಡುವೆ 6ರಿಂದ 10 ವರ್ಷದವರೆಗಿನ ಮಕ್ಕಳು ಪ್ರಾಥಮಿಕ ಶಾಲೆಗೆ ಪ್ರವೇಶ ಪಡೆಯುವುದರಲ್ಲಿ ಕರ್ನಾಟಕ ದೇಶದಲ್ಲಿ ಎರಡನೇ ಸ್ಥಾನ ಗಳಿಸಿದೆ. 1ರಿಂದ 5ನೇ ತರಗತಿವರೆಗೆ ಶೇ 97.4ರಷ್ಟು ಮಕ್ಕಳು ದಾಖಲಾಗಿದ್ದಾರೆ. ತ್ರಿಪುರಾ (ಶೇ 97.9) ಮೊದಲ ಸ್ಥಾನದಲ್ಲಿದೆ. ಸಿಕ್ಕಿಂ (ಶೇ 96), ಪುದುಚೇರಿ (ಶೇ 95.5) ನಂತರದ ಸ್ಥಾನಗಳಲ್ಲಿವೆ.

ಕರ್ನಾಟಕದಲ್ಲಿ ಶೇ 64.4 ಮಕ್ಕಳು ಸರ್ಕಾರಿ ಶಾಲೆಗಳಿಗೆ ಸೇರಿದ್ದರೆ, ಶೇ 10.1ರಷ್ಟು ಮಕ್ಕಳು ಅನುದಾನಿತ, ಶೇ 25.5 ಮಕ್ಕಳು ಖಾಸಗಿ ಹಾಗೂ ಶೇ 0.3ರಷ್ಟು ಇತರ ಶಾಲೆಗಳಿಗೆ ಪ್ರವೇಶ ಪಡೆದಿದ್ದಾರೆ. ಗ್ರಾಮೀಣ ಭಾಗದಲ್ಲಿ ಹೆಚ್ಚು ಮಕ್ಕಳು ಸರ್ಕಾರಿ ಶಾಲೆಗಳಿಗೆ ಸೇರಿದ್ದರೆ, ನಗರ ಪ್ರದೇಶಗಳಲ್ಲಿ ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆದವರ ಪ್ರಮಾಣ ಜಾಸ್ತಿ ಇದೆ.

ಗ್ರಾಮೀಣ ಭಾಗದಲ್ಲಿ ಶೇ 17ರಷ್ಟು ಬಾಲಕರು ಖಾಸಗಿ ಶಾಲೆಗಳಿಗೆ ಸೇರಿದರೆ, ಬಾಲಕಿಯರ ಪ್ರಮಾಣ ಶೇ 13ರಷ್ಟಿದೆ. ನಗರ ಪ್ರದೇಶದಲ್ಲಿ ಈ ಅಂತರ ಕಡಿಮೆ ಇದೆ. ಶೇ 46.3ರಷ್ಟು ಬಾಲಕರು ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದರೆ, ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕಿಯರ ಪ್ರಮಾಣ ಶೇ 46ರಷ್ಟಿದೆ.

ಎಸ್‌ಎಸ್‌ಎಲ್‌ಸಿ ಆದವರು ಕಡಿಮೆ

ದೇಶದಲ್ಲಿ 25 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಶೇ 38.6 ಮಂದಿಯಷ್ಟೇ ಪ್ರೌಢ ಶಿಕ್ಷಣವನ್ನು ಪೂರ್ಣಗೊಳಿಸಿದ್ದಾರೆ ಎಂದು ಸಮೀಕ್ಷೆ ಹೇಳಿದೆ. ಲಿಂಗವಾರು ಅಂಕಿ ಅಂಶಗಳನ್ನು ನೋಡುವುದಾದರೆ, ಶೇ 31ರಷ್ಟು ಮಹಿಳೆಯರು ಮತ್ತು ಶೇ 46.2ರಷ್ಟು ಪುರುಷರು ಪ್ರೌಢ ಶಿಕ್ಷಣ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇ 22.4 ಮಹಿಳೆಯರು, ಶೇ 38.4 ಪುರುಷರು, ನಗರ ಪ್ರದೇಶದಲ್ಲಿ ಶೇ 50.1ರಷ್ಟು ಮಹಿಳೆಯರು, ಶೇ 63ರಷ್ಟು ಪುರುಷರು 10ನೇ ತರಗತಿ ಪೂರ್ಣಗೊಳಿಸಿದ್ದಾರೆ.

ರಾಜ್ಯದಲ್ಲಿನ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಪ್ರೌಢ ಶಿಕ್ಷಣ ಪಡೆದವರ ಪ್ರಮಾಣ ಇಲ್ಲಿ ಶೇ 43.65ರಷ್ಟಿದೆ. ಇದರಲ್ಲಿ ಶೇ 51.7ರಷ್ಟು ಪುರುಷರು ಮತ್ತು ಶೇ 35.6ರಷ್ಟು ಮಹಿಳೆಯರು. ಗ್ರಾಮೀಣ ಕರ್ನಾಟಕದ ಶೇ 25.1ರಷ್ಟು ಮಹಿಳೆಯರು ಮತ್ತು ಶೇ 43.1 ರಷ್ಟು ಪುರುಷರು ಮಾತ್ರ ಮಾತ್ರ ಎಸ್‌ಎಸ್‌ಎಲ್‌ಸಿ ಪೂರೈಸಿದ್ದಾರೆ. ನಗರ ಪ್ರದೇಶದಲ್ಲಿ ಈ ಪ್ರಮಾಣ ಕೊಂಚ ಹೆಚ್ಚಾಗಿದೆ. ಕ್ರಮವಾಗಿ ಶೇ 55.3ರಷ್ಟು ಶೇ 62.5ರಷ್ಟು ಇದೆ.

ದೇಶದಲ್ಲಿ 15 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಶೇ 81.6ರಷ್ಟು ಜನರು (ಶೇ 88.3ರಷ್ಟು ಪುರುಷರು, ಶೇ 74.8ರಷ್ಟು ಮಹಿಳೆಯರು) ತಮ್ಮ ದೈನಂದಿನ ಬದುಕಿನಲ್ಲಿ ಸಣ್ಣ ಮತ್ತು ಸರಳ ವಾಕ್ಯಗಳನ್ನು ಓದಲು ಮತ್ತು ಬರೆಯಲು ಸಾಮರ್ಥ್ಯ ಹೊಂದಿದ್ದರೆ, ಕರ್ನಾಟಕದಲ್ಲಿ ಈ ಪ್ರಮಾಣ ಶೇ 82.1ರಷ್ಟಿದೆ. ಇದರಲ್ಲಿ ಶೇ 87.6ರಷ್ಟು ಪುರುಷರು ಮತ್ತು ಶೇ 76.7ರಷ್ಟು ಮಹಿಳೆಯರು.

ಕರ್ನಾಟಕದಲ್ಲಿ ಶಿಕ್ಷಣ, ನೌಕರಿ ಮತ್ತು ತರಬೇತಿಯಲ್ಲಿ ಇಲ್ಲದ ಯುವಜನರ (15–29 ವರ್ಷ ವಯಸ್ಸು) ಸಂಖ್ಯೆ ಶೇ 18.2 ಆಗಿದೆ. ಇದರಲ್ಲಿ ಪುರುಷರ ಸಂಖ್ಯೆ ಶೇ 2.8 ಆಗಿದ್ದರೆ, ಮಹಿಳೆಯರ ಸಂಖ್ಯೆ ಶೇ 34.6 ಆಗಿದೆ.

ಸಮೀಕ್ಷೆಯ ಭಾಗವಾಗಿ ಕರ್ನಾಟಕದ ಗ್ರಾಮೀಣ ಪ್ರದೇಶದ 6,828 ಕುಟುಂಬಗಳ 30,171ಮಂದಿ, ನಗರ ಪ್ರದೇಶದ 5,618 ಕುಟುಂಬಗಳ 19,817 ಮಂದಿ ಸೇರಿದಂತೆ 49,988 ಜನರನ್ನು ಸಂದರ್ಶಿಸಲಾಗಿದೆ.

ಶಾಲೆಗೆ ಹೋಗದ ಮಕ್ಕಳು (6 ರಿಂದ 18 ವರ್ಷ)

2.2% ಗ್ರಾಮೀಣ
1.9% ನಗರ
2.1% ಒಟ್ಟು



ಮೊಬೈಲ್ ಬಳಕೆಯಲ್ಲಿ ಮುಂದು

ಮೊಬೈಲ್ ಫೋನ್, ಇಂಟರ್‌ನೆಟ್ ಸೇರಿದಂತೆ ಮಾಹಿತಿ ತಂತ್ರಜ್ಞಾನ ಬಳಕೆ ಕೌಶಲದ ಬಗ್ಗೆಯೂ ಸಮೀಕ್ಷೆ ಮಾಹಿತಿ ಕಲೆಹಾಕಿದೆ. ಭಾರತದ ಶೇ 95ರಷ್ಟು ಕುಟುಂಬಗಳು ಮೊಬೈಲ್ ಫೋನ್ ಹೊಂದಿವೆ ಎಂದೂ ಅದು ಹೇಳಿದೆ.

- ಸಮೀಕ್ಷೆಯಲ್ಲಿ ಭಾಗವಹಿಸಿದವರ ಪೈಕಿ ರಾಷ್ಟ್ರೀಯ ಮಟ್ಟದಲ್ಲಿ ಶೇ 86.5ರಷ್ಟು ಜನರಿಗೆ (15 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನವರು) ಸ್ಮಾರ್ಟ್‌ಫೋನ್ ಸೇರಿದಂತೆ ಮೊಬೈಲ್ ಬಳಸುವುದು ತಿಳಿದಿದೆ. ಇದರಲ್ಲಿ ಶೇ 92.2ರಷ್ಟು ಮಹಿಳೆಯರು ಮತ್ತು ಶೇ 80.6ರಷ್ಟು ಪುರುಷರು.
- 15 ಮತ್ತು ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ ಶೇ 59.8 ಮಂದಿಗೆ ಇಂಟರ್‌ನೆಟ್ ಬಳಕೆ ತಿಳಿದಿದೆ. ಪುರುಷರಿಗೆ ಹೋಲಿಸಿದರೆ (ಶೇ 67.6) ಇಂಟರ್‌ನೆಟ್ ಬಳಕೆ ಬಗ್ಗೆ ಅರಿವಿರುವ ಮಹಿಳೆಯರ ಪ್ರಮಾಣ (ಶೇ 51.8) ಕಡಿಮೆ ಇದೆ
- ಮೊಬೈಲ್, ಕಂಪ್ಯೂಟರ್‌ಗಳಲ್ಲಿ ಸಂದೇಶಗಳು, ಇ–ಮೇಲ್‌ಗಳು, ಫೋಟೊ, ವಿಡಿಯೊ, ಡಾಕ್ಯುಮೆಂಟ್‌ಗಳನ್ನು ಕಳುಹಿಸುವ ಕೌಶಲಗಳನ್ನು 15 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಶೇ 52.5ರಷ್ಟು ಮಂದಿ ಅರಿತಿದ್ದಾರೆ. 15ರಿಂದ 24 ವರ್ಷ ವಯೋಮಾನದ ಶೇ 78.4ರಷ್ಟು ಜನರಿಗೆ ಇದು ತಿಳಿದಿದೆ
- 15 ಮತ್ತು ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ ಶೇ 63.3ರಷ್ಟು ಜನರಿಗೆ ಇಂಟರ್‌ನೆಟ್‌ನಲ್ಲಿ ಮಾಹಿತಿಗಳನ್ನು ಹೇಗೆ ಹುಡುಕಬೇಕು ಎಂಬುದು ಗೊತ್ತಿದೆ. ಗ್ರಾಮೀಣ ಭಾಗದಲ್ಲಿ ಶೇ 56.1 ಮತ್ತು ನಗರ ಪ್ರದೇಶದ ಶೇ 66.7ರಷ್ಟು ಜನರಿಗೆ ಇದರ ಅರಿವಿದೆ
- ಕರ್ನಾಟಕದಲ್ಲಿ 15 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಶೇ 89.5ರಷ್ಟು ಜನರಿಗೆ ಮೊಬೈಲ್ ಫೋನ್ ಬಳಕೆ ತಿಳಿದಿದೆ. ಇದರಲ್ಲಿ ಶೇ 94.3ರಷ್ಟು ಪುರುಷರು ಮತ್ತು ಶೇ 84.8ರಷ್ಟು ಮಹಿಳೆಯರು. ಶೇ 63.4ರಷ್ಟು ಮಂದಿಗೆ ಇಂಟರ್‌ನೆಟ್ ಬಳಕೆಯ ಅರಿವಿದ್ದು, ಶೇ 72.4ರಷ್ಟು ಪುರುಷರು ಮತ್ತು ಶೇ 54.4ರಷ್ಟು ಮಹಿಳೆಯರು
- ಯುವಜನರ ಪೈಕಿ (15 ಮತ್ತು ಹೆಚ್ಚು ವಯಸ್ಸಿನ 29 ವರ್ಷ ವಯಸ್ಸಿನವರು) ಇಂಟರ್‌ನೆಟ್ ಸಂಪರ್ಕ ಹೊಂದಿದವರ ಪ್ರಮಾಣ ಶೇ 84.2ರಷ್ಟಿದ್ದರೂ, ಅದರ ಮೂಲಕ ಆನ್‌ಲೈನ್ ವ್ಯವಹಾರ ಮಾಡುವವರ ಸಂಖ್ಯೆ ರಾಷ್ಟ್ರೀಯ ಮಟ್ಟದಲ್ಲಿ ಶೇ 25.0 ಮಾತ್ರ. ಗೋವಾ, ಕೇರಳ, ತಮಿಳುನಾಡುನಂತಹ ಕೆಲವು ರಾಜ್ಯಗಳಲ್ಲಿ ಈ ಪ್ರಮಾಣ ಹೆಚ್ಚಿದ್ದರೆ, ಮೇಘಾಲಯ, ಉತ್ತರ ಪ್ರದೇಶ, ಛತ್ತೀಸಗಢದಂತಹ ರಾಜ್ಯಗಳಲ್ಲಿ ಕಡಿಮೆ ಇದೆ. ಕರ್ನಾಟಕದಲ್ಲಿ ಇವರ ಪ್ರಮಾಣವು ಶೇ 33.4 ಆಗಿದೆ.

ವೈದ್ಯಕೀಯ ವೆಚ್ಚದ ಹೊರೆ

ಅನಾರೋಗ್ಯಪೀಡಿತರಾಗಿ ಆಸ್ಪತ್ರೆಗೆ ದಾಖಲಾದರೆ ದೇಶದ ಗ್ರಾಮೀಣ ಪ್ರದೇಶದ ಕುಟುಂಬವೊಂದು ವರ್ಷಕ್ಕೆ ₹4,129 ಅನ್ನು ತಮ್ಮ ಕೈಯಿಂದಲೇ (ಔಟ್ ಆಫ್ ಪಾಕೆಟ್) ಭರಿಸುತ್ತಿದ್ದರೆ, ನಗರ ಪ್ರದೇಶದ ಕುಟುಂಬವೊಂದು ₹5,290ರಷ್ಟು ವ್ಯಯಿಸುತ್ತಿದೆ. ಹೊರರೋಗಿಗಳಾಗಿ ಗ್ರಾಮೀಣ ಪ್ರದೇಶದ ಕುಟುಂಬ ತಿಂಗಳೊಂದಕ್ಕೆ ₹539 ವೆಚ್ಚ ಮಾಡಿದರೆ, ನಗರ ಪ್ರದೇಶದ ಕುಟುಂಬವೊಂದು ತಿಂಗಳಿಗೆ ₹606 ಖರ್ಚು ಮಾಡುತ್ತಿದೆ. ಕುಟುಂಬದ ಆದಾಯದಲ್ಲಿ ಆರೋಗ್ಯಕ್ಕೆ ಸಂಬಂಧಿಸಿ ಕೈಯಿಂದ ಮಾಡುವ ವೆಚ್ಚವು ಗಣನೀಯವಾಗಿದೆ ಎನ್ನುವುದರ ಬಗ್ಗೆ ವರದಿ ಗಮನ ಸೆಳೆಯುತ್ತದೆ.

ಕರ್ನಾಟಕದಲ್ಲಿ ಗ್ರಾಮೀಣ ಕುಟುಂಬವೊಂದು ಒಳರೋಗಿಯಾಗಿ ವರ್ಷಕ್ಕೆ ₹5,059 ವೆಚ್ಚ ಮಾಡಿದರೆ, ನಗರ ಪ್ರದೇಶದ ಕುಟುಂಬವು ₹4,486 ವೆಚ್ಚ ಮಾಡುತ್ತದೆ. ಹೊರರೋಗಿಯಾಗಿ ರಾಜ್ಯದ ಗ್ರಾಮೀಣ ಕುಟುಂಬವು ₹1,201 ಖರ್ಚು ಮಾಡಿದರೆ, ನಗರದ ಕುಟುಂಬವೊಂದು ₹1,385 ವೆಚ್ಚ ಮಾಡುತ್ತದೆ.

ಹೆಚ್ಚು ಸಾಲಗಾರರು

ಕರ್ನಾಟಕದಲ್ಲಿ ಶೇ 99.3 ಮಂದಿ ಬ್ಯಾಂಕ್ ಅಥವಾ ಇತರೆ ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಖಾತೆ ಹೊಂದಿದ್ದಾರೆ. ರಾಜ್ಯದಲ್ಲಿ ಸಾಲ (₹500 ಮತ್ತು ಅದಕ್ಕಿಂತ ಹೆಚ್ಚು) ಮಾಡಿದವರ ಸಂಖ್ಯೆ ಹೆಚ್ಚಾಗಿದ್ದು, ಜನಸಂಖ್ಯೆಯಲ್ಲಿ ಸುಮಾರು ಮೂರನೇ ಒಂದರಷ್ಟಿದೆ. ರಾಜ್ಯದ ಒಂದು ಲಕ್ಷ ಜನಸಂಖ್ಯೆಗೆ 35,480 ಮಂದಿ ಸಾಲಗಾರರಾಗಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ (18,322) ಸುಮಾರು ಎರಡು ಪಟ್ಟು ಹೆಚ್ಚಾಗಿದೆ. ವಿಶೇಷ ಎಂದರೆ, ಸಾಲಗಾರರ ಪಟ್ಟಿಯಲ್ಲಿ ದಕ್ಷಿಣದ– ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ– ರಾಜ್ಯಗಳೇ ಮುಂದಿವೆ.



ವಿದ್ಯಾಪತಿ ಜೊತೆಯಾದ ಜಗ್ಗೇಶ್

‘ಟಗರು ಪಲ್ಯ’ ಬೆನ್ನಲ್ಲೇ ನಟ ನಾಗಭೂಷಣ್ ‘ವಿದ್ಯಾಪತಿ’ಯಾಗಿ ತೆರೆಗೆ ಬರಲು ಸಜ್ಜಾಗಿದ್ದಾರೆ. ‘ಇಕ್ಕಟ್’ ಸಿನಿಮಾ ನಿರ್ದೇಶಿಸಿದ್ದ ಇಶಾಂ ಖಾನ್ ಹಾಗೂ ಹಸೀಂ ಖಾನ್ ಈ ಸಿನಿಮಾವನ್ನು ನಿರ್ದೇಶಿಸಿದ್ದು, ಚಿತ್ರದ ಹಾಡೊಂದಕ್ಕೆ ನಟ ಜಗ್ಗೇಶ್ ಧ್ವನಿಯಾಗಿದ್ದಾರೆ.

‘ಅಯ್ಯೋ ವಿಧಿಯೇ...’ ಎಂದು ಶುರುವಾಗುವ ಹಾಡಿನಲ್ಲಿ ಕರಾಟೆ ತರಗತಿಯಲ್ಲಿ ವಿದ್ಯಾಪತಿಯ ತಲೆಹರಟೆ ದೃಶ್ಯಗಳಿವೆ. ಸುಜಿತ್ ವೆಂಕಟರಾಮಯ್ಯ ಸಾಹಿತ್ಯವಿರುವ ಈ ಹಾಡಿಗೆ ಡಾಸ್ಮೋಡ್ ಸಂಗೀತ ನೀಡಿದ್ದಾರೆ. ಹಾಡಿನಲ್ಲಿ ರಂಗಾಯಣ ರಘು ಹೆಜ್ಜೆ ಹಾಕಿರುವುದು ವಿಶೇಷ.

ಇದು ನಟ ಧನಂಜಯ ಅವರ ಡಾಲಿ ಪಿಕ್ಚರ್ಸ್‌ನ 4ನೇ ಸಿನಿಮಾವಾಗಿದೆ. ಚಿತ್ರದಲ್ಲಿ ನಾಗಭೂಷಣ್‌ಗೆ ‘ಉಪಾಧ್ಯಕ್ಷ’ ಸಿನಿಮಾ ಖ್ಯಾತಿಯ ನಟಿ ಮಲೈಕಾ ವಸುಪಾಲ್ ನಾಯಕಿಯಾಗಿದ್ದಾರೆ. ಕರಾಟೆ ಕಿಂಗ್ ಪಾತ್ರದಲ್ಲಿ ನಾಗಭೂಷಣ್ ಕಾಣಿಸಿಕೊಳ್ಳುತ್ತಿದ್ದು, ಅವರಿಗೆ ಮಾಸ್ಟರ್ ಆಗಿ ರಂಗಾಯಣ ರಘು ಅಭಿನಯಿಸಿದ್ದಾರೆ. ಚಿತ್ರಕ್ಕೆ ಲವಿತ್ ಅವರ ಛಾಯಾಚಿತ್ರಗ್ರಹಣವಿದೆ. ❖

‘ಜಲಂಧರ’ನಿಗೆ ಶರಣ್ ಸಾಥ್

ಪ್ರಮೋದ್ ಶೆಟ್ಟಿ ನಾಯಕರಾಗಿ ನಟಿಸಿರುವ, ವಿಷ್ಣು ವಿ.ಪ್ರಸನ್ನ ನಿರ್ದೇಶನದ ‘ಜಲಂಧರ’ ಚಿತ್ರದ ‘ಸಂತೆಯ ದಾರಿಯಲ್ಲಿ..’ ಹಾಡನ್ನು ನಟ ಶರಣ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

ಸುಪ್ರೀತ್ ಶರ್ಮ ಎಸ್. ಬರೆದು, ಜತಿನ್ ದರ್ಶನ್ ಸಂಗೀತ ನೀಡಿರುವ ಈ ಹಾಡನ್ನು ವಿಜಯ್ ಪ್ರಕಾಶ್ ಹಾಗೂ ಮಾಧುರಿ ಶೇಷಾದ್ರಿ ಹಾಡಿದ್ದಾರೆ. ಶೇಷು ಅವರ ನೃತ್ಯ ನಿರ್ದೇಶನದಲ್ಲಿ ಸ್ಟೆಪ್ ಅಪ್ ಲೋಕಿ ಹಾಗೂ ಆರೋಹಿತ ಗೌಡ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಸ್ಟೆಪ್ ಅಪ್ ಪಿಕ್ಚರ್ಸ್ ಲಾಂಛನದಲ್ಲಿ ಮದನ್ ಎಸ್. ನಿರ್ಮಿಸಿರುವ ಈ ಚಿತ್ರದಲ್ಲಿ ರುಶಿಕಾ ರಾಜ್, ಬಲ ರಾಜವಾಡಿ, ನವೀನ್ ಸಾಗರ್, ಪ್ರತಾಪ್ ನನಸು, ಆದಿ ಕೇಶವರೆಡ್ಡಿ, ಭೀಷ್ಮಾ ರಾಮಯ್ಯ, ವಿಜಯರಾಜ್ ಮುಂತಾದವರು ನಟಿಸಿದ್ದಾರೆ. ಪ್ರಮೋದ್ ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿ ಪಾತ್ರ ನಿರ್ವಹಿಸಿದ್ದಾರೆ.

ಚಿತ್ರದ ಕಥೆಯನ್ನು ನಿರ್ಮಾಪಕ ಲೋಕಿ ಅವರು ಬರೆದಿದ್ದು, ಚಿತ್ರಕಥೆ ವಿಷ್ಣು ವಿ. ಪ್ರಸನ್ನ ಹಾಗೂ ಅಕ್ಷಯ್ ಕುಮಾರ್ ಅವರದ್ದು. ಶ್ಯಾಮ್ ಸುಂದರ್ ಸಂಭಾಷಣೆ, ಸರಿನ್ ರವೀಂದ್ರನ್ ಹಾಗೂ ವಿದ್ಯಾಶಂಕರ್ ಪಿ.ಎಸ್.ಅವರ ಛಾಯಾಚಿತ್ರಗ್ರಹಣ, ಜಿ.ಜತಿನ್ ದರ್ಶನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಎಲ್ಲರಿಗೂ ಇದೆ ಸಮಾನ ಅವಕಾಶ

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

65

ನಿಸರ್ಗ ನಮಗೆಲ್ಲರಿಗೂ ಸಮಾನ ಅವಕಾಶ ಕೊಟ್ಟಿದೆ. ನಮ್ಮ ವ್ಯಾವಹಾರಿಕ ಬುದ್ಧಿಗೆ ಇವ ಶ್ರೀಮಂತ, ಇವ ಬಡವ, ಇವ ದೊಡ್ಡವ, ಇವ ಸಣ್ಣವ, ಇವೆಲ್ಲ ನಮ್ಮ ದೃಷ್ಟಿಗೆ ಅಷ್ಟೆ. ಆದರೆ, ನಿಸರ್ಗದ ದೃಷ್ಟಿಯಲ್ಲಿ ಯಾರೂ ಬಡವರೂ ಅಲ್ಲ ಶ್ರೀಮಂತರೂ ಅಲ್ಲ. ನಾವು ಶ್ರೀಮಂತರದೀವಿ ಅಂತಾ ನೀವು ಅನಬಹುದು. ಯಾವಾಗಲೂ ಫಸ್ಟ್ ಕ್ಲಾಸ್ ಬೋಗಿಯೊಳಗೇ ಹೋಗ್ತೀವಿ ಅಂತ ಅನಬಹುದು. ಟ್ರೈನ್‌ನಲ್ಲಿ ಹೋಗುವಾಗ ಮೊದಲ ದರ್ಜೆ, ಎರಡನೇ ದರ್ಜೆ, ಮೂರನೇ ದರ್ಜೆ ಅಷ್ಟೆ. ಟ್ರೈನ್ ಇಳಿದ ಮೇಲೆ ಭೂಮಿ ತಾಯಿ ಅಂತಾಳ, ‘ಇಲ್ಲಿ ಯಾವುದೇ ದರ್ಜೆ ಇಲ್ಲ ಅಂತ. ನಾನು ದರ್ಜೆಯಿಲ್ಲದವಳು, ನಾನು ದರ ಇಲ್ಲದವಳು, ನಾನು ಜಾತಿ ಇಲ್ಲದವಳು’ ಎಂದು.

ಎಲ್ಲರೂ ಭೂಮಿ ಮೇಲೆ ನಡೀಬೇಕಲ್ಲ? ಭೂಮಿಯ ಸೃಷ್ಟಿಯಲ್ಲಿ ಮೊದಲ ದರ್ಜೆ, ಕೊನೆ ದರ್ಜೆ ಅನ್ನೋದು ಇಲ್ಲ. ಈಗ ಸೂರ್ಯ ಇದಾನ. ‘ಇವರು ಶ್ರೀಮಂತರು ಅದಾರ, ಅವರ ಮನೆಗಷ್ಟೇ ಬೆಳಕು ಕೊಡಬೇಕು. ಬಡವರ ಮನಿಗೆ ಬೆಳಕು ಕೊಡದಿದ್ದರೂ ನಡೀತೈತಿ’ ಅಂತ ಬೆಳಕು ಕೊಡೋದು ಬಿಟ್ಟಾನೇನು? ನಮ್ಮ ದೃಷ್ಟಿಯಲ್ಲಿ ಬಂಗಲೆ, ಆಶ್ರಯ ಮನೆ. ಆದರೆ ಸೂರ್ಯನ ದೃಷ್ಟಿಯಲ್ಲಿ ಎಲ್ಲ ಒಂದೇ. ಬೆಳಕಿಗೆ ಬಡತನವೂ ಇಲ್ಲ, ಶ್ರೀಮಂತಿಕೆಯೂ ಇಲ್ಲ.

ಮೇಘಗಳು ಆಕಾಶದಲ್ಲಿ ತೇಲಿ ಬರುವಾಗ ‘ಮೇಘಗಳೇ ನೀವು ನಿಮಗೆಲ್ಲಿ ಬೇಕೋ ಅಲ್ಲಿ ಮಳೆ ಬೀಳಿಸಬ್ಯಾಡಿ. ನಮ್ಮ ಜಾತಿಯವರ ಹೊಲದ ಮೇಲಷ್ಟೇ ಮಳೆ ಬೀಳಿಸಿ’ ಅಂತ ಹೇಳಿ ನೋಡೋಣ. ಆಗ ಮೇಘ ಅನತೈತಿ, ‘ನಿಮಗ ತಲೆ ಕೆಟ್ಟೈತಿ ಅಂತ ನಮಗೂ ತಲೆ ಕೆಟ್ಟೈತೇನು?, ನೀವು ಕೆಳಗೆ ನಿಂತು ನೋಡೋರಿಗೆ ಹೆಚ್ಚು ಕಡಿಮೆ ಕಾಣತೈತಿ, ಆ ಜಾತಿ ಈ ಜಾತಿ ಅಂತ ಕಾಣತೈತಿ. ನಾವು ಮೇಲೆ ನಿಂತು ನೋಡೋರಿಗೆ ಕೆಳಗಿರುವವರು ಬರೇ ಭೂಮಿ ತಾಯಿಯ ಮಕ್ಕಳು ಅಂತ ಅಷ್ಟೇ ಕಾಣತೈತಿ’ ಅಂತ.

ನಿಸರ್ಗ ಎಲ್ಲರಿಗೂ ನೀರು, ಗಾಳಿ, ಬೆಳಕ ಎಲ್ಲ ಸಮನಾಗಿ ಕರುಣಿಸಿದರೂ ಇಲ್ಲಿ ಯಾಕೆ ಒಬ್ಬ ಬುದ್ಧನಾದ ಇನ್ನೊಬ್ಬ ಬಿದ್ದ? ಯಾಕೆ ಒಬ್ಬ ವಿಜ್ಞಾನಿ, ಇನ್ನೊಬ್ಬ ಅಜ್ಞಾನಿ? ಒಂದೇ ಕ್ಲಾಸಿದೆ, ಒಂದೇ ಟೀಚರ್, ಒಂದೇ ವಿಷಯ ಆದರೂ ಒಬ್ಬವ ಮೊದಲು ಬರ್ತಾನೆ ಇನ್ನೊಬ್ಬ ಫೇಲಾಗ್ತಾನ ಹಿಂಗ್ಯಾಕಾತು?

ಮನುಷ್ಯನಿಗೆ ಎರಡು ಪ್ರವೃತ್ತಿಗಳು. ಒಂದು ಸಹಜ ಪ್ರವೃತ್ತಿ. ಇನ್ನೊಂದು ಪ್ರಯತ್ನ ಪ್ರವೃತ್ತಿ. ಸಹಜ ಪ್ರವೃತ್ತಿ ಅಂದರ ನೀವೇನೂ ಪ್ರಯತ್ನ ಮಾಡೋದೇ ಬೇಡ. ಸಹಜವಾಗಿ ಬದಲಾವಣೆ ಆಗತಿರತೈತಿ. ಈಗ ನಿಮ್ಮ ದೇಹ ಐತಿ. ಬಾಲ್ಯ ಐತಿ, ಯುವಕರಾಗಲು ಏನಾದರೂ ಪ್ರಯತ್ನ ಪಟ್ಟೀರೇನು? ಮುಪ್ಪಾಗಕೆ ಏನಾದರೂ ಪ್ರಯತ್ನ ಪಟ್ಟೀರೇನು? ಮುಪ್ಪಾದಮೇಲೆ ಸಾವಾಗತೈತಿ. ಪ್ರಯತ್ನ ಮಾಡಿದರೂ ನಿಲ್ಲೋದಿಲ್ಲ. ಮುಪ್ಪಾಗಬಾರದು ಎಂದು ತಡೆಯೋಕೆ ಸಾಧ್ಯ ಐತೇನು?

ಪ್ರಯತ್ನ ಪ್ರವೃತ್ತಿ ಇದೆ. ಪ್ರಯತ್ನದಿಂದ ಸಾಧಿಸೋದು. ಕಣ್ಣಿಲ್ಲದವರಿಗೆ ಪುಟ್ಟರಾಜ ಗವಾಯಿಗಳು ಕಣ್ಣಾದರು. ಕಣ್ಣಿಲ್ಲದಿದ್ದರೂ ಅವರಿಗೆ ಕರುಳು ಇತ್ತು. ಇದು ಪ್ರಯತ್ನ ಪ್ರವೃತ್ತಿ. ಕಣ್ಣಿದ್ದವರಿಗೆ ಜಗತ್ತು ಕಾಣತೈತಿ. ಆದರೆ ತಮಗೇನು ಬೇಕೋ ಅದು ಕಾಣೋದಿಲ್ಲ. ಕಣ್ಣಿಲ್ಲದವರಿಗೆ ಜಗತ್ತು ಕಾಣೋದಿಲ್ಲ. ಆದರೆ ತಮಗೇನು ಬೇಕೋ ಅದು ಕಾಣತೈತಿ. ಪ್ರಯತ್ನದಿಂದ ಇದನ್ನು ಸಾಧಿಸಬಹುದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದ್ವಾದಶಿ ಗಂ. 13-02 ನಕ್ಷತ್ರ: ರೇವತಿ ಗಂ. 27-11 ಯೋಗ: ವಜ್ರ ಗಂ. 15-25 ಕರಣ: ಬಾಲವ ಗಂ. 13-02, ತುಲಾ ಮಾಸದ 27 ನೇ ದಿನ, ಮಳೆನಕ್ಷತ್ರ: ವಿಶಾಖ 3.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-33 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 10 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 3, 6

ಮೇಷ: ಉದ್ಯಮಿಗಳಿಗೆ ಕಾರ್ಮಿಕರ ಬದಲಾವಣೆಯಂಥ ವಿಷಯಗಳು ಹಲವು ರೀತಿಯಲ್ಲಿ ನಷ್ಟವನ್ನು ಅನುಭವಿಸಲು ಕಾರಣವಾಗುತ್ತದೆ. ಈ ದಿನ ಹಣದ ಹೂಡಿಕೆ ಮಾಡದಿರುವುದು ಒಳ್ಳೆಯದು.

ವೃಷಭ: ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಜಯವಿದ್ದು, ವಿವಿಧ ಮೂಲಗಳಿಂದ ಆದಾಯ ಲಭಿಸುವುದು. ಯೋಜನೆಗಳು ಪೂರ್ವ ನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗಲಿವೆ. ಹೂವು ಹಣ್ಣು ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಮಿಥುನ: ಮನೆಯಲ್ಲಿ ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸಗಳು ಕಂಡುಬಂದರೂ ಚಿಂತಾಜನಕ ಪರಿಸ್ಥಿತಿ ಇಲ್ಲ. ಕೌಶಲ ಕಲಿತವರಿಗೆ ಹೊಸ ಅವಕಾಶಗಳು ಸಿಗುವುದು. ಧಾರ್ಮಿಕ ಕೆಲಸಗಳನ್ನು ಉತ್ತಮವಾಗಿ ಮಾಡುವಿರಿ.

ಕರ್ಕಾಟಕ: ಎಂಥ ಪರಿಸ್ಥಿತಿಯನ್ನಾದರೂ ಎದುರಿಸಬಲ್ಲೆ ಎಂಬ ಆತ್ಮವಿಶ್ವಾಸದಿಂದ ಮುನ್ನುಗ್ಗಿ. ಇದೇ ನಿಮ್ಮ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲದು. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆ ನಿವಾರಣೆಯಾಗಲಿದೆ.

ಸಿಂಹ: ನೀವು ನಡೆಸುವ ವ್ಯವಹಾರಗಳನ್ನು ಇತರರೊಂದಿಗೆ ಹೇಳಿಕೊಂಡರೂ ಒಳಗುಟ್ಟನ್ನು ಯಾರ ಹತ್ತಿರವೂ ಬಿಟ್ಟುಕೊಡದಿರಿ. ಹಿತಶತ್ರುಗಳ ಕಾಟದಿಂದ ತಪ್ಪಿಸಿಕೊಳ್ಳಲು ಬುದ್ಧಿವಂತಿಕೆಯನ್ನು ಉಪಯೋಗಿಸಿರಿ.

ಕನ್ಯಾ: ತಾಯಿಯ ಆರೋಗ್ಯ ಅದರಲ್ಲೂ ಹೆಚ್ಚಾಗಿ ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಕಾಳಜಿಯನ್ನು ತೆಗೆದು ಕೊಳ್ಳಬೇಕಾಗುತ್ತದೆ. ಮಿತ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುವುದು. ಆದಾಯ ಹೆಚ್ಚುವುದು.

ತುಲಾ: ನಿಮಗಿರುವ ಅನಾರೋಗ್ಯವನ್ನು ನಿಯಮಿತ ಆಹಾರ ಸೇವನೆಯಿಂದ ಸರಿಪಡಿಸಿಕೊಳ್ಳಬಹುದು. ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿ. ಆದಾಯವು ಸಾಕಷ್ಟು ಕೂಡಿ ಬರಲಿದೆ.

ವೃಶ್ಚಿಕ: ಕುಟುಂಬಕ್ಕೆ ಶಿಶುವಿನ ಆಗಮನದಿಂದಾಗಿ ಮನೆಯಲ್ಲಿ ಇರುವವರಿಗೆಲ್ಲಾ ಅಪರಿಮಿತ ಸಂತೋಷ ಉಂಟಾಗುವುದು. ಸಂಬಂಧಿಕರ ವಲಯದಲ್ಲಿ ನಿಮ್ಮ ಮೇಲಿದ್ದ ತಪ್ಪು ಅಭಿಪ್ರಾಯಗಳು ದೂರಾಗುವುದು.

ಧನು: ದೈಹಿಕ ಮತ್ತು ಆರ್ಥಿಕ ಶಕ್ತಿಯನ್ನು ವ್ಯಯಿಸದೇ ಸಮಯಕ್ಕಾಗಿ ಕಾದು, ಸಿಕ್ಕ ಸಮಯದಲ್ಲಿ ಕಾರ್ಯವೆಸಗುವ ಚಾಣಾಕ್ಷತನ ಇರುವುದು. ವ್ಯವಹಾರದ ವಿಸ್ತರಣೆಗೆ ಸ್ನೇಹಿತರಿಂದ ಉತ್ತಮ ಸಲಹೆ ಸಹಾಯವಿರುವುದು.

ಮಕರ: ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಸಾಧ್ಯತೆಗಳಿವೆ. ಮದುವೆಯ ಸಂಬಂಧ ಮಾತನಾಡಲು ಯಾರ ಮಧ್ಯಸ್ಥಿಕೆ ಬೇಡ. ವೈದ್ಯರ ಸಲಹೆಯಂತೆಯೇ ನಡೆದರೆ ಮಕ್ಕಳ ಆರೋಗ್ಯ ಉತ್ತಮವಾಗಿರುವುದು.

ಕುಂಭ: ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವ ಗೆಲುವಿಗೆ ಕಾರಣವಾಗಲಿದೆ. ಕೋರ್ಟು-ಕಚೇರಿ ಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು ಇರಲಿದೆ. ಕಾರ್ಯರಂಗದಲ್ಲಿ ಅಪವಾದದ ಭೀತಿ ಮೂಡಿಸಲಿದೆ.

ಮೀನ: ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ನೂತನ ವಾಹನ ಖರೀದಿಯ ಯೋಗವಿದೆ.

ಪದಬಂಧ 5860

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ರಣಧೀರ ಕಾಳಗ ನಡೆಸಿದ ಜಾಗ (4)
5.ಯಜಮಾನನ ಸ್ವಭಾವ (4)
6.ದಾರಿಯಲ್ಲಿ ನಡೆದು ಹೋಗುತ್ತಿರುವವನು (4)
8.ಕಳ್ಳನ ಬಗ್ಗೆ ಇಷ್ಟು ಆಸಕ್ತಿಯೇ? (4)
10.ಗೆಳೆತನಕ್ಕೊಂದು ಪರ್ಯಾಯ ಪದ (2)
12.ಕೆರಳಿದವನ ಮೆಟ್ಟು! (2)
13.ಜೇನುನೊಣ ಹೀರುತ್ತಿರುವ ಹೂವಿನ ಸಿಹಿರಸ (4)
15.ಸವಿಯಾದ ವಿವರಗಳನ್ನೊಳಗೊಂಡಿದ್ದು! (4)
17.ಪ್ರಯಾಣದ ನಡುವೆ ಕರವಿಟ್ಟ ಘಟನೆ (4)
18.ನಡುವೆ ಗರ ತಿರುಗಿಸಿದರೆ ಅಧೀನ (4)

ಮೇಲಿಂದ ಕೆಳಕ್ಕೆ
1.ಇದು ನಡುಮನೆ (3)
2.ನಡುವಿರುವ ಮಾಣಿ ಬಲು ನಂಬಿಕಸ್ಥ! (4)
3.ದಾಳಿ ನಡೆಸಿ ತಿಂದಿದ್ದು ಶ್ರೇಷ್ಠಕಬ್ಬು (4)
4.ಗಣಕ್ಕೆಲ್ಲಾ ಗಣಿತ ಕಲಿಸಿದ ಕರಣಿಕ (3)
7.ಹೇಳಿಕೆಯಿಂದಲೇ ಮಾಡಿದ ಸಾಮ್ಯ! (3)
9.ಕಳ್ಳನಿಗೆ ದೋಷ ಅಂಟಿಕೊಂಡಿದೆಯಲ್ಲ! (3)
11.ಕೊಡದಂತಹ ದೊಡ್ಡ ಪಾತ್ರೆ (3)
13.ಮರದ ಕೆಳಗೆ ಸಿಕ್ಕಿರುವ ಪಚ್ಚೆ (4)
14.ಕಸರತ್ತು ಮಾಡಿ ಹಾಕಿದ ಸಹಿ (4)
15.ಸರಿಗೆ ತಂದವ ಸರಿಸಮನಾದವನು (3)
16.ಪರಿಣಯಕ್ಕೆ ತಿರುಗಿದ ಪ್ರೀತಿ (3)



5859ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಹಯ್ಯಂಗವೀನ 4.ರಾಜಕೀರ 7.ಅಕಳಂಕ 8.ಕಲಗಚ್ಚು 10.ಮಗ್ಗ 11.ಗುಣಿ 12.ನವಜಾತ 14.ಕಲೇವರ 17.ಜಲಚರ 18.ಹಯವದನ

ಮೇಲಿಂದ ಕೆಳಕ್ಕೆ:
1.ವಿರಾಮ 2.ಹರ 3.ವೀಕ್ಷಕ 5.ಕೀಚಕ 6.ಅಂಕವಣಿ 7.ಅಚ್ಚು 9.ಗಡವ 10.ಮಧುಕರಿ 12.ನರ 13.ತಮಾಲ 15.ವಲಯ 16.ಮುರಳಿ 17.ಜನ

ಸುಡೊಕು 6245

9		7		1				
	6		4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8			7	
6		4		9		1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6244 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಷೇರುಪೇಟೆ ವಹಿವಾಟು 820



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,141
ಇಂದಿನ ಅಂತ್ಯ	23,883
▼	257
ದಿನದ ಕನಿಷ್ಠ	23,839

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರಿ.ಕಿ) ₹415-575

ದ್ವಿತಳಿ (ಬಿ.ವಿ) ₹425-722

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹179

ಆರ್‌ಎಸ್‌ಎಸ್-5 ₹173

ಗುಡ್ ಲಾಟ್ ₹169

(ಪ್ರತಿ ಕೆ.ಜಿ)

ಚಿನ್ನದ ದರ ₹1,750 ಬೆಳ್ಳಿ ₹2,700 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಎರಡನೇ ದಿನವಾದ ಮಂಗಳವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

10 ಗ್ರಾಂ ಶುದ್ಧ ಚಿನ್ನದ (ಶೇ 99.9 ಪರಿಶುದ್ಧತೆ) ದರವು ₹1,750 ಇಳಿಕೆಯಾಗಿದ್ದು, ₹77,800 ಆಗಿದೆ. ಸ್ಟಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು 10 ಗ್ರಾಂಗೆ ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹77,400 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2,700 ಇಳಿಕೆಯಾಗಿದ್ದು, ₹91,300ರಂತೆ ಮಾರಾಟವಾಗಿದೆ.

'ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಜಯಗಳಿಸಿರುವುದು ಅಲ್ಲಿನ ಆರ್ಥಿಕ ಬೆಳವಣಿಗೆ ಬಗ್ಗೆ ಆಶಾಭಾವವನ್ನು ಹೆಚ್ಚಿಸಿದೆ. ಡಾಲರ್ ಮೌಲ್ಯವು ಏರಿಕೆಯಾಗುತ್ತಿದೆ. ಅಲ್ಲದೆ, ಟ್ರಂಪ್ ಗೆಲುವಿನಿಂದಾಗಿ ರಷ್ಯಾ-ಉಕ್ರೇನ್ ಮತ್ತು ಇಸ್ರೇಲ್-ಇರಾನ್ ನಡುವೆ ಕದನ ವಿರಾಮ ಏರ್ಪಡುವ ಭರವಸೆ ಮೂಡಿದೆ. ಇದರಿಂದ ಹಳದಿ ಲೋಹದ ದರವು ಇಳಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಸಚಿವರ ಸಮಿತಿಯ ಶಿಫಾರಸಿಗೆ ಅನುಮೋದನೆ ನಿರೀಕ್ಷೆ

ಡಿ.21ಕ್ಕೆ ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 21 ಮತ್ತು 22ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 55ನೇ ಸಭೆ ನಡೆಯಲಿದೆ.

ಇದೇ ವೇಳೆ ಕೇಂದ್ರ ಬಜೆಟ್ ಪೂರ್ವ ಸಮಾಲೋಚನೆಗೆ ಸಂಬಂಧಿಸಿದಂತೆ ರಾಜ್ಯಗಳ ಹಣಕಾಸು ಸಚಿವರೊಟ್ಟಿಗೆ ಅವರು ಸಭೆ ಕೂಡ ನಡೆಸುವ ಸಾಧ್ಯತೆಯಿದೆ ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಸತ್‌ನಲ್ಲಿ ಮುಂದಿನ ವರ್ಷದ ಫೆಬ್ರುವರಿ 1ರಂದು 2025-26ನೇ ಸಾಲಿನ ಬಜೆಟ್ ಮಂಡನೆಯಾಗಲಿದೆ. ಇದಕ್ಕೆ ಪೂರಕವಾಗಿಯೇ ನಡೆಯುವ ಸಭೆಯಲ್ಲಿ ರಾಜ್ಯಗಳ ಹಣಕಾಸು ಸಚಿವರು ಶಿಫಾರಸುಗಳನ್ನು ಮಂಡಿಸಲಿದ್ದಾರೆ.

ಹಿರಿಯ ನಾಗರಿಕರಿಗೆ ವಿನಾಯಿತಿ?: ಆರೋಗ್ಯ ಮತ್ತು ಜೀವ ವಿಮೆ ಕಂತುಗಳ ಮೇಲೆ ವಿಧಿಸುವ ಶೇ 18ರಷ್ಟು ಜಿಎಸ್‌ಟಿಗೆ ವಿನಾಯಿತಿ ನೀಡಬೇಕು ಅಥವಾ ಕಡಿಮೆಗೊಳಿಸಬೇಕು ಎಂಬ ಒತ್ತಾಯ ಕೇಳಿಬಂದಿತ್ತು. ಈ ಬಗ್ಗೆ ಪರಿಶೀಲಿಸುವಂತೆ ಮಂಡಳಿಯು 13 ಸಚಿವರ ಸಮಿತಿ ರಚಿಸಿತ್ತು.

ಕಳೆದ ತಿಂಗಳು ನಡೆದ ಈ ಸಮಿತಿ ಸಭೆಯು ಟರ್ಮ್ ಲೈಫ್ ಇನ್ಶೂರೆನ್ಸ್ (ಅವಧಿ ವಿಮೆ) ಮತ್ತು ಹಿರಿಯ ನಾಗರಿಕರ ಆರೋಗ್ಯ ವಿಮೆ ಕಂತಿನ ಮೇಲಿನ ತೆರಿಗೆ ಹಿಂಪಡೆಯುವ ಬಗ್ಗೆ ಶಿಫಾರಸು ಮಾಡಲು ನಿರ್ಣಯಿಸಿದೆ. ವೈಯಕ್ತಿಕ ವಿಮೆದಾರರ ₹5 ಲಕ್ಷದ ಒಳಗಿರುವ ಆರೋಗ್ಯ ವಿಮೆ ಕಂತಿನ ಮೇಲೆ ತೆರಿಗೆ ವಿನಾಯಿತಿ ನೀಡುವ ಕುರಿತು ಶಿಫಾರಸು ಮಾಡಲು ತೀರ್ಮಾನಿಸಿದೆ.

ಅಲ್ಲದೆ, ಜಿಎಸ್‌ಟಿ ದರ ಸರಳೀಕರಿಸುವ ಬಗ್ಗೆ ಆರು ಸಚಿವರ ಸಮಿತಿ ರಚಿಸಲಾಗಿದೆ. ಕಳೆದ ತಿಂಗಳು ನಡೆದ ಸಭೆಯಲ್ಲಿ ಈ ಸಮಿತಿಯು ಕೆಲವು ಪದಾರ್ಥಗಳ ಮೇಲಿನ ತೆರಿಗೆಯನ್ನು ಶೇ 12ರಿಂದ ಶೇ 5ಕ್ಕೆ ತಗ್ಗಿಸುವ ಬಗ್ಗೆ ಶಿಫಾರಸು ಮಾಡಿದೆ.

ಎರಡೂ ಸಮಿತಿಗಳ ಶಿಫಾರಸಿನ ಬಗ್ಗೆ ಜಿಎಸ್‌ಟಿ ಮಂಡಳಿಯು ಈ ಸಭೆಯಲ್ಲಿ ಅಂತಿಮ ನಿರ್ಧಾರ ಪ್ರಕಟಿಸುವ ಸಾಧ್ಯತೆಯಿದೆ. ಎರಡು ದಿನ ನಿಗದಿಯಾಗಿರುವ ಸಭೆಯು ರಾಜಸ್ಥಾನದ ಜೈಸಲ್ಮೇರ್ ಅಥವಾ ಜೋಧಪುರದಲ್ಲಿ ನಡೆಯುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ.

ಕೈಗಾರಿಕಾ ಉತ್ಪಾದನೆ ಹೆಚ್ಚಳ

ನವದೆಹಲಿ (ಪಿಟಿಐ): ತಯಾರಿಕಾ ವಲಯದ ಉತ್ಪನ್ನಗಳಲ್ಲಿ ಹೆಚ್ಚಿದ ಬೇಡಿಕೆಯಿಂದಾಗಿ ಸೆಪ್ಟೆಂಬರ್ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 3.1ರಷ್ಟು ಏರಿಕೆಯಾಗಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು 2023ರ ಸೆಪ್ಟೆಂಬರ್‌ನಲ್ಲಿ ಶೇ 6.4ರಷ್ಟು ದಾಖಲಾಗಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಂಗಳವಾರ ತಿಳಿಸಿದೆ.

ಗಣಿಗಾರಿಕೆ ಶೇ 0.2ರಷ್ಟು, ತಯಾರಿಕಾ ಶೇ 3.9ರಷ್ಟು ಮತ್ತು ವಿದ್ಯುತ್ ವಲಯದ ಬೆಳವಣಿಗೆಯು ಶೇ 0.5ರಷ್ಟು ದಾಖಲಾಗಿದೆ ಎಂದು ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಐಐಪಿ ಬೆಳವಣಿಗೆಯು ಶೇ 4ರಷ್ಟು ಆಗಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 6.2ರಷ್ಟಿತ್ತು ಎಂದು ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಶಿವಮೊಗ್ಗ		ಶಿರಸಿ	
ಕೋಕ	20000-27500	ಬೆಟ್ಟೆ	43152-57310	ಬೆಟ್ಟೆ	29299-38609
ಹಳತು	42000-50000	ಗೊರಬಲು	17500-32089	ಬಿಳಿಗೋಟು	20786-30018
ಕಾರ್ಕಳ		ಹೊಸತು	39069-49299	ಚಾಲಿ	33018-36171
ಹಳತು	30000-42000	ರಾಶಿ	33899-49559	ಕೆಂಪುಗೋಟು	16899-27699
ಪುತ್ತೂರು		ಸರಕು	47000-83163	ರಾಶಿ	40099-44709
ಹೊಸತು	28000-33000	**ಸಿದ್ದಾಪುರ**		**ಯಲ್ಲಾಪುರ**	
ಹಳತು	32000-50000	ಬಿಳಿಗೋಟು	23899-31089	ಬಿಳಿಗೋಟು	16899-29509
ಸಾಗರ		ಚಾಲಿ	30699-35159	ಚಾಲಿ	29599-35899
ಬಿಳಿಗೋಟು	17421-24199	ಕೋಕ	19019-24299	ಕೋಕ	6320-18899
ಚಾಲಿ	26214-32299	ಕೆಂಪುಗೋಟು	21399-21900	ಕೆಂಪುಗೋಟು	16010-25199
ಕೋಕ	18114-24584	ರಾಶಿ	40699-45899	ರಾಶಿ	39269-56615
ಕೆಂಪುಗೋಟು	26280-29089			ತಟ್ಟಿಬೆಟ್ಟೆ	26099-35009
ರಾಶಿ	43019-48359				
ಸಿಪ್ಪೆಗೋಟು	15369-16189				

ಸರ್ಕಾರದ ನಿಯಮ ಪಾಲಿಸಿದರಷ್ಟೇ ಸ್ಟಾರ್‌ಲಿಂಕ್‌ಗೆ ಪರವಾನಗಿ: ಸಿಂಧಿಯಾ



ನವದೆಹಲಿ (ಪಿಟಿಐ): 'ದೇಶದ ಭದ್ರತೆ ಹಾಗೂ ದೂರಸಂಪರ್ಕ ಸೇವೆಗೆ ಸಂಬಂಧಿಸಿದ ನಿಯಮಾವಳಿಗಳನ್ನು ಪಾಲನೆ ಮಾಡಿದರಷ್ಟೇ ಭಾರತದಲ್ಲಿ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಒದಗಿಸಲು ಸ್ಟಾರ್‌ಲಿಂಕ್‌ನ ಕಾರ್ಯಾಚರಣೆಗೆ ಸರ್ಕಾರ ಪರವಾನಗಿ ನೀಡಲಿದೆ' ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟಪಡಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಾರತದಲ್ಲಿ ಪರವಾನಗಿ ಪಡೆಯಲು ಟೆಸ್ಲಾ ಮುಖ್ಯಸ್ಥ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಹಲವು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಉಪಗ್ರಹ ಆಧಾರಿತ ಜಾಗತಿಕ ಮೊಬೈಲ್ ಸಂವಹನಕ್ಕಾಗಿ ಪರವಾನಗಿ ಕೋರಿ 2022ರ ಅಕ್ಟೋಬರ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಅಲ್ಲದೆ, ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್ ಕಂಪನಿಯು ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರಕ್ಕೂ ಅರ್ಜಿ ಸಲ್ಲಿಸಿದೆ' ಎಂದರು.

'ಈ ಅರ್ಜಿಗಳ ಪರಿಶೀಲನೆ ನಡೆಯುತ್ತಿದೆ' ಎಂದರು.

2025ರಿಂದ ಹೊಸ ನಿಯಮ: 2025ರ ಏಪ್ರಿಲ್‌ನಿಂದ ತಳಮಟ್ಟದಲ್ಲಿ ಗ್ರಾಹಕರಿಗೆ ಗುಣಮಟ್ಟದ ದೂರ ಸಂಪರ್ಕ ಸೇವೆ ಒದಗಿಸುವ ಸಂಬಂಧ ಹೊಸ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಸಚಿವರು ತಿಳಿಸಿದರು.

ಈ ನಿಯಮಾವಳಿ ಅನ್ವಯ ಟೆಲಿಕಾಂ ಕಂಪನಿಗಳು ತಮ್ಮ ವೆಬ್‌ಸೈಟ್‌ಗಳಲ್ಲಿ 2ಜಿ, 3ಜಿ, 4ಜಿ ಮತ್ತು 5ಜಿ ಸೇವೆಯ ನೆಟ್‌ವರ್ಕ್‌ಗಳ ನಕ್ಷೆ ಬಗ್ಗೆ ಪ್ರದರ್ಶಿಸಬೇಕಿದೆ. ಈ ಬಗ್ಗೆ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದರು.

ಮುಂಬೈ ಧಾರಣೆ

ಶೇಂಗಾ

12-11-2024

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9200-9300
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1560)
ಒಂದು ವಾರದ ಡೆಲಿವರಿ	1575 (1555)
ಪಾಮ್ ವಾರದ ಡೆಲಿವರಿ	1398 (1413)
ಸೂರ್ಯಕಾಂತಿ ಎಣ್ಣೆ ಕಚ್ಚಾ	1365 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹74,750 (76,500)

ಬೆಳ್ಳಿ ಕೆ.ಜಿ ₹88,500 (90,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹13500-14660
ಮಧುಗಿರಿ	₹10000-12500

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1570 (1550)
ಸೋಯಾ (ರಿಫೈನ್ಡ್)	₹1380 (1390)
ಸೂರ್ಯಕಾಂತಿ (ರಿಫೈನ್ಡ್)	₹1420 (1420)
ಪಾಮೋಲಿನ್	₹1400 (1415)

ವಿನಿಮಯ ದರ

$ ಡಾಲರ್	84.39
£ ಪೌಂಡ್	108.25
€ ಯುರೊ	89.70
¥ ಯೆನ್ (100ಕ್ಕೆ)	55

ಸೆನ್ಸೆಕ್ಸ್, ನಿಫ್ಟಿ ಶೇ 1ರಷ್ಟು ಕುಸಿತ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳದಿಂದಾಗಿ ಮಂಗಳವಾರ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಜೋರಾಗಿದ್ದು, ಸೂಚ್ಯಂಕಗಳು ಶೇ 1ರಷ್ಟು ಕುಸಿತ ಕಂಡಿವೆ. ಹೂಡಿಕೆದಾರರ ಸಂಪತ್ತು ₹5.29 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 820 ಅಂಶ ಇಳಿಕೆ ಕಂಡು, 78,675 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 257 ಅಂಶ ಇಳಿಕೆ ಕಂಡು, 23,883 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎನ್‌ಟಿಪಿಸಿ, ಏಷ್ಯನ್ ಪೇಂಟ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಾಟಾ ಮೋಟರ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಮಾರುತಿ ಮತ್ತು ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಸನ್ ಫಾರ್ಮಾ, ಇನ್ಫೊಸಿಸ್, ಐಸಿಐಸಿಐ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಸೋಮವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,306 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕವಿತಾ, ಬೆಳಗಾವಿ.

- **ಪ್ರಶ್ನೆ: ನಾನು ಪ್ರಸಾಧನ ತಜ್ಞೆಯಾಗಿ ಕೆಲಸ ಮಾಡುತ್ತಿದ್ದೇನೆ. ನಿಯಮಿತವಾಗಿ ಹಾಗೂ ಕೆಲವೊಮ್ಮೆ ದೊಡ್ಡ ಮೊತ್ತದ ಹಣವನ್ನು ಹೂಡಿಕೆ ಮಾಡಲು ಸುರಕ್ಷಿತ ಹಾಗೂ ಸ್ವಲ್ಪವಾದರೂ ಹಣದುಬ್ಬರ ಮೀರಿ ಬೆಳೆಯಬಲ್ಲ ಹೂಡಿಕೆ ಕುರಿತ ಉತ್ತಮ ಆಯ್ಕೆ ಬಗ್ಗೆ ತಿಳಿಸಿ.**

ಉತ್ತರ: ನಿಮ್ಮ ಹಣವನ್ನು ನಿಯಮಿತವಾಗಿ ಅಥವಾ ಏಕ ಕಂತಿನ ಮೂಲಕ ಹೂಡಿಕೆಗೆ ಯೋಜಿಸುವುದಾದರೆ ಹಾಗೂ ನಿರ್ದಿಷ್ಟವಾಗಿ ಹಣದುಬ್ಬರ ಮಟ್ಟವನ್ನು ಮೀರಿ ಬೆಳೆಯಬಲ್ಲ ಹೂಡಿಕೆಗಳಾಗಬೇಕೆಂದರೆ ಈಕ್ವಿಟಿ, ಚಿನ್ನ ಅಥವಾ ಈಕ್ವಿಟಿ ವಿಭಾಗದ ಹೂಡಿಕೆ ಆಗಿರಬೇಕು. ಉದಾಹರಣೆಗೆ ಈಕ್ವಿಟಿ ಷೇರು, ಚಿನ್ನದ ಬಾಂಡ್ ಅಥವಾ ಫಂಡ್ ಅಥವಾ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗಳಿಂದ ಮಾತ್ರ ಈ ಗುರಿ ಸಾಧ್ಯ.

ಆದರೆ, ಇವುಗಳ ಸುರಕ್ಷತೆ ಅಲ್ಪಾವಧಿಗಿಂತ ದೀರ್ಘಾವಧಿ ಹೂಡಿಕೆಯಲ್ಲಿ ಹೆಚ್ಚಾಗಿ ಗೋಚರವಾಗುತ್ತದೆ. ಇನ್ನೂ ಹೇಳುವುದಾದರೆ ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಇಂಡೆಕ್ಸ್ ಫಂಡ್‌ಗಳೂ ನಿಮಗೆ ಉತ್ತಮ ಆಯ್ಕೆ ಆಗಬಹುದು. ಹೂಡಿಕೆಯ ಮೊದಲು ನಿಮ್ಮ ಆಯ್ಕೆ ಸರಿಯಾದ ಕಂಪನಿ ಅಥವಾ ಉತ್ತಮ ಫಂಡ್‌ಗಳಲ್ಲಿದೆಯೇ ಎಂಬುದನ್ನು ಪರಾಮರ್ಶಿಸಿ ಮುಂದುವರಿಯಿರಿ.

ರಾಜಶ್ರೀ, ವಿಟ್ಲ, ದಕ್ಷಿಣ ಕನ್ನಡ ಜಿಲ್ಲೆ.

- **ಪ್ರಶ್ನೆ: ನಾನು ಶಿಕ್ಷಕಿಯಾಗಿದ್ದು, ಗ್ರಾಮೀಣ ಭಾಗದಲ್ಲಿ ನೆಲಸಿದ್ದೇನೆ. ಇಬ್ಬರು ಮಕ್ಕಳ ತಾಯಿಯಾಗಿ ಹಾಗೂ ಮನೆಯ ಅಗತ್ಯ ವೆಚ್ಚಗಳನ್ನು ಭರಿಸಿ ಉಳಿದ ಮೊತ್ತವನ್ನು ಉಳಿತಾಯ ಮಾಡುತ್ತಿದ್ದೇನೆ. ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಅವರಲ್ಲಿ ಉಳಿತಾಯದ ಬಗ್ಗೆ ನಾವು ಹೇಗೆ ತಿಳಿವಳಿಕೆ ನೀಡಬಹುದು ಅಥವಾ ಅವರಿಗಾಗಿ ನಾವೇನು ಮಾರ್ಗದರ್ಶನ ಮಾಡಬಹುದು. ಕೆಲವೊಮ್ಮೆ ನಾವು ಕೊಡುವ ಹಣವನ್ನು ದುಂದುವೆಚ್ಚ ಮಾಡದ ರೀತಿ ಅವರಿಗೆ ಯಾವ ರೀತಿ ತಿಳಿ ಹೇಳಬಹುದು ಎಂಬ ಬಗ್ಗೆ ತಿಳಿಸಿ.**

ಉತ್ತರ: ಇಂದಿನ ದಿನಗಳಲ್ಲಿ ಮಕ್ಕಳ ಕೈಯಲ್ಲಿ ಅನಿವಾರ್ಯವಾಗಿ ಹಣ ನೀಡಬೇಕಾದ ಪರಿಸ್ಥಿತಿ ಇದ್ದಾಗ ಅದನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಇರುವ ವ್ಯವಸ್ಥೆಯಲ್ಲಿ ನಾವು ಅವರಿಗೆ ಸರಿಯಾಗಿ ತಿಳಿವಳಿಕೆ ನೀಡಿ ಹಣವನ್ನು ಅನಿವಾರ್ಯ ಸಂದರ್ಭದಲ್ಲಿ ಉಪಯೋಗಿಸುವುದು ಹಾಗೂ ಅದರ ಮಹತ್ವವನ್ನು ಸೂಕ್ತವಾಗಿ ತಿಳಿಸಿ ಹೇಳಬಹುದು.

ವಿದ್ಯಾರ್ಥಿಗಳು ತಮ್ಮ ಶಾಲೆ ಮತ್ತು ಕಾಲೇಜು ದಿನಗಳಲ್ಲಿ ಹಣಕಾಸು ಯೋಜನೆ ಮತ್ತು ಉಳಿತಾಯ ಅಥವಾ ಹೂಡಿಕೆ ಕುರಿತು ಜಾಗೃತಿ ಹೊಂದಬೇಕಾಗುವುದು ಮುಖ್ಯವಾಗಿದೆ. ಪ್ರಾರಂಭಿಕ ಹಂತದಲ್ಲಿ ಹಣಕಾಸಿನ ರಕ್ಷಣೆ, ಬಡ್ಡಿದರ, ಹೂಡಿಕೆಯ ವಿವಿಧ ಮಾರ್ಗಗಳು, ದೀರ್ಘಾವಧಿಯಲ್ಲಿ ಸಂಚಯವಾಗುವ ಬಡ್ಡಿ ಅಥವಾ ಹೂಡಿಕೆಯ ಸಂಚಿತ ಆದಾಯ ಇತ್ಯಾದಿ ಕುರಿತು ಅವರಿಗೆ ಅರ್ಥ ಮಾಡಿಕೊಡಬೇಕು. ಅವರು ಭವಿಷ್ಯದ ಆರ್ಥಿಕ ನೆಲೆಯಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ನೆರವಾಗುವ ಮಾಹಿತಿ ನೀಡಬೇಕು.

ಹೂಡಿಕೆ ಮತ್ತು ಹಣಕಾಸು ಜಾಗೃತಿಯು ವಿವಿಧ ಹೂಡಿಕೆಯ ಅವಕಾಶಗಳಾದ ಷೇರು ಮಾರುಕಟ್ಟೆ, ನಿಶ್ಚಿತ ಠೇವಣಿ (ಫಿಕ್ಸೆಡ್ ಡೆಪಾಸಿಟ್), ಬಾಂಡ್, ಮ್ಯೂಚುವಲ್ ಫಂಡ್, ಸ್ಥಿರಾಸ್ತಿ ಮತ್ತು ಇತರೆ ಉಳಿತಾಯದ ಅವಶ್ಯಕತೆ ಬಗ್ಗೆ ತಿಳಿಯುವಲ್ಲಿ ಇದು ಅವರಿಗೆ ನೆರವಾಗುತ್ತದೆ. ಇಂತಹ ಜಾಗೃತಿಯು ಯುವಜನರಿಗೆ ಕೇವಲ ಉಳಿತಾಯದ ಮಹತ್ವವನ್ನು ಮಾತ್ರವಲ್ಲ, ಬಡ್ಡಿ ಮತ್ತು ವಿವಿಧ ಬಗೆಯ ಹೂಡಿಕೆಗಳಲ್ಲಿ ಹಣ ಹೂಡುವುದರಿಂದ ಉಂಟಾಗುವ ನಷ್ಟ ಮತ್ತು ಲಾಭ ಎರಡನ್ನೂ ಕಾರಣ ಸಹಿತ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಯುವಜನರಲ್ಲಿ ಶಾಲೆ ಮತ್ತು ಕಾಲೇಜು ದಿನಗಳಲ್ಲಿ ಹೂಡಿಕೆ ಮತ್ತು ಉಳಿತಾಯದ ಅಭ್ಯಾಸವನ್ನು ಬೆಳೆಸುವುದು ಪಾಲಕರ ವಿಶ್ವಾಸ ವೃದ್ಧಿಸುವಂತೆ ಮಾಡುತ್ತದೆ. ಅಲ್ಲದೆ, ತಮ್ಮ ಭವಿಷ್ಯದ ಆರ್ಥಿಕ ಸ್ಥಿರತೆಗೆ ಒಂದು ಆಧಾರವಾಗಬಲ್ಲದು. ಉದಾಹರಣೆಗೆ ಪದೇ ಪದೇ ಮಾಡುವ ಮನೋರಂಜನಾ ವೆಚ್ಚ, ಅರ್ಹತೆ ಹಾಗೂ ಅನಿವಾರ್ಯತೆಗಿಂತ ಅಧಿಕ ಮಟ್ಟದ ವಿಲಾಸಿ ಬದುಕಿನ ವ್ಯಾಮೋಹ, ನಮ್ಮ ಆರ್ಥಿಕ ಕ್ಷಮತೆ ವೃದ್ಧಿಸುವ ಸಾಮರ್ಥ್ಯವನ್ನು ತಡೆಯುತ್ತದೆ. ಈ ಬಗ್ಗೆ ಪಠ್ಯಕ್ರಮವನ್ನು ಮೀರಿದ ನಿತ್ಯದ ಬದುಕಿಗೆ ಬೇಕಾದ ಜ್ಞಾನದ ಹಂಚಿಕೆಯ ಅರಿವು ಮೂಡಿಸುವ ಜವಾಬ್ದಾರಿ ಹಾಗೂ ಅನಿವಾರ್ಯತೆ ಇಂದು ಪೋಷಕರಿಗೂ, ಶಾಲಾ ಕಾಲೇಜುಗಳಿಗೂ ಇದೆ.

ಈ ನಿಟ್ಟಿನಲ್ಲಿ ಕೆಲವು ಪರಿಣಾಮಕಾರಿ ಹೂಡಿಕೆ ಮತ್ತು ಉಳಿತಾಯದ ವಿಧಾನಗಳು ಹೀಗಿವೆ.

- **ಸರಳ ಉಳಿತಾಯದಿಂದ ಪ್ರಾರಂಭಿಸಿ:** ಮಕ್ಕಳಿಗೆ ನಿಮ್ಮ ಒಂದು 'ಪಿಗ್ಗಿ ಬ್ಯಾಂಕ್' ಕೊಟ್ಟು ಪ್ರತಿದಿನ ಅದರಲ್ಲಿ ಅವರ ಕೈಯಿಂದ ಹಣ ಉಳಿತಾಯಕ್ಕೆ ಪ್ರೇರಣೆ ನೀಡಿ. ಅದಕ್ಕಾಗಿ ನಾಣ್ಯಗಳನ್ನೋ, ಹೊಸ ನೋಟುಗಳನ್ನೋ ಸಂಗ್ರಹಿಸಿ ಕೊಡಿ. ಸಂಗ್ರಹವಾದ ಮೊತ್ತವನ್ನು ಯಾವುದಾದರೂ ಉತ್ತಮ ಅಗತ್ಯಕ್ಕೆ ಉಪಯೋಗಿಸುವ ಭರವಸೆ ನೀಡಿ ಈಡೇರಿಸಿ.
- **ಬ್ಯಾಂಕ್ ಖಾತೆ ತೆರೆಯಿರಿ:** ಮಕ್ಕಳ ಹೆಸರಲ್ಲಿ, ನಿಮ್ಮ ಸುಪರ್ದಿನಲ್ಲಿ ಬ್ಯಾಂಕ್ ಖಾತೆ ತೆರೆಸಿ. ಅವಕಾಶ ಇದ್ದಾಗ ನಿಮ್ಮೊಂದಿಗೆ ಅವರನ್ನೂ ಬ್ಯಾಂಕ್‌ಗೆ ಕರೆದುಕೊಂಡು ಹೋಗಿ ವಿವಿಧ ರೀತಿಯ ವ್ಯವಹಾರಗಳ ಬಗ್ಗೆ ತೋರಿಸಿ ತಿಳಿ ಹೇಳಿ. ಇದು ಅವರ ಯೋಚನೆಯಲ್ಲಿ ಹೊಸ ಬದಲಾವಣೆ ತರಬಲ್ಲದು. ಅದೇ ರೀತಿ ಅವರು 18 ವರ್ಷ ತುಂಬುವ ತನಕ ಮಾಹಿತಿ ನೀಡುತ್ತಾ ಮುಂದುವರಿಯಿರಿ, ಮುಂದೆಯೂ ಮಾರ್ಗದರ್ಶನ ನೀಡಿ.
- **ತುರ್ತು ನಿಧಿ:** ತುರ್ತು ನಿಧಿ ನಿರ್ಮಿಸುವುದು ಮನೆಯ ನಿಮ್ಮ ಮಕ್ಕಳಿಗೂ ತಿಳಿದಿರಲಿ. ನಿತ್ಯ ಉಪಯೋಗಕ್ಕಷ್ಟೇ ಅಲ್ಲದೆ ವೇತನದ ಸ್ವಲ್ಪ ಭಾಗವನ್ನು ಉಳಿಸುವುದು ಅನಿರೀಕ್ಷಿತ ಖರ್ಚುಗಳನ್ನು ನಿಭಾಯಿಸಲು ಮತ್ತು ಸಾಲದ ಅವಶ್ಯಕತೆಯನ್ನು ಕಡಿಮೆ ಮಾಡಲು ಸಹಾಯಕವಾಗಿದೆ. ಈ ನಿಧಿಯ ಮಹತ್ವ ಕುರಿತು ಅವರಿಗೆ ತಿಳಿಸಿ. ಉದಾಹರಣೆಗೆ ಅನಿರೀಕ್ಷಿತವಾಗಿ ಬರುವ ಆರೋಗ್ಯ ವೆಚ್ಚ, ಉನ್ನತ ಶಿಕ್ಷಣ, ಹೆಚ್ಚುವರಿ ಲಾಭಕ್ಕಾಗಿನ ಹೂಡಿಕೆ, ಮಕ್ಕಳ ಮದುವೆ ಇತ್ಯಾದಿ ಖರ್ಚಿನ ನಿರ್ವಹಣೆ ಬಗ್ಗೆ ಮಾಹಿತಿ ನೀಡಿ.
- **ಮಾಸಿಕ ಖರ್ಚು ಆದಾಯ:** ದೇಶದ ಬಜೆಟ್ ಇದ್ದಂತೆ ಮನೆಗೊಂದು ಬಜೆಟ್ ಇಟ್ಟುಕೊಳ್ಳುವುದು, ಖರ್ಚು ನಿಯಂತ್ರಿಸಲು ಮತ್ತು ಹೆಚ್ಚುವರಿ ಹಣವನ್ನು ಉಳಿಸಲು ಸಹಾಯ ಮಾಡುತ್ತದೆ. ಇದು ಎಲ್ಲರ ಆದಾಯ, ಅನಿವಾರ್ಯದ ಖರ್ಚು ಅಂದಾಜಿಸಿ ಸಂಕಲಿಸಿದ್ದಾಗಿರಲಿ. ಅಗತ್ಯಕ್ಕೆ ತಕ್ಕಂತೆ ಮಕ್ಕಳನ್ನೂ ಇದರಲ್ಲಿ ಭಾಗಿಯಾಗಿಸಿ.
- **ಹೂಡಿಕೆಗಳು:** ನೀವು ಷೇರು, ಮ್ಯೂಚುವಲ್ ಫಂಡ್, ಇನ್ಶೂರೆನ್ಸ್, ಪಿಪಿಎಫ್ ಇತ್ಯಾದಿ ಉತ್ಪನ್ನದ ವಿಚಾರಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ ಮಕ್ಕಳನ್ನೂ ಒಳಗೊಂಡು ಹೂಡಿಕೆ ಮಾಡುವ ಬಗ್ಗೆ ಇರುವ ನಿಮ್ಮ ಅಭಿಪ್ರಾಯವನ್ನು ಮನನ ಮಾಡಿಸಿ. ದೀರ್ಘಾವಧಿಯಲ್ಲಿ ಅದರ ವಾರಸುದಾರರು ಅವರೇ ಆಗಿರುತ್ತಾರೆ. ಅದರೊಡನೆ ಲಾಭ- ನಷ್ಟದ ಪರಿಣಾಮ, ಆರ್ಥಿಕ ವಂಚನೆ, ಅಪಾಯ ಇತ್ಯಾದಿ ಬಗ್ಗೆಯೂ ತಿಳಿಸಿ. ಅದಕ್ಕಾಗಿ ನಮ್ಮೆದುರು ಕಾಣುವ ದೃಷ್ಟಾಂತ ಉದಾಹರಣೆಯನ್ನೇ ಕೊಡಬಹುದು.
- **ಹಣಕಾಸಿನ ಬಗ್ಗೆ ಜಾಗೃತಿ ಮಾಹಿತಿ:** ನಮಗರಿವಿಲ್ಲದ ಅನೇಕ ಮಾಹಿತಿ, ಹಣಕಾಸಿನ ಬಗ್ಗೆ ಇರುವ ಪುಸ್ತಕಗಳ ಮೂಲಕ ಆನ್‌ಲೈನ್ ತರಗತಿ- ಮಾರ್ಗದರ್ಶನದ ಮೂಲಕ ಪಡೆಯುವಂತೆ ಹಾಗೂ ವಿಶೇಷ ಜ್ಞಾನವನ್ನು ಬೆಳೆಸುವಂತೆ ಅನುಕೂಲ ಮಾಡಿಕೊಡಿ.

ಈ ಎಲ್ಲ ವಿಧಾನಗಳು ಯುವಜನರಿಗೆ ಭವಿಷ್ಯದ ಆರ್ಥಿಕ ಸುಸ್ಥಿರತೆ, ಶಿಸ್ತಿನ ಹೂಡಿಕೆ, ಆರ್ಥಿಕ ಸಂಸ್ಕೃತಿ ರೂಪಿಸುವಲ್ಲಿ ಮತ್ತು ಆರ್ಥಿಕ ಸ್ವಾಯತ್ತತೆ ಸಾಧಿಸಲು ದೀರ್ಘಾವಧಿಯಲ್ಲಿ ನೆರವಾಗಬಹುದು. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 13,000- 17,000. 8951315839, 9141634619

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಭೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕು ಹೆಚ್ಚು ಸಂಪಾದಿಸಿ ತರಭೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

ಲೇಡೀಸ್ ಮತ್ತು ಜೆಂಟ್ಸ್ ಬ್ಯೂಟಿ ಪಾರ್ಲರ್ ನಲ್ಲಿ, ಬ್ಯೂಟಿಷಿಯನಗಳಿಗೆ ಮತ್ತು ಹೆಲ್ಪರಗಳಿಗೆ ಕೆಲಸ ಖಾಲಿಇದೆ. ತಿಂಗಳಿಗೆ ಸಂಬಳ 20 ರಿಂದ 25 ಸಾವಿರದವರೆಗೆ. ಶೇಷಾದ್ರಿಪುರ-9019626612

ಬೆಂಗಳೂರಿನಲ್ಲಿ ಡ್ರೈ ಕ್ಲೀನಿಂಗ್ ಶೋರೂಮ್‌ಗೆ ಶಾಪ್ ಸಹಾಯಕರು ಬೇಕಾಗಿದ್ದಾರೆ: ಕೆಲಸದ ಸಮಯ: ಬೆಳಗ್ಗೆ 9:30 ರಾತ್ರಿ 9.00 ಗಂಟೆಯವರೆಗೆ (ಸೋಮವಾರ ದಿಂದ ಶನಿವಾರ) ಸಂಬಳ: 15,000/- ಸ್ಥಳ: ಜಯನಗರ, ಹುಳಿಮಾವು ಮತ್ತು ಗಾಂಧಿಬಜಾರ್, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ: 8050666007

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಕಿ ಜನಾಂಗದ 12ನೇ ತಲೆಮಾರಿನ 50ವರ್ಷ ಅನುಭವದ 35,000ಕ್ಕೂ ಹೆಚ್ಚು ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಶ್ರೀ.ದೇವಾನಂದ್.ನಿಮ್ಮೆಲ್ಲಾ ಕಷ್ಟಗಳಿಗೆ ಎಲ್ಲಿಲ್ಲದ_ಮುಕ್ತಿ, ಕಾಮಾಕ್ಯ_ಮೋಡಿವಶೀಕರಣ ಯಂತ್ರಕ್ಕೆ ರೂ.2300.ಪ್ರಾಚೀನ ಆಯುರ್ವೇದ ತೂಕ ಇಳಿಕೆ,ಹಸಿವು,ಲೈಂಗಿಕತೆ. 9353143216

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಇತರೆ

For Sale

FOR SALE Bath soap factory with licence contact. 7349067147

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI
ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಸಂಕ್ಷಿಪ್ತ ಸುದ್ದಿ

ಗಾಜಾ ಮೇಲೆ ಇಸ್ರೇಲ್ ದಾಳಿ: 14 ಮಂದಿ ಸಾವು

ಜೆರುಸಲೇಂ (ಎಪಿ): ಗಾಜಾದಲ್ಲಿ ಇಸ್ರೇಲ್ ನಡೆಸಿದ ಎರಡು ಪ್ರತ್ಯೇಕ ದಾಳಿಗಳಲ್ಲಿ ಇಬ್ಬರು ಮಕ್ಕಳು ಸೇರಿ ಕನಿಷ್ಠ 14 ಮಂದಿ ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಖಾನ್ ಯೂನಿಸ್‌ನಲ್ಲಿ ನಿರಾಶ್ರಿತರ ಪುನರ್ವಸತಿಗಾಗಿ ಮೀಸಲಿರುವ ಸ್ಥಳದ ಕೆಫೆಟೇರಿಯಾದ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 11 ಮಂದಿ ಮೃತಪಟ್ಟಿದ್ದಾರೆ ಎಂದು ನಾಸಿರ್ ಆಸ್ಪತ್ರೆ ಅಧಿಕಾರಿಗಳು ತಿಳಿಸಿದ್ದಾರೆ. ಇನ್ನೊಂದೆಡೆ, ಕೇಂದ್ರ ಗಾಜಾದಲ್ಲಿರುವ ನಸೀರತ್ ನಿರಾಶ್ರಿತರ ಶಿಬಿರದ ಮೇಲೆ ನಡೆಸಿದ ದಾಳಿ ಪರಿಣಾಮ ಮಹಿಳೆ ಸೇರಿ ಮೂವರು ಮೃತಪಟ್ಟಿದ್ದಾರೆ ಎಂದು ಅಲ್–ಅವದಾ ಆಸ್ಪತ್ರೆ ತಿಳಿಸಿದೆ.

ಒಟ್ಟಾವಾ: ಪ್ರತಿಭಟನೆ ಎಚ್ಚರಿಕೆ - ಕಾನ್ಸಲೇಟ್ ಕಾರ್ಯಕ್ರಮ ರದ್ದು

ಒಟ್ಟಾವಾ (ಪಿಟಿಐ): ಹಿಂಸಾಚಾರಕ್ಕೆ ಎಡೆಮಾಡಿಕೊಡುವಂತಹ ಪ್ರತಿಭಟನೆ ನಡೆಯುವ ಸಾಧ್ಯತೆಗಳಿವೆ ಎಂದು ಕೆನಡಾದ ಪೊಲೀಸರು ಎಚ್ಚರಿಕೆ ನೀಡಿದ್ದರಿಂದಾಗಿ ಇಲ್ಲಿನ ಬ್ರಾಂಪ್ಟನ್ ತ್ರಿವೇಣಿ ದೇಗುಲದಲ್ಲಿ ನಡೆಯಬೇಕಿದ್ದ ಕಾರ್ಯಕ್ರಮವನ್ನು ಭಾರತದ ಕಾನ್ಸಲೇಟ್ ರದ್ದುಪಡಿಸಿದೆ. ಪಿಂಚಣಿ ಉದ್ದೇಶಕ್ಕಾಗಿ ಜೀವಿತಾವಧಿ ಪ್ರಮಾಣಪತ್ರ ನೀಡುವ ಶಿಬಿರವನ್ನು ದೇವಸ್ಥಾನದ ಆವರಣದಲ್ಲಿ ನವೆಂಬರ್ 17ರಂದು ಏರ್ಪಡಿಸಲು ಕಾನ್ಸಲೇಟ್ ನಿರ್ಧರಿಸಿತ್ತು.

ಪೊಲೀಸರ ಎಚ್ಚರಿಕೆ ಕಾರಣದಿಂದಾಗಿ ಕಾರ್ಯಕ್ರಮ ರದ್ದುಪಡಿಸಲಾಗಿದೆ. ದೇವಸ್ಥಾನಕ್ಕೆ ಬರುವ ಭಕ್ತರು, ಸಮುದಾಯದ ಜನರ ರಕ್ಷಣೆ, ಹಿತದೃಷ್ಟಿಯಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ದೇಗುಲದ ಆಡಳಿತವು ಹೇಳಿಕೆ ನೀಡಿದೆ.

'ಹಿಂದೂ ದೇವಸ್ಥಾನಕ್ಕೆ ಭೇಟಿ ನೀಡುವುದು ಸುರಕ್ಷಿತವಲ್ಲ ಎಂದು ಕೆನಡಿಯನ್ನರು ಭಾವಿಸುತ್ತಾರೆ ಎಂಬುದು ನಮಗೆ ಬೇಸರ ಉಂಟು ಮಾಡಿದೆ' ಎಂದೂ ಆಡಳಿತವು ಹೇಳಿದೆ.

ಅಮೆರಿಕ ವಿದೇಶಾಂಗ ಕಾರ್ಯದರ್ಶಿಯಾಗಿ ಮಾರ್ಕೊ ರುಬಿಯೊ?

ವಾಷಿಂಗ್ಟನ್ (ಪಿಟಿಐ): ವಿದೇಶಾಂಗ ಕಾರ್ಯದರ್ಶಿಯಾಗಿ ಸಂಸದ ಮಾರ್ಕೊ ರುಬಿಯೊ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಮೈಕ್ ವಾಟ್ಜ್ ಅವರನ್ನು ನೇಮಿಸಲು ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ತೀರ್ಮಾನಿಸಿದ್ದಾರೆ.

ಮೈಕೊ ರುಬಿಯೊ ಅವರು ಫ್ಲಾರಿಡಾದ ಸಂಸದರಾಗಿದ್ದು, ಭಾರತದ ಪರ ಸ್ನೇಹ ಧೋರಣೆ ಹೊಂದಿದ್ದಾರೆ. ಭಾರತ–ಅಮೆರಿಕ ಬಾಂಧವ್ಯ ಬಲಪಡಿಸಲು ಒತ್ತು ನೀಡಿದ್ದಾರೆ. 50 ವರ್ಷದ ವಾಟ್ಜ್ ಅವರು ಈ ಹಿಂದೆ ಭಾರತ ಮತ್ತು ಭಾರತೀಯ ಅಮೆರಿಕನ್ನರ ಸಂಸತ್ ಸಮಿತಿಯ ಸಹ ಅಧ್ಯಕ್ಷರಾಗಿ ಹಲವು ವರ್ಷ ಕಾರ್ಯನಿರ್ವಹಿಸಿದ್ದರು.

ಆಯಕಟ್ಟಿನ ಸ್ಥಾನಗಳಿಗೆ ಈ ಇಬ್ಬರನ್ನೂ ಆಯ್ಕೆ ಮಾಡಿರುವುದು ಟ್ರಂಪ್ ಅವರ ಎರಡನೇ ಅಧಿಕಾರಾವಧಿಯಲ್ಲಿ ಭಾರತ ಮತ್ತು ಅಮೆರಿಕ ನಡುವಣ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವುದರ ಸಂಕೇತ ಎಂದು ಹೇಳಲಾಗಿದೆ.

ವಿಶ್ವಸಂಸ್ಥೆ: 'ವಿಶ್ವಾಸಾರ್ಹತೆ ಕಾಪಾಡುವುದು ಅಗತ್ಯ'

ಪಿ. ಹರೀಶ್

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆಯ ನಿಯಾಮವಳಿಯ ಪರಿಷ್ಕರಣೆ ವಿಚಾರದಲ್ಲಿ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಭಾರತ, ಅನಗತ್ಯ ವಿಳಂಬದಿಂದ ಶಾಶ್ವತ ಸದಸ್ಯತ್ವ ವಿಸ್ತರಣೆಯು ತಕ್ಷಣಕ್ಕೆ ಸಾಧ್ಯವಾಗುವುದಿಲ್ಲ ಎಂದು ಪ್ರತಿಪಾದಿಸಿದೆ.

'ಭದ್ರತಾ ಮಂಡಳಿಯಲ್ಲಿ ಸದಸ್ಯತ್ವ ಸಂಖ್ಯೆ ಹೆಚ್ಚಳ ಹಾಗೂ ಸಮಾನ ಪ್ರಾತಿನಿಧ್ಯ' ಕುರಿತಾಗಿ ಮಂಗಳವಾರ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವಾರ್ಷಿಕ ಅಧಿವೇಶನದಲ್ಲಿ ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಪ್ರತಿನಿಧಿ ಪಿ.ಹರೀಶ್ ಈ ಬೇಡಿಕೆ ಮುಂದಿಟ್ಟರು.

'ಭದ್ರತಾ ಮಂಡಳಿಯಲ್ಲಿ ಸದಸ್ಯತ್ವ ವಿಸ್ತರಣೆಗೆ ತ್ವರಿತ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದ್ದು, 1965ರಿಂದಲೂ ಈ ವಿಚಾರದಲ್ಲಿ ಯಾವುದೇ ಫಲಿತಾಂಶಗಳು ಕಂಡುಬಂದಿಲ್ಲ. ಶಾಶ್ವತ ಸದಸ್ಯತ್ವಕ್ಕೆ ಹೊರತಾದ ವಿಭಾಗಗಳಲ್ಲಿ ಮಾತ್ರ ವಿಸ್ತರಣೆಯಾಗಿದೆ' ಎಂದರು.

'1965ರಲ್ಲಿ ಈ ವಿಭಾಗದಲ್ಲಿ ಸದಸ್ಯರ ಪ್ರಮಾಣವು ಆರು ಇತ್ತು. ಈಗ ಹತ್ತಕ್ಕೆ ಏರಿಕೆಯಾಗಿದೆಯಷ್ಟೆ' ಎಂದು ಇದೇ ವೇಳೆ ಉಲ್ಲೇಖಿಸಿದರು.

ಶಾಶ್ವತ ಸದಸ್ಯತ್ವದ ವಿಚಾರದಲ್ಲಿ 'ಅಂತರ ಸರ್ಕಾರಿ ಮಾತುಕತೆ' (ಐಜಿಎನ್) ಪ್ರಕ್ರಿಯೆಯನ್ನು ಪ್ರಸ್ತಾಪಿಸಿದ ಅವರು, 'ಆರಂಭಗೊಂಡ 16 ವರ್ಷಗಳಿಂದಲೂ ಕೇವಲ ಹೇಳಿಕೆ ನೀಡುವುದಕ್ಕಷ್ಟೇ ಈ ಪ್ರಕ್ರಿಯೆ ಸೀಮಿತಗೊಂಡಿದೆ. ಕಾಲಮಿತಿಯ ಒಳಗೆ ಯಾವುದೇ ಗುರಿ ನಿಗದಿಪಡಿಸದೇ, ಇನ್ನೊಬ್ಬರ ಮೇಲೆ ಹೊಣೆಗಾರಿಕೆ ವರ್ಗಾಯಿಸುವುದರಲ್ಲಿ ಕಾಲಹರಣ ಮಾಡಲಾಗುತ್ತಿದೆ' ಎಂದು ಹರೀಶ್ ಪ್ರತಿಪಾದಿಸಿದರು.

ಚೀನಾ: ಜನರ ಮೇಲೆ ಹರಿದ ಕಾರು: 35 ಸಾವು

ಬೀಜಿಂಗ್ (ಪಿಟಿಐ): ಚೀನಾದ ಝುಹೈ ನಗರದಲ್ಲಿ ನಾಗರಿಕರ ಮೇಲೆ ವ್ಯಕ್ತಿಯೊಬ್ಬರು ಕಾರು ಹತ್ತಿಸಿದ ಪರಿಣಾಮ 35 ಮಂದಿ ಮೃತಪಟ್ಟಿದ್ದು, 43 ಜನ ಗಾಯಗೊಂಡಿದ್ದಾರೆ.

ಸೋಮವಾರ ಬೆಳಿಗ್ಗೆ 7:48ಕ್ಕೆ ಘಟನೆ ನಡೆದಿದೆ. ಕ್ರೀಡಾ ಕೇಂದ್ರವೊಂದರಲ್ಲಿ ವ್ಯಾಯಾಮ ಮಾಡುತ್ತಿದ್ದ ನಾಗರಿಕರ ಮೇಲೆ ಫಾನ್(62) ಎಂಬುವವರು ಕಾರು ಹತ್ತಿಸಿದ್ದಾರೆ ಎಂದು ಝುಹೈನ ಸಾರ್ವಜನಿಕ ಭದ್ರತಾ ವಿಭಾಗ ತಿಳಿಸಿರುವುದಾಗಿ ಅಧಿಕೃತ ಸುದ್ದಿ ಸಂಸ್ಥೆ ಮಂಗಳವಾರ ವರದಿ ಮಾಡಿದೆ.

ಘಟನೆಯ ಬಳಿಕ ಕಾರು ಚಾಲಕನನ್ನು ಬಂಧಿಸಲಾಗಿದೆ. ಇದು ಅಪಘಾತವೋ ಅಥವಾ ಯೋಜಿತ ದಾಳಿಯೋ ಎನ್ನುವುದು ಖಚಿತವಾಗಿಲ್ಲ ಎಂದು ವರದಿಯಾಗಿದೆ.

ಗಾಯಗೊಂಡಿರುವವರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಮತ್ತು ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಚೀನಾದ ಅಧ್ಯಕ್ಷ ಷಿ–ಜಿನ್‌ಪಿಂಗ್ ಅವರು ಸೂಚನೆ ನೀಡಿದ್ದಾರೆ.

'ಜಾಗತಿಕ ದಕ್ಷಿಣ'ದ ದೇಶಗಳು ಬಿಡುಗಡೆ ಮಾಡಿರುವ ಸೂಚ್ಯಂಕದಲ್ಲಿ ಉಲ್ಲೇಖ

ಹವಾಮಾನ ಬದಲಾವಣೆ: ಜಿ20 ದೇಶಗಳ ಕ್ರಮ ಸಾಲದು

ಬಾಕು (ಅಜರ್‌ಬೈಜಾನ್) (ಪಿಟಿಐ): ಅಮೆರಿಕ, ಆಸ್ಟ್ರೇಲಿಯಾ, ಕೆನಡಾ, ಸೌದಿ ಅರೇಬಿಯಾ ಮತ್ತು ಟರ್ಕಿ ಸೇರಿದಂತೆ 'ಜಿ20' ಗುಂಪಿನ ಬಹುತೇಕ ಸದಸ್ಯ ದೇಶಗಳು ಹವಾಮಾನ ಕ್ರಿಯಾಯೋಜನೆಗಳನ್ನು ಗಣನೀಯವಾಗಿ ಹೆಚ್ಚಿಸುವ ಅಗತ್ಯವಿದೆ ಎಂಬುದನ್ನು ವಿಶ್ವಸಂಸ್ಥೆಯ ಹವಾಮಾನ ಮಾತುಕತೆ 'ಸಿಒಪಿ29' ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆ ಮಾಡಲಾದ ಹವಾಮಾನ ಉತ್ತರದಾಯಿತ್ವ ಸೂಚ್ಯಂಕವು ಹೇಳಿದೆ.

ಹವಾಮಾನ ಬದಲಾವಣೆಯ ವಿಚಾರವಾಗಿ ವಿವಿಧ ದೇಶಗಳ ಸಾಧನೆಯನ್ನು ವಿಶ್ಲೇಷಿಸುವ ಉದ್ದೇಶದಿಂದ ಪ್ರವರ್ಧಮಾನಕ್ಕೆ ಬರುತ್ತಿರುವ, ಅಭಿವೃದ್ಧಿ ಹೊಂದುತ್ತಿರುವ 'ಜಾಗತಿಕ ದಕ್ಷಿಣ'ದ ದೇಶಗಳು ಈ ವಿನೂತನ ಸೂಚ್ಯಂಕವನ್ನು ಸಿದ್ಧಪಡಿಸಿವೆ.

'ಜಾಗತಿಕ ದಕ್ಷಿಣ'ದ ಭಾರತ ಮತ್ತು ದಕ್ಷಿಣ ಆಫ್ರಿಕಾದಂತಹ ದೇಶಗಳು ಹವಾಮಾನ ಬದಲಾವಣೆಯನ್ನು ತಡೆಯುವ ದಿಸೆಯಲ್ಲಿ ಮಹತ್ವದ ಪ್ರಯತ್ನಗಳನ್ನು ಕೈಗೊಂಡಿವೆ ಎಂಬುದನ್ನು ಸೂಚ್ಯಂಕದಲ್ಲಿ ವಿವರಿಸಲಾಗಿದೆ. ಇದನ್ನು ನವದೆಹಲಿ ಮೂಲದ 'ಇಂಧನ, ಪರಿಸರ ಮತ್ತು ಜಲ ಮಂಡಳಿ' (ಸಿಇಇಡಬ್ಲ್ಯು) ಸಿದ್ಧಪಡಿಸಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭಾರತ ಮತ್ತು ದಕ್ಷಿಣ ಆಫ್ರಿಕಾದಂತಹ ದೇಶಗಳು ಪ್ರಮುಖ ಒಪ್ಪಂದಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿವೆ, ಅವು ತಮ್ಮ ಹೊಣೆಗಾರಿಕೆಗೆ ಬದ್ಧವಾಗಿ ನಡೆದುಕೊಂಡಿವೆ ಎಂದು ಇದರಲ್ಲಿ ಹೇಳಲಾಗಿದೆ.

ಅಜರ್‌ಬೈಜಾನ್ ದೇಶದ ರಾಜಧಾನಿಯಲ್ಲಿ 190ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಹವಾಮಾನ ಸಂಬಂಧಿ ಮಾತುಕತೆಯಲ್ಲಿ ಭಾಗಿಯಾಗಿದ್ದಾರೆ. 'ಮುಂದುವರಿದ ದೇಶಗಳು ತಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ಹಿಂದೆಬಿದ್ದಿವೆ' ಎಂದು ಸಿಇಇಡಬ್ಲ್ಯು ಸಂಸ್ಥೆಯ ಸಿಇಒ ಅರುನಭಾ ಘೋಷ್ ಹೇಳಿದ್ದಾರೆ.

'ಸಿಒಪಿ29 ಕಾರ್ಯಕ್ರಮವು ಉತ್ತರದಾಯಿತ್ವಕ್ಕೆ ಒತ್ತು ನೀಡಬೇಕು. ಅಭಿವೃದ್ಧಿ ಹೊಂದಿರುವ ದೇಶಗಳು ಇತಿಹಾಸದುದ್ದಕ್ಕೂ ಅತಿಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯಕಾರಕಗಳನ್ನು ಹೊರಸೂಸುವ ಕೆಲಸ ಮಾಡಿವೆ. ಅವು ಇಂಗಾಲದ ಹೊರಸೂಸುವಿಕೆಯನ್ನು ತಗ್ಗಿಸುವ ಕೆಲಸಕ್ಕೆ ವೇಗ ನೀಡಬೇಕು. ಇದರ ಜೊತೆಯಲ್ಲೇ, ಹವಾಮಾನ ಬದಲಾವಣೆಯನ್ನು ತಡೆಯುವ ಯತ್ನಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಒದಗಿಸಬೇಕು' ಎಂದು ಘೋಷ್ ಒತ್ತಾಯಿಸಿದ್ದಾರೆ.

ಮಾಲಿನ್ಯಕಾರಕಗಳನ್ನು ಹೊರಸೂಸುವಲ್ಲಿ ಮುಂಚೂಣಿಯಲ್ಲಿ ಇರುವ, ಮುಂದುವರಿದ ದೇಶಗಳಾದ ಅಮೆರಿಕ ಮತ್ತು ಕೆನಡಾ ಹವಾಮಾನ ಒಪ್ಪಂದದ ವಿಚಾರದಲ್ಲಿ ಸ್ಥಿರ ಧೋರಣೆ ತೋರಿಸುತ್ತಿಲ್ಲ. ಇದರಿಂದಾಗಿ ಈ ದೇಶಗಳ ಬದ್ಧತೆಯ ವಿಚಾರವಾಗಿ ಅನುಮಾನಗಳು ಮೂಡುತ್ತವೆ ಎಂದು ಸೂಚ್ಯಂಕವು ಹೇಳಿದೆ.

ವಿಶ್ವಸಂಸ್ಥೆಯ ವಾರ್ಷಿಕ ಹವಾಮಾನ ಮಾತುಕತೆಗೆ ಅಜರ್‌ಬೈಜಾನ್ ಆತಿಥ್ಯ ವಹಿಸಿರುವುದನ್ನು ಖಂಡಿಸಿ ಜಾರ್ಜಿಯಾದಲ್ಲಿ ಸೋಮವಾರ ನಡೆದ ರ‍್ಯಾಲಿಯಲ್ಲಿ ಗ್ರೆಟ್ಯಾ ಥನ್‌ಬರ್ಗ್ ಭಾಗಿಯಾಗಿದ್ದರು

ಎಎಫ್‌ಪಿ ಚಿತ್ರ

ಗ್ರೆಟ್ಯಾ ಥನ್‌ಬರ್ಗ್ ಪ್ರತಿಭಟನೆ

ಟುಬುಲೀಸೀ (ಜಾರ್ಜಿಯಾ) (ಎಪಿ): ವಿಶ್ವಸಂಸ್ಥೆಯ ವಾರ್ಷಿಕ ಹವಾಮಾನ ಮಾತುಕತೆಗೆ ಅಜರ್‌ಬೈಜಾನ್ ಆತಿಥ್ಯ ವಹಿಸಿರುವುದನ್ನು ಖಂಡಿಸಿ ಜಾರ್ಜಿಯಾದಲ್ಲಿ ಸೋಮವಾರ ನಡೆದ ರ‍್ಯಾಲಿಯಲ್ಲಿ ಗ್ರೆಟ್ಯಾ ಥನ್‌ಬರ್ಗ್ ಭಾಗಿಯಾಗಿದ್ದರು.

ಜಾರ್ಜಿಯಾ ದೇಶದ ರಾಜಧಾನಿ ಟುಬುಲೀಸೀಯಲ್ಲಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಥನ್‌ಬರ್ಗ್ ಹಾಗೂ ನೂರಾರು ಮಂದಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ಅಜುಬೈಜಾನ್ ದೇಶವು ದಮನಕಾರಿ ನೀತಿಗಳನ್ನು ಪಾಲಿಸುತ್ತಿರುವ ಕಾರಣ, ಹವಾಮಾನ ಮಾತುಕತೆಗೆ ಆತಿಥ್ಯ ವಹಿಸುವ ಅರ್ಹತೆ ಅದಕ್ಕೆ ಇಲ್ಲ ಎಂದು ಅವರು ಹೇಳಿದರು.

'ಸಿಒಪಿ29' ಹೆಸರಿನ ಹವಾಮಾನ ಮಾತುಕತೆಯು ಅಜರ್‌ಬೈಜಾನ್ ದೇಶದ ರಾಜಧಾನಿ ಬಾಕುವಿನಲ್ಲಿ ಸೋಮವಾರ ಶುರುವಾಗಿದೆ. ಈ ದೇಶವು ಜಗತ್ತಿನ ತೈಲ ಉತ್ಪಾದಕ ದೇಶಗಳ ಪೈಕಿ ಪ್ರಮುಖವಾಗಿದೆ. ಜಗತ್ತಿನ ಮೊದಲ ತೈಲ ಬಾವಿಯನ್ನು ಕೊರೆದಿದ್ದು ಇದೇ ದೇಶದಲ್ಲಿ.

'ಅಜರ್‌ಬೈಜಾನ್ ದೇಶವು ದಮನಕಾರಿಯಾಗಿದೆ, ಅದು ಜನಾಂಗೀಯ ನಿರ್ಮೂಲನೆಯ ಕೃತ್ಯ ಎಸಗಿದೆ' ಎಂದು ಗ್ರೆಟ್ಯಾ ದೂರಿದರು.

ನುಡಿ-ಕಿಡಿ

ನಿಮ್ಮನ್ನು ನಾಯಿಗಳು ಎಂದು ಕರೆಯುವ ಬಿಜೆಪಿಗೆ ಮತ ನೀಡುತ್ತೀರಾ ಎಂದು ಅಕೋಲಾ ಜಿಲ್ಲೆಯ ಒಬಿಸಿ ಜನರಲ್ಲಿ ಕೇಳಬಯಸುತ್ತೇನೆ. ಬಿಜೆಪಿಯನ್ನು ನಾಯಿಯಂತೆ ಮಾಡುವ ಸಮಯವೀಗ ಬಂದಿದೆ

ನಾನಾ ಪಟೋಲೆ, ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ

ಶರದ್ ಪವಾರ್ ಅವರು ಒಂದು ಹೇಳುತ್ತಾರೆ. ಉದ್ಧವ್ ಅವರು ಚುನಾವಣಾ ಆಯೋಗವನ್ನು ನಿಂದಿಸುತ್ತಾರೆ. ಕಾಂಗ್ರೆಸ್ ಪಕ್ಷವು ಈಗ ಬಿಜೆಪಿಯನ್ನು ನಾಯಿ ಎನ್ನುತ್ತಿದೆ. ರಾಜ್ಯದಲ್ಲಿ 'ಮಹಾಯುತಿ' ಸರ್ಕಾರ ರಚನೆಯಾಗಲಿದೆ ಎಂದು ಹಲವು ಸಮೀಕ್ಷೆಗಳು ಹೇಳುತ್ತಿವೆ. ಈ ಕಾರಣಕ್ಕಾಗಿಯೇ ಈ ರೀತಿ ಹೇಳಿಕೆಗಳನ್ನು ನೀಡಲಾಗುತ್ತಿದೆ

ಕಿರೀಟ್ ಸೋಮಯ್ಯ, ಬಿಜೆಪಿ ಮುಖಂಡ

ಸಮಾನತೆ, ಸಮೃದ್ಧಿ ಸಾಧಿಸಲು ಜನರಿಗೆ ನ್ಯಾಯ ಒದಗಿಸಲು ಐದು ಗ್ಯಾರಂಟಿಗಳನ್ನು ಕರ್ನಾಟಕದ ಜನರ ಮುಂದಿರಿಸಿ ಚುನಾವಣೆ ಎದುರಿಸಿದ್ದೆವು. ಸರ್ಕಾರ ರಚನೆಯಾದ ಬಳಿಕ, ಕಾಂಗ್ರೆಸ್ ಸರ್ಕಾರವು ಜನರು ಭರವಸೆ ನೀಡಿದಂತೆ ಐದೂ ಗ್ಯಾರಂಟಿಗಳನ್ನು ಜಾರಿ ಮಾಡಿದೆ. 18 ತಿಂಗಳ ತನ್ನ ಅಧಿಕಾರಾವಧಿಯಲ್ಲಿ ಸರ್ಕಾರವು ಜನರಿಗೆ ಅಭೂತಪೂರ್ವ ಸಮೃದ್ಧಿಯನ್ನೂ ತಂದುಕೊಟ್ಟಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ'

ನಿಧಿ ಕೊರತೆಯ ಕಾರಣ, ಕರ್ನಾಟಕದಲ್ಲಿ ಕುಟುಂಬದ ಒಬ್ಬ ಮಹಿಳೆಗೆ ಮಾತ್ರವೇ ತಿಂಗಳಿಗೆ ₹2,000 ನೀಡಲಾಗುತ್ತಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಒದಗಿಸುವ ಗ್ಯಾರಂಟಿಯಿಂದಾಗಿ ರಾಜ್ಯದ ಬೊಕ್ಕಸಕ್ಕೆ ಭಾರಿ ಹೊಡೆತ ಬೀಳುತ್ತಿದೆ. ಈ ಗ್ಯಾರಂಟಿಯಿಂದಾಗಿ ಪ್ರತೀ ತಿಂಗಳು ಸುಮಾರು ₹100 ಕೋಟಿ ನಷ್ಟ ಸಂಭವಿಸುತ್ತಿದೆ. ಎಸ್‌ಸಿ, ಎಸ್‌ಟಿ ಸಮುದಾಯದಕ್ಕಾಗಿಯೇ ಇರಿಸಿದ ಅನುದಾನವನ್ನು ಇತರೆ ಹಣಕಾಸಿನ ಅಗತ್ಯಗಳಿಗಾಗಿ ಖರ್ಚು ಮಾಡಲಾಗುತ್ತಿದೆ. ಕಾಂಗ್ರೆಸ್ ಸರ್ಕಾರಗಳಿರುವ ಕರ್ನಾಟಕ ಹಾಗೂ ತೆಲಂಗಾಣದ ಅವಸ್ಥೆಯನ್ನು ನೋಡಿ ಎಚ್ಚರ ವಹಿಸಿ. ಮಹಾರಾಷ್ಟ್ರದಲ್ಲಿ ಶಕ್ತಿಯುತವಾದ ಆರ್ಥಿಕತೆ ಇದೆ.

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಜಾರ್ಖಂಡ್: ಮೊದಲ ಹಂತ ಇಂದು

ಜಾರ್ಖಂಡ್ ವಿಧಾನಸಭೆ ಚುನಾವಣೆಯ ಮೊದಲ ಹಂತದ ಮತದಾನದ ಭದ್ರತಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಯೋಧರನ್ನು ಬುಡಕಟ್ಟು ಸಮುದಾಯದ ಮಹಿಳೆಯರು ರಾಂಚಿಯಲ್ಲಿ ಮಂಗಳವಾರ ಸ್ವಾಗತಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಉಪಚುನಾವಣೆಗಳ ಜೊತೆಯಲ್ಲಿಯೇ ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಮೊದಲ ಹಂತದ ಮತದಾನವೂ ಬುಧವಾರ ನಡೆಯಲಿದೆ. ಒಟ್ಟು 81 ವಿಧಾನಸಭಾ ಕ್ಷೇತ್ರಗಳಿರುವ ರಾಜ್ಯದಲ್ಲಿ ಮೊದಲ ಹಂತದಲ್ಲಿ 43 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಮಹಾರಾಷ್ಟ್ರದ ಎಲ್ಲ 288 ಕ್ಷೇತ್ರಗಳೊಂದಿಗೆ ಜಾರ್ಖಂಡ್‌ನ ಉಳಿದ 38 ಕ್ಷೇತ್ರಗಳಿಗೂ ನ.20ರಂದು ಮತದಾನ ನಡೆಯಲಿದೆ.

ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ 'ಇಂಡಿಯಾ' ಮೈತ್ರಿಕೂಟವು ಮರಳಿ ಅಧಿಕಾರಕ್ಕೆ ಬರುವ ಯತ್ನದಲ್ಲಿದೆ. ಆದರೆ, ಬಿಜೆಪಿಯು 'ಇಂಡಿಯಾ'ಕ್ಕೆ ತೀವ್ರ ಸ್ಪರ್ಧೆ ಒಡ್ಡುತ್ತಿದೆ. ತನ್ನ 'ಉಗ್ರ ಹಿಂದುತ್ವ' ಕಾರ್ಯಸೂಚಿಯನ್ನು ಬಿಜೆಪಿ ಜನರ ಮುಂದಿರಿಸಿದೆ. ಜೊತೆಗೆ, 'ಬಾಂಗ್ಲಾದೇಶದ ನುಸುಳುಕೋರರನ್ನು ಇಲ್ಲಿನ ಸರ್ಕಾರವು ಜಾರ್ಖಂಡ್ ಒಳಗೆ ಬಿಟ್ಟುಕೊಳ್ಳುತ್ತಿದೆ' ಎಂಬ ಆರೋಪವನ್ನು ಬಿಜೆಪಿ ಮಾಡಿದೆ.

ಇದಕ್ಕೆ ಪ್ರತಿಯಾಗಿ 'ಇಂಡಿಯಾ'ವು ಉದ್ಯೋಗ, ಜಾತಿ ಜನಗಣತಿ, ಸಂವಿಧಾನ ರಕ್ಷಣೆ, ಮಹಿಳೆಯರಿಗೆ ಧನಸಹಾಯ ಮುಂತಾದ ಅಭಿವೃದ್ಧಿ ಕೇಂದ್ರಿತ ವಿಚಾರಗಳನ್ನು ಜನರ ಮುಂದಿರಿಸಿದೆ.

31 ಕ್ಷೇತ್ರಗಳಲ್ಲಿ ಇಂದು ಮತದಾನ: ಜೈಪುರ/ಕೋಲ್ಕತ್ತ: 10 ರಾಜ್ಯಗಳ 31 ವಿಧಾನಸಭಾ ಕ್ಷೇತ್ರಗಳಿಗೆ ಹಾಗೂ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನಡೆಯುತ್ತಿರುವ ಉಪಚುನಾವಣೆಗೆ ಬುಧವಾರ ಮತದಾನ ನಡೆಯಲಿದೆ.

ಈ ಉಪಚುನಾವಣೆಗಳ ಫಲಿತಾಂಶವು ಯಾವ ರಾಜ್ಯ ಸರ್ಕಾರವನ್ನೂ ಅಸ್ಥಿರಗೊಳಿಸುವುದಿಲ್ಲ. ಆದರೆ, 'ಇಂಡಿಯಾ' ಮೈತ್ರಿಕೂಟಕ್ಕೆ ಈ ಉಪಚುನಾವಣೆಗಳ ಫಲಿತಾಂಶವು ಬಹಳ ಮುಖ್ಯವೆನಿಸಿದೆ. ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟವು ಒಗ್ಗಟ್ಟು ಪ್ರದರ್ಶಿಸಲು ಸೋತಿತು. ಆದ್ದರಿಂದ, ಈ ಮೈತ್ರಿಕೂಟಕ್ಕೆ ಫಲಿತಾಂಶವು 'ಅಗ್ನಿಪರೀಕ್ಷೆ' ಎಂದೇ ವಿಶ್ಲೇಷಿಸಲಾಗುತ್ತಿದೆ.

ಎಲ್ಲೆಲ್ಲಿ ಉಪಚುನಾವಣೆ?

ಕ್ಷೇತ್ರಗಳು	ರಾಜ್ಯ
7	ರಾಜಸ್ಥಾನ
6	ಪಶ್ಚಿಮ ಬಂಗಾಳ
5	ಅಸ್ಸಾಂ
4	ಬಿಹಾರ
3	ಕರ್ನಾಟಕ
2	ಮಧ್ಯಪ್ರದೇಶ
1	ಛತ್ತೀಸಗಢ
1	ಗುಜರಾತ್
1	ಕೇರಳ
1	ಮೇಘಾಲಯ

ಶಾಸಕರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದಲೇ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯುತ್ತಿವೆ. ಕೆಲವೆಡೆ ಶಾಸಕರು ಮೃತಪಟ್ಟಿದ್ದರಿಂದ ಉಪಚುನಾವಣೆ ನಡೆಯುತ್ತಿವೆ. ಸಿಕ್ಕಿಂನ ಎರಡು ಕ್ಷೇತ್ರಗಳಲ್ಲಿ ಬುಧವಾರ ಮತದಾನ ನಡೆಯಬೇಕಿತ್ತು. ಆದರೆ, ಈ ಕ್ಷೇತ್ರಗಳಲ್ಲಿ ಹಲವು ಅಭ್ಯರ್ಥಿಗಳು ನಾಮಪತ್ರ ವಾಪಸು ಪಡೆದ ಕಾರಣ ಸಿಕ್ಕಿಂ ಕ್ರಾಂತಿ ಮೋರ್ಚಾ ಪಕ್ಷದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು.

ಉತ್ತರ ಪ್ರದೇಶದ 9, ಪಂಜಾಬ್‌ನ 4, ಕೇರಳದ 1 ಕ್ಷೇತ್ರಗಳಲ್ಲಿ ಬುಧವಾರ ಮತದಾನ ನಡೆಯಬೇಕಿತ್ತು. ಆದರೆ, ಹಬ್ಬಗಳ ಕಾರಣದಿಂದ ಚುನಾವಣಾ ಆಯೋಗವು ಈ ಕ್ಷೇತ್ರಗಳ ಮತದಾನವನ್ನು ನವೆಂಬರ್ 20ಕ್ಕೆ ಮುಂದೂಡಿದೆ.

ವಯನಾಡ್‌ನ ಮತ ಯಾರಿಗೆ?

ವಯನಾಡ್ (ಪಿಟಿಐ): ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ವಾದ್ರಾ, ಸಿಪಿಐನ ಸತ್ಯನ್ ಮೊಕೇರಿ ಹಾಗೂ ಬಿಜೆಪಿಯ ನವ್ಯಾ ಹರಿದಾಸ್ ಸೇರಿದಂತೆ ಒಟ್ಟು 16 ಅಭ್ಯರ್ಥಿಗಳು ಕಣದಲ್ಲಿದ್ದು ಬುಧವಾರ ಇಲ್ಲಿ ಮತದಾನ ನಡೆಯಲಿದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರವನ್ನು ಉಳಿಸಿಕೊಂಡು ವಯನಾಡ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಕಾರಣದಿಂದಾಗಿ ವಯನಾಡ್ ಲೋಕಸಭಾ ಕ್ಷೇತ್ರ ತೆರವಾಗಿತ್ತು.

ಲೋಕಸಭೆ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರು ಈ ಕ್ಷೇತ್ರದಿಂದ 3.5 ಲಕ್ಷ ಮತಗಳ ಅಂತರದಿಂದ ಜಯ ಸಾಧಿಸಿದ್ದರು. ಈಗ ರಾಹುಲ್ ಸಹೋದರಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಅವರನ್ನು ಕಣಕ್ಕಿಳಿಸಲಾಗಿದೆ. ಈ ಕ್ಷೇತ್ರವನ್ನು ಕಾಂಗ್ರೆಸ್ ಉಳಿಸಿಕೊಳ್ಳುವ ಉತ್ಸಾಹದಲ್ಲಿದೆ.

ಅತ್ತ ಬಿಜೆಪಿ ಹಾಗೂ ಸಿಪಿಐ ಕಾಂಗ್ರೆಸ್‌ನಿಂದ ಈ ಕ್ಷೇತ್ರವನ್ನು ಕಸಿದುಕೊಳ್ಳುವ ತವಕದಲ್ಲಿದೆ. ಸೋಮವಾರ ಉಪಚುನಾವಣೆಯ ಪ್ರಚಾರಕ್ಕೆ ಕೊನೇ ದಿನವಾಗಿತ್ತು. ಮೂರೂ ಪ್ರಮುಖ ಪಕ್ಷಗಳು ಕೊನೇ ದಿನದ ಪ್ರಚಾರದಲ್ಲಿ ಭಾರಿ ರೋಡ್ ಶೋ ನಡೆಸಿದವು.

ರಾಹುಲ್ ನಾಮವೇ ಬಲ

2019ರಿಂದ 2024ರವರೆಗೆ ರಾಹುಲ್ ಗಾಂಧಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

ರಾಹುಲ್ ಅವರು ವಯನಾಡ್ ಕ್ಷೇತ್ರವನ್ನು ಕೈಬಿಟ್ಟು ರಾಯ್‌ಬರೇಲಿಯನ್ನು ಉಳಿಸಿಕೊಂಡರು ಎನ್ನುವ ಕುರಿತು ಬಿಜೆಪಿ ಹಾಗೂ ಸಿಪಿಐ ಪ್ರಚಾರ ನಡೆಸುತ್ತಿವೆ. ಗೆದ್ದ ಬಳಿಕ, ರಾಹುಲ್ ಅವರಂತೆ ಅವರ ಸಹೋದರಿ ಪ್ರಿಯಾಂಕಾ ಕೂಡ ವಯನಾಡ್‌ನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದಿಲ್ಲ ಎಂದೂ ಪ್ರಚಾರ ನಡೆಸುತ್ತಿವೆ.

ಈ ಹೇಳಿಕೆಗಳಿಗೆ ಪ್ರತಿಕ್ರಿಯಿಸಿರುವ ಪ್ರಿಯಾಂಕಾ ಅವರು, 'ನೀವು (ವಯನಾಡ್ ಜನರು) ಇಲ್ಲಿಗೆ ಬರಬೇಡಿ ಎಂದು ಹೇಳುವವರೆಗೂ ನಾನು ಇಲ್ಲಿಗೆ ಬರುತ್ತಲೇ ಇರುತ್ತೇನೆ' ಎಂದಿದ್ದಾರೆ.

ಕಾಂಗ್ರೆಸ್‌ಗೆ ದಲಿತರು, ಆದಿವಾಸಿಗಳ ಪರ ಕಾಳಜಿ ಇಲ್ಲ: ಪ್ರಧಾನಿ ಮೋದಿ

'ಕರ್ನಾಟಕ: ದಿನಕ್ಕೊಂದು ಹಗರಣ'

ಪುಣೆ (ಪಿಟಿಐ): ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೇರಿದ ಪಕ್ಷವು ಈಗ ಜನರನ್ನು ಲೂಟಿ ಮಾಡುತ್ತಿದೆ' ಎಂದು ಆರೋಪಿಸಿದರು.

'ಚುನಾವಣೆ ಸಮಯದಲ್ಲಿ ಮತದಾರರನ್ನು ಸೆಳೆಯಲು ಪಕ್ಷವು ಹಲವು ಭರವಸೆಗಳನ್ನು ನೀಡಿತು. ಆದರೆ ಅಧಿಕಾರಕ್ಕೆ ಬಂದ ಬಳಿಕ ಅವರಿಗೆ ಆ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ. ಬದಲಾಗಿ, ಜನರ ಹಣ ಕೊಳ್ಳೆ ಹೊಡೆಯುತ್ತಿದೆ' ಎಂದು ಪುಣೆಯಲ್ಲಿ ಮಂಗಳವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಟೀಕಿಸಿದರು.

'ಕರ್ನಾಟಕದಲ್ಲಿ ದಿನಕ್ಕೊಂದು ಹಗರಣ ಬಯಲಾಗುತ್ತಿದೆ. ಕಾಂಗ್ರೆಸ್ ಪಕ್ಷವು ಅಲ್ಲಿನ ಜನರಿಂದ ಲೂಟಿ ಮಾಡಿದ ಹಣವನ್ನು ಮಹಾರಾಷ್ಟ್ರದಲ್ಲಿ ಚುನಾವಣೆ ಎದುರಿಸಲು ಬಳಸುತ್ತಿದೆ ಎಂಬ ಆರೋಪ ಕೇಳಿಬಂದಿದೆ. ನಾವು ಮಹಾರಾಷ್ಟ್ರವನ್ನು ಉಳಿಸಬೇಕಾದರೆ, ಕಾಂಗ್ರೆಸ್ ಅನ್ನು ದೂರವಿಡಬೇಕು' ಎಂದರು.

ಮಹಾರಾಷ್ಟ್ರದ ಚಿಮೂರ್‌ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿ ಅವರು ಬೆಂಬಲಿಗರತ್ತ ಕೈಬೀಸಿದರು ಪಿಟಿಐ ಚಿತ್ರ

'ದಲಿತರು, ಆದಿವಾಸಿಗಳ ಪರ ಕಾಳಜಿ ಇಲ್ಲ': 'ದೇಶವನ್ನು ಆಳಲು ನಾವು ಹುಟ್ಟಿದ್ದೇವೆ ಎಂಬುದು ಕಾಂಗ್ರೆಸ್‌ನ 'ಶಾಹಿ ಪರಿವಾರ'ದ (ರಾಜ ಕುಟುಂಬ) ಮನಸ್ಥಿತಿ' ಎಂದು ಪ್ರಧಾನಿ ವಾಗ್ದಾಳಿ ನಡೆಸಿದರು.

ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ಚಿಮೂರ್‌ನಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಇದೇ ಕಾರಣದಿಂದ ಕಾಂಗ್ರೆಸ್ ಪಕ್ಷವು ದಲಿತರು, ಹಿಂದುಳಿದವರು ಮತ್ತು ಆದಿವಾಸಿಗಳು ಪ್ರಗತಿ ಸಾಧಿಸಲು ಅವಕಾಶ ನೀಡಲಿಲ್ಲ' ಎಂದು ಟೀಕಿಸಿದರು.

'ಮೀಸಲಾತಿಯ ವಿಚಾರ ಬಂದಾಗ ಕಾಂಗ್ರೆಸ್ ಸಿಟ್ಟಿಗೇಳುತ್ತದೆ. 1980ರಲ್ಲಿ ಕಾಂಗ್ರೆಸ್ ಪಕ್ಷವು ಜಾಹೀರಾತೊಂದನ್ನು ಪ್ರಕಟಿಸಿತ್ತು. ದಲಿತರು, ಹಿಂದುಳಿದ ವರ್ಗಗಳು ಮತ್ತು ಆದಿವಾಸಿಗಳು ಅನುಭವಿಸುತ್ತಿರುವ ವಿಶೇಷ ಹಕ್ಕುಗಳ ಬಗ್ಗೆ ಆ ಜಾಹೀರಾತಿನಲ್ಲಿ ಪ್ರಶ್ನೆಗಳನ್ನು ಎತ್ತಲಾಗಿತ್ತು. ಆ ಜಾಹೀರಾತಿನ ಚಿತ್ರ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಇದು ಆ ಪಕ್ಷದ ಮೀಸಲಾತಿ ವಿರೋಧಿ ಧೋರಣೆಯನ್ನು ತೋರಿಸುತ್ತದೆ' ಎಂದು ಹೇಳಿದರು.

'ನಿಮ್ಮ ಒಗ್ಗಟ್ಟನ್ನು ಮುರಿಯುವ ಅಪಾಯಕಾರಿ ಆಟವನ್ನು ಕಾಂಗ್ರೆಸ್ ಆಡುತ್ತಿದೆ. ಬುಡಕಟ್ಟು ಸಮುದಾಯವು ಜಾತಿಗಳಾಗಿ ವಿಭಜನೆಗೊಂಡರೆ, ಅದರ ಅಸ್ಮಿತೆ ಮತ್ತು ಶಕ್ತಿ ಕಳೆದುಹೋಗುತ್ತದೆ' ಎಂದು ಎಚ್ಚರಿಸಿದರು.

'ನಾವು ಒಗ್ಗಟ್ಟಿನಿಂದ ಇದ್ದರೆ ಸುರಕ್ಷಿತವಾಗಿರುತ್ತೇವೆ. ಜತೆಯಾಗಿ ಉಳಿಯದಿದ್ದರೆ ಕಾಂಗ್ರೆಸ್ ಪಕ್ಷವು ನಿಮ್ಮ ಮೀಸಲಾತಿಯನ್ನು ಕಸಿದುಕೊಳ್ಳುತ್ತದೆ' ಎಂದರು.

ವಿರೋಧ ಪಕ್ಷಗಳ ಮಹಾ ವಿಕಾಸ ಆಘಾಡಿಯನ್ನು (ಎಂವಿಎ) 'ಭ್ರಷ್ಟರ ಕೂಟ' ಎಂದು ದೂರಿದ ಪ್ರಧಾನಿ, 'ಎಂವಿಎಯು ಮಹಾರಾಷ್ಟ್ರದ ಪ್ರಗತಿಗೆ ತಡೆಯಾಗಿ ಪರಿಣಮಿಸಿದೆ' ಎಂದು ಹೇಳಿದರು.

'ಪ್ರಧಾನಿ ಮೋದಿ ಸಂವಿಧಾನ ಓದಿಲ್ಲ'

ಪ್ರಜಾವಾಣಿ ವಾರ್ತೆ

ರಾಹುಲ್ ಗಾಂಧಿ

ಪುಣೆ: 'ಪ್ರಧಾನಿ ನರೇಂದ್ರ ಮೋದಿ ಅವರು ಸಂವಿಧಾನವನ್ನು ಓದಿಲ್ಲ ಎಂಬುದಕ್ಕೆ ನಾನು ಗ್ಯಾರಂಟಿ ಕೊಡುತ್ತೇನೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ವಾಗ್ದಾಳಿ ನಡೆಸಿದರು.

'ದೇಶದ ಸಂವಿಧಾನವು ಪ್ರೀತಿ, ಏಕತೆ, ಸಮಾನತೆಯನ್ನು ಪ್ರತಿಪಾದಿಸಿದೆ. ಎಲ್ಲ ಧರ್ಮೀಯರನ್ನು ಸಮಾನವಾಗಿ ನೋಡಿದೆ. ಅಲ್ಲಿ ದ್ವೇಷದ ಉಲ್ಲೇಖವಿಲ್ಲ. ಪ್ರಧಾನಿ ಸಂವಿಧಾನ ಓದಿದ್ದರೆ ಅಲ್ಲಿ ಬರೆದಿರುವುದನ್ನು ಗೌರವಿಸುತ್ತಿದ್ದರು' ಎಂದು ರಾಹುಲ್ ಹೇಳಿದರು.

ಮಹಾರಾಷ್ಟ್ರದ ಗೋಂಧಿಯಾ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಸಂವಿಧಾನದಿಂದಾಗಿ ಇಂದು ಪ್ರಜಾಪ್ರಭುತ್ವ ಉಳಿದಿದೆ. ಆದರೆ, ಮೋದಿ ಹಾಗೂ ಬಿಜೆಪಿ, ಆರ್‌ಎಸ್‌ಎಸ್ ಇವುಗಳ ಮೇಲೆ ದಾಳಿ ನಡೆಸುತ್ತಿವೆ' ಎಂದರು.

'ಬುದ್ಧ, ಬಸವಣ್ಣ, ನಾರಾಯಣ ಗುರು, ಶಿವಾಜಿ ಮಹಾರಾಜ್, ರಾಜಶ್ರೀ ಸಾಹು ಮಹಾರಾಜ್, ಜ್ಯೋತಿಬಾ ಫುಲೆ, ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳನ್ನು ಸಂವಿಧಾನ ಬಿಂಬಿಸಿದೆ' ಎಂದು ಹೇಳಿದರು.

'ರಾಜಕಾರಣದಲ್ಲಿ ಹಿಂಸೆ ಮತ್ತು ದ್ವೇಷವನ್ನು ಮಾತ್ರ ಉತ್ತೇಜಿಸಲಾಗುತ್ತಿದೆ. ಈ ಕಾರಣದಿಂದಾ ಗಿಯೇ ನಾವು ಪ್ರೀತಿಗೆ ಒತ್ತು ನೀಡಿದ್ದೇವೆ. ದ್ವೇಷವನ್ನು ಪ್ರೀತಿಯಿಂದ ಮಾತ್ರ ನಿರ್ಮೂಲನೆಗೊಳಿಸಲು ಸಾಧ್ಯ. ಇದು, ಕಾಂಗ್ರೆಸ್ ಪಕ್ಷ ಮತ್ತು ಮಹಾತ್ಮ ಗಾಂಧಿ ಅವರ ಚಿಂತನೆಯೂ ಹೌದು' ಎಂದು ಹೇಳಿದರು.

'ಬಿಜೆಪಿ, ಆರ್‌ಎಸ್‌ಎಸ್ ತಮ್ಮ ವರನ್ನೇ ಉನ್ನತ ಸಂಸ್ಥೆಗಳಿಗೆ ನೇಮಿಸಿದಾಗ ಆ ಸಂಸ್ಥೆ ದುರ್ಬಲಗೊಳ್ಳುತ್ತದೆ. ರಾಜ್ಯದಲ್ಲಿ ನೀವೇ ಚುನಾಯಿಸಿದ್ದ ಮಹಾವಿಕಾಸ ಆಘಾಡಿ ಸರ್ಕಾರವನ್ನು ಬಿಜೆಪಿ ಅಪಹರಿಸಿದಾಗಲೂ ಸಂವಿಧಾನವು ದುರ್ಬಲಗೊಂಡಿತು' ಎಂದು ಹೇಳಿದರು.

ಎನ್‌ಡಿಎ ವಿರುದ್ಧ ಹರಿಹಾಯ್ದ ಅವರು, ಇದು ಸಿದ್ಧಾಂತಗಳ ನಡುವಿನ ಹೋರಾಟ. ಸಂವಿಧಾನ ಉಳಿಸಲು ನಡೆಯುತ್ತಿರುವ ಹೋರಾಟ. ದ್ವೇಷವನ್ನು ಪ್ರೀತಿಯಿಂದ ಸೋಲಿಸಲು ನಡೆಯುತ್ತಿರುವ ಹೋರಾಟ ಎಂದರು. ಚುನಾಯಿತ ಸರ್ಕಾರಗಳನ್ನು ಪದಚ್ಯುತಗೊಳಿಸುವ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂವಿಧಾನವನ್ನು ನಾಶಪಡಿಸುತ್ತಿವೆ ಎಂದು ಆರೋಪಿಸಿದರು.

'ಜಾರ್ಖಂಡ್: ಸ್ತ್ರೀಯರಿಗೆ ಆರ್ಥಿಕ ನೆರವು ಏರಿಕೆ'

ನವದೆಹಲಿ (ಪಿಟಿಐ): 'ಬಿಜೆಪಿ ತನ್ನ 'ಶತ ಕೋಟ್ಯಧಿಪತಿ ಗೆಳೆಯರಿಗೆ' ನೀಡಿದ್ದಕ್ಕಿಂತಲೂ ಹೆಚ್ಚಿನ ಆರ್ಥಿಕ ನೆರವನ್ನು ಕಾಂಗ್ರೆಸ್ ಪಕ್ಷವು ಮಹಿಳೆಯರು, ಯುವಜನರು, ರೈತರು ಮತ್ತು ಬಡಜನರಿಗೆ ನೀಡಲಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಜಾರ್ಖಂಡ್‌ನಲ್ಲಿ ಮಹಿಳೆಯರಿಗೆ ನೀಡಲಿರುವ ಗೌರವಧನವನ್ನು ₹2,500ಕ್ಕೆ ಏರಿಸಲು 'ಇಂಡಿಯಾ' ಮೈತ್ರಿಕೂಟ ತೀರ್ಮಾನಿಸಿದೆ ಎಂದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ -ಜಾರ್ಖಂಡ್ ಮುಕ್ತಿ ಮೋರ್ಚಾ ಮೈತ್ರಿ ಹೊಂದಿದ್ದು, ಅಧಿಕಾರ ಉಳಿಸಿಕೊಳ್ಳಲು ಯತ್ನಿಸುತ್ತಿವೆ.

'ಮೈಯ್ಯಾ ಸಮ್ಮಾನ್' ಯೋಜನೆಯಡಿ ನೀಡುತ್ತಿರುವ ನೆರವಿನ 4ನೇ ಕಂತಿನ ಮೊತ್ತವು ಸೋಮವಾರ ಫಲಾನುಭವಿಗಳ ಖಾತೆಗೆ ಜಮೆಯಾಗಿದೆ. ಯೋಜನೆಯಡಿ ನೆರವಿನ ಮೊತ್ತವನ್ನು ಇನ್ನಷ್ಟು ಏರಿಸಲು ನಿರ್ಧರಿಸಿದ್ದೇವೆ' ಎಂದು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಡಿಸೆಂಬರ್‌ನಿಂದ ಜಾರಿಯಾಗು ವಂತೆ ಮಾಸಿಕ ₹2,500 ಗೌರವಧನ ಸಿಗಲಿದೆ. ಇದರಿಂದ ಜಾರ್ಖಂಡ್‌ನ 53 ಲಕ್ಷ ಮಹಿಳೆಯರಿಗೆ ಅನುಕೂಲವಾಗಲಿದೆ ಎಂದೂ ಹೇಳಿದ್ದಾರೆ.

'ನಾನು ಈ ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಬಿಜೆಪಿಯು ತನ್ನ ಶ್ರೀಮಂತ ಗೆಳೆಯರಿಗೆ ನೀಡಿದ್ದಕ್ಕಿಂತಲೂ ಹೆಚ್ಚಿನ ನೆರವನ್ನು ಇಂಡಿಯಾ ಮೈತ್ರಿಕೂಟವು ಮಹಿಳೆಯರು, ಯುವಜನರು, ರೈತರಿಗೆ, ನೀಡಲಿದೆ' ಎಂದು ಪುನರುಚ್ಚರಿಸಿದರು.

ಜಾರ್ಖಂಡ್: ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ

ರಾಂಚಿ (ಪಿಟಿಐ): ಜಾರ್ಖಂಡ್ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆ ಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

250 ಯೂನಿಟ್‌ವರೆಗೆ ಉಚಿತ ವಿದ್ಯುತ್, ಜಾತಿ ಜನಗಣತಿ, ಖಾಲಿ ಇರುವ ಸರ್ಕಾರಿ ಹುದ್ದೆಗಳ ಒಂದು ವರ್ಷದ ಒಳಗಾಗಿ ಭರ್ತಿ, ಸರನಾ ಧಾರ್ಮಿಕ ಸಂಹಿತೆ ಅನುಷ್ಠಾನ ಸೇರಿದಂತೆ ಹಲವು ಭರವಸೆಗಳನ್ನು ಪ್ರಣಾಳಿಕೆಯಲ್ಲಿ ನೀಡಲಾಗಿದೆ. ಪಕ್ಷದ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಬಂಧು ತಿರ್ಕಿ ಅವರು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ನಂತರ ಅವರು, 'ಬುಡಕಟ್ಟು ಜನರ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಪ್ರಣಾಳಿಕೆ ಸಮಿತಿಯು ಪ್ರತಿ ಜಿಲ್ಲೆಯಲ್ಲಿ ಸಭೆ ನಡೆಸಿ ಜನರೊಂದಿಗೆ ಸಂವಾದ ನಡೆಸಿತ್ತು. ಸಾಮಾನ್ಯ ಜನರಿಗಾಗಿ ಪ್ರಣಾಳಿಕೆ ಸಿದ್ಧಪಡಿಸಲು ಬಹಳ ಶ್ರಮ ವಿನಿಯೋಗಿಸಿದ್ದೇವೆ' ಎಂದರು.

'ದೇವಾಲಯಗಳ ಭೂಮಿ ವಕ್ಫ್ ಮಂಡಳಿ ವಶ'

ಅಮಿತ್ ಶಾ

ಬಾಘ್ಮಾರಾ (ಜಾರ್ಖಂಡ್) (ಪಿಟಿಐ): ಕರ್ನಾಟಕದಲ್ಲಿ ದೇವಾಲಯಗಳು, ಗ್ರಾಮೀಣ ಭಾಗದ ಜನರು ಮತ್ತು ಇತರರ ಭೂಮಿಯನ್ನು ವಕ್ಫ್ ಮಂಡಳಿ ಕಬಳಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಆರೋಪಿಸಿದರು.

ಜಾರ್ಖಂಡ್‌ನ ಬಾಘ್ಮಾರಾದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಕಾಲ ಕೂಡಿಬಂದಿದೆ ಎಂದು ಪ್ರತಿಪಾದಿಸಿದರು.

'ವಕ್ಫ್ ಮಂಡಳಿಯು ಭೂಮಿಯನ್ನು ವಶಪಡಿಸಿಕೊಳ್ಳುವ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ ದೇವಸ್ಥಾನ, ರೈತರು, ಗ್ರಾಮಸ್ಥರ ಜಮೀನು ಕಬಳಿಸಿದೆ. ವಕ್ಫ್ ಕಾಯ್ದೆಯಲ್ಲಿ ಬದಲಾವಣೆ ಬೇಕೋ, ಬೇಡವೋ ಎಂದು ನೀವೇ ಹೇಳಿ. ಹೇಮಂತ್ ಬಾಬು (ಹೇಮಂತ್ ಸೊರೇನ್) ಮತ್ತು ರಾಹುಲ್ ಗಾಂಧಿ ಅವರು ತಿದ್ದುಪಡಿ ಬೇಡ ಎನ್ನುತ್ತಾರೆ. ಅವರು ಅದನ್ನು ವಿರೋಧಿಸುತ್ತಲೇ ಇರಲಿ. ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ಬಿಜೆಪಿ ಅಂಗೀಕರಿಸುತ್ತದೆ. ನಮ್ಮನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ' ಎಂದರು.

'ಜೆಎಂಎಂ ನೇತೃತ್ವದ ಮೈತ್ರಿಕೂಟವು ನುಸುಳುಕೋರರನ್ನು ತನ್ನ ವೋಟ್ ಬ್ಯಾಂಕ್ ಆಗಿ ಮಾಡಿಕೊಂಡಿದೆ. ಜಾರ್ಖಂಡ್‌ನಲ್ಲಿ ಬಿಜೆಪಿ ಅಧಿಕಾರಕ್ಕೇರಿದರೆ, ಅಕ್ರಮ ವಲಸಿಗರನ್ನು ಬಾಂಗ್ಲಾದೇಶಕ್ಕೆ ಕಳುಹಿಸುತ್ತೇವೆ' ಎಂದು ಹೇಳಿದರು. 'ನುಸುಳುಕೋರರು ಜಾರ್ಖಂಡ್‌ಗೆ ಬರುವುದನ್ನು ತಡೆಯುವ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅನುಷ್ಠಾನಗೊಳಿಸುವುದು ನಿಶ್ಚಿತ. ಅದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಸ್ಥಳೀಯ ಬುಡಕಟ್ಟು ಜನರನ್ನು ಯುಸಿಸಿ ವ್ಯಾಪ್ತಿಯಿಂದ ಹೊರಗಿಡಲಾಗುವುದು' ಎಂಬುದನ್ನು ಪುನರುಚ್ಚರಿಸಿದರು.

ರಾಜಕೀಯ ಲಾಭಕ್ಕಾಗಿ ಮೌನಕ್ಕೆ ಶರಣಾದ ಖರ್ಗೆ: ಯೋಗಿ ಟೀಕೆ

ಅಮರಾವತಿ (ಪಿಟಿಐ): ರಜಾಕಾರರ ದಾಳಿಯಿಂದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಾಯಿ ಮತ್ತು ಸಹೋದರಿಯನ್ನು ಕಳೆದುಕೊಂಡರು. ಆದರೆ, ಮುಸ್ಲಿಂ ಮತಗಳನ್ನು ಕಳೆದುಕೊಳ್ಳುವ ಭಯದಿಂದ ಈ ದುರಂತದ ಬಗ್ಗೆ ಬಾಯಿಬಿಡುತ್ತಿಲ್ಲ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮಂಗಳವಾರ ವಾಗ್ದಾಳಿ ನಡೆಸಿದರು.

ಮಹಾರಾಷ್ಟ್ರದ ಅಮರಾವತಿಯಲ್ಲಿ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಖರ್ಗೆ ಅವರು ರಾಜಕೀಯ ಲಾಭಕ್ಕಾಗಿ ತಮ್ಮ ವೈಯಕ್ತಿಕ ಬದುಕಿನ ನೋವನ್ನು ಅದುಮಿಡುತ್ತಿದ್ದಾರೆ' ಎಂದು ಆರೋಪಿಸಿದರು.

ಮೋದಿ ಪ್ರಚಾರ ಮಾಡಿದ ಕಡೆ ಬಿಜೆಪಿ ಸೋತಿದೆ: ಶರದ್ ಪವಾರ್



ಶರದ್ ಪವಾರ್

ಜಲಗಾಂವ್ (ಪಿಟಿಐ): ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದಲ್ಲಿ ಪ್ರಚಾರ ಮಾಡಿದ್ದ 10–12 ಕ್ಷೇತ್ರಗಳಲ್ಲಿ ಬಿಜೆಪಿ ಸೋಲನುಭವಿಸಿದೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, 'ಚುನಾವಣಾ ರ್‍ಯಾಲಿಗಳಲ್ಲಿ ಪಾಲ್ಗೊಳ್ಳುವುದು ಪ್ರಧಾನಿಯ ಹಕ್ಕು. ಅದಕ್ಕೆ ಹೆಚ್ಚಿನ ಗಮನ ನೀಡುವ ಅಗತ್ಯ ಇಲ್ಲ. ಆದರೆ, ಲೋಕಸಭಾ ಚುನಾವಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು 16 ರ್‍ಯಾಲಿಗಳಲ್ಲಿ ಪಾಲ್ಗೊಂಡಿದ್ದರು. ಅವರು ರ್‍ಯಾಲಿ ನಡೆಸಿದ 10–12 ಕ್ಷೇತ್ರಗಳಲ್ಲಿ ಬಿಜೆಪಿ ಸೋತಿದೆ' ಎಂದು ಹೇಳಿದರು.

ಬಿಜೆಪಿ ನಾಯಕ ರಾವ್‌ಸಾಹೇಬ್ ದನ್ವೆ ಅವರು ಬೆಂಬಲಿಗರಿಗೆ ಒದ್ದ ವಿಡಿಯೊ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ತನ್ನ ಕಾರ್ಯಕರ್ತರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದಕ್ಕೆ ಇದು ಉದಾಹರಣೆ' ಎಂದು ಹೇಳಿದರು.

ಅಲಿಗಢ ವಿ.ವಿ.: ಮುಸ್ಲಿಮರಿಗೆ ಮೀಸಲಾತಿ ನೀಡಿಲ್ಲ– ಸ್ಪಷ್ಟನೆ

ಅಲಿಗಢ (ಪಿಟಿಐ): ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ (ಎಎಂಯು) ಉದ್ಯೋಗದಲ್ಲಿ ಮತ್ತು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವಾಗ ಧರ್ಮದ ಆಧಾರದಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಲಾಗುತ್ತಿದೆ ಎಂಬ ಮಾತುಗಳನ್ನು ವಿಶ್ವವಿದ್ಯಾಲಯವು ಅಲ್ಲಗಳೆದಿದೆ. ಆ ರೀತಿಯಲ್ಲಿ ಮೀಸಲಾತಿ ನೀಡುವ ವ್ಯವಸ್ಥೆ ತನ್ನಲ್ಲಿಲ್ಲ ಎಂದು ಅದು ಸ್ಪಷ್ಟಪಡಿಸಿದೆ.

'ಎಎಂಯು'ವಿನ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಸ್ಥಾನದ ಕುರಿತು ಹೊಸ ನ್ಯಾಯಪೀಠ ನಿರ್ಣಯಿಸಲಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಕೆಲವೇ ದಿನಗಳಲ್ಲಿ ವಿಶ್ವವಿದ್ಯಾಲಯವು ಈ ಸ್ಪಷ್ಟನೆ ನೀಡಿದೆ. 'ಕೆಲವು ಮಾಧ್ಯಮಗಳಲ್ಲಿ ವರದಿಯಾಗಿರುವಂತೆ, ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯವು ಮುಸ್ಲಿಂ ಅಭ್ಯರ್ಥಿಗಳಿಗೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶದಲ್ಲಿ ಅಥವಾ ನೇಮಕಾತಿಯಲ್ಲಿ ಮೀಸಲಾತಿ ನೀಡುವುದಿಲ್ಲ' ಎಂದು ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕ ಕಚೇರಿಯ ಪ್ರೊ. ಮೊಹಮ್ಮದ್ ಆಸಿಂ ಸಿದ್ದಿಕಿ ಹೇಳಿದ್ದಾರೆ.

'ನಮ್ಮ ವಿಶ್ವವಿದ್ಯಾಲಯವು ನಡೆಸುವ ಶಾಲೆಗಳಿಂದ ಬರುವ ವಿದ್ಯಾರ್ಥಿಗಳಿಗಾಗಿ ಎಎಂಯು ಆಂತರಿಕ ಕೋಟಾ ವ್ಯವಸ್ಥೆ ಹೊಂದಿದೆ. ಈ ವಿದ್ಯಾರ್ಥಿಗಳು ಎಎಂಯುನಲ್ಲಿ ಪ್ರವೇಶ ಕೋರಿದಾಗ, ಅವರು ಯಾವುದೇ ಧರ್ಮಕ್ಕೆ ಸೇರಿರಲಿ ಅವರಿಗೆ ಶೇಕಡ 50ರಷ್ಟು ಸೀಟುಗಳನ್ನು ಮೀಸಲಾಗಿ ಇಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಅವರು ಹೇಳಿದ್ದಾರೆ.

ನವೆಂಬರ್ 9ರಂದು ನಡೆದ ರ್‍ಯಾಲಿಯೊಂದರಲ್ಲಿ ಮಾತನಾಡಿದ್ದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ದೇಶದ ಸಂಪನ್ಮೂಲಗಳಿಂದ ಬೆಳೆದ, ಜನರ ತೆರಿಗೆ ಹಣದಲ್ಲಿ ನಡೆಯುವ ಸಂಸ್ಥೆಯೊಂದು, ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ಜಾತಿಗಳಿಗೆ, ಬುಡಕಟ್ಟು ಸಮುದಾಯಗಳಿಗೆ ಮೀಸಲಾತಿ ನೀಡುತ್ತಿಲ್ಲ. ಆದರೆ ಅದು ಮುಸ್ಲಿಮರಿಗೆ ಶೇ 50ರಷ್ಟು ಮೀಸಲಾತಿ ಕಲ್ಪಿಸುತ್ತಿದೆ' ಎಂದು ದೂರಿದ್ದರು.

ಸಿಜೆಐ ಸಂಜೀವ್ ಖನ್ನಾ ಸೂಚನೆ • ವಕೀಲರಿಂದ ಭಿನ್ನ ಪ್ರತಿಕ್ರಿಯೆ

ತುರ್ತು ವಿಚಾರಣೆ: ಮೌಖಿಕ ಪ್ರಸ್ತಾಪ ಬೇಡ

ನವದೆಹಲಿ (ಪಿಟಿಐ): ಪ್ರಕರಣಗಳನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಕೋರ್ಟ್‌ನಲ್ಲಿ ಮೌಖಿಕವಾಗಿ ಪ್ರಸ್ತಾಪಿಸುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ನೀಡಿರುವ ನಿರ್ದೇಶನಕ್ಕೆ ವಕೀಲರಿಂದ ಭಿನ್ನ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

ಸಿಜೆಐ ನೇತೃತ್ವದ ನ್ಯಾಯಪೀಠದ ಮುಂದೆ ಹಾಜರಾಗುವ ವಕೀಲರು, ಕೆಲವು ಪ್ರಕರಣಗಳನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಕೋರುತ್ತಾರೆ. ಇದು ಪ್ರತಿದಿನ ಕಲಾಪ ಶುರುವಾಗುವಾಗ ನಡೆಯುತ್ತದೆ. ಆದರೆ, ಈ ಪದ್ಧತಿ ಬೇಡ ಎಂದು ನ್ಯಾಯಮೂರ್ತಿ ಖನ್ನಾ ಅವರು ಮಂಗಳವಾರ ಸೂಚನೆ ನೀಡಿದ್ದಾರೆ.

ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿರುವ ಪ್ರಕರಣಗಳ ಬಗ್ಗೆ ಇ–ಮೇಲ್ ಮೂಲಕ ಪ್ರಸ್ತಾಪಿಸುವ ಪದ್ಧತಿಯನ್ನು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಸಿಜೆಐ ಆಗಿದ್ದಾಗ ಜಾರಿಗೆ ತಂದಿದ್ದರು. ಆದರೆ, ನ್ಯಾಯಮೂರ್ತಿ ಚಂದ್ರಚೂಡ್ ಅವರು ಮೌಖಿಕವಾಗಿ ಪ್ರಸ್ತಾಪಿಸುವುದಕ್ಕೂ ಅವಕಾಶ ಕಲ್ಪಿಸುತ್ತಿದ್ದ ಕಾರಣ, ಇ–ಮೇಲ್ ಮೂಲಕ ಪ್ರಸ್ತಾಪಿಸುವ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದಿರಲಿಲ್ಲ.

ಮೌಖಿಕವಾಗಿ ಪ್ರಸ್ತಾಪ ಮಾಡುವ ಪ್ರಕ್ರಿಯೆಯು ಸಾಮಾನ್ಯವಾಗಿ ಬೆಳಿಗ್ಗೆ 10.30 ಶುರುವಾಗುತ್ತದೆ. ಇದು ಸರಿಸುಮಾರು ಅರ್ಧ ಗಂಟೆಯವರೆಗೆ ನಡೆಯುತ್ತದೆ. ಹೆಚ್ಚಿನ ಸಂಪನ್ಮೂಲ ಹೊಂದಿರುವ ಕಕ್ಷಿದಾರರು ಹಿರಿಯ ವಕೀಲರನ್ನು ಗೊತ್ತುಮಾಡಿಕೊಂಡು, ತಮ್ಮ ಪ್ರಕರಣಗಳು ನಿಗದಿಯಾದ ಸಮಯಕ್ಕಿಂತ ಮೊದಲೇ ವಿಚಾರಣೆಗೆ ಬರುವಂತೆ ಮಾಡಲು ಈ ವ್ಯವಸ್ಥೆಯನ್ನು ಬಳಸಿಕೊಳ್ಳುವುದೂ ಇದೆ.

ಇನ್ನು ಮುಂದೆ ತುರ್ತಾಗಿ ಕೈಗೆತ್ತಿಕೊಳ್ಳಬೇಕಿರುವ ಪ್ರಕರಣಗಳ ಬಗ್ಗೆ ಇ–ಮೇಲ್ ಮೂಲಕ ಅಥವಾ ಲಿಖಿತ ಅರ್ಜಿಯ ಮೂಲಕವೇ ಪ್ರಸ್ತಾಪಿಸಬೇಕು, ಪ್ರಕರಣವನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿರುವುದು ಏಕೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.

ಪ್ರಕರಣಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹಾಗೂ ನಿಗದಿತ ಸಮಯಕ್ಕೆ ಮೊದಲೇ ಅವುಗಳ ವಿಚಾರಣೆ ನಡೆಯುವಂತೆ ಮಾಡಲು ಮುಂಚೂಣಿ ವಕೀಲರನ್ನು ಗೊತ್ತುಮಾಡಿಕೊಳ್ಳಲಾಗುತ್ತದೆ. ಅಲ್ಲದೆ, ಕೆಲವು ಸೆಕೆಂಡುಗಳ ಕಾಲ ವಾದ ಮಂಡಿಸಲು ಅವರಿಗೆ ಒಳ್ಳೆಯ ಮೊತ್ತವನ್ನು ಪಾವತಿಸಲಾಗುತ್ತದೆ ಎಂಬ ಮಾತು ಕೂಡ ಇದೆ.

ವಕೀಲರ ಅನಿಸಿಕೆ: ಅತ್ಯಂತ ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿರುವ ಪ್ರಕರಣಗಳ ಬಗ್ಗೆ ನ್ಯಾಯಪೀಠದ ಗಮನ ಸೆಳೆಯಲು, ಪ್ರಕರಣಗಳನ್ನು ಮೌಖಿವಾಗಿ ಪ್ರಸ್ತಾಪಿಸಲು ಅವಕಾಶ ಇರಬೇಕು ಎಂದು ಸುಪ್ರೀಂ ಕೋರ್ಟ್ ವಕೀಲರ ಸಂಘದ ಮಾಜಿ ಅಧ್ಯಕ್ಷ ಹಾಗೂ ಹಿರಿಯ ವಕೀಲ ವಿಕಾಸ್ ಸಿಂಗ್, ಹಿರಿಯ ವಕೀಲರಾದ ಎಚ್.ಎಸ್. ಫೂಲ್ಕಾ, ವಿಜಯ್ ಹನ್ಸಾರಿಯಾ ಅಭಿಪ್ರಾಯಪಟ್ಟಿದ್ದಾರೆ.

ಸಿಜೆಐ ಖನ್ನಾ ಅವರ ತೀರ್ಮಾನವು ಸ್ತುತ್ಯರ್ಹವಾದುದು, ಪ್ರಶಂಸನೀಯವಾದುದು ಎಂದು ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಮತ್ತು ವಕೀಲ ಅಶ್ವನಿ ದುಬೆ ಹೇಳಿದ್ದಾರೆ.

ಬುಲ್ಡೋಜರ್ ಬಳಕೆ: ಇಂದು 'ಸುಪ್ರೀಂ' ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಯಾವುದೇ ಪ್ರಕರಣದಲ್ಲಿ ಆರೋಪಿ ಎಂದು ಗುರುತಿಸಲಾದ ವ್ಯಕ್ತಿಗೆ ಸೇರಿದ ಮನೆ ಅಥವಾ ಅಂಗಡಿಯನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸುವುದನ್ನು ತಡೆಯುವುದಕ್ಕಾಗಿ ದೇಶದಾದ್ಯಂತ ಅನ್ವಯವಾಗುವ ಮಾರ್ಗಸೂಚಿ ಗಳನ್ನು ಒಳಗೊಂಡ ತೀರ್ಪನ್ನು ಸುಪ್ರೀಂ ಕೋರ್ಟ್ ಬುಧವಾರ ಪ್ರಕಟಿಸಲಿದೆ.

ರಾಜ್ಯಗಳು, ಯಾವುದೇ ಕಟ್ಟಡವನ್ನು ಬುಲ್ಡೋಜರ್ ಬಳಸಿ ಧ್ವಂಸಗೊಳಿಸುವ ಮುನ್ನ ಕಡ್ಡಾಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ.ವಿಶ್ವನಾಥನ್ ಅವರಿರುವ ಪೀಠವು ಪ್ರಕಟಿಸುವ ನಿರೀಕ್ಷೆ ಇದೆ.

ಈ ಕುರಿತು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಮಾಹಿತಿ ಪ್ರಕಟಿಸಲಾಗಿದೆ. ಈ ವಿಚಾರವಾಗಿ ಜಮಿಯತ್ ಉಲೆಮಾ -ಎ -ಹಿಂದ್ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿದ್ದ ನ್ಯಾಯಪೀಠ, ಅಕ್ಟೋಬರ್ 1ರಂದು ತೀರ್ಪು ಕಾಯ್ದಿರಿಸಿತ್ತು.

ಪನ್ನೂ ಬೆದರಿಕೆ ಅಯೋಧ್ಯೆಗೆ ಭದ್ರತೆ

ಅಯೋಧ್ಯೆ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಅಯೋಧ್ಯೆ ದೇಗುಲದ ಮೇಲೆ ದಾಳಿಮಾಡುವುದಾಗಿ ವಿಡಿಯೊ ಬೆದರಿಕೆ ಹಾಕಿರುವ ಕಾರಣ ರಾಮಮಂದಿರ ವ್ಯಾಪ್ತಿಯಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ.

ನವೆಂಬರ್ 16–17ರಂದು ದಾಳಿ ನಡೆಸಲಾಗುವುದು ಎಂದು ಪನ್ನೂ ವಿಡಿಯೊದಲ್ಲಿ ಎಚ್ಚರಿಸಿದ್ದ. ನ.18ರಂದು ದೇಗುಲದಲ್ಲಿ 'ರಾಮ ವಿವಾಹ' ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೂ ಭಾಗವಹಿಸುವರು.

ಬೆದರಿಕೆ ಹಿನ್ನೆಲೆಯಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿದೆ. ಭಯೋತ್ಪಾದನಾ ನಿಗ್ರಹ ಪಡೆ ಸಿಬ್ಬಂದಿಯನ್ನು ದೇಗುಲದ ಆಯಕಟ್ಟಿನ ಜಾಗದಲ್ಲಿ ನಿಯೋಜಿಸಲಾಗಿದೆ. ಕಣ್ಗಾವಲಿಡಲು ಸಿ.ಸಿ.ಟಿ.ವಿ ಕ್ಯಾಮೆರಾಗಳ ಜೊತೆಗೆ ಡ್ರೋನ್ ಕ್ಯಾಮೆರಾಗಳ ನೆರವನ್ನು ಪಡೆಯಲಾಗಿದೆ. ಗುಪ್ತದಳ, ಭಯೋತ್ಪಾದನೆ ನಿಗ್ರಹ ಪಡೆ, ಬಾಂಬ್ ಶೋಧ ತಂಡಗಳಿಗೆ ಎಚ್ಚರಿಕೆಯಿಂದ ಇರಲು ಸೂಚಿಸಿದೆ. ಮಾಧ್ಯಮಗಳ ವರದಿ ಹಿನ್ನೆಲೆಯಲ್ಲಿ ನಾವು ಭದ್ರತೆ ಬಿಗಿಗೊಳಿಸಿದ್ದೇವೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಆರ್.ಕೆ.ನಯ್ಯರ್ ಅವರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದರು.

ದಕ್ಷಿಣ ಆಫ್ರಿಕಾ ವಿರುದ್ಧ ಸೆಂಚುರಿಯನ್‌ನಲ್ಲಿ ಮೂರನೇ ಟಿ20 ಪಂದ್ಯ ಇಂದು

ಭಾರತಕ್ಕೆ ಬ್ಯಾಟರ್‌ಗಳ ವೈಫಲ್ಯ ಚಿಂತೆ

ಸೆಂಚುರಿಯನ್ (ಪಿಟಿಐ): ಭಾರತ ತಂಡ, ಇಲ್ಲಿನ ಸೂಪರ್‌ಸ್ಪೋರ್ಟ್ ಪಾರ್ಕ್‌ನಲ್ಲಿ ಬುಧವಾರ ನಡೆಯುವ ಮೂರನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ತನಗೆ ಅಷ್ಟೇನೂ ಪರಿಚಿತವಲ್ಲದ ಈ ತಾಣದಲ್ಲಿ ಬ್ಯಾಟಿಂಗ್ ವೈಭವವನ್ನು ಮರಳಿ ಕಂಡುಕೊಳ್ಳುವ ಸವಾಲು ತಂಡದ ಮುಂದಿದೆ.

2009ರ ನಂತರ ಒಮ್ಮೆ ಮಾತ್ರ ಭಾರತ ಇಲ್ಲಿ ಟಿ20 ಪಂದ್ಯ ಆಡಿದೆ. 2018ರಲ್ಲಿ ನಡೆದ ಆ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಸೋಲನುಭವಿಸಿತ್ತು. ಆಗಿನ ತಂಡದಲ್ಲಿ ಆಡಿದವರಲ್ಲಿ ಈಗಲೂ ಇರುವ ಏಕಮಾತ್ರ ಆಟಗಾರ ಹಾರ್ದಿಕ್ ಪಾಂಡ್ಯ. ಉಳಿದವರಿಗೆ ಈ ತಾಣ ಹೊಸದು.

ಮೂರು ಪಂದ್ಯಗಳ ಸರಣಿ ಸದ್ಯ 1–1ರಲ್ಲಿ ಸಮನಾಗಿದೆ.

ಪರಿಚಿತವಲ್ಲದ ತಾಣದಲ್ಲಿ ಹೊಂದಿಕೊಳ್ಳುವುದರ ಜೊತೆ ತಂಡಕ್ಕೆ ಸವಾಲಾಗಿರುವ ಇನ್ನೊಂದು ವಿಷಯ ಎಂದರೆ ಬ್ಯಾಟರ್‌ಗಳ ಲಯ ಅಷ್ಟೇನೂ ಉತ್ತಮ ಮಟ್ಟದಲ್ಲಿ ಇಲ್ಲದಿರುವುದು. ಗೆಬೆರ್ಹಾದ ರೀತಿ ಇಲ್ಲಿನ ಪಿಚ್ ಕೂಡ ಮೇಲ್ನೋಟಕ್ಕೆ ವೇಗ ಮತ್ತು ಬೌನ್ಸ್‌ಗೆ ನೆರವಾಗುವಂತಿದೆ.

ಏಡೆನ್ ಮರ್ಕರಂ

ಎರಡನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ವೇಗದ ಬೌಲರ್‌ಗಳ ಎದುರು ಪ್ರವಾಸಿ ತಂಡದ ಬ್ಯಾಟರ್‌ಗಳು ತಿಣುಕಾಡಿದರು. ಹೀಗಾಗಿ ತಂಡ 6 ವಿಕೆಟ್‌ಗೆ 124 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ತಂಡದ ಸಮಸ್ಯೆ ಆರಂಭದಿಂದಲೇ ಶುರುವಾಗುತ್ತಿದೆ. ಅಭಿಷೇಕ್ ಶರ್ಮಾ ಅವರ ಪರದಾಟ ಮುಂದುವರಿದಿದ್ದು ಗಂಭೀರ ಚಿಂತೆಗೆ ಕಾರಣವಾಗಿದೆ. ಕಳೆದ ಎಂಟು ಇನಿಂಗ್ಸ್‌ಗಳಿಂದ ಅವರೂ ಒಮ್ಮೆಯೂ 20ರ ಮೇಲೆ ರನ್ ಗಳಿಸಿಲ್ಲ. ಸಂಜು ಸ್ಯಾಮ್ಸನ್ ಜೊತೆ ಆರಂಭ ಆಟಗಾರನ ಪಾತ್ರವನ್ನು ತಿಲಕ್ ವರ್ಮಾ ಅವರಿಗೆ ವಹಿಸಿ, ಮಧ್ಯಮ ಕ್ರಮಾಂಕದಲ್ಲಿ ಬೀಸಾಟವಾಡುವ ರಮಣದೀಪ್ ಸಿಂಗ್ ಅವರಿಗೆ ಅವಕಾಶ ನೀಡುವ ಯೋಚನೆಯೂ ಸುಳಿದಿದೆ.

ಆದರೆ ಅಭಿಷೇಕ್ ಅಷ್ಟೇ ಅಲ್ಲ, ಸೀನಿಯರ್ ಬ್ಯಾಟರ್‌ಗಳಾದ ನಾಯಕ ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್ ಕೂಡ ತಂಡದ ಬ್ಯಾಟಿಂಗ್ ಹಿನ್ನಡೆಗೆ ಹೊಣೆ ವಹಿಸಬೇಕಾಗಿದೆ.

ಸೂರ್ಯ ಮತ್ತು ರಿಂಕು ತಮ್ಮ ಸಾಮರ್ಥ್ಯದ ನೆರಳಿನಂತೆ ಕಾಣುತ್ತಿದ್ದಾರೆ. ರಿಂಕು ಮೊದಲ ಬೌಂಡರಿಗೆ 28 ಎಸೆತಗಳನ್ನು ತೆಗೆದುಕೊಂಡಿದ್ದರು.

ಇವರು ಉತ್ತಮ ಕಾಣಿಕೆ ನೀಡಿದರಷ್ಟೇ ಸಂಜು ಸ್ಯಾಮ್ಸನ್ ಅವರ ಮೇಲಿನ ಒತ್ತಡ ಕಡಿಮೆಯಾಗಲಿದೆ.

ಬೌಲರ್‌ಗಳೂ ಸ್ಥಿರ ಪ್ರದರ್ಶನ ನೀಡಿಲ್ಲ. ಡರ್ಬನ್‌ನಲ್ಲಿ ಅರ್ಷದೀಪ್ 25 ರನ್ನಿಗೆ 1 ವಿಕೆಟ್ ಪಡೆದರೆ, ಎರಡನೇ ಪಂದ್ಯದಲ್ಲಿ 41 ರನ್ನಿಗೆ 1 ವಿಕೆಟ್ ಗಳಿಸಿದ್ದರು. ಎರಡನೇ ಪಂದ್ಯದ ಕೊನೆಯ ಓವರ್‌ನಲ್ಲಿ ಎಡಗೈ ವೇಗಿ ಬೌಲಿಂಗ್‌ನಲ್ಲಿ ಟ್ರಿಸ್ಟನ್ ಸ್ಟಬ್ಸ್ 4 ಬೌಂಡರಿ ಬಾರಿಸಿದ್ದರು. ಅಲ್ಪಸ್ಕೋರುಗಳ ಪಂದ್ಯದಲ್ಲಿ ಇದು ದುಬಾರಿಯಾಯಿತು. ಆವೇಶ್ ಖಾನ್ ಕೂಡ ಮಿಂಚುತ್ತಿಲ್ಲ.

ತಂಡ ಯಶ್ ದಯಾಳ್ ಅಥವಾ ವೈಶಾಖ ವಿಜಯಕುಮಾರ್ ಅವರಿಗೆ ಅವಕಾಶ ಕೊಡಬಹುದೇ ಎಂಬುದು ಖಚಿತವಾಗಿಲ್ಲ.

ಆದರೆ 'ಗೂಢ' ಎಸೆತಗಳ ಬೌಲರ್ ವರುಣ್ ಚಕ್ರವರ್ತಿ ಮೊದಲ ಬಾರಿ 5 ವಿಕೆಟ್ ಗೊಂಚಲು ಪಡೆದು ಸೋಲಿನಲ್ಲೂ ಮಿಂಚಿದ್ದರು. ಅವರ ಜೊತೆ ರವಿ ಬಿಷ್ಣೋಯಿ ಕೂಡ ಉತ್ತಮ ಪ್ರದರ್ಶನ ನೀಡಿರುವುದು ಸಮಾಧಾನದ ಅಂಶ.

ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳೂ ಪರದಾಡಿದ್ದಾರೆ. ಮರ್ಕರಂ, ಮಿಲ್ಲರ್ ಮತ್ತು ಕ್ಲಾಸೆನ್ ಇನ್ನೂ ನಿರೀಕ್ಷಿತ ಮಟ್ಟದಲ್ಲಿ ಆಡಿಲ್ಲದಿರುವುದು ಆತಿಥೇಯರ ಚಿಂತೆಗೆ ಕಾರಣವಾಗಿದೆ. ಟ್ರಿಸ್ಟನ್ ಸ್ಟಬ್ಸ್ ಕಳೆದ ಪಂದ್ಯದಲ್ಲಿ ಉಪಯುಕ್ತ ಆಟವಾಡಿದ್ದರು. ಜೆರಾಲ್ಡ್ ಕೋಟ್ಜಿಯಾ ಅವರೂ ಕೆಳಕ್ರಮಾಂಕದಲ್ಲಿ ಆಡಿದ್ದರಿಂದ ಎರಡನೇ ಪಂದ್ಯದಲ್ಲಿ ಆತಿಥೇಯರು ಗೆಲ್ಲಲು ಸಾಧ್ಯವಾಯಿತು.

ವರುಣ್ ಚಕ್ರವರ್ತಿ

ಟೆಟೆ ಬಳಗಕ್ಕೆ ಎರಡನೇ ಜಯ

ಕೈಚಳಕ ತೋರಿದ ದೀಪಿಕಾ; ದಕ್ಷಿಣ ಕೊರಿಯಾಗೆ ನಿರಾಶೆ

ರಾಜಗೀರ್, ಬಿಹಾರ (ಪಿಟಿಐ): ಭಾರತ ವನಿತೆಯರ ಹಾಕಿ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಗೆಲುವಿನ ಅಭಿಯಾನ ಮುಂದುವರಿಸಿದೆ. ಟೂರ್ನಿಯಲ್ಲಿ ಸತತ ಎರಡನೇ ಜಯಸಾಧಿಸಿದೆ.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು 3–2 ರಿಂದ ದಕ್ಷಿಣ ಕೊರಿಯಾ ವಿರುದ್ಧ ಗೆದ್ದಿತು.

ಪಂದ್ಯದ ಪ್ರಥಮಾರ್ಧದಲ್ಲಿಯೇ ಭಾರತವು 2–0ಯಿಂದ ಮುನ್ನಡೆ ಸಾಧಿಸಿತು. ತಂಡದ ಸಂಗೀತಾ ಕುಮಾರಿ (3ನೇ ನಿಮಿಷ) ಮತ್ತು ದೀಪಿಕಾ (20ನೇ ನಿಮಿಷ) ಅವರು ಗೋಲು ಗಳಿಸಿದರು.

ಇದಾದ ನಂತರ ಕೊರಿಯಾ ತಂಡವೂ ತಿರುಗೇಟು ನೀಡಿತು. ತನ್ನ ಸಂಪೂರ್ಣ ಸಾಮರ್ಥ್ಯ ಪಣಕ್ಕೊಡ್ಡಿ ಎದುರಾಳಿಗಳ ಮೇಲೆ ಒತ್ತಡ ಹೇರಿತು. ತಂಡದ ಯೂರಿ ಲೀ (34ನೇ ನಿ) ಮತ್ತು ನಾಯಕಿ ಯುನ್ಬಿ ಚೆಯಾನ್ (38ನೇ ನಿ) ಗೋಲು ಗಳಿಸಿ ಸಮಬಲ ಸಾಧಿಸಿದರು. ಇದರ ನಂತರ ಸುಮಾರು 19 ನಿಮಿಷಗಳ ಆಟವು ಅತ್ಯಂತ ರೋಚಕತೆಯಿಂದ ಕೂಡಿತ್ತು. ಉಭಯ ತಂಡಗಳ ನಡುವಿನ ಸೆಣಸಾಟವು ಕಾವೇರಿಸಿತ್ತು.

ಎರಡೂ ತಂಡಗಳ ಆಟಗಾರರು ಮಾಡಿದ ಗೋಲು ಗಳಿಕೆಯ ಪ್ರಯತ್ನಗಳು ಕೈಗೂಡಲಿಲ್ಲ. ಈ ಜಿದ್ದಾಜಿದ್ದಿಗೆ ಭಾರತದ ದೀಪಿಕಾ (57ನೇ ನಿ) ತೆರೆ ಎಳೆದರು. ಗೋಲು ಗಳಿಸಿದ ಅವರು ಭಾರತಕ್ಕೆ 3–2ರ ಮುನ್ನಡೆ ತಂದುಕೊಟ್ಟರು. ನಂತರದ ಆಟದಲ್ಲಿ ರಕ್ಷಣಾತ್ಮಕವಾಗಿ ಆಡಿದ ಭಾರತವು ಗೋಲು ಗಳಿಕೆಗೆ ತಡೆಯೊಡ್ಡಿತು.

ಗೋಲು ದಾಖಲಿಸಿದ ದೀಪಿಕಾ (ಬಲ) ಅವರನ್ನು ಅಭಿನಂದಿಸಿದ ಭಾರತ ತಂಡದ ಸಹ ಆಟಗಾರ್ತಿಯರು

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಸಲೀಮಾ ಟೆಟೆ ನಾಯಕತ್ವದ ಭಾರತ ಮೊದಲ ಪಂದ್ಯದಲ್ಲಿ 4–0ಯಿಂದ ಮಲೇಷ್ಯಾ ವಿರುದ್ಧ ಜಯಿಸಿತ್ತು. ಗುರುವಾರ ನಡೆಯುವ ಮೂರನೇ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ.

ಚೀನಾಗೆ ಜಯ: ಒಲಿಂಪಿಕ್ ಕೂಟದ ಬೆಳ್ಳಿ ಪದಕ ವಿಜೇತ ಚೀನಾ 5–0ಯಿಂದ ಮಲೇಷ್ಯಾ ವಿರುದ್ಧ ಗೆದ್ದಿತು. ಇದರೊಂದಿಗೆ ಸತತ ಎರಡನೇ ಜಯ ಸಾಧಿಸಿತು. ಇನ್ನೊಂದು ಪಂದ್ಯದಲ್ಲಿ ಥಾಯ್ಲೆಂಡ್ ಮತ್ತು ಜಪಾನ್ ಪಂದ್ಯವು 1–1ರಿಂದ ಸಮಬಲವಾಯಿತು.

ಸಂಕ್ಷಿಪ್ತ ಸುದ್ದಿ

ಚಾಂಪಿಯನ್ಸ್ ಟ್ರೋಫಿ ನಂತರ ನಬಿ ನಿವೃತ್ತಿ



ಶಾರ್ಜಾ (ಪಿಟಿಐ): ಅಫ್ಗಾನಿಸ್ತಾನದ ಆಲ್‌ರೌಂಡರ್ ಮೊಹಮ್ಮದ್ ನಬಿ ಅವರು ಪಾಕಿಸ್ತಾನದಲ್ಲಿ ಮುಂದಿನ ವರ್ಷ ನಿಗದಿಯಾಗಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ನಂತರ ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ.

2009ರಲ್ಲಿ ಪದಾರ್ಪಣೆ ಮಾಡಿದ ನಂತರ ನಬಿ 167 ಏಕದಿನ ಪಂದ್ಯಗಳನ್ನು ಆಡಿದ್ದು, 147 ಇನಿಂಗ್ಸ್‌ಗಳಿಂದ 3,600 ರನ್ (ಸರಾಸರಿ 27.48) ಗಳಿಸಿದ್ದಾರೆ. 86.99 ಸ್ಟ್ರೈಕ್‌ರೇಟ್ ಹೊಂದಿದ್ದಾರೆ. 161 ಇನಿಂಗ್ಸ್‌ಗಳಿಂದ 172 ವಿಕೆಟ್‌ಗಳನ್ನು ಗಳಿಸಿದ್ದಾರೆ. ಒಮ್ಮೆ (17ಕ್ಕೆ5) ಐದು ವಿಕೆಟ್ ಗೊಂಚಲು ಪಡೆದಿದ್ದಾರೆ.

ಪಾಕಿಸ್ತಾನಕ್ಕೆ ಪ್ರವಾಸ ನಿರಾಕರಣೆ: ವಿವರಣೆ ಕೇಳಿದ ಪಿಸಿಬಿ

ಕರಾಚಿ (ಎಎಫ್‌ಪಿ): ಮುಂದಿನ ವರ್ಷ ನಡೆಯುವ ಚಾಂಪಿಯನ್ಸ್ ಟ್ರೋಫಿಗಾಗಿ ಭಾರತ ಕ್ರಿಕೆಟ್ ತಂಡವು ಪಾಕಿಸ್ತಾನಕ್ಕೆ ಪ್ರಯಾಣಿಸಲು ನಿರಾಕರಿಸಿದ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯಿಂದ (ಐಸಿಸಿ) ವಿವರಣೆ ಕೇಳಲಾಗಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮಂಗಳವಾರ ಹೇಳಿದೆ.

ಎಂಟು ತಂಡಗಳು ಪಾಲ್ಗೊಳ್ಳುವ ಟೂರ್ನಿಗಾಗಿ ಭಾರತ ತಂಡವು ಪಾಕಿಸ್ತಾನಕ್ಕೆ ಪ್ರವಾಸ ಮಾಡುವುದಿಲ್ಲ ಎಂದು ಐಸಿಸಿಯು ಕಳೆದ ವಾರ ಪಿಸಿಬಿಗೆ ತಿಳಿಸಿತ್ತು. 'ಹೈಬ್ರಿಡ್ ಮಾದರಿ' ಚರ್ಚೆ ಮುನ್ನೆಲೆಗೆ ಬಂದಾಗ ಅದನ್ನು ಪಿಸಿಬಿ ತಿರಸ್ಕರಿಸಿತ್ತು.

ಬೋಪಣ್ಣ– ಎಬ್ಡೆನ್ ಜೋಡಿಗೆ ನಿರಾಸೆ

ಬೋಪಣ್ಣ

ಟುರಿನ್, ಇಟಲಿ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರು ಇಲ್ಲಿ ನಡೆಯುತ್ತಿರುವ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನ ಗುಂಪು ಹಂತದ ಮೊದಲ ಪಂದ್ಯದಲ್ಲಿ ನಿರಾಸೆ ಅನುಭವಿಸಿದರು.

ಆರನೇ ಶ್ರೇಯಾಂಕದ ಬೋಪಣ್ಣ–ಎಬ್ಡೆನ್ ಜೋಡಿಯು ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ 2–6, 3–6ರಲ್ಲಿ ನಾಲ್ಕನೇ ಶ್ರೇಯಾಂಕದ ಸಿಮೋನ್ ಬೊಲೆಲಿ ಮತ್ತು ಆ್ಯಂಡ್ರಿಯಾ ವಾವಸ್ಸೊರಿ (ಇಟಲಿ) ಅವರ ಎದುರು ಮುಗ್ಗರಿಸಿತು. ಕಳೆದ ಆವೃತ್ತಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಬೋಪಣ್ಣ–ಎಬ್ಡೆನ್ ಜೋಡಿಯು ಮುಂದಿನ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಮಾರ್ಸೆಲೊ ಅರೆವಾಲೊ (ಎಲ್ ಸಾಲ್ವಡಾರ್) ಮತ್ತು ಮೇಟ್ ಪಾವಿಕ್ (ಕ್ರೊವೇಷ್ಯಾ) ಅವರನ್ನು ಎದುರಿಸಲಿದ್ದಾರೆ.

ಟ್ರೀಸಾ–ಗಾಯತ್ರಿ ಜೋಡಿಗೆ ಸೋಲು

ಕುಮಾಮೊಟೊ (ಜಪಾನ್): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಕುಮಾಮೊಟೊ ಮಾಸ್ಟರ್ಸ್ ಜಪಾನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಡಬಲ್ಸ್ ಮೊದಲ ಸುತ್ತಿನಲ್ಲೇ ಚೀನಾ ತೈಪೆ ಆಟಗಾರ್ತಿಯರೆದುರು ಸೋಲನುಭವಿಸಿದರು.

ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಭಾರತದ ಆಟಗಾರ್ತಿಯರು ಮಂಗಳವಾರ ನಡೆದ ಪಂದ್ಯದಲ್ಲಿ 16–21, 16–21ರಲ್ಲಿ ಹ್ಸು ಯಿನ್ ಹುಯಿ ಮತ್ತು ಲಿನ್ ಯಿನ್–ಹುಯಿ ಅವರಿಗೆ ಮಣಿದರು.

ವಿಶ್ವ ಕ್ರಮಾಂಕದಲ್ಲಿ 24ನೇ ಸ್ಥಾನದಲ್ಲಿರುವ ಚೀನಾ ತೈಪೆ ಆಟಗಾರ್ತಿಯರು 36 ನಿಮಿಷದಲ್ಲಿ ಜಯಶಾಲಿಯಾದರು.

ದುರ್ಗಮ ಹಾದಿಯಲ್ಲಿ ಮಯಂಕ್ ಪಡೆ

ರಣಜಿ ಟ್ರೋಫಿ ಕ್ರಿಕೆಟ್: ಕರ್ನಾಟಕ– ಉತ್ತರಪ್ರದೇಶ ಹಣಾಹಣಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಲಖನೌ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈ ಋತುವಿನ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ನಾಕೌಟ್ ತಲುಪುವ ಹಾದಿ ದುರ್ಗಮವಾಗಿದೆ.

ಸಿ ಗುಂಪಿನಲ್ಲಿ ಆಡುತ್ತಿರುವ ಮಯಂಕ್ ಬಳಗವು ಕಳೆದ ನಾಲ್ಕು ಸುತ್ತಿನಲ್ಲಿ ಗಳಿಸಿರುವುದು 9 ಅಂಕಗಳನ್ನು ಮಾತ್ರ. ಅದರಲ್ಲಿ ಮೊದಲೆರಡು ಪಂದ್ಯಗಳು ಮಳೆಯಲ್ಲಿ ಕೊಚ್ಚಿಹೋಗಿದ್ದವು. ಪಟ್ನಾದಲ್ಲಿ ಬಿಹಾರ ಎದುರು ಗೆದ್ದಿದ್ದ ಕರ್ನಾಟಕ, ಬೆಂಗಳೂರಿನಲ್ಲಿ ಬಂಗಾಳದ ಎದುರು ಡ್ರಾ ಮಾಡಿಕೋಂಡಿತ್ತು. ಅದರಲ್ಲಿ ಮೊದಲ ಇನಿಂಗ್ಸ್ ಹಿನ್ನಡೆ ಅನುಭವಿಸಿದ್ದ ಕರ್ನಾಟಕ ಕೇವಲ 1 ಅಂಕ ಗಳಿಸಿತ್ತು.

ಮಯಂಕ್ ಅಗರವಾಲ್

ಇದರಿಂದಾಗಿ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇನ್ನುಳಿದ ಮೂರು ಪಂದ್ಯಗಳಲ್ಲಿ ಗೆದ್ದು ಪೂರ್ಣ ಅಂಕಗಳನ್ನು ಗಳಿಸಿದರೆ ನಾಕೌಟ್ ಅವಕಾಶ ಸಿಗಬಹುದು. ಈ ಹಾದಿಯ ಮೊದಲ ಸವಾಲು ಬುಧವಾರ ಆರಂಭವಾಗಲಿರುವ ಉತ್ತರಪ್ರದೇಶ ಎದುರಿನ ಪಂದ್ಯದಲ್ಲಿ ಎದುರಾಗಲಿದೆ.



ಈ ಪಂದ್ಯದಲ್ಲಿಯೂ ಕರ್ನಾಟಕ ತಂಡಕ್ಕೆ ಪ್ರಮುಖ ಆಟಗಾರರ ಅನುಪಸ್ಥಿತಿ ಕಾಡಲಿದೆ. ಅದು ಪ್ರಮುಖವಾಗಿ ಬೌಲರ್‌ಗಳ ವಿಭಾಗದಲ್ಲಿ ಮಧ್ಯಮವೇಗಿ ವಾಸುಕಿ ಕೌಶಿಕ್ ಬಿಟ್ಟರೆ ಉಳಿದ ವೇಗಿಗಳಿಗೆ ಅನುಭವ ಕಡಿಮೆ. ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಅವರು ಬಂಗಾಳ ವಿರುದ್ಧ ಪದಾರ್ಪಣೆ ಮಾಡಿದ್ದರು. ವಿದ್ಯಾಧರ ಪಾಟೀಲ ಅವರೂ ಗಾಯದಿಂದ ಚೇತರಿಸಿಕೊಂಡ ನಂತರ ಭರವಸೆ ಮೂಡಿಸಿದ್ದಾರೆ.

ಕಳೆದ ಪಂದ್ಯದಲ್ಲಿ ಅವರು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಪರಿಣಾಮ ಬೀರಿದ್ದರು. ಆದರೆ ಪ್ರಮುಖ ಜೊತೆಯಾಟಗಳಿಗೆ ಕಡಿವಾಣ ಹಾಕುವ ತಂತ್ರಗಾರಿಕೆ ಇನ್ನೂ ರೂಢಿಸಿಕೊಳ್ಳಬೇಕಷ್ಟೇ. ಕೌಶಿಕ್ ತಮ್ಮ ಎಂದಿನ ಮಧ್ಯಮವೇಗದ ವೈವಿಧ್ಯಗಳ ಎಸೆತಗಳನ್ನು ಪ್ರಯೋಗಿಸುತ್ತಿರುವುದು ತಂಡಕ್ಕೆ ಬಲ.

ಬೆಂಗಳೂರಿನ ಪಂದ್ಯದಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ್ದರು. ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ಪ್ರಸಿದ್ಧಕೃಷ್ಣ ಅವರ ಅನುಪಸ್ಥಿತಿಯಲ್ಲಿ ವೇಗದ ಬೌಲಿಂಗ್ ವಿಭಾಗದ ಹೊಣೆ ಕೌಶಿಕ್ ಮೇಲೆಯೇ ಇದೆ. ಸ್ಪಿನ್ ಬೌಲಿಂಗ್ ಹೊಣೆಯನ್ನು ಶ್ರೇಯಸ್ ಗೋಪಾಲ್ ಅವರೇ ನಿಭಾಯಿಸಬೇಕಿದೆ.

ಬ್ಯಾಟಿಂಗ್‌ನಲ್ಲಿ ಅನುಭವಿಗಳಾದ ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ತಂಡದ ಬಹುತೇಕ ಒತ್ತಡ ಕಡಿಮೆಯಾಗುತ್ತದೆ. ಮಧ್ಯಮ ಕ್ರಮಾಂಕದಲ್ಲಿ ಅಭಿನವ್ ಮನೋಹರ್, ಆರ್. ಸ್ಮರಣ್ ಅವರು ಭರವಸೆ ಮೂಡಿಸಿರುವ ಆಟಗಾರರು. ದೇವದತ್ತ ಪಡಿಕ್ಕಲ್ ಅವರು ಭಾರತ ಎ ತಂಡದಲ್ಲಿ ಆಡುತ್ತಿದ್ದಾರೆ. ಅವರು ಮರಳಿ ಬರುವವರೆಗೂ ಸ್ಮರಣ್ ತಮಗೆ ಸಿಕ್ಕ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು.

ಉತ್ತಮ ಬ್ಯಾಟಿಂಗ್ ಶೈಲಿ ಇರುವ ಯುವಪ್ರತಿಭೆ ಸ್ಮರಣ್, ದೀರ್ಘ ಇನಿಂಗ್ಸ್ ಆಡಿದರೆ ತಂಡಕ್ಕೆ ಉಪಯುಕ್ತವಾಗಲಿದೆ. ಕಳೆದ ಪಂದ್ಯದಲ್ಲಿ ಗಾಯಗೊಂಡಿದ್ದ (ಕಂಕಷನ್) ನಿಕಿನ್ ಜೋಸ್ ಇಲ್ಲಿ ಮರಳದಿದ್ದರೆ ಕಿಶನ್ ಬೆದಾರೆ ಅವಕಾಶ ಪಡೆಯಬಹುದು.

ಅಂಕಪಟ್ಟಿಯಲ್ಲಿ 6ನೇ ಸ್ಥಾನದಲ್ಲಿರುವ ಉತ್ತರ ಪ್ರದೇಶ ತಂಡವೂ ಟೂರ್ನಿಯಲ್ಲಿ ಒಂದೂ ಪಂದ್ಯ ಜಯಿಸಿಲ್ಲ.

ಆರ್ಯನ್ ಜುಯಾಲ್ ನಾಯಕತ್ವದ ತಂಡವುಕಳೆದ ಪಂದ್ಯದಲ್ಲಿ ಕೇರಳದ ಎದುರು ಮಣಿದಿತ್ತು. ಅನುಭವಿ ಸ್ಪಿನ್ನರ್ ಪಿಯೂಷ್ ಚಾವ್ಲಾ, ಸೌರಭ್ ಕುಮಾರ್, ವೇಗಿ ಶಿವಂ ಮಾವಿ ತಂಡದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಬ್ಯಾಟಿಂಗ್‌ನಲ್ಲಿಯೂ ಆರ್ಯನ್, ನಿತೀಶ್ ರಾಣಾ, ಪ್ರಿಯಂ ಗರ್ಗ್ ಅವರು ತಮ್ಮ ಲಯಕ್ಕೆ ಮರಳಿದರೆ ಕರ್ನಾಟಕದ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

ಪಂದ್ಯ ಆರಂಭ: ಬೆಳಿಗ್ಗೆ 9.30

'ಕೆಂಪು ಮಣ್ಣಿನ ಪಿಚ್'

ಕೆಂಪು ಮಣ್ಣಿನ ಪಿಚ್ ಮೂರನೇ ದಿನದಿಂದ ಚೆಂಡಿಗೆ ತಿರುವು ನೀಡುವ ಸಾಧ್ಯತೆ ಇದೆ. ಅದಕ್ಕೆ ತಕ್ಕಂತೆ ತಮ್ಮ ತಂಡದ ಯೋಜನೆ ಇರಲಿದೆ ಎಂದು ಕರ್ನಾಟಕ ತಂಡದ ಕೋಚ್ ಯರೇಗೌಡ ಹೇಳಿದ್ದಾರೆ.

'ಬ್ಯಾಟರ್‌ಗಳು ಉತ್ತಮವಾಗಿ ಆರಂಭ ಮಾಡುತ್ತಿದ್ದಾರೆ. ಆದರೆ ದೊಡ್ಡ ಜೊತೆಯಾಟಗಳನ್ನು ಬೆಳೆಸಲು ಪ್ರಯತ್ನಿಸುವ ಅಗತ್ಯಇದೆ. ಬೌಲಿಂಗ್‌ನಲ್ಲಿ ನಮ್ಮಲ್ಲಿ ಉದಯೋನ್ಮುಖ ಆಟಗಾರರು ಹೆಚ್ಚಿದ್ದಾರೆ. ನಮ್ಮ ತಂಡದಲ್ಲಿ ಇದು ಸುಧಾರಣೆ ಕಾಲ ನಡೆಯುತ್ತಿದೆ. ಪ್ರತಿಭಾವಂತರು ಹೊಂದಿಕೊಳ್ಳುತ್ತಿದ್ದಾರೆ' ಎಂದು ಯರೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಪಂದ್ಯ ಆಡಲಿರುವ ಶಮಿ



ಕೋಲ್ಕತ್ತ (ಪಿಟಿಐ): ಭಾರತದ ಅಗ್ರ ವೇಗದ ಬೌಲರ್‌ಗಳಲ್ಲಿ ಒಬ್ಬರಾಗಿರುವ ಮೊಹಮ್ಮದ್ ಶಮಿ ಅವರ ಬಹುನಿರೀಕ್ಷಿತ ಪುನರಾಗಮನಕ್ಕೆ ವೇದಿಕೆ ಸಜ್ಜಾಗಿದೆ. ಅವರು ಬುಧವಾರ ಇಂದೋರ್‌ನಲ್ಲಿ ಮಧ್ಯಪ್ರದೇಶ ವಿರುದ್ಧ ನಡೆಯಲಿರುವ ರಣಜಿ ಟ್ರೋಫಿ ಪಂದ್ಯದಲ್ಲಿ ಆಡಲಿದ್ದಾರೆ ಎಂದು ಬಂಗಾಳ ಕ್ರಿಕೆಟ್ ಸಂಸ್ಥೆ ಬುಧವಾರ ತಿಳಿಸಿದೆ.

ಸುಮಾರು ಒಂದು ವರ್ಷದ ನಂತರ ಅವರು ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳುತ್ತಿದ್ದಾರೆ. ಕಳೆದ ವರ್ಷದ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಸಂದರ್ಭದಲ್ಲಿ ಗಾಯಾಳಾದ ನಂತರ ಯಾವುದೇ ಟೂರ್ನಿಯಲ್ಲಿ ಆಡಿರಲಿಲ್ಲ. ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅವರು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಪುನಃಶ್ಚೇತನ ಭಾಗವಾಗಿ ಆರೈಕೆಯಲ್ಲಿದ್ದರು.

ಪಾಕಿಸ್ತಾನದಲ್ಲಿ ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ

ಹಸಿರುನಿಶಾನೆಗೆ ಕಾದಿರುವ ಭಾರತ ತಂಡ

ನವದೆಹಲಿ/ಕರಾಚಿ (ಪಿಟಿಐ): ಪಾಕಿಸ್ತಾನದಲ್ಲಿ ನಡೆಯಲಿರುವ ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಭಾರತ ತಂಡಕ್ಕೆ ಕೇಂದ್ರ ಕ್ರೀಡಾ ಸಚಿವಾಲಯವು ನಿರಾಕ್ಷೇಪಣಾ ಪತ್ರ ನೀಡಿದೆ. ಇದೀಗ ತಂಡವು ಗೃಹ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅನುಮತಿಗಾಗಿ ಕಾಯುತ್ತಿದೆ.

ಇದೇ 22ರಿಂದ ಡಿಸೆಂಬರ್ 3ರವರೆಗೆ ಲಾಹೋರ್ ಮತ್ತು ಮುಲ್ತಾನ್‌ನಲ್ಲಿ ಅಂಧರ ವಿಶ್ವಕಪ್ ಟೂರ್ನಿ ನಡೆಯಲಿದೆ. ಭಾರತವು ಹೋದ ಬಾರಿ ಚಾಂಪಿಯನ್ ಆಗಿತ್ತು. ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಅನುಮತಿ ದೊರೆತ ನಂತರ ಭಾರತ ತಂಡವು ನವೆಂಬರ್ 21ರಂದು ವಾಘಾ ಗಡಿಯ ಮೂಲಕ ಪಾಕ್‌ಗೆ ಪ್ರಯಾಣಿಸಲಿದೆ.

ಮುಂದಿನ ವರ್ಷ ಪಾಕಿಸ್ತಾನದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಭಾರತ ಪುರುಷರ ತಂಡವನ್ನು ಕಳಿಸುವುದಿಲ್ಲವೆಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪಾಕ್ ಮಂಡಳಿಗೆ ಪತ್ರ ಬರೆದಿದೆ. ಇದೇ ಹೊತ್ತಿನಲ್ಲಿ ಅಂಧರ ತಂಡವು ಪಾಕ್‌ಗೆ ತೆರಳಲು ಸಮ್ಮತಿ ಪಡೆದುಕೊಂಡಿದೆ.

ಗುರುಗ್ರಾಮದಲ್ಲಿ ನಡೆದ 12 ದಿನಗಳ ಆಯ್ಕೆ ಟ್ರಯಲ್ಸ್‌ನಲ್ಲಿ 26 ಆಟಗಾರರು ಭಾಗವಹಿಸಿದ್ದರು. ಅದರಲ್ಲಿ 17 ಆಟಗಾರರ ತಂಡವನ್ನು ಆಯ್ಕೆ ಮಾಡಲಾಗಿದೆ.

'ತಂಡವು ಗುರುಗ್ರಾಮದಲ್ಲಿ ನಡೆಯುತ್ತಿರುವ ಶಿಬಿರದಲ್ಲಿ ತರಬೇತಿ ಪಡೆಯುತ್ತಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಅನುಮತಿಗಾಗಿ ಕಾಯಲಾಗುತ್ತಿದೆ. ಅನುಮತಿ ಲಭಿಸುವ ಭರವಸೆ ಇದೆ' ಎಂದು ಭಾರತ ಅಂಧರ ಕ್ರಿಕೆಟ್ ಸಂಘಟನೆ (ಸಿಎಬಿಐ) ಮಹಾಪ್ರಧಾನ ಕಾರ್ಯದರ್ಶಿ ಶೈಲೆಂದರ್ ಯಾದವ್ ಹೇಳಿದ್ದಾರೆ.

ಈ ಟೂರ್ನಿಯಲ್ಲಿ ಭಾರತ, ಪಾಕಿಸ್ತಾನ ಅಷ್ಟೇ ಅಲ್ಲ; ಅಫ್ಗಾನಿಸ್ತಾನ, ಬಾಂಗ್ಲಾದೇಶ, ದಕ್ಷಿಣ ಆಫ್ರಿಕಾ, ನೇಪಾಳ ಮತ್ತು ಶ್ರೀಲಂಕಾ ತಂಡಗಳೂ ಭಾಗವಹಿಸಲಿವೆ.

'ಈಗಾಗಲೇ ನಿಗದಿಯಾಗಿರುವ ವೇಳಾಪಟ್ಟಿಗೆ ಅನುಗುಣವಾಗಿಯೇ ಪಾಕಿಸ್ತಾನವು ಟೂರ್ನಿಯನ್ನು ಆಯೋಜಿಸಲಿದೆ. ಭಾರತ ತಂಡ ಬರಲಿ, ಬಾರದೇ ಇರಲಿ ನಮಗೇನೂ ವ್ಯತ್ಯಾಸವಾಗದು' ಎಂದು ಪಾಕಿಸ್ತಾನ ಅಂಧರ ಕ್ರಿಕೆಟ್ ಕೌನ್ಸಿಲ್ (ಪಿಬಿಸಿಸಿ) ಚೇರ್ಮನ್ ಸೈಯದ್ ಸುಲ್ತಾನ್ ಶಹಾ ಹೇಳಿದ್ದಾರೆ.

'ವೇಗದ ಅಸ್ತ್ರ' ಪ್ರಯೋಗಕ್ಕೆ ಪರ್ತ್ ವೇದಿಕೆ

ಆಸ್ಟ್ರೇಲಿಯಾ ಪಿಚ್ ಕ್ಯುರೇಟರ್ ಹೇಳಿಕೆ; ಭಾರತಕ್ಕೆ 'ಟೆಸ್ಟ್'

ಪರ್ತ್(ಪಿಟಿಐ): ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಸರಣಿಯ ಮೊದಲ ಪಂದ್ಯ ನಡೆಯಲಿರುವ ಇಲ್ಲಿಯ ಕ್ರೀಡಾಂಗಣದ ಪಿಚ್ 'ಉತ್ತಮ ವೇಗ ಮತ್ತು ಬೌನ್ಸ್ ಎಸೆತ'ಗಳಿಗೆ ನೆರವಾಗಲಿದೆಯಂತೆ.

ನ. 22ರಿಂದ ಇಲ್ಲಿ ಮೊದಲ ಪಂದ್ಯ ಆರಂಭವಾಗಲಿದೆ. ಭಾರತ ತಂಡವು ಟೂರ್ನಿಗೂ ಮುನ್ನ ಯಾವುದೇ ಅಭ್ಯಾಸ ಪಂದ್ಯವನ್ನು ಆಡುತ್ತಿಲ್ಲ. ಅಲ್ಲದೇ ಇಂಟ್ರಾಸ್ಕ್ವಾಡ್ (ತಂಡದೊಳಗಿನ) ಪಂದ್ಯಗಳನ್ನೂ ರದ್ದು ಮಾಡಿದೆ. ಇದೀಗ ಭಾರತ ತಂಡವು ಡಬ್ಲ್ಯುಎಸಿಎ ಕ್ರೀಡಾಂಗಣದ ಸಮೀಪವಿರುವ ಸೆಂಟರ್ ವಿಕೆಟ್‌ನಲ್ಲಿ ಅಭ್ಯಾಸ ಮಾಡುವದರತ್ತ ಚಿತ್ತ ನೆಟ್ಟಿದೆ. ಆಸ್ಟ್ರೇಲಿಯಾ ತಂಡವೂ ಇಲ್ಲಿ ತಾಲೀಮು ನಡೆಸುತ್ತಿದೆ.

'ಇದು ಆಸ್ಟ್ರೇಲಿಯಾ, ಇದು ಪರ್ತ್.. ನಾನು ಉತ್ತಮ ವೇಗದ ಎಸೆತಗಳಿಗಾಗಿ ವೇದಿಕೆ ಸಿದ್ಧಗೊಳಿಸುತ್ತಿರುವ ಉತ್ತಮ ಬೌನ್ಸ್ ಮತ್ತು ವೇಗದ ಚಲನೆಗೆ ಇಂಬು ನೀಡಲಿದೆ' ಎಂದು ವೆಸ್ಟರ್ನ್ ಆಸ್ಟ್ರೇಲಿಯಾ ಕ್ರಿಕೆಟ್ ಮುಖ್ಯ ಕ್ಯುರೇಟರ್ ಐಸಾಕ್ ಮೆಕ್‌ಡೊನಾಲ್ಡ್ 'ಇಎಸ್‌ಪಿಎನ್ ಕ್ರಿಕ್‌ಇನ್ಫೋ'ಗೆ ತಿಳಿಸಿದ್ದಾರೆ.

ಹೋದ ವರ್ಷದ ಡಿಸೆಂಬರ್‌ನಲ್ಲಿ ಪಾಕಿಸ್ತಾನ ಎದುರಿನ ಟೆಸ್ಟ್ ಪಂದ್ಯಕ್ಕೆ ನೀಡಲಾಗಿದ್ದ ಮಾದರಿಯ ಪಿಚ್ ಅನ್ನೇ ಈಗಲೂ ಸಿದ್ಧಪಡಿಸಲಾಗುತ್ತಿದೆ ಎನ್ನಲಾಗಿದೆ. ಆ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಎರಡನೇ ಇನಿಂಗ್ಸ್‌ನಲ್ಲಿ 89 ರನ್‌ಗಳಿಗೆ ಆಲೌಟ್ ಆಗಿತ್ತು. ಆಸ್ಟ್ರೇಲಿಯಾ ಬೃಹತ್ ಜಯ ಸಾಧಿಸಿತ್ತು.

ಪಿಚ್‌ನಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದವು. ಆಗ ಬ್ಯಾಟರ್ ಮಾರ್ನಸ್ ಲಾಬುಷೇನ್ ಕೈಗಳಿಗೆ ಚೆಂಡು ಅಪ್ಪಳಿಸಿತ್ತು. ಆಸ್ಟ್ರೇಲಿಯಾದ ವೇಗಿಗಳಾದ ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್ ಮತ್ತು ಮಿಚೆಲ್ ಸ್ಟಾರ್ಕ್ ಪಂದ್ಯದಲ್ಲಿ ಒಟ್ಟು 12 ವಿಕೆಟ್ ಹಂಚಿಕೊಂಡಿದ್ದರು.

ಬೆಂಗಳೂರು ಬುಲ್ಸ್ ಆಟಗಾರರ ಹಿಡಿತದಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ರೇಡರ್.

ಪ್ರೊ ಕಬಡ್ಡಿ: ಪಿಂಕ್ ಪ್ಯಾಂಥರ್ಸ್‌ಗೆ ಗೆಲುವು

ಅರ್ಜುನ್ ಅಬ್ಬರಕ್ಕೆ ಬೆದರಿದ ಬುಲ್ಸ್

ನೊಯ್ಡಾ: ಅರ್ಜುನ್ ದೇಶ್ವಾಲ್ ಅವರ ಅಮೋಘ ರೇಡಿಂಗ್ ಬಲದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವನ್ನು ಮಂಗಳವಾರ ಏಳು ಅಂಕಗಳಿಂದ (39–32) ಮಣಿಸಿತು.

ಇದು ಹಾಲಿ ಟೂರ್ನಿಯಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡಕ್ಕೆ ನಾಲ್ಕನೇ ಜಯ. ಬುಲ್ಸ್ ತಂಡ ಏಳನೇ ಸೋಲಿಗೆ ಗುರಿಯಾಗಿ 11ನೇ ಸ್ಥಾನದಲ್ಲಿ ಮುಂದುವರಿಯಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯ ಹೊರತಾಗಿಯೂ ದ್ವಿತೀಯಾರ್ಧದಲ್ಲಿ ಜೈಪುರ ಆಟಗಾರರು ರೇಡಿಂಗ್ ಮತ್ತು ಟ್ಯಾಕಲ್ ಎರಡರಲ್ಲೂ ಮಿಂಚಿದರು.

ಜೈಪುರ ತಂಡದ ಪರ ಅರ್ಜುನ್ ದೇಶ್ವಾಲ್ (19 ಅಂಕ) ಮತ್ತು ಲಕ್ಕಿ ಶರ್ಮಾ (6 ಅಂಕ) ಗಮನಾರ್ಹ ಪ್ರದರ್ಶನ ನೀಡಿದರೆ, ಬುಲ್ಸ್ ಪರ ರೇಡರ್‌ಗಳಾದ ಅಜಿಂಕ್ಯ ಪವಾರ್ (9 ಅಂಕ) ಮತ್ತು ಜತಿನ್ (5 ಅಂಕ) ಮಿಂಚಿದರು. ಮೊದಲ ಅವಧಿಯಲ್ಲಿ ಬುಲ್ಸ್‌ನ ಈ ಇಬ್ಬರು ಗಮನಸೆಳೆದರೆ, ಎರಡನೇ ಅವಧಿಯಲ್ಲಿ ಸ್ವಲ್ಪ ಕಳೆಗುಂದಿದರು.

ಮೊದಲಾರ್ಧದಲ್ಲಿ ಸಮಬಲದ ಹೋರಾಟ ಕಂಡುಬಂದಿತು. ವಿರಾಮದ ಮರುನಿಮಿಷ ಬುಲ್ಸ್ ತಂಡವನ್ನು ಆಲೌಟ್ ಮಾಡುವ ಮೂಲಕ ಮೊದಲ ಬಾರಿ ಜೈಪುರ ತಂಡ 20–20ರಲ್ಲಿ ಸಮ ಮಾಡಿತು. ನಂತರ ಜೈಪುರ ತಂಡ ಮೇಲುಗೈ ಸಾಧಿಸತೊಡಗಿತು. 30 ನಿಮಿಷಗಳ ನಂತರ ಜೈಪುರ ಎರಡು ಪಾಯಿಂಟ್‌ಗಳ ಮುನ್ನಡೆ ಸಾಧಿಸಿತು. ಮುಕ್ತಾಯದ ವೇಳೆಗೆ ಅದನ್ನು ಏಳು ಪಾಯಿಂಟ್‌ಗಳಿಗೆ ಹೆಚ್ಚಿಸಿತು.

ಈ ಮಧ್ಯೆ 9 ಅಂಕಗಳನ್ನು ಕಲೆಹಾಕಿದ ಬುಲ್ಸ್ ತಂಡದ ಸ್ಟಾರ್ ರೇಡರ್ ಅಜಿಂಕ್ಯ ಪವಾರ್, ಟೂರ್ನಿಯಲ್ಲಿ 500 ರೇಡಿಂಗ್ ಪಾಯಿಂಟ್ಸ್ ಕಲೆಹಾಕಿದ ಗೌರವಕ್ಕೆ ಪಾತ್ರರಾದರು.

ದಿನದ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ದಬಾಂಗ್ ಮತ್ತು ಪುಣೇರಿ ಪಲ್ಟನ್ ತಂಡಗಳು 38–38ರಿಂದ ಸಮಬಲ ಸಾಧಿಸಿದವು. ದಬಾಂಗ್‌ನ ಅಂಶು ಮಲಿಕ್ 17 ಅಂಕ ಗಳಿಸಿ ಮಿಂಚಿದರು.

ಅಸ್ಲಾಂ ಇನಾಮದಾರ್ ಅಲಭ್ಯ

ಪುಣೇರಿ ಪಲ್ಟನ್ ತಂಡದ ನಾಯಕ ಅಸ್ಲಾಂ ಇನಾಂದಾರ್ ಅವರು ಮೊಣಕಾಲಿನ ನೋವಿನಿಂದಾಗಿ 11ನೇ ಆವೃತ್ತಿಯ ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಪಲ್ಟನ್ ಈ ವಿಷಯವನ್ನು 'ಎಕ್ಸ್'ನಲ್ಲಿ ತಿಳಿಸಿದೆ.

ಶೂಟಿಂಗ್: ಭವತೇಗ್‌ಗೆ ಚಿನ್ನ

ನವದೆಹಲಿ (ಪಿಟಿಐ): ಯುವ ಸ್ಕೀಟ್ ಶೂಟರ್ ಭವತೇಗ್ ಸಿಂಗ್ ಗಿಲ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಯುನಿವರ್ಸಿಟಿ ಶೂಟಿಂಗ್ ಚಾಂಪಿಯನ್ ಷಿಪ್‌ನಲ್ಲಿ ಚಿನ್ನ ಗೆದ್ದರು. ಈ ಮೂಲಕ ಭಾರತದ ಖಾತೆಗೆ ಎರಡನೇ ಚಿನ್ನವನ್ನು ಸೇರಿಸಿದರು.

ಮಂಗಳವಾರ ಭಾರತದ ಶೂಟರ್‌ಗಳು ವೈಯಕ್ತಿಕ ವಿಭಾಗದಲ್ಲಿ ಮೂರು ಕಂಚು ಗೆದ್ದರು.

ಮಹಿಳೆಯರ 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್‌ನಲ್ಲಿ ಸಿಮ್ರಾನ್ ಪ್ರೀತ್ ಕೌರ್ ಬ್ರಾರ್, ಮಹಿಳೆಯರ ಸ್ಕೀಟ್‌ನಲ್ಲಿ ಯಶಸ್ವಿ ರಾಥೋಡ್ ಮತ್ತು ಪುರುಷರ ಸ್ಕೀಟ್‌ನಲ್ಲಿ ಅಭಯ್ ಸಿಂಗ್ ಸೆಖೋನ್ ಕಂಚು ಜಯಿಸಿದರು.

21 ವರ್ಷ ವಯಸ್ಸಿನ ಗಿಲ್ ಪುರುಷರ ಸ್ಕೀಟ್ ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದ್ದರು. ಅವರು ಸೈಪ್ರಸ್‌ನ ಪೆಟ್ರೋಸ್ ಎಂಗಲ್ಡಿಡಿಸ್ ಅವರ ಪ್ರಬಲ ಸವಾಲನ್ನು ಮೆಟ್ಟಿ ನಿಂತು ಚಾಂಪಿಯನ್ ಆದರು. ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದಿದ್ದ ಸೆಖೋನ್ ಕಂಚು ಗೆದ್ದರು.

ಮಹಿಳೆಯರ ಸ್ಕೀಟ್‌ನಲ್ಲಿ ಇಟಲಿಯ ಗಿಯಾಡಾ ಲಾಂಗಿ ಚಿನ್ನ ಗೆದ್ದರೆ, ಸ್ಲೋವಾಕಿಯಾದ ಅಡೆಲಾ ಸುಪೆಕೋವಾ ಬೆಳ್ಳಿ ಜಯಿಸಿದರು. ಅರ್ಹತಾ ಸುತ್ತಿನಲ್ಲಿ ಎರಡನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದ್ದ ಯಶಸ್ವಿ ಕಂಚು ಗೆದ್ದರು.

ಅರ್ಹತಾ ಸುತ್ತಿನಲ್ಲಿ ಮೂರನೇ ಸ್ಥಾನ ಗಳಿಸಿದ್ದ ಸಿಮ್ರಾನ್ ಫೈನಲ್‌ನಲ್ಲೂ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು. ಕೊರಿಯಾದ ಕಿಮ್ ಮಿನಸೊ ಮತ್ತು ಫ್ರಾನ್ಸ್‌ನ ಫೋರ್ ಹೆಲೋಯಿಸ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು.

ನಿಮ್ಮ ಪ್ರತಿಭೆಯನ್ನಿಲ್ಲಿ ಬೆಳಕಿಗೆ ತನ್ನಿ
DECCAN HERALD DHiE
Expressions
ಅಂತರ್‌ಶಾಲಾ ಮಟ್ಟದ ಪ್ರತಿಭಾ ಸ್ಪರ್ಧೆ
ಸಹಭಾಗಿತ್ವ
WONDERLA PARKS AND RESORTS
POORVIKA
ಬನ್ನಿರಿ ವೇದಿಕೆಗೆ
ಪ್ರದರ್ಶಿಸಿ ಕೌಶಲ
ಆನಂದಿಸಿ ಆಟ–ಕೂಟ
ನೀವು ಅತ್ಯುತ್ತಮ ಪಟುಗಳ ಜೊತೆಗೆ ಸ್ಪರ್ಧಿಸಲು, ಕಲಿಯಲು ಮತ್ತು ಮಿಂಚಲು ಇದೊಂದು ಉತ್ತಮ ಅವಕಾಶ! ಬನ್ನಿರಿ ನಿಮ್ಮ ಮಾತುಗಳು, ಸೃಜನಶೀಲತೆ ಹಾಗೂ ನಿಮ್ಮ ಇನಿದನಿ ಎಲ್ಲೆಡೆ ಮಾರ್ದನಿಸುವಂತಾಗಲಿ. ನಿಮ್ಮ ಶಾಲೆಗೆ ಹಿರಿಮೆ, ಗರಿಮೆ ತರುವ ಈ ಅವಕಾಶವನ್ನು ಕಳೆದುಕೊಳ್ಳದಿರಿ! ನಮ್ಮನ್ನು ಇಮೇಲ್ ಮೂಲಕ ಸಂಪರ್ಕಿಸಿ, ನಿಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಿ
education.dhie@printersmysore.co.in

ಸ್ಥಳ	ವಿಭಾಗ	ದಿನಾಂಕ	ಸಮಯ
ಧಾರವಾಡ	ಸಮೂಹ ನೃತ್ಯ, ವರ್ಣಚಿತ್ರ	ನವೆಂಬರ್ 13	ಬೆಳಿಗ್ಗೆ 9:30 ರಿಂದ
ಕಲಬುರಗಿ	ಸೃಜನಾತ್ಮಕ ಬರವಣಿಗೆ, ವರ್ಣಚಿತ್ರ	ನವೆಂಬರ್ 15	ಬೆಳಿಗ್ಗೆ 9:30 ರಿಂದ
ಹಾಸನ	ವರ್ಣಚಿತ್ರ	ನವೆಂಬರ್ 19	ಬೆಳಿಗ್ಗೆ 9:30 ರಿಂದ
ಮೈಸೂರು	ಪದಬಂಧ, ಗಣಿತದ ಒಗಟು, ಮತ್ತು ಚಿತ್ರಕಲೆ/ವರ್ಣಚಿತ್ರ	ನವೆಂಬರ್ 21	ಬೆಳಿಗ್ಗೆ 9:30 ರಿಂದ
ಮಂಗಳೂರು	ಸಮೂಹ ನೃತ್ಯ, ವರ್ಣಚಿತ್ರ	ನವೆಂಬರ್ 25	ಬೆಳಿಗ್ಗೆ 9:30 ರಿಂದ
ಬೆಂಗಳೂರು	ಸಮೂಹ ಗಾನ/ನೃತ್ಯ, ಸೃಜನಾತ್ಮಕ ಬರವಣಿಗೆ, ಸ್ಪೆಲ್–ಬೀ, ರಸಪ್ರಶ್ನೆ ವರ್ಣಚಿತ್ರ	ನವೆಂಬರ್ 26–29	ಬೆಳಿಗ್ಗೆ 9:30 ರಿಂದ

ಶಾಲೆಗಳ ಮೂಲಕ ಮಾತ್ರ ನೋಂದಣಿ ಮಾಡಿಕೊಳ್ಳತಕ್ಕದ್ದು!